
ಲಂಕೇಶ್
ಆಗಸ್ಟ್ 19, 2009 ರೂ. 12/-

ಸುಬ್ಬಯ್ಯ 75



ಮಚಂದ್ರಾಪುರ
ರುಕುಲ
ಕ್ಸ್ ಹಗರಣ
ವ್ಯಕ
ಾಲೆಯರು
ಲಿ





ರಾಘವೇಶ್ವರನ ಕುತಂತ್ರ


ಜಡ್ಜ್ ತಲೆ ಮೇಲೆ ಕೈ!



ಸೋಮಣ್ಣ ಸೋಲಿಗೆ ಬಿಜೆಪಿಯಲ್ಲೇ ಘಾತುಕರು


ಉಪಚುನಾವಣೆ: ಕೊಳ್ಳೆಗಾಲ-ಚಿತ್ತಾಪುರ-ರಾಮನಗರ, ಚನ್ನಪಟ್ಟಣ

KFD-ಬ್ಯಾನ್ ಬೆದರಿಕೆ



ಸಣ್ಣವರ ಕೈಯಲ್ಲಿ ದೊಡ್ಡವರ ಪ್ರತಿಮೆಗಳು!

ದಲಿತ ಕನ್ನಡಿಗನನ್ನು ಬ್ರಾಹ್ಮಣ ಅಥವಾ ಲಿಂಗಾಯತ/ಒಕ್ಕಲಿಗ ಕನ್ನಡಿಗ ಹಾಡುಹಗಲಲ್ಲೇ ಕಂಬಾಲಪಲ್ಲಿಗಳಲ್ಲಿ, ಬೆಂಡಿಗೇರಿ-ತತ್ತೂರುಗಳಲ್ಲಿ ಕೊಂದು- ಸುಟ್ಟುಹಾಕುತ್ತಿರುವಾಗ 'ಕನ್ನಡವೇ ಜಾತಿ'ಯಾಗಲು ಸಾಧ್ಯವಿಲ್ಲ. ಅದೇ ರೀತಿ ಕನ್ನಡ ಮಾತಾಡುವ ಭಜರಂಗಿ ಚೆಡ್ಡಿಗಳು ದಕ್ಷಿಣ ಕನ್ನಡದಲ್ಲಿ ಕನ್ನಡ ಮಾತಾಡುವ ಮುಸ್ಲಿಮರ ಮೇಲೆ ದಾಳಿ ಮಾಡುತ್ತಿರುವಾಗ, ಕನ್ನಡ ನಾಡಿನಾದ್ಯಂತ ಚರ್ಚುಗಳನ್ನು ಕೆಡವಿ ಹಾಕುತ್ತಿರುವಾಗ 'ಕನ್ನಡವೇ ಧರ್ಮ'ವಾಗಲು ಸಾಧ್ಯವಿಲ್ಲ. ಬದುಕಿನ ಕಠೋರ ವಾಸ್ತವತೆಗಳು ವರ್ಗ, ಜಾತಿ ಲಿಂಗ ಮತ್ತು ಭಾಷಾ ದಮನದ ರೂಪದಲ್ಲಿ ವ್ಯಕ್ತವಾಗುತ್ತಿರುವಾಗ ಕೇವಲ ಭಾಷೆಗೆ ಮಾತ್ರ ಎಲ್ಲವನ್ನು ಮರೆಸಿ ಒಂದುಗೂಡಿಸಲು ಸಾಧ್ಯವಿಲ್ಲ.



ಕೆಟ್ಟಲೂ ಬಿಡಲು ಶಿವ ಬಟ್ಟಲವ ಕದ್ದನೇ
ಕಟ್ಟಲೂ ಬೇಡ ಬಿಡಲೂ ಬೇಡ
ಕಣ್ಣು ಮನ ನಟ್ಟರೆ ಸಾಕು ಸರ್ವಜ್ಞ


ಸರ್ವಜ್ಞನ ಈ ವಚನದ ತಾತ್ಪರ್ಯ ಯಡಿಯೂರಪ್ಪನಿಗೂ ಗೊತ್ತಿಲ್ಲ. ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣಗೌಡರಿಗಂತೂ ಮೊಟ್ಟಮೊದಲೇ ಗೊತ್ತಿಲ್ಲ. ಹಾಲಿ ಕರ್ನಾಟಕದಲ್ಲಿ ಹೊಗೆಯಿಲ್ಲದೆ ಉರಿಯುತ್ತಿರುವ ತಿರುವಳ್ಳುವರ್ ಮತ್ತು ಸರ್ವಜ್ಞ ಪ್ರತಿಮೆ ಅನಾವರಣ ವಿವಾದದಲ್ಲಿ ಅತಿದೊಡ್ಡ ಐತಿಹಾಸಿಕ ವ್ಯಂಗ್ಯವೊಂದಿದೆ. ಅಪ್ರತಿಮ ಮಾನವತಾವಾದಿ ತಿರುವಳ್ಳುವರ್ ಪ್ರತಿಮೆಯ ಅನಾವರಣಕ್ಕೆ ಮುಂದಾಗಿರುವ ಯಡಿಯೂರಪ್ಪನವರ ಬಿಜೆಪಿ ಸರ್ಕಾರ ಕನ್ನಡನಾಡು ಕಂಡ ಅತ್ಯಂತ ಕೋಮುವಾದಿ ಸರ್ಕಾರ. ಇದು ಬರೀ ಕೋಮುವಾದಿ ಸರ್ಕಾರವಲ್ಲ, ನಾಡಿನ ಸಂಪನ್ಮೂಲವನ್ನೆಲ್ಲ ಲೂಟಿ ಹೊಡೆದು ತಮ್ಮ ತಿಜೋರಿ ತುಂಬಿಕೊಂಡು ಜನತೆಯನ್ನು ಬೀದಿಪಾಲು ಮಾಡಿದ ಸರ್ಕಾರ. ಜನತೆಯನ್ನು ಈ ರೀತಿ ಬೇಡುವ ಭಿಕಾರಿಗಳನ್ನಾಗಿಸುವ ಆಳುವ ದೊರೆಗಳನ್ನಿರಲಿ ಸೃಷ್ಟಿಕರ್ತನನ್ನೆ ಧಿಕ್ಕರಿಸಿದ ಮಹಾನ್ ಕವಿ ತಿರುವಳ್ಳುವರ್. ಆದ್ದರಿಂದಲೇ ಜಗತ್ತಿನ ಬಡತನವನ್ನು ಕಂಡು ತಿರುವಳ್ಳುವರ್ ದೇವನಿಗೇ ಹೀಗೆ ಶಾಪ ಹಾಕುತ್ತಾರೆ:

"ಬೇಡುತ್ತಲೇ ಬದುಕಲೆಂದು ಮನುಜರ ಸೃಷ್ಟಿಸಿದರೆ
ಆ ಜಗದೊಡೆಯ ಬೇಡುತ್ತಾ ಅಲೆದಲೆದು ಹಾಳಾಗಲಿ"



ಇಂಥ ಮಹಾಮಹಿಮನ ಪ್ರತಿಮೆಯನ್ನು ಜನವಿರೋಧಿ ಯಡಿಯೂರಪ್ಪ ಅನಾವರಣ ಮಾಡುತ್ತಿರುವುದೇ ಒಂದು ದೊಡ್ಡ ವ್ಯಂಗ್ಯವಾಗಿದ್ದರೆ 16ನೇ ಶತಮಾನದ ಶೂದ್ರ ತಪಸ್ವಿಯಂಥ ರೈತ ಕವಿ ಸರ್ವಜ್ಞನನ ಗುತ್ತಿಗೆಯನ್ನು ನಾರಾಯಣಗೌಡರಂಥ ಭ್ರಷ್ಟಾತಿಭ್ರಷ್ಟರೂ, ಚಿದಾನಂದ ಮೂರ್ತಿಗಳಂತ ಲಿಂಗದ ಮುಸುಕಿನ ಬ್ರಾಹ್ಮಣವಾದಿಗಳೂ ವಹಿಸಿಕೊಂಡಿರುವುದು ಮತ್ತೊಂದು ಕ್ರೂರ ವ್ಯಂಗ್ಯವಾಗಿದೆ.

"ಕನ್ನಡವೇ ಜಾತಿ, ಕನ್ನಡವೇ ಧರ್ಮ" ಎಂದು ಅರ್ಥವಿಲ್ಲದೆ ಹಾರಾಡುವ ನಾರಾಯಣಗೌಡರಿಗೆ ಸರ್ವಜ್ಞ ತನ್ನ ಜೀವಿತಕಾಲದಲ್ಲಿ ಕನ್ನಡ ರೈತಾಪಿಯ ಬದುಕನ್ನು ಹಿಂಡಿ ಹೀರುತ್ತಿದ್ದ ಕನ್ನಡಿಗ ಪುರೋಹಿತಶಾಹಿ ಬ್ರಾಹ್ಮಣ್ಯದ ವಿರುದ್ಧ ಹೋರಾಡುತ್ತಲೇ ಬಂದರೆಂಬುದು ಗೊತ್ತೇ? ಗೊತ್ತಿದ್ದರೂ ಅರ್ಥವಾಗುವುದೇ? ಅಂದಾಗಲೀ ಇಂದಾಗಲೀ ಕನ್ನಡಿಗರು ಒಂದೇ ಜಾತಿಯೂ ಆಗಿಲ್ಲ, ಒಂದೇ ಧರ್ಮವೂ ಆಗುಳಿದಿಲ್ಲ, ದುಡಿಯುವ ಮತ್ತು ದಮನಕ್ಕೊಳಗಾದ ಕನ್ನಡಿಗರ ಬದುಕನ್ನು ಕನ್ನಡಿಗರೇ ಆದ ಪುರೋಹಿತಶಾಹಿ ಮತ್ತು ಭೂಮಾಲೀಕ ವರ್ಗಗಳು ಸುಲಿಯುತ್ತಲೇ ಬಂದಿವೆ.



ದಲಿತ ಕನ್ನಡಿಗನನ್ನು ಬ್ರಾಹ್ಮಣ ಅಥವಾ ಲಿಂಗಾಯತ/ಒಕ್ಕಲಿಗ ಕನ್ನಡಿಗ ಹಾಡುಹಗಲಲ್ಲೇ ಕಂಬಾಲಪಲ್ಲಿಗಳಲ್ಲಿ, ಬೆಂಡಿಗೇರಿ-ತತ್ತೂರುಗಳಲ್ಲಿ ಕೊಂದು-ಸುಟ್ಟುಹಾಕುತ್ತಿರುವಾಗ 'ಕನ್ನಡವೇ ಜಾತಿ'ಯಾಗಲು ಸಾಧ್ಯವಿಲ್ಲ, ಅದೇ ರೀತಿ ಕನ್ನಡ ಮಾತಾಡುವ ಭಜರಂಗಿ ಚೆಡ್ಡಿಗಳು ದಕ್ಷಿಣ ಕನ್ನಡದಲ್ಲಿ ಕನ್ನಡ ಮಾತಾಡುವ ಮುಸ್ಲಿಮರ ಮೇಲೆ ದಾಳಿ ಮಾಡುತ್ತಿರುವಾಗ, ಕನ್ನಡ ನಾಡಿನಾದ್ಯಂತ ಚರ್ಚುಗಳನ್ನು ಕೆಡವಿ ಹಾಕುತ್ತಿರುವಾಗ 'ಕನ್ನಡವೇ ಧರ್ಮ'ವಾಗಲು ಸಾಧ್ಯವಿಲ್ಲ, ಬದುಕಿನ ಕಠೋರ ವಾಸ್ತವತೆಗಳು ವರ್ಗ, ಜಾತಿ, ಲಿಂಗ ಮತ್ತು ಭಾಷಾ ದಮನದ ರೂಪದಲ್ಲಿ ವ್ಯಕ್ತವಾಗುತ್ತಿರುವಾಗ ಕೇವಲ ಭಾಷೆಗೆ ಮಾತ್ರ ಎಲ್ಲವನ್ನು ಮರೆಸಿ ಒಂದುಗೂಡಿಸಲು ಸಾಧ್ಯವಿಲ್ಲ.

ಅದೇರೀತಿ ನಾರಾಯಣ ಗೌಡರು ಎಷ್ಟೇ ಹಾರಾಡಿದರೂ, ದಮನಿತ ಸಮುದಾಯಗಳಿಗೆ ತಮ್ಮಂತೆ ಇತರ ಭಾಷಿಕ ಸಮುದಾಯಗಳಲ್ಲಿ ತಮ್ಮ ಜನರಿಂದಲೇ ಶೋಷಣೆಗೊಳಗಾಗಿರುವ ಸಮುದಾಯಗಳನ್ನು ಸಹೋದರರಂತೆ ಭಾವಿಸದಿರಲೂ ಸಾಧ್ಯವಿಲ್ಲ. ಏಕೆಂದರೆ ಶೋಷಿತ ಸಮುದಾಯದ ನೋವು-ನರಕಗಳ ಭಾಷೆ ಒಂದೇ. ಅದು ಲಿಪಿಕ ಭಾಷೆಯಲ್ಲ, ಅನುಭಾವಿಕ ಭಾಷೆ. ಸೌಹಾರ್ದ ಮತ್ತು ವಿಮೋಚನೆಯ ಭಾಷೆ. ತಿರುವಳ್ಳುವರ್ ಮತ್ತು ಸರ್ವಜ್ಞ ದನಿಯಾದದ್ದು ಈ ಆರ್ತತೆಗಳಿಗೆ. ಸೌಹಾರ್ದ ಮತ್ತು ವಿಮೋಚನೆಯ ಕನಸುಗಳಿಗೆ.




ಅವರು ಹುಟ್ಟಬೆಳೆದ ಸಮುದಾಯ ಮತ್ತು ಬಳಸಿದ ಭಾಷೆ ಚಾರಿತ್ರಿಕ ಆಕಸ್ಮಿಕ. ಆದರೆ ವ್ಯಕ್ತಪಡಿಸಿದ ಆಶಯ ಸಾರ್ವಕಾಲಿಕ, ಸಾರ್ವತ್ರಿಕ. ಹೀಗಾಗಿಯೇ ಸರ್ವಜ್ಞ ತಿರುವಳ್ಳುವರ್, ಬುದ್ಧ ಬಸವ, ಅಂಬೇಡ್ಕರ್‌ರಂಥಾ ಮಾನವತಾವಾದಿಗಳನ್ನು ಭಾಷಿಕ ಪರಿಸರದಲ್ಲಿ ಕಟ್ಟಿಹಾಕಿ ತಮ್ಮ ಜಾತಿವಾದಿ, ಅವಕಾಶವಾದಿ ರಾಜಕಾರಣಕ್ಕೆ ಬಳಸಿಕೊಳ್ಳುತ್ತಿರುವುದೇ ಸಮಕಾಲೀನ ಸಮಾಜ ಸಾರ್ವತ್ರಿಕ ಅಧಃಪತನವನ್ನು ಎತ್ತಿತೋರಿಸುತ್ತಿದೆ.

ಹೀಗಾಗಿಯೇ ಹದಿನೆಂಟು ವರ್ಷಗಳ ಹಿಂದೆ ತಿರುವಳ್ಳುವರ್ ಪ್ರತಿಮೆಯ ಸ್ಥಾಪನೆಯ ವಿರೋಧದ ಹಿಂದೆ ನಡೆದ ರಾಜಕೀಯ ಕೇವಲ ಭಾಷಾ ರಾಜಕೀಯ ಮಾತ್ರವಾಗಿರಲಿಲ್ಲ. ತಿರುವಳ್ಳುವರ್ ಪ್ರತಿಮೆ ಸ್ಥಾಪನೆಯನ್ನು ಆಗ ವಿರೋಧಿಸಿದವರಲ್ಲಿ ಮುಂಚೂಣಿಯಲ್ಲಿ ಇದ್ದದ್ದು ಕನ್ನಡದ ದೌರ್ಭಾಗ್ಯವಾಗಿರುವ ಚಿದಾನಂದಮೂರ್ತಿಗಳು. ಆಗ ಅವರು ಮುಂದಿಟ್ಟ ವಾದ ಕೇವಲ ಕನ್ನಡ ಬಾಷೆಯ ಹಿತಚಿಂತನೆಯಿಂದ ಮಾತ್ರ ಮೂಡಿಬಂದದ್ದೇನೂ ಆಗಿರಲಿಲ್ಲ. ಆಗತಾನೆ ಸಾವಿರಾರು ತಮಿಳು ಕೂಲಿಗಳನ್ನು ಕರ್ನಾಟಕದಿಂದ ಉಟ್ಟಬಟ್ಟೆಯಲ್ಲಿ ಗಡಿಪಾರು ಮಾಡುವಲ್ಲಿ ಯಶಸ್ವಿಯಾಗಿದ್ದ ಒಂದು ಬಗೆಯ ಕನ್ನಡ ಹೋರಾಟದ ನೇತೃತ್ವ ವಹಿಸಿದ್ದ ಅವರಲ್ಲಿ ಕೇವಲ ಉಗ್ರ ಕನ್ನಡಾಭಿಮಾನ ಮಾತ್ರ ಇತ್ತೆಂದು ತಿಳಿದರೆ ತಪ್ಪಾದೀತು. ಆಗ ಅವರು ತಿರುವಳ್ಳುವರ್ ಪ್ರತಿಮೆಯ ಸ್ಥಾಪನೆಯ ವಿರೋಧಕ್ಕೆ ಸೂಚಿಸಿದ ಕಾರಣ ಕರ್ನಾಟಕದ ಕೆಜಿಎಫ್‌ನಲ್ಲಿ ಪೆರಿಯಾರ್ ಪ್ರತಿಮೆ ಇರುವುದು ಮತ್ತು ಆ ಬಗೆಯಲ್ಲಿ ಕೇವಲ 'ತಮಿಳು ನಾಯಕರ' ಪ್ರತಿಮೆಗಳು ಮಾತ್ರ ಕೆಜಿಎಫ್ ಉದ್ದಗಲಕ್ಕೂ ಸ್ಥಾಪನೆಯಾಗುತ್ತಿರುವುದು. ಅಲ್ಲದೆ ಅದೇ ಸಮಯದಲ್ಲಿ ಯಾವನೋ ಒಬ್ಬ ಮತಿಗೆಟ್ಟ ತಮಿಳು ಬರಹಗಾರ ಕೆಜಿಎಫ್ ಅನ್ನು ಕೇಂದ್ರಾಡಳಿತ ಪ್ರದೇಶ ಮಾಡಬೇಕೆಂದು ಹೇಳಿದ್ದು ಪತ್ರಿಕೆಗಳಲ್ಲಿ ಸುದ್ದಿಯಾಗಿದ್ದೂ ಸಹ ಅವರ ಆಕ್ರೋಶಕ್ಕೆ ಕಾರಣವಾಗಿತ್ತು. ಇದು ಕೇವಲ ಶುದ್ಧ ಕನ್ನಡ ಭಾಷಾ ಪ್ರೇಮದಿಂದ ಹುಟ್ಟಿಕೊಂಡ ನಿಲುವಾಗಿತ್ತೇ?


ಉದಾಹರಣೆಗೆ ಚಿದಾನಂದಮೂರ್ತಿಗಳು ತಮ್ಮ ಜೀವಿತದುದ್ದಕ್ಕೂ ಯಾವುದೇ ತಮಿಳರ ಹೆಸರನ್ನೂ, ಯಾವುದೇ ತಮಿಳರ ಮೂರ್ತಿಗಳ ಸ್ಥಾಪನೆಯನ್ನೂ ವಿರೋಧಿಸುತ್ತಾ ಬಂದಿದ್ದಾರೆಯೇ? ಖಂಡಿತಾ ಇಲ್ಲ, ಇಂದು ಬೆಂಗಳೂರಿನ ಮುಖ್ಯ ಬಡಾವಣೆಯೊಂದರ ಹೆಸರು "ರಾಜಾಜಿನಗರ". ಈ ರಾಜಾಜಿ ಯಾರು? ಇವರು ಸ್ವಾತಂತ್ರ್ಯ ಹೋರಾಟಗಾರರು ಹೌದು. ತಮಿಳರೂ ಹೌದು. ಮಾತ್ರವಲ್ಲ, ಚಿದಾನಂದ ಮೂರ್ತಿಗಳು ಪ್ರತಿನಿಧಿಸುವ ಮೇಲ್ಜಾತಿಗೆ ಸೇರಿದವರೂ ಹೌದು. ಆದರೆ ಅವರು 1960ರ ದಶಕದಲ್ಲಿ ಕನ್ನಡದ ಬಗ್ಗೆ ಕೆಲವು ತುಚ್ಛ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದಾಗ ಕೆಲವು ಶೂದ್ರ ಕನ್ನಡವಾದಿಗಳು ರಾಜಾಜಿ ಹೆಸರನ್ನು ಬದಲಾಯಿಸಬೇಕೆಂದು ಹೋರಾಟ ನಡೆಸಿದ್ದರು. ಆಗ ಚಿದಾನಂದ ಮೂರ್ತಿಗಳು ಏನು ಮಾಡುತ್ತಿದ್ದರು ಎಂದು ಕೇಳುವುದು ಅಸಂಬದ್ಧವಾದರೂ ಒಂದು ಪ್ರಶ್ನೆಯನ್ನು ಕೇಳಲೇಬೇಕಾಗಿದೆ. ತಮ್ಮ ಮನೆಯಿರುವ ಆರ್‌ಪಿಸಿ ಲೇಔಟ್ ಬಡಾವಣೆಯ ಹೆಸರನ್ನು ಅವರು ಇತ್ತೀಚೆಗೆ "ಹಂಪಿ ನಗರ"ವೆಂದು ನಾಮಕರಣ ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮಾತ್ರವಲ್ಲ ಹೈದರಾಬಾದ್ ಕರ್ನಾಟಕವನ್ನು "ಕಲ್ಯಾಣ ಕರ್ನಾಟಕ"ವೆಂದು ಕರೆಯಬೇಕೆಂದೂ ಆಗ್ರಹಿಸುತ್ತಿದ್ದಾರೆ. ಆದರೆ ಈವರೆಗೂ 'ರಾಜಾಜಿ' ನಗರದ ಹೆಸರನ್ನು ಬದಲಾವಣೆ ಮಾಡಬೇಕೆಂದೂ ಅವರು ಯಾವತ್ತೂ ಕೇಳಲಿಲ್ಲ, ರಾಜಾಜಿನಗರದ ಹೆಸರನ್ನು ಬದಲಾಯಿಸಬೇಕೆಂಬುದು ಈ ಅಂಕಣಕಾರನ ಆಗ್ರಹವಲ್ಲವಾದರೂ ಚಿದಾನಂದ ಮೂರ್ತಿಗಳ 'ಕನ್ನಡ ಪ್ರೇಮದ' ಜಾತಿ ಮತ್ತು ವರ್ಗ ಸ್ವಭಾವಗಳನ್ನು ಅರ್ಥಮಾಡಿಕೊಳ್ಳಲು ಈ ಪ್ರಶ್ನೆಗಳನ್ನು ಕೇಳಬೇಕಿರುವುದು ಅತ್ಯಗತ್ಯ.

ಅಷ್ಟು ಮಾತ್ರವಲ್ಲ, ಈವರೆಗೆ ಚಿದಾನಂದಮೂರ್ತಿಗಳು ಎತ್ತಿಹಿಡಿಯುತ್ತಾ ಬಂದಿರುವ ಕನ್ನಡದ ಇತಿಹಾಸ ಪುರುಷರಲ್ಲಿ ದುಡಿಯುವ ವರ್ಗದ ಮತ್ತು ದಮನಿತ ಜನತೆಯ ಆಶೋತ್ತರಗಳನ್ನು ಪ್ರತಿನಿಧಿಸಿದ ಕನ್ನಡದ ಕಣ್ಮಣಿಗಳೆಷ್ಟು?



ಕನ್ನಡ ಸಮಾಜದಲ್ಲಿ ಪರಂಪರಾನುಗತ ಬ್ರಾಹ್ಮಣೀಯ ಶ್ಯಾನುಭೋಗಿಕೆ ಮತ್ತು ಪಟೇಲಿಕೆಯನ್ನು ರದ್ದುಪಡಿಸಿ ದಲಿತ-ಶೂದ್ರ ಸಮುದಾಯಕ್ಕೆ ಘನತೆಯ ಬದುಕನ್ನು ಕಲ್ಪಿಸಿಕೊಟ್ಟ ಕನ್ನಡಿಗ ಟಿಪ್ಪೂವನ್ನು ಕಂಡರೆ ಅವರಿಗೇಕೆ ದ್ವೇಷ? ದೂರದರ್ಶನದಲ್ಲಿ ಕನ್ನಡ ಸಮುದಾಯದಲ್ಲಿ ಶೇ.0.001ರಷ್ಟು ಜನರಿಗೂ ಅರ್ಥವಾಗದ ಸಂಸ್ಕೃತ ವಾರ್ತೆ ಪ್ರಸಾರವಾಗುತ್ತಿದ್ದರೂ ಯಾವತ್ತಿಗೂ ಚಕಾರವೆತ್ತದ ಚಿ.ಮೂ ಕರ್ನಾಟಕದಲ್ಲಿ ವಾಸ ಮಾಡುವ ಶೇ.12ರಷ್ಟು ಜನರಿಗೆ ಅರ್ಥವಾಗುವ ಉರ್ದು ವಾರ್ತೆಯನ್ನು ಪ್ರಸಾರ ಮಾಡುವ ನಿರ್ಧಾರದ ವಿರುದ್ಧ 'ಮಿಲಿಟೆಂಟ್' ಹೋರಾಟ ನಡೆಸಿ, ಹಲವಾರು ಮುಸ್ಲಿಮರನ್ನು ಬಲಿತೆಗೆದುಕೊಂಡದ್ದನ್ನು ಯಾವ ಬಗೆಯ ಕನ್ನಡ ಪ್ರೇಮವೆಂದು ಅರ್ಥಮಾಡಿಕೊಳ್ಳಬೇಕು? ಕನ್ನಡದ ಕೆಲಸವೇ ಸಾಕಷ್ಟಿರುವಾಗ ಕನ್ನಡ ಜನತೆಯ ಹಣದಲ್ಲಿ ಸತ್ತ ಭಾಷೆ ಸಂಸ್ಕೃತಕ್ಕೆ ಒಂದು ವಿವಿಯನ್ನೇ ಮಾಡುತ್ತಿರುವ ಬಿಜೆಪಿ ಸರ್ಕಾರದ ನಿಲುವನ್ನು ಕಿಂಚಿತ್ತೂ ವಿಮರ್ಶಿಸದ ಚಿಮೂ ಕನ್ನಡದ ಸೋದರ ಭಾಷೆಯಾದ ಬ್ಯಾರಿ ಭಾಷೆಯ ಅಕಾಡೆಮಿಯನ್ನು ವಿರೋಧಿಸುತ್ತಿರುವುದರ ಹಿಂದೆ ಇರುವುದು ಕನ್ನಡ ಪ್ರೇಮವೋ? ಪರಮತ ದ್ವೇಷವೋ? ಕನ್ನಡಾಭಿಮಾನವೋ? ಮೇಲ್ಜಾತಿ ದುರಭಿಮಾನವೋ?

ಉತ್ತರ ಸ್ಪಷ್ಟ. ಚಿಮೂಗಳದ್ದು ಕನ್ನಡವಾದವಲ್ಲ, ಹಿಂದೂತ್ವವಾದ. ಅಂದರೆ ಬ್ರಾಹ್ಮಣವಾದ. ಅಂದರೆ ಪರಮತ ದ್ವೇಷ. ಅವರು ತಿರುವಳ್ಳುವರ್ ಅನ್ನು, ಪೆರಿಯಾರ್ ಅನ್ನು ವಿರೋಧಿಸಲು ಮತ್ತು ತಮಿಳರೇ ಆದರೂ ರಾಜಾಜಿ ಮುಂತಾದವರಿಗೆ ಮೌನಬೆಂಬಲ ನೀಡಲು ಪ್ರಧಾನ ಕಾರಣ ಕನ್ನಡಾಭಿಮಾನವಲ್ಲ, ಜಾತಿ ಪದ್ಧತಿಯನ್ನು ಎತ್ತಿಹಿಡಿಯುವ ಬ್ರಾಹ್ಮಣ್ಯಾಭಿಮಾನ!



ಆದರೆ ಇಂದು ಅದೇ ಹಿಂದೂತ್ವವಾದಿ ಚಿಮೂಗಳೇ ತಿರುವಳ್ಳುವರ್ ಪ್ರತಿಮೆಯ ಅನಾವರಣಕ್ಕೆ ಮುಂದಾಗಿರುವುದು ಸಂದರ್ಭದ ದುರಂತ. ಇದರ ಹಿಂದೆ ಹಿಂದೂತ್ವವಾದಿ ಬಿಜೆಪಿ ಸರ್ಕಾರದ ಬುಡವನ್ನು ಮತಭದ್ರಗೊಳಿಸುವ ಹುನ್ನಾರವಿದೆಯೇ ವಿನಃ ತಿರುವಳ್ಳುವರ್‌ನ ಆಶಯಗಳನ್ನು ಪ್ರಚಾರ ಮಾಡುವ ಆಶಯವಿಲ್ಲ, ತಮ್ಮ ನಿಲುವಿನ ಬಗ್ಗೆ ಯಾರೂ ಯಾವುದೇ ಊಹಾಪೋಹಗಳನ್ನು ಮಾಡದಷ್ಟು ಸ್ಪಷ್ಟವಾಗಿ ಅವರು ತಮ್ಮ ನಿಲುವನ್ನು ಮಾಧ್ಯಮಗಳಲ್ಲಿ ಸ್ಪಷ್ಟಪಡಿಸಿದ್ದಾರೆ. "ತಿರುವಳ್ಳುವರ್ ಪ್ರತಿಮೆ ಹೆಚ್ಚೂಕಡಿಮೆ ಸ್ಥಾಪನೆಯಾಗಿ ಬಿಟ್ಟಿದೆ. ಅದನ್ನು ಈಗ ಉರುಳಿಸಲು ಸಾಧ್ಯವಿಲ್ಲ, ನಮ್ಮ ಕಾಲದಲ್ಲಲ್ಲದಿದ್ದರೂ ಮುಂದೆ ಎಂದಾದರೂ ಅದರ ಅನಾವರಣ ಆಗಿಯೇ ತೀರುತ್ತದೆ. ಹೀಗಾಗಿ ಅದನ್ನು ತಡೆಹಿಡಿಯಲು ಸಾಧ್ಯವಿಲ್ಲ, ಆದರ ಅನಾವರಣ ಅ... ವಾರ್ಯ." ಹೀಗೆ ತಿರುವಳ್ಳುವರ್ ಅವರಿಗೆ ಅನಿವಾರ್ಯ ಕರ್ಮವೇ ವಿನಃ ಆಯ್ಕೆಯಲ್ಲ, ಅಲ್ಲದೇ ಈಗ ಬಿಜೆಪಿ ಸರ್ಕಾರವೇ ಅನಾವರಣ ಮಾಡಿದರೆ ಅದರ ಕ್ರೆಡಿಟ್ಟೂ ಬಿಜೆಪಿಗೇ ಸಿಕ್ಕಿ ಬರಲಿರುವ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ತಮಿಳರ ಓಟು ಸಿಗುತ್ತದೆ. ಇದು ಸಂಶೋಧಕ ಚಿಮೂರವರ ಬೆಂಬಲಕ್ಕೆ ಕಾರಣ.

ಹೀಗಾಗಿ ಬಿಜೆಪಿ ಸರ್ಕಾರ ತಿರುವಳ್ಳುವರ್‌ನ ಜೀವ ತೆಗೆದು ಆತನ ಕಳೇಬರವನ್ನಷ್ಟೇ ಅನಾವರಣ ಮಾಡುತ್ತಿದೆ. ಇದರಲ್ಲಿ ತಮಿಳರಾಗಲೀ ಕನ್ನಡಿಗರಾಗಲೀ ಖುಷಿ ಪಡುವ ಸಂಗತಿಯೇನಿಲ್ಲ.

ಇನ್ನು ನಾರಾಯಣಗೌಡ, ವಾಟಾಳ್ ನಾಗರಾಜ್ ಇನ್ನಿತರ ಕೂಗುಮಾರಿ ಕನ್ನಡ ಸಂಘಟನೆಗಳ ವಿರೋಧದಲ್ಲೇನಾದರೂ ಉನ್ನತ ಆಶಯಗಳಿವೆಯೇ? ಈಗಾಗಲೇ ಗಮನಿಸಿದಂತೆ "ಕನ್ನಡವೇ ಧರ್ಮ" ಎಂಬ ಅವರ ವಾದದಲ್ಲಿ ಯಾವ ಕನ್ನಡಿಗರ ಹಿತವೂ ಇಲ್ಲ, ಆಯಾ ಸಂಘಟನೆಗಳ ಹಿತಗಳನ್ನು ಹೊರತುಪಡಿಸಿ! ತಿರುವಳ್ಳುವರ್ ಬಗ್ಗೆಯಾಗಲೀ ಅವರ ಪ್ರತಿಮೆಯ ಅನಾವರಣಕ್ಕಾಗಲಿ ತಮ್ಮ ವಿರೋಧವಿಲ್ಲವೆಂದು ಹೇಳುವ ಈ ಸಂಘಟನೆಗಳು ಅದೇ ಸಮಯದಲ್ಲಿ "ಶಾಸ್ತ್ರೀಯ ಭಾಷಾ ಸ್ಥಾನಮಾನ ವಿವಾದ, ಹೊಗೇನಕಲ್ ಕಾವೇರಿ ವಿವಾದದಿಂದ ಮೊದಲ್ಗೊಂಡು ತಮಿಳರಿಂದ ಕನ್ನಡಿಗರಿಗಾಗಿರುವ ಎಲ್ಲಾ ಅನ್ಯಾಯಗಳು ಬಗೆಹರಿಯದೇ ತಿರುವಳ್ಳುವರ್ ಪ್ರತಿಮೆಯ ಅನಾವರಣಕ್ಕೆ ಅವಕಾಶ ಕೊಡುವುದಿಲ್ಲ" ಎಂದು ಹಠ ಹಿಡಿದಿವೆ. ಈ ಬಗೆಯಲ್ಲಿ ತಮಿಳುನಾಡಿನ ಸರ್ಕಾರ ಮಾಡುತ್ತಿರುವ ಅನ್ಯಾಯವನ್ನು ಇಡೀ ತಮಿಳು ಸಮುದಾಯಕ್ಕೆ ಅನ್ವಯಿಸಿ ಇಡೀ ತಮಿಳು ಜನಾಂಗವನ್ನೇ ದ್ವೇಷಿಸುವಂತೆ ಮಾಡುವ ಭಾಷಾ ಫ್ಯಾಸಿಸ್ಟ್ ಧೋರಣೆಯನ್ನು ಕನ್ನಡ ಚಳವಳಿಗೆ ಕಲಿಸಿಕೊಟ್ಟದ್ದೂ ಸಹ ಹಿಂದೂತ್ವ ಫ್ಯಾಸಿಸ್ಟ್ ಆಗಿ ಪರಿವರ್ತನೆಯಾಗಿರುವ ಚಿದಾನಂದ ಮೂರ್ತಿಗಳೇ. ಈ ಫ್ಯಾಸಿಸಮ್ಮು ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ಅವರದಲ್ಲದ ತಪ್ಪುಗಳನ್ನು ಹೇರುತ್ತಾ ಬಹುಸಾಂಖ್ಯಾತ ಸಮುದಾಯದವರು ಇಡೀ ಅಲ್ಪಸಂಖ್ಯಾತ ಸಮುದಾಯವನ್ನೇ ದ್ವೇಷಿಸುವಂತೆ ಮಾಡುತ್ತದೆ. ಆ ಮೂಲಕ ಬಹುಸಂಖ್ಯಾತ ಸಮುದಾಯದ ದಮನಿತರು ಮತ್ತು ಅಲ್ಪಸಂಖ್ಯಾತ ಸಮುದಾಯದ ದಮನಿತರ ನಡುವೆ ಶಾಶ್ವತ ಘರ್ಷಣೆ ಏರ್ಪಡಿಸಿ ಬಹುಸಂಖ್ಯಾತ ಸಮುದಾಯಕ್ಕೆ ಸೇರಿದ ಶೋಷಕರನ್ನು ಕಾಪಾಡುತ್ತದೆ. ಇದೇ ಫ್ಯಾಸಿಸಂನ ತಿರುಳು. ಭಾಷಾ ಫ್ಯಾಸಿಸಮ್ಮಿಗೂ ಹಿಂದೂತ್ವವಾದಿ ಫ್ಯಾಸಿಸಮ್ಮಿಗೂ ಹೀಗೆ ಹತ್ತಿರದ ಸಂಬಂಧ. ಒಂದು ತಮಿಳು ಅಲ್ಪಸಂಖ್ಯಾತರನ್ನು ದೋಷಿಗಳನ್ನಾಗಿ ಮಾಡಿದರೆ ಮತ್ತೊಂದು ಮುಸ್ಲಿಂ ಅಲ್ಪಸಂಖ್ಯಾತರನ್ನು ಕಗ್ಗೊಲೆ ಮಾಡುತ್ತದೆ. ಇವೆರಡಕ್ಕೂ ಚಿಮೂವೇ ಸೈದ್ಧಾಂತಿಕ ನಾಯಕರಾಗಿರುವುದು ಆಕಸ್ಮಿಕವೇನೂ ಅಲ್ಲ, ಎರಡು ಬಗೆಯ ಜಗಳವನ್ನು ಹುಟ್ಟಿಹಾಕಿರುವ ಸದ್ದಿನ ಗದ್ದಲವು ಜನರ ಗಮನವನ್ನು ಬೇರೆಡೆಗೆ ಸೆಳೆದಿರುವಾಗ ಸದ್ದಿಲ್ಲದೆ ಬಿಜೆಪಿ ಸರ್ಕಾರದ ಒಂದೊಂದೇ ಜನವಿರೋಧಿ ನೀತಿಗಳನ್ನು ಜಾರಿ ಮಾಡುತ್ತಿರುವುದೂ ಆಕಸ್ಮಿಕವೇನಲ್ಲ.

ಹೀಗಾಗಿ ದುಷ್ಟ ಚಿಮೂಗಳಿಂದ ಮತ್ತು ಭ್ರಷ್ಟ ನಾರಾಯಣ ಗೌಡರಿಂದ ತಿರುವಳ್ಳುವರ್ ಮತ್ತು ಸರ್ವಜ್ಞರನ್ನು ಕಾಪಾಡುವ ಹೊಣೆ ಭಾಷೆಯ ಹಂಗಿಲ್ಲದೆ ಬದುಕನ್ನು ಅರ್ಥಮಾಡಿಕೊಳ್ಳಬಲ್ಲ ಜನರೆಲ್ಲರ ಮೇಲಿದೆ. ಅದಕ್ಕೇ ಸರ್ವಜ್ಞ ಹೀಗೆ ಹೇಳುತ್ತಾನೆ:

ಕಲ್ಲು ಕಲ್ಲೆಂಬುವಿರಿ ಕಲ್ಲೊಳಗಿರ್ಪುದೇ ದೈವ
ಕಲ್ಲಲ್ಲಿ ಕಲೆಯನಿಲಿಸಿದಾ ಗುರುವಿನಾ
ಸೊಲ್ಲೇದೈವ ಸರ್ವಜ್ಞ?!

...ಜೆಪಿ ಮತ್ತು ಸೋಮಣ್ಣ ಎಂಬ ಅವಕಾಶವಾದಿ



ಕಂಡಹಾಗೆ

■ ಗೌರಿ ಲಂಕೇಶ್



...ನಿವಾರ ಬೆಳಗ್ಗೆ ನನ್ನ ಮೊಬೈಲ್‌ಗೆ ಒಂದು ಕರೆ ... "ಅಮ್ಮಾ, ನೀವು ಯಾಕೆ ನನ್ನನ್ನು ವಿರೋಧಿಸು... ...ೆ ನಾನು ನಿಮ್ಮ ತಂದೆಯಿಂದ ಪ್ರಭಾವಿತನಾದವನು. ...ದ ಒಳ್ಳೆಯ ಮಾತುಗಳನ್ನು ಪಡೆದವನು. ಈ ... ನೀವೂ ನನ್ನನ್ನು ಬೆಂಬಲಿಸಿದ್ದೀರಿ. ಆದರೀಗ ...ೋಟಿ ರೂಪಾಯಿ ಬಲದವನ ಮುಂದೆ ನನ್ನಂಥ ...ನ್ನು ವಿರೋಧಿಸುವುದು ನ್ಯಾಯವೇ?" ಎಂದು ...ದ ಮಾತನಾಡುತ್ತಿದ್ದವರು ಕೇಳಿದರು.

...ಮಗೀಗಾಗಲೇ ಸ್ಪಷ್ಟವಾಗಿರಬಹುದು. ಆ ಕರೆ ...ವರು ಈಗ ನಡೆಯುತ್ತಿರುವ ಉಪಚುನಾವಣೆಯಲ್ಲಿ ...ೂರಿನ ಗೋವಿಂದರಾಜನಗರದಿಂದ ಬಿಜೆಪಿ ...ಯಾಗಿ ಸ್ಪರ್ಧಿಸುತ್ತಿರುವ ವಿ. ಸೋಮಣ್ಣನವರು. ...ನು ಸೋಮಣ್ಣನವರಿಗೆ "ನಮ್ಮ ವಿರೋಧದಲ್ಲಿ ...ದೇ ವೈಯಕ್ತಿಕ ಕಾರಣಗಳಿಲ್ಲ, ಬದಲಾಗಿ ...ದ್ದು" ಎಂದು ಹೇಳಿದೆ. "ನನಗೆ ಗೊತ್ತು, ನಾನು ...ಸೇರಿದ್ದರಿಂದ ನಿಮಗೆ ಕೋಪ ಬಂದಿದೆ, ಅದಕ್ಕೆ ...ಈ ಬಾರಿ ವಿರೋಧಿಸುತ್ತಿದ್ದೀರಿ. ಆದರೆ ನಾನೇನು ...? ಕಾಂಗ್ರೆಸ್ ಪಕ್ಷಕ್ಕಾಗಿ ನಾನು ಸಾಕಷ್ಟು ದುಡಿದೆ. ... ಕಡೆ ಲಿಂಗಾಯತರ ವೋಟುಗಳು ಕಾಂಗ್ರೆಸ್‌ಗೆ ...ತೆ ಮಾಡಿ ಸಿದ್ಧರಾಮಯ್ಯ ಸೇರಿದಂತೆ ಬಹಳಷ್ಟು ...ಗೆಲುವಿಗಾಗಿ ಶ್ರಮಿಸಿದೆ. ನಾನಿಲ್ಲದಿದ್ದರೆ ಅವರು ...ಲಿಲ್ಲ, ಆದರೆ ಕಾಂಗ್ರೆಸ್ ನನಗೆ ಯಾವ ಸ್ಥಾನವನ್ನೂ ...ಲ್ಲ, ಕೆಲಸ ಮಾಡಲು ಒಂದು ಆಫೀಸನ್ನು ಕೊಡಲಿಲ್ಲ, ...ಅದೇ ಪಕ್ಷದಲ್ಲಿ ಉಳಿದಿದ್ದರೆ ನಾನು ಗೆದ್ದಲು ಹತ್ತಿ ...ಹೋಗುತ್ತಿದ್ದೆ" ಎಂದೆಲ್ಲ ಅವರು ಸಮಜಾಯಿಷಿ ...ನೀಡಿದರು.

...ೀಮಣ್ಣ ಓರ್ವ ವೃತ್ತಿ ರಾಜಕಾರಣಿ. ಎಲ್ಲ ವೃತ್ತಿ ...ರಣಿಗಳಂತೆ ಸದಾ ಚಲಾವಣೆಯಲ್ಲಿ ಇರಲು ...ವವರು. ಆದರೆ ಜನಪರ ಸಿದ್ಧಾಂತ ಹೊಂದಿರದ ...ರಣಿಗಳು ಇದ್ದರೆಷ್ಟು ಬಿಟ್ಟರೆಷ್ಟು ಎಂಬ ನಿಲುವು ...ಪತ್ರಿಕೆಯದ್ದು ಎಂಬುದು ಎಲ್ಲರಿಗೂ ಗೊತ್ತಿರುವ ... ಆದ್ದರಿಂದ ಸೋಮಣ್ಣನವರಿಗೆ ಹೇಳಿದೆ: ...ಥವರು ಅಧಿಕಾರಕ್ಕಾಗಿ ಬಿಜೆಪಿಯಂತಹ ಜನ... ಪಕ್ಷಗಳನ್ನು ಸೇರಿ ಅವು ಬೆಳೆಯುವಂತೆ, ಅಧಿಕಾರ ...ುವಂತೆ ಮಾಡುತ್ತೀರಿ. ಅದರಿಂದ ನಿಮಗೆ ...ಗಬಹುದು, ಆದರೆ ಬಿಜೆಪಿಯಿಂದಾಗಿ ಈ ರಾಜ್ಯಕ್ಕೆ ... ಅನಾಹುತದ ಬಗ್ಗೆ ನೀವು ಚಿಂತಿಸುವುದಿಲ್ಲ. ...ಬಗ್ಗೆ ನನಗಾಗಲಿ, ನಮ್ಮ ತಂಡಕ್ಕಾಗಲಿ ವೈಯಕ್ತಿಕ ...ೇನಿಲ್ಲ, ಆದರೆ ಬಿಜೆಪಿಯ ಕೋಮುವಾದಿ ...ವನ್ನು ಕಟುವಾಗಿ ವಿರೋಧಿಸುವವರು ನಾವು. ... ಚೆನ್ನಾಗಿಯೇ ಗೊತ್ತು, ರಾಮನ ದೇವಸ್ಥಾನದ ಹೆಸರಲ್ಲಿ ಬಿಜೆಪಿ ರಥಯಾತ್ರೆ ಮಾಡಿ ಸಾವಿರಾರು ಜನರನ್ನು ಕೊಂದಾಗ ನನ್ನ ಅಪ್ಪ 'ಇಟ್ಟಿಗೆ ಪವಿತ್ರವಲ್ಲ ಜೀವ ಪವಿತ್ರ' ಎಂದಿದ್ದರು. ಆ ನಿಲುವನ್ನೇ ನಾವು ಮುಂದುವರೆಸಿದ್ದೇವೆ. ನಮಗೆ ಈ ರಾಜ್ಯದ ಕುವೆಂಪುರವರೂ ಬೇಕು, ಶಿಶುನಾಳ ಷರೀಫರೂ ಬೇಕು, ಕನ್ನಡಿಗರೂ ಬೇಕು, ಬ್ಯಾರಿ ಭಾಷಿಕರೂ ಬೇಕು. ಎಲ್ಲಾ ಜಾತಿಯ ಧರ್ಮದ ಜನ ನೆಮ್ಮದಿಯಾಗಿ ಜೀವಿಸುವ ಕರ್ನಾಟಕ ನಮಗೆ ಬೇಕು. ಆದರೆ ನೀವು ಈಗ ಪ್ರತಿನಿಧಿಸುತ್ತಿರುವ ಬಿಜೆಪಿ ಪಕ್ಷ, ಇಂತಹ ಸೌಹಾರ್ದ ಕರ್ನಾಟಕಕ್ಕೆ ಬೆಂಕಿ ಇಡುವ ಪಕ್ಷ, ಬೇರೆ ಧರ್ಮದವರನ್ನು, ಶೋಷಿತ ಜಾತಿಗಳನ್ನು ಬಲಿ ತೆಗೆದುಕೊಳ್ಳುವ ಪಕ್ಷ. ನಮ್ಮದು ಚಿಕ್ಕ ಪತ್ರಿಕೆ ಆಗಿರಬಹುದು, ಆದರೂ ನಾವು ನಿಮ್ಮನ್ನು, ನಿಮ್ಮ ಪಕ್ಷವನ್ನು ವಿರೋಧಿಸುತ್ತೇವೆ. ಅದರಲ್ಲಿ ಯಾವ ರೀತಿಯಲ್ಲೂ ನಾವು ರಾಜಿ ಮಾಡಿಕೊಳ್ಳುವುದಿಲ್ಲ, ಮೃದು ಧೋರಣೆ ತಾಳುವುದಿಲ್ಲ" ಎಂದೆ.

ಈ ಹಿಂದೆ ನಮ್ಮ ಕರ್ನಾಟಕ ಕೋಮುಸೌಹಾರ್ದ ವೇದಿಕೆಗೆ ನೆರವು ನೀಡಿದ್ದ ಸೋಮಣ್ಣನವರಿಗೆ ಹೇಗೆ ಉತ್ತರಿಸಬೇಕೆಂದು ಗೊತ್ತಾಗಲಿಲ್ಲ ಎನಿಸುತ್ತೆ, ಅದಕ್ಕೆ ಅವರು "ಆದರೂ ಯಡಿಯೂರಪ್ಪನವರು ಒಳ್ಳೆ ಆಡಳಿತ ನೀಡುತ್ತಿದ್ದಾರಲ್ಲ ಅಮ್ಮಾ" ಎಂದರು.

"ನೋಡಿ, ನೀವು ಹೀಗೆಲ್ಲ ಹೇಳಿ ನನಗೆ ಕೋಪ ತರಿಸಬೇಡಿ. ಎಂತಹ ಆಡಳಿತ ನೀಡಿದ್ದಾರೆ ನಿಮ್ಮ ಯಡಿಯೂರಪ್ಪಾ? ಅಧಿಕಾರ ಬಂದಾಗಿನಿಂದ ಶಾಸಕರನ್ನು ಖರೀದಿಸಿ ಕೆಟ್ಟ ರಾಜಕಾರಣ ಶುರು ಮಾಡಿದ್ದಾರೆ. ಆ ರೆಡ್ಡಿಗಳು ರಾಜ್ಯದ ಗಡಿಯನ್ನೇ ತಿರುಚಿ ಲೂಟಿ ಮಾಡುತ್ತಿದ್ದರೂ ಸುಮ್ಮನಿದ್ದಾರೆ. ರಾಜ್ಯದ ಹಲವಾರು ಕಡೆ ಮಳೆ ಬೀಳದೆ ರೈತರು ಗುಳೆ ಏಳುತ್ತಿದ್ದರೆ ಇವರು ಮಠ, ಮಂದಿರ ಸುತ್ತುತ್ತಿದ್ದಾರೆ. ಅದೆಲ್ಲ ಬೇಡ. ಅಧಿಕಾರಕ್ಕೆ ಬಂದು ಒಂದು ವರ್ಷದ ಮೇಲಾದರೂ ನೆಟ್ಟಗೆ ವಿದ್ಯುತ್ ಸಪ್ಲೈ ಮಾಡಲಾಗುತ್ತಿಲ್ಲ ಅವರ ಕೈಯಲ್ಲಿ. ಒಳ್ಳೆಯ ಆಡಳಿತ ನೀಡುವ ಮಾತು ಪಕ್ಕಕ್ಕಿರಲಿ ಆಡಳಿತ ನಡೆಸೋದು ಹೇಗೆ ಅಂತಾನೂ ಅವರಿಗೆ ಕಿಂಚಿತ್ತೂ ಗೊತ್ತಿಲ್ಲ ಎಂಬುದು ಈಗಾಗಲೇ ಸಾಬೀತಾಗಿದೆ" ಅಂದೆ.

ಅದನ್ನು ಕೇಳಿ ಯಡಿಯೂರಪ್ಪನವರ ಬಗೆಗಿನ ಮಾತನ್ನು ಕೈಬಿಟ್ಟು "ಆದರೆ ನಾನು ಎಂದೂ ಜಾತಿರಾಜಕಾರಣ ಮಾಡಿಲ್ಲ, ಇನ್ನು ಕೋಮುವಾದದಿಂದಲೂ ನಾನು ದೂರ" ಎಂದರು ಸೋಮಣ್ಣ. ಜಾತಿ ರಾಜಕಾರಣದ ಬಗ್ಗೆ ಅವರೊಂದಿಗೆ ಚರ್ಚಿಸಬೇಕಿದ್ದರೆ ಯಡಿಯೂರಪ್ಪನ ಬಗ್ಗೆ ಅವರಲ್ಲಿರುವ ಸ್ವಜಾತಿ ಪ್ರೇಮದಿಂದ ಹಿಡಿದು ಸಿದ್ಧಗಂಗಾಮಠದ ಸ್ವಾಮೀಜಿಗಳನ್ನು ಹಾದಿತಪ್ಪಿಸಿರುವ ಬಗೆಗೆಲ್ಲ ಮಾತಾಡಿ ಗಂಟೆಗಟ್ಟಲೆ ಸಮಯವನ್ನು ವೆಚ್ಚಮಾಡಬೇಕಿತ್ತು.

ಆದ್ದರಿಂದ ನಾನು "ನೀವೊಂದು ಕೆಲಸ ಮಾಡುತ್ತೀರಾ? ಹುಬ್ಬಳ್ಳಿಯ ನ್ಯಾಯಾಲಯದಲ್ಲಿ ಬಾಂಬ್ ಬ್ಲಾಸ್ಟ್ ಮಾಡಿದ, ಬೆಂಗಳೂರು ಮತ್ತು ಮೈಸೂರಿನಲ್ಲಿ ಮಸೀದಿಗಳಲ್ಲಿ ಹಂದಿ ತಲೆ ಎಸೆದು ಕೋಮುಗಲಭೆಗಳಿಗೆ ಕಾರಣವಾದ ಶ್ರೀರಾಮ ಸೇನೆಯನ್ನು ಕೂಡಲೇ ರಾಜ್ಯ ಸರ್ಕಾರ ನಿಷೇಧಿಸಬೇಕೆಂದು, ಅದರ ನಾಯಕ ಪ್ರಮೋದ್ ಮುತಾಲಿಕ್‌ನನ್ನು ಬಂಧಿಸಬೇಕೆಂದು ಹೇಳಿಕೆ ನೀಡಿ. ಜೊತೆಗೆ ಕರಾವಳಿ ಪ್ರದೇಶದಲ್ಲಿ ಮಹಿಳೆಯರ ಮೇಲೆ, ಅಮಾಯಕ ಅಲ್ಪಸಂಖ್ಯಾತರ ಮೇಲೆ ಹಲ್ಲೆಗಳನ್ನು ಮಾಡುತ್ತಿರುವ, ಸೆಕ್ಸ್ ಸಿಡಿ ಮಾರಾಟದಲ್ಲಿ ತೊಡಗಿರುವ ಭಜರಂಗದಳವನ್ನೂ ಯಡಿಯೂರಪ್ಪನ ಸರ್ಕಾರ ನಿಷೇಧಿಸಬೇಕೆಂದು ಒತ್ತಾಯ ಮಾಡಿ, ಅಷ್ಟೇ ಅಲ್ಲ ವಿನಾಕಾರಣ ಕರ್ನಾಟಕ ಫೋರಂ ಫಾರ್ ಡಿಗ್ನಿಟಿ ಮತ್ತು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಗಳನ್ನು ನಿಷೇಧಿಸಬಾರದೆಂದು ಹೇಳಿ" ಎಂದೆ.

ಅದೆಲ್ಲ ಸೋಮಣ್ಣನವರಿಂದ ಸಾಧ್ಯವಿಲ್ಲ ಎಂದು ನನಗೂ ಗೊತ್ತು, ಅಷ್ಟೇ ಅಲ್ಲ ಅವರಿಗೂ ಗೊತ್ತು! ಆದ್ದರಿಂದ ಸೋಮಣ್ಣನವರು ನಾನು ಹೇಳಿದ್ದನ್ನೆಲ್ಲ ಬದಿಗಿಟ್ಟು "ಅಮ್ಮಾ, ನಿಮ್ಮ ಬೆಂಬಲ ನನಗಿರಲಿ. ನಾನು ತುಂಬಾ ಚಿಕ್ಕವನು. ನಿಮ್ಮ ತಂದೆಯ ಶಿಷ್ಯ ನಾನು" ಎಂದೆಲ್ಲ ಹೇಳಲಾರಂಭಿಸಿದರು. ಸೋಮಣ್ಣನವರ ಈ ರಾಜಕಾರಣಿ ವರಸೆ ಕೇಳಿ ನನಗೆ ಬೇಸರವಾಯಿತು. "ಇಲ್ಲ, ನೀವು ದೊಡ್ಡವರು. ನಾನು ತುಂಬಾ ಚಿಕ್ಕವಳು, ಒಂದು ಚಿಕ್ಕ ಪತ್ರಿಕೆ ನಡೆಸುತ್ತಿರುವವಳು ಅಷ್ಟೇ. ಆದರೆ ನಮ್ಮೆಲ್ಲಾ ಶಕ್ತಿ ಸಾಮರ್ಥ್ಯವನ್ನು ಉಪಯೋಗಿಸಿ ನಾವು ಬಿಜೆಪಿಯಂತಹ ಕೋಮುವಾದಿ ಪಕ್ಷವನ್ನು ವಿರೋಧಿಸುತ್ತೇವೆ. ನೀವು ಈಗ ಆ ಪಕ್ಷ ಸೇರಿರುವುದರಿಂದ ನೀವೂ ನಮ್ಮ ವಿರೋಧಕ್ಕೆ ಗುರಿಯಾಗುತ್ತೀರಿ. ಚುನಾವಣೆಗಳನ್ನು ಮುಗಿಸಿ, ಮುಂದೊಂದು ದಿನ ಭೇಟಿ ಆಗೋಣ" ಎಂದಷ್ಟೇ ಹೇಳಿ ಮಾತು ಮುಗಿಸಿದೆ.

ಬಿಜೆಪಿಯ ಹಿಂದೂತ್ವ ಅಜೆಂಡಾವನ್ನು ಒಪ್ಪದಿದ್ದರೂ ಅದು ಈ ದೇಶದಲ್ಲಿ, ಈ ರಾಜ್ಯದಲ್ಲಿ ಬೆಳೆಯುವಂತೆ ಹಲವಾರು ಜಾತ್ಯತೀತವಾದಿಗಳೂ ಕಾರಣವಾಗಿದ್ದು ಐತಿಹಾಸಿಕ ಸತ್ಯ. ಅಂತಹವರ ಪಟ್ಟಿಯಲ್ಲಿ ಜಯಪ್ರಕಾಶ್ ನಾರಾಯಣರಂತಹ ಮುತ್ಸದ್ದಿಯಿಂದ ಹಿಡಿದು ವಿ.ಪಿ. ಸಿಂಗ್ ತರಹದ ರಾಷ್ಟ್ರ ನಾಯಕರೂ ಇದ್ದಾರೆ. ಇವರೆಲ್ಲ ತಮ್ಮ ಕಾಲದ ಅಗತ್ಯಗಳಿಗೆ, ಸ್ವಾರ್ಥದ ರಾಜಕಾರಣಕ್ಕೆ ಜನಸಂಘ ಮತ್ತು ಅದರ ನಂತರದ ರೂಪವಾದ ಬಿಜೆಪಿಗೆ ನೀರೆರೆದು ಬೆಳೆಸಿದ್ದರಿಂದಲೇ ಇವತ್ತು ಆ ಪಕ್ಷ ಬೇರುಬಿಟ್ಟಿದೆ, ಪೆಡಂಭೂತದಂತೆ ಬೆಳೆದಿದೆ. ಈಗ ಇಡೀ ದೇಶವನ್ನೇ ವಿನಾಶದತ್ತ ಸಾಗಿಸುತ್ತಿದೆ.

ಜೆಪಿ ತರಹದವರಿಗೆ ಹೋಲಿಸಿದರೆ ವಿ. ಸೋಮಣ್ಣ ಓರ್ವ ಸಣ್ಣ ರಾಜಕಾರಣಿ. ಆದರೆ ಇವರೂ ಕೂಡ ಇವತ್ತು ತನ್ನ ಸ್ವಾರ್ಥಕ್ಕೆ, ಗೂಟದ ಕಾರಿನ ಆಸೆಗೆ ಬಿಜೆಪಿಯನ್ನು ಸೇರಿದ್ದಾರೆ ಎಂಬುದು ಎಷ್ಟು ಸತ್ಯವೋ, ಬರಲಿರುವ ಬೆಂಗಳೂರು ನಗರ ಪಾಲಿಕೆಯಲ್ಲೂ ಕೋಮುವಾದಿ ಬಿಜೆಪಿಗಳನ್ನು ಸಾಧ್ಯವಾದಷ್ಟು ಸಂಖ್ಯೆಯಲ್ಲಿ ಗೆಲ್ಲಿಸುವ ಪ್ರಯತ್ನ ಮಾಡಲಿದ್ದಾರೆಂಬುದೂ ಅಷ್ಟೇ ಸತ್ಯ.

ಈ ಎಲ್ಲ ಕಾರಣಗಳಿಗಾಗಿಯೇ ಸೋಮಣ್ಣನವರಿಗೆ ನಮ್ಮ ಬೆಂಬಲ ಸಾಧ್ಯವಿಲ್ಲ... ●

ಇದು ಕಣ್ಣೊರೆಸುವ ತಂತ್ರವಲ್ಲವೆ?



...ಡೀ ಜಗತ್ತನ್ನೇ ತಲ್ಲಣಗೊಳಿಸಿದ ಭೂಪಾಲ್ ...ದುರಂತ ಸಂಭವಿಸಿ ಈಗ 25 ವರ್ಷ ಕಳೆದಿವೆ. ... ಡಿಸೆಂಬರ್ 3ರಂದು ಮಧ್ಯರಾತ್ರಿ ಭೂಪಾಲ್‌ನಲ್ಲಿ ...ಕ ಮೂಲದ ಕೆಮಿಕಲ್ ಕಂಪೆನಿಯಾದ ಯೂನಿ... ಕಾರ್ಬೈಡ್‌ನ ಪ್ಲಾಂಟ್‌ವೊಂದರಿಂದ ಸೋರಿದ ...್ ವಿಷಾನಿಲ ಕೇವಲ 72 ಗಂಟೆಗಳಲ್ಲಿ ಕನಿಷ್ಠ ...0 ಜನರನ್ನು ಬಲಿ ತೆಗೆದುಕೊಂಡಿತ್ತು, ಈ ...ದಲ್ಲಿ ಸುಮಾರು 50,000 ಜನ ಅದ್ಯೆಗೋ ...ಳಿದವಾದರೂ ತದನಂತರದ ದಿನಗಳಲ್ಲಿ ಈ ... ಹೊರಸೂಸಿದ ಕಾರಣದಿಂದಾಗಿ ಕ್ಯಾನ್ಸರ್‌ನಂಥ ... ರೋಗಗಳಿಗೆ ಬಲಿಯಾಗಿ ಸಾಯುತ್ತಲೇ ...ರು. ಇಲ್ಲಿಯವರೆಗೆ ಈ ದುರಂತಕ್ಕೆ ನಿಜವಾಗಿ ...ಜನ ಬಲಿಯಾಗಿದ್ದಾರೆ ಎಂಬುದು ನಿಖರವಾಗಿ ಯಾರಿಗೂ ಗೊತ್ತಿಲ್ಲ. ಲಾಭದಾಸೆಗಾಗಿ ಎಂಥ ಘೋರ ಅಪರಾಧಕ್ಕೂ ಸಿದ್ಧವಾಗಿರುವ ಈ ವಿದೇಶಿ ಕಂಪೆನಿ ಕನಿಷ್ಠ ಮುಂಜಾಗ್ರತೆ, ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೇ ಹೋಗಿದ್ದರಿಂದಲೇ ಈ ಭಯಾನಕ ದುರಂತವೊಂದು ಸಂಭವಿಸಿತ್ತು. ಈ ದೃಷ್ಟಿಯಲ್ಲಿ ನೋಡಿದರೆ ಭೂಪಾಲ್ ಅನಿಲ ದುರಂತ ಒಂದು ದುರಂತವಾಗಿರಲಿಲ್ಲ, ಬದಲಿಗೆ ಸಾಮೂಹಿಕ ಮಾರಣ ಹೋಮವಾಗಿತ್ತು.

ನಮ್ಮ ಸರ್ಕಾರಗಳಿಗೆ ತಮ್ಮ ಜನರ ಬಗ್ಗೆ ಕನಿಷ್ಠ ಕಾಳಜಿಯಿದ್ದಿದ್ದರೆ ಸಾಮಾನ್ಯ ಜನರ ಜೀವಗಳೊಂದಿಗೆ ಚೆಲ್ಲಾಟವಾಡಿದ ಯೂನಿಯನ್ ಕಾರ್ಬೈಡ್ ಕಂಪೆನಿಯ ಅಧಿಕಾರಿಗಳನ್ನು ಹಿಂದುಮುಂದು ನೋಡದೇ ಗಲ್ಲಿಗೇರಿಸುತ್ತಿದ್ದವು. ಅದರ ಆಸ್ತಿಪಾಸ್ತಿಗಳೆಲ್ಲವನ್ನೂ ಮುಟ್ಟುಗೋಲು ಹಾಕಿಕೊಂಡು ದುರಂತದಲ್ಲಿ ಬಲಿಪಶುಗಳಾದ ಜನರಿಗೆ ಪರಿಹಾರವಾಗಿ ಹಂಚುತ್ತಿದ್ದವು. ಆದರೆ ನಮ್ಮ ಸರ್ಕಾರಗಳು ಇಂಥ ದರೋಡೆಕೋರ ಕಂಪೆನಿಗಳ ಎಂಜಲು ತಿಂದೇ ಬದುಕುತ್ತಿವೆಯಲ್ಲವೆ? ಅವುಗಳಿಗೆ ತಮ್ಮ ಜನರಿಗಿಂತ ಈ ಕಂಪೆನಿಗಳ ಯೋಗಕ್ಷೇಮವೇ ಮುಖ್ಯವಲ್ಲವೆ? ಇಂಥ ಸರ್ಕಾರಗಳಿಂದ ಇಂಥ ನಿರ್ಧಾರಗಳನ್ನು ನಿರೀಕ್ಷಿಸುವುದಾದರೂ ಹೇಗೆ?

ಈ ಮಾರಣಹೋಮ ನಡೆದು 25 ವರ್ಷಗಳಾದರೂ ಅದಕ್ಕೆ ಕಾರಣವಾಗಿರುವ ಕೊಲೆಗಡುಕ ಯೂನಿಯನ್ ಕಾರ್ಬೈಡ್ ಕಂಪೆನಿಯ ವಿರುದ್ಧ ಸೂಕ್ತ ಕ್ರಮ ಜರುಗಿಸಲಿಲ್ಲ, ಬಲಿಪಶುಗಳಾದ ಜನರಿಗೆ ಸರಿಯಾದ ಪರಿಹಾರ ಕೊಡಲಿಲ್ಲ, ಬದಲಿಗೆ, ಕೊಲೆಗಡುಕ ವಿದೇಶಿ ಕಂಪೆನಿಯನ್ನು ರಕ್ಷಿಸುವುದಕ್ಕೆ ಏನೆಲ್ಲಾ ಮಾಡಬೇಕೋ ಅದನ್ನೆಲ್ಲಾ ಚಾಚೂ ತಪ್ಪದೆ ಮಾಡಿದವು. ಈ ದುರಂತದಲ್ಲಿ ಬದುಕುಳಿದ ಜನತೆ ಇಂದಿಗೂ ಹಲವಾರು ಮಾರಣಾಂತಿಕ ಕಾಯಿಲೆಗಳಿಗೆ ತುತ್ತಾಗಿ ಸೂಕ್ತ ಪರಿಹಾರಕ್ಕಾಗಿ ಹೋರಾಡುತ್ತಲೇ ಇದ್ದರಾದರೂ ಯಾವೊಬ್ಬ ಪ್ರಧಾನಿಯೂ ಅವರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಭೂಪಾಲ್ ಅನಿಲ ದುರಂತಕ್ಕಿಂತ ಭೀಕರವಾದ ದುರಂತ ಎಂದರೆ ಬಿಜೆಪಿಯ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಇದೇ ಕೊಲೆಗಡುಕ ಯೂನಿಯನ್ ಕಾರ್ಬೈಡ್ ಕಂಪೆನಿಗೆ ಸನ್ಮಾನ ಮಾಡಿದ್ದು!





ವಾರೆನ್ ಆಂಡೆರ್ಸನ್

ಈ ದುರಂತ ಸಂಭವಿಸಿದಾಗ ಯೂನಿಯನ್ ಕಾರ್ಬೈಡ್ ಕಂಪೆನಿಯ ಮುಖ್ಯಸ್ಥನಾಗಿದ್ದವನು ವಾರೆನ್ ಆಂಡರ್‌ಸನ್. ದುರಂತ ಸಂಭವಿಸಿದ ತಕ್ಷಣವೇ ಆತನನ್ನು ನಾಮಕಾವಸ್ತೆಗಾಗಿ ಬಂಧಿಸಲಾಗಿತ್ತು. ಆದರೆ ಕೂಡಲೇ ಅವನನ್ನು ಬಿಡುಗಡೆ ಮಾಡಿ ದೇಶಬಿಟ್ಟು ತಪ್ಪಿಸಿಕೊಂಡು ಹೋಗುವುದಕ್ಕೆ ನಮ್ಮ ಸರ್ಕಾರವೇ ಅವಕಾಶ ಮಾಡಿಕೊಟ್ಟಿತು. ಅಲ್ಲಿಂದ ಇಲ್ಲಿಯವರೆಗೆ ಆತ ಎಲ್ಲಿದ್ದಾನೆಂದು ತನಗೆ ಗೊತ್ತಿಲ್ಲ ಎಂದೇ ಭಾರತ ಸರ್ಕಾರ ವಾದಿಸುತ್ತಾ ಬಂದಿದೆ. ಆತ ಅಮೆರಿಕದ ನ್ಯೂಯಾರ್ಕ್ ನಗರದ ಹೊರವಲಯದಲ್ಲಿರುವ ಹ್ಯಾಂಪ್ಟನ್ ಎಂಬ ಐಶಾರಾಮಿ ಪ್ರದೇಶದಲ್ಲಿ ನಿರಾತಂಕವಾಗಿ ನೆಲೆಸಿದ್ದಾನೆಂದು ಇತ್ತೀಚೆಗೆ ಸಿಎನ್‌ಎನ್-ಐಬಿಎನ್ ಸುದ್ದಿ ವಾಹಿನಿಯು ವರದಿ ಮಾಡಿತ್ತು. ಈಗ ದುರಂತ ಸಂಭವಿಸಿ 25 ವರ್ಷಗಳಾದ ಮೇಲೆ ಬಲಿಪಶುಗಳ ನಿರಂತರ ಹೋರಾಟಕ್ಕೆ ಪುಟ್ಟ ಜಯವೊಂದು ಸಿಕ್ಕಿದೆ. ಸಾವಿರಾರು ಜನರ ಮಾರಣಹೋಮಕ್ಕೆ ನೇರವಾಗಿ ಕಾರಣಕರ್ತನಾದ ವಾರೆನ್ ಆಂಡರ್‌ಸನ್‌ನನ್ನು ಬಂಧಿಸುವಂತೆ ನವದೆಹಲಿಯ ನ್ಯಾಯಾಲಯವೊಂದು ವಾರೆಂಟ್ ಹೊರಡಿಸಿದೆ.

ಈ ತೀರ್ಪಿನಿಂದ ಹೇಳಿಕೊಳ್ಳುವಂಥ ಬದಲಾವಣೆಯೇನೂ ಆಗದು. ಬಲಿಪಶುಗಳಿಗೆ ನ್ಯಾಯವೂ ಸಿಗದು ಎಂಬುದು ಎಲ್ಲರಿಗೂ ಗೊತ್ತಿರುವ ಸತ್ಯ. ಆ ಹೊತ್ತು ದುರಂತ ಸಂಭವಿಸಿದ ತಕ್ಷಣವೇ ಆತನನ್ನು ಬಂಧಿಸುವ ಮೂಲಕ ಜನರ ಕಣ್ಣೊರೆಸುವ ತಂತ್ರವನ್ನು ಸರ್ಕಾರ ಮಾಡಿತ್ತು. ಈ ಹೊತ್ತು ಸೂಕ್ತ ನ್ಯಾಯಕ್ಕಾಗಿ ಹೋರಾಡುತ್ತಿರುವ ಬಲಿಪಶುಗಳನ್ನು ಸಮಾಧಾನ ಮಾಡುವುದಕ್ಕೆ ಈ ಬಂಧನದ ವಾರೆಂಟ್ ಇನ್ನೊಂದು ಕಣ್ಣೊರೆಸುವ ತಂತ್ರವಷ್ಟೆ ಆಗುತ್ತದೆ. ವಾಸ್ತವದಲ್ಲಿ ಇದು ನಮ್ಮ ಸರ್ಕಾರ ಮತ್ತು ನ್ಯಾಯ ವ್ಯವಸ್ಥೆಗಳ ಅಸಲಿಯತ್ತನ್ನು ಮತ್ತೊಮ್ಮೆ ನಮ್ಮ ಮುಂದೆ ಬಟ್ಟಬಯಲಾಗಿಸಿದೆ.

● ಕೆ.ಬಿ.





ಅಂಬಾನಿ ಜಗಳದಲ್ಲಿ ಸೂರೆಗೊಳ್ಳುತ್ತಿರುವ ಭರತಖಂಡ!


ವಾಸ್ತವದಲ್ಲಿ ವಿಚಾರ ಆಗಬೇಕಾಗಿದ್ದುದು ಮುಕೇಶ್ ಅಂಬಾನಿ, ಅನಿಲ್ ಅಂಬಾನಿಗೆ ಯಾವ ಬೆಲೆಯಲ್ಲಿ ನೈಸರ್ಗಿಕ ಅನಿಲ ಮಾರಬೇಕು ಎಂಬುದಲ್ಲ. ಬದಲಿಗೆ ಇಷ್ಟೊಂದು ಬೃಹತ್ ಪ್ರಮಾಣದ ಸಾರ್ವಜನಿಕ ಸಂಪತ್ತನ್ನು ಮುಕೇಶ್-ಅನಿಲ್ ಅಂಬಾನಿ ಸಹೋದರರು ಲೂಟಿ ಹೊಡೆಯುವುದಕ್ಕೆ ಕಿತ್ತಾಡಿಕೊಳ್ಳುತ್ತಿರುವಾಗ ಅದರಲ್ಲಿ ಆ ಸಂಪತ್ತಿನ ನಿಜವಾದ ವಾರಸುದಾರರಾಗಿರುವ ಈ ದೇಶದ ಜನತೆಯ (ಸರ್ಕಾರದ) ಪಾಲೆಷ್ಟು ಎಂಬುದರ ಬಗ್ಗೆ. ಆದರೆ ಆ ವಿಚಾರವನ್ನು ಪೆಟ್ರೋಲಿಯಂ ಸಚಿವ ಮುರಳಿ ದೇವ್ರಾರಾ ಅವರೂ ಎತ್ತುತ್ತಿಲ್ಲ. ಪ್ರಧಾನಿ ಮನಮೋಹನ್ ಸಿಂಗ್ ಕೂಡ ಎತ್ತುತ್ತಿಲ್ಲ. ಕನಿಷ್ಠ ಪ್ರಜಾತಂತ್ರದ ನಾಲ್ಕನೇ ಅಂಗವಾಗಿರುವ ಮಾಧ್ಯಮಗಳೂ ಎತ್ತುತ್ತಿಲ್ಲ.


ದೇಶದ ಅತ್ಯಂತ ದೊಡ್ಡ ಶ್ರೀಮಂತರ ಪಟ್ಟಿಯಲ್ಲಿ ಮೊದಲನೇ ಎರಡು ಸ್ಥಾನದಲ್ಲಿರುವ ಮುಕೇಶ್ ಅಂಬಾನಿ ಮತ್ತು ಅವನ ತಮ್ಮ ಅನಿಲ್ ಅಂಬಾನಿಗಳ ನಡುವಿನ ಗ್ಯಾಸ್ ಜಗಳವೀಗ ತಾರಕಕ್ಕೇರಿದೆ. ದುರಂತ ನೋಡಿ. ಈ ಜಗಳವನ್ನು ನಮ್ಮ ಮಾಧ್ಯಮಗಳು ಒಂದು 'ಕೌಟುಂಬಿಕ ಕಲಹ' 'ಅಣ್ಣತಮ್ಮಂದಿರ ಬಿಸಿನೆಸ್ ಜಗಳ' ಎಂಬಂತೆ ಮಾತ್ರವೇ ಚಿತ್ರಿಸುತ್ತಿವೆಯೇ ಹೊರತು ಅದರ ಹಿಂದಿನ ಅಸಲೀ ಕಾರಣಗಳನ್ನು, ಭಾರತದ ಜನಸಮುದಾಯದ ಮೇಲಿನ ಪರಿಣಾಮಗಳನ್ನು ಚರ್ಚಿಸುವ ಗೋಜಿಗೇ ಹೋಗಿಲ್ಲ. ಇದು ನಮ್ಮ ಮಾಧ್ಯಮಗಳ ಬೌದ್ಧಿಕ ದಿವಾಳಿಕೋರತನಕ್ಕೆ ಹಿಡಿದಿರುವ ಕನ್ನಡಿಯಲ್ಲದೇ ಮತ್ತೇನಲ್ಲ.

ನಿಮಗೆ ಸೇರಿದ ಆಸ್ತಿಯನ್ನು ನಿಮಗೆ ಯಾವ ರೀತಿಯಿಂದಲೂ ಸಂಬಂಧವಿರದ ಯಾವನೋ ಒಬ್ಬ ಬಂದು ಕಿತ್ತುಕೊಂಡು ಅದರಿಂದ ಬರುವ ಲಾಭದಲ್ಲಿ ನಿಮಗೆ ಬಿಡಿಗಾಸು ಕೊಟ್ಟು ಉಳಿದ ಸಿಂಹಪಾಲನ್ನು ತಾನೇ ನುಂಗಿಹಾಕಿದರೆ ನಿಮಗೆ ಏನನ್ನಿಸುತ್ತದೆ? ವಾಸ್ತವದಲ್ಲಿ ಈಗ ಅನಿಲ್-ಮುಕೇಶ್ ಅಂಬಾನಿಗಳ ನಡುವಿನ ಜಗಳವನ್ನು ಬಹಳ ಸರಳವಾಗಿ ಇದೇ ರೀತಿಯಲ್ಲಿ ಅರ್ಥ ಮಾಡಿಕೊಳ್ಳಬಹುದು. ಈ ಇಬ್ಬರೂ ಉದ್ಯಮಪತಿಗಳು ಈ ದೇಶದ ಜನರಿಗೆ ಸೇರಿರುವ ಪೆಟ್ರೋಲಿಯಂ, ಪ್ರಾಕೃತಿಕ ಅನಿಲಗಳಂಥ ನೈಸರ್ಗಿಕ ಸಂಪತ್ತನ್ನು ಕಿತ್ತುಕೊಂಡು ತನಗೆ ಜಾಸ್ತಿ ಬೇಕು, ತನಗೆ ಜಾಸ್ತಿಬೇಕು ಎಂದು ಕಿತ್ತಾಡಿಕೊಳ್ಳುತ್ತಿದ್ದರೆ ನಮ್ಮ ಮಾಧ್ಯಮಗಳು, ಕಾನೂನು ವಿಶ್ಲೇಷಕರು ಇವರಿಬ್ಬರಲ್ಲಿ ಯಾರಿಗೆ ಎಷ್ಟು ಪಾಲು ಸಲ್ಲಬೇಕೆಂದು ಚರ್ಚಿಸುತಿದ್ದಾರೆಯೇ ಹೊರತು ಈ ಸಂಪತ್ತಿನ ಅಸಲೀ ಮಾಲಿಕರಾಗಿರುವ ಈ ದೇಶದ ಜನತೆಗೆ, ಅರ್ಥಾತ್ ಜನತೆಯನ್ನು ಪ್ರತಿನಿಧಿಸುತ್ತಿರುವ ಸರ್ಕಾರಕ್ಕೆ ಎಷ್ಟು ಪಾಲು ಸೇರಬೇಕೆಂಬ ಬಗ್ಗೆ ಮಾತನಾಡುತ್ತಲೇ ಇಲ್ಲ. ಕೇಂದ್ರ ಸರ್ಕಾರ, ಅದರಲ್ಲೂ ವಿಶೇಷವಾಗಿ ಪೆಟ್ರೋಲಿಯಂ ಸಚಿವಾಲಯವೂ ಕೂಡ ಈ ದೃಷ್ಟಿಕೋನದಲ್ಲಿ ವಿವಾದವನ್ನು ನೋಡುತ್ತಲೇ ಇಲ್ಲ. ವಾಸ್ತವದಲ್ಲಿ 1985ರಲ್ಲಿ ದೇಶದ ಅತಿ ದೊಡ್ಡ ಶ್ರೀಮಂತರ ಪಟ್ಟಿಯಲ್ಲಿ 60ನೇ ಸ್ಥಾನದಲ್ಲಿದ್ದ ಅಂಬಾನಿ ಈ ಹೊತ್ತು ಮೊದಲನೇ ಸ್ಥಾನಕ್ಕೇರಿದ್ದು ಹೀಗೆ ದೇಶದ ಪ್ರಾಕೃತಿಕ ಸಂಪತ್ತನ್ನು ಲೂಟಿ ಹೊಡೆದಿದ್ದರಿಂದಲೇ. ಅದಕ್ಕೆ ನಮ್ಮ ಸರ್ಕಾರಗಳು ಅವರಿಗೆ ಅವಕಾಶ ಮಾಡಿಕೊಟ್ಟದ್ದರಿಂದಲೇ.

ಈಗ ಪ್ರಸ್ತುತವಾಗಿ ಎದ್ದಿರುವ ಅಂಬಾನಿ ಸಹೋದರರ ಜಗಳ ನೈಸರ್ಗಿಕ ಅನಿಲವನ್ನು ಮುಕೇಶ್ ಅಂಬಾನಿಯು ಅನಿಲ್ ಅಂಬಾನಿಗೆ ಯಾವ ರೇಟಿನಲ್ಲಿ ಮಾರಾಟ ಮಾಡಬೇಕು ಎಂಬುದರ ಬಗ್ಗೆ. ಈ ವಿವಾದವನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ಅದರ ಹಿಂದಿನ ಚರಿತ್ರೆಯನ್ನು ಸ್ಥೂಲವಾಗಿ ನೋಡುವುದು ಉತ್ತಮ. ಮುಕೇಶ್ ಮತ್ತು ಅನಿಲ್ ಅಂಬಾನಿಗಳ ತಂದೆ ಧೀರೂಭಾಯಿ ಅಂಬಾನಿ ನೇತೃತ್ವದ ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಭಾರತ ಸರ್ಕಾರಗಳ ನಡುವೆ 2000ದಲ್ಲಿ ನೈಸರ್ಗಿಕ ಅನಿಲ ಉತ್ಪಾದನೆಗೆ ಸಂಬಂಧಿಸಿದಂತೆ ಉತ್ಪಾದನಾ ಪಾಲುದಾರಿಕಾ ಒಪ್ಪಂದವೊಂದಕ್ಕೆ ಸಹಿ ಹಾಕಲಾಗಿತ್ತು. ಇದರ ಪ್ರಕಾರ ಆಂಧ್ರಪ್ರದೇಶದ ಕೃಷ್ಣಾ-ಗೋದಾವರಿ ನದಿಗಳ ಜಲಾನಯನ ಪ್ರದೇಶದಲ್ಲಿ ಸುಮಾರು 40 ಟ್ರಿಲಿಯನ್ ಕ್ಯೂಬಿಕ್ ಅಡಿಗಳಷ್ಟು ಅಗಾಧ ಪ್ರಮಾಣದಲ್ಲಿರುವ ನೈಸರ್ಗಿಕ ಅನಿಲ ನಿಕ್ಷೇಪವನ್ನು ಪತ್ತೆ ಹಚ್ಚುವ ಹಾಗೂ ನೈಸರ್ಗಿಕ ಅನಿಲವನ್ನು ಹೊರತೆಗೆಯುವ ಗುತ್ತಿಗೆಯನ್ನು ರಿಲಯನ್ಸ್ ಕಂಪೆನಿಗೆ ನೀಡಲಾಯಿತು. ಆಗಿನ್ನೂ ಮುಕೇಶ್ ಮತ್ತು ಅನಿಲ್ ತಂದೆ ಧೀರೂಭಾಯಿ ಅಂಬಾನಿ ಬದುಕಿದ್ದರು. ಅಂಬಾನಿ ಸಾಮ್ರಾಜ್ಯವಿನ್ನೂ ಇಬ್ಭಾಗವಾಗಿರಲಿಲ್ಲ. 2002ರಲ್ಲಿ ಧೀರೂಭಾಯಿ ಅಂಬಾನಿ ಸತ್ತ ಮೇಲೆ ಮಕ್ಕಳಾದ ಮುಕೇಶ್ ಮತ್ತು ಅನಿಲ್ ನಡುವೆ ಕಂಪೆನಿಯ ಮಾಲಿಕತ್ವದ ವಿಚಾರದಲ್ಲಿ ವೈಷಮ್ಯವೇರ್ಪಟ್ಟು 2005ರಲ್ಲಿ ಧೀರೂಭಾಯಿ ಅಂಬಾನಿಯ ರಿಲಯನ್ಸ್ ಸಾಮ್ರಾಜ್ಯ ಇಬ್ಭಾಗವಾಯಿತು. ಇಬ್ಬರೂ ಸಹೋದರರು ತಾಯಿ ಕೋಕಿಲಾಬೆನ್ ಮಧ್ಯಸ್ಥಿಕೆಯಲ್ಲೇ ಧೀರೂಭಾಯಿ ಸಾಮ್ರಾಜ್ಯವನ್ನು ಹಂಚಿಕೊಂಡರು. ಆಂಧ್ರಪ್ರದೇಶದ ಕೃಷ್ಣಾ-ಗೋದಾವರಿ ಜಲಾನಯನ ಪ್ರದೇಶದಲ್ಲಿ ನೈಸರ್ಗಿಕ ಅನಿಲ ಉತ್ಪಾದಿಸುತ್ತಿದ್ದ ರಿಲಯನ್ಸ್ ಇಂಡಸ್ಟ್ರೀಸ್ ಕಂಪೆನಿ ಮುಕೇಶ್ ಪಾಲಾಗಿತ್ತು. ಮುಕೇಶ್ ಅಂಬಾನಿಯು ಅನಿಲ್ ಅಂಬಾನಿ ಹೊಸದಾಗಿ ಸ್ಥಾಪಿಸಿಕೊಳ್ಳುವ Reliance Natural Resources Limited (RNRL) ಕಂಪೆನಿಗೆ ಪ್ರತಿದಿನ 28 ಮಿಲಿಯನ್ ಕ್ಯೂಬಿಕ್ ಮೀಟರ್ ಅನಿಲವನ್ನು ಪ್ರತೀ ಒಂದು ಮಿಲಿಯನ್ ಬ್ರಿಟಿಷ್ ಥರ್ಮಲ್ ಯೂನಿಟ್ ಒಂದಕ್ಕೆ 2.34 ಡಾಲರ್ ಬೆಲೆಯಲ್ಲಿ ಮುಂದಿನ 17 ವರ್ಷಗಳ ತನಕ ಸರಬರಾಜು ಮಾಡಬೇಕು ಎಂಬುದು ಆ ಸಂದರ್ಭದಲ್ಲಿ ತಾಯಿ ಕೋಕಿಲಾಬೆನ್ ಮಧ್ಯಸ್ಥಿಕೆಯಲ್ಲಿ ಮಾಡಿಕೊಂಡ ಕೌಟುಂಬಿಕ ಒಪ್ಪಂದದಲ್ಲೇ ಸ್ಪಷ್ಟವಾಗಿ ನಮೂದಿಸಲಾಗಿತ್ತು. ಆದರೆ, ತದನಂತರದ ದಿನಗಳಲ್ಲಿ ಅನಿಲ್ ಅಂಬಾನಿಗೆ ಮಾರುವ ಈ ಅನಿಲ ಬೆಲೆಯನ್ನು ಮುಕೇಶ್ ಅಂಬಾನಿ ಹೆಚ್ಚು ಮಾಡುವುದರೊಂದಿಗೆ ವಿವಾದವೊಂದು ಸೃಷ್ಟಿಯಾಯಿತು. ಈಗದು ಬಾಂಬೆ ಹೈಕೋರ್ಟ್ ದಾಟಿ ಸುಪ್ರೀಂಕೋರ್ಟಿನ ಮೆಟ್ಟಿಲೇರಿದೆ.

2006ರಿಂದಾಚೆಗೆ ಕೇಂದ್ರ ಪೆಟ್ರೋಲಿಯಂ ಸಚಿವಾಲಯ ಈ ವಿವಾದದಲ್ಲಿ ಮುಕೇಶ್ ಅಂಬಾನಿಯ ಪರವಾಗಿ





ನಿಂತಿದೆ ಎಂಬುದು ಅನಿಲ್ ಅಂಬಾನಿಯ ಆರೋಪ. ಆತ ಯಾವೊಬ್ಬ ವ್ಯಕ್ತಿಯನ್ನೂ ಹೆಸರಿಸಿಲ್ಲವಾದರೂ 2006ರಲ್ಲಿ ಪೆಟ್ರೋಲಿಯಂ ಸಚಿವಾಲಯ ಮಣಿಶಂಕರ್ ಅಯ್ಯರ್ ಕೈಯಿಂದ ಮುಂಬೈ ಮೂಲದ ಮುರಳಿ ದೇವ್ರಾರಾ ಕೈಗೆ ಬಂದಿದ್ದರಿಂದ ಪೆಟ್ರೋಲಿಯಂ ಸಚಿವ ಮುರಳಿ ದೇವ್ರಾರಾ ಅವರು ಮುಕೇಶ್ ಪರ ಲಾಬಿ ಮಾಡುತ್ತಿದ್ದಾರೆಂಬುದೇ ಅದರ ಸಾರಾಂಶವಾಗಿತ್ತು. ವಾಸ್ತವದಲ್ಲಿ ಇದು ಸಂಪೂರ್ಣ ಸುಳ್ಳಲ್ಲ. ಭಾರತದ ಅತ್ಯಮೂಲ್ಯ ಪ್ರಕೃತಿ ಸಂಪನ್ಮೂಲಗಳಲ್ಲೊಂದಾದ ಪೆಟ್ರೋಲಿಯಂ ಸಂಪತ್ತಿನ ನಿರ್ವಹಣೆ ವಹಿಸಿಕೊಂಡಿರುವ ದೇವ್ರಾರಾ ಈ ವಿವಾದದಲ್ಲಿ ದೇಶದ ಜನತೆಯ ಪರವಾಗಿ ನಿಲ್ಲುವುದನ್ನು ಬಿಟ್ಟು ಉದ್ಯಮಿಯೊಬ್ಬನ ಪರವಾಗಿ ನಿಂತಿದ್ದು ಮಾತ್ರ ದುರಂತ. ಮೊನ್ನೆ ಪಾರ್ಲಿಮೆಂಟಿನಲ್ಲಿ ಈ ಕುರಿತು ಭಾರಿ ಚರ್ಚೆ ನಡೆದಾಗ 'ಅಣ್ಣ ತಮ್ಮಂದಿರ ಜಗಳದಲ್ಲಿ ಸರ್ಕಾರದ ಪಾತ್ರವೇನಿಲ್ಲ' ಎಂಬ ಬೇಜವಾಬ್ದಾರಿಯ ಮಾತುಗಳನ್ನು ಇದೇ ಮುರಳಿ ದೇವ್ರಾರಾ ಆಡಿದ್ದರು.



ವಾಸ್ತವದಲ್ಲಿ ವಿಚಾರ ಆಗಬೇಕಾಗಿದ್ದುದು ಮುಕೇಶ್ ಅಂಬಾನಿ ಅನಿಲ್ ಅಂಬಾನಿಗೆ ಯಾವ ಬೆಲೆಯಲ್ಲಿ ನೈಸರ್ಗಿಕ ಅನಿಲ ಮಾರಬೇಕು ಎಂಬುದಲ್ಲ, ಬದಲಿಗೆ ಇಷ್ಟೊಂದು ಬೃಹತ್ ಪ್ರಮಾಣದ ಸಾರ್ವಜನಿಕ ಸಂಪತ್ತನ್ನು ಮುಕೇಶ್-ಅನಿಲ್ ಅಂಬಾನಿ ಸಹೋದರರು ಲೂಟಿ ಹೊಡೆಯುವುದಕ್ಕೆ ಕಿತ್ತಾಡಿಕೊಳ್ಳುತ್ತಿರುವಾಗ ಅದರಲ್ಲಿ ಆ ಸಂಪತ್ತಿನ ನಿಜವಾದ ವಾರಸುದಾರರಾಗಿರುವ ಈ ದೇಶದ ಜನತೆಯ (ಸರ್ಕಾರದ) ಪಾಲೆಷ್ಟು ಎಂಬುದರ ಬಗ್ಗೆ. ಆದರೆ ಆ ವಿಚಾರವನ್ನು ಪೆಟ್ರೋಲಿಯಂ ಸಚಿವ ಮುರಳಿ ದಿವ್ರೋರಾ ಅವರೂ ಎತ್ತುತ್ತಿಲ್ಲ. ಪ್ರಧಾನಿ ಮನಮೋಹನ್ ಸಿಂಗ್ ಕೂಡ ಎತ್ತುತ್ತಿಲ್ಲ. ಕನಿಷ್ಠ ಪ್ರಜಾತಂತ್ರದ ನಾಲ್ಕನೇ ಅಂಗವಾಗಿರುವ ಮಾಧ್ಯಮಗಳೂ ಎತ್ತುತ್ತಿಲ್ಲ.

ವಾಸ್ತವದಲ್ಲಿ ಈ ರೀತಿ ನೈಸರ್ಗಿಕ ಸಂಪತ್ತನ್ನು ಪತ್ತೆ ಹಚ್ಚಿ ಉತ್ಪಾದನೆ ಮಾಡುವುದಕ್ಕಾಗಿ ಸರ್ಕಾರಗಳು ಖಾಸಗೀ ಕಂಪೆನಿಗಳಿಗೆ ಗುತ್ತಿಗೆ ಕೊಡುವುದು ಜಾಗತೀಕರಣದ ನಂತರದ ದಿನಗಳಲ್ಲಿ ಒಂದು ಪರಂಪರೆಯಾಗಿ ಮುಂದುವರೆದುಕೊಂಡು ಬರುತ್ತಿದೆ. ಈ ಕೆಲಸವನ್ನು ಸರ್ಕಾರವೇ ಮಾಡಿದ್ದರೆ ಪ್ರಕೃತಿ ಸಂಪತ್ತಿನ ಉತ್ಪಾದನೆಯಿಂದ ಬರುವ ಲಾಭವೆಲ್ಲವೂ ಸರ್ಕಾರದ ಪಾಲಾಗುತ್ತಿತ್ತು. ಆ ಲಾಭದಿಂದ ಅನೇಕ ಜನೋಪಯೋಗಿ ಕೆಲಸಗಳನ್ನು ಮಾಡಬಹುದಿತ್ತು. ಆದರೆ ನಗರದ ಬೀದಿ ಗುಡಿಸುವ ಕೆಲಸದಿಂದ ಹಿಡಿದು ಎಲ್ಲಾ ಕೆಲಸಗಳನ್ನೂ ಖಾಸಗೀಕರಣಗೊಳಿಸುತ್ತಿರುವ ಈ ದಿನಗಳಲ್ಲಿ ಇಂಥ ಅತ್ಯಮೂಲ್ಯ ವಿಚಾರದ ಖಾಸಗಿಯವರಿಗೆ ಒಪ್ಪಿಸಿದ್ದರಲ್ಲಿ ಆಶ್ಚರ್ಯವೂ ... ಹಾಗಿದ್ದಾಗ್ಯೂ ಸರ್ಕಾರಗಳಿಗೆ ಕನಿಷ್ಠ ಜವಾಬ್ದಾರಿಯಿಂದ ... ಇಂಥ ಪ್ರಾಕೃತಿಕ ಸಂಪತ್ತಿನ ಉತ್ಪಾದನೆಯಿಂದ ಬ... ಲಾಭದಲ್ಲಿ ಸರ್ಕಾರದ ಪಾಲೆಷ್ಟು ಎಂಬ ವಿಚಾರದಲ್ಲಾದ... ಒಂದಿಷ್ಟು ಬಿಗಿತನ ತೋರಬಹುದಿತ್ತು. ವಿಶ್ವದ ಅ... ರಾಷ್ಟ್ರಗಳ ಸರ್ಕಾರಗಳು ಪ್ರಾಕೃತಿಕ ಸಂಪತ್ತನ್ನು ಪತ್ತೆ ಮಾ... ಹಾಗೂ ಅದನ್ನು ಉತ್ಪಾದಿಸುವ ಕೆಲಸವ... Production Sharing Contract (PS... ಮೂಲಕ ಖಾಸಗಿಯವರಿಗೆ ಒಪ್ಪಿಸುತ್ತವೆ. ಆ ಸಂಪ... ಪತ್ತೆ ಮಾಡುವುದಕ್ಕಾಗಿ ನಿರ್ದಿಷ್ಟ ಖಾಸಗಿ ಕಂಪೆನಿಯೊ... ತೊಡಗಿಸಿದ ಬಂಡವಾಳ ಮರಳಿ ಬಂದ ಮೇಲೆ ಹಾ... ಆ ಕಂಪೆನಿಗೆ ಅಗಾಧವಾಗಿ ಲಾಭವೂ ಸಿಕ್ಕ ಮೇ... ಮುಂದಿನ ಲಾಭಾಂಶದಲ್ಲಿ ಸರ್ಕಾರದ ಪಾಲು ಹೆಚ್ಚಿರು... ನೋಡಿಕೊಳ್ಳಲಾಗುತ್ತದೆ. ಭಾರತದಲ್ಲಿ ಮಾತ್ರ ಅ... ನಿಯಮವನ್ನು ಅನುಸರಿಸುತ್ತಿಲ್ಲ. ಭೂಗರ್ಭವನ್ನು ಬಗೆ... ಅತ್ಯಮೂಲ್ಯ ಖನಿಜ ಸಂಪತ್ತನ್ನು ಲೂಟಿ ಹೊಡೆಯುವು... ಜಲಾನಯನ ಪ್ರದೇಶಗಳನ್ನು ಅಗೆದು ಅಮೂಲ್ಯ ... ಸಂಪತ್ತನ್ನು ಲೂಟಿ ಹೊಡೆಯುವುದಕ್ಕೆ ಒಮ್ಮೆ ಖಾ... ಕಂಪೆನಿಗಳಿಗೆ ವಹಿಸಿಕೊಟ್ಟ ಮೇಲೆ ಸರ್ಕಾರಗಳು ನಾಮ... ಮಾತ್ರ ತೆರಿಗೆಗಳನ್ನು ಸಂಗ್ರಹಿಸಿಕೊಂಡು ಸುಮ್ಮನಾಗಿಬಿಡು... ಪರಿಣಾಮವಾಗಿ ಈ ದೇಶದ ಜನತೆಗೆ ಸೇರಿದ ಅತ್ಯಮೂ... ಪ್ರಾಕೃತಿಕ ಸಂಪತ್ತಿನ ಉತ್ಪಾದನೆಯಿಂದ ಬರುವ ಲಾಭ... ಶೇ.90ರಷ್ಟು ಖಾಸಗಿ ಕಂಪೆನಿಗಳ ಪಾಲಾಗುತ್ತದೆ.

ಖಾಸಗೀ ಕಂಪೆನಿಗಳೊಂದಿಗೆ ಸರ್ಕಾರಗಳು, ಮಂತ್ರಿ... ಕುದುರಿಸಿಕೊಂಡಿರುವ ಒಪ್ಪಂದಗಳು ಸಾಮಾನ್ಯ ಜನ... ಗೊತ್ತಾಗದಂತೆ ತಡೆಯುವುದಕ್ಕಾಗಿ ಅದಕ್ಕೆ ಸಂಬಂಧ... ಮಾಹಿತಿಯನ್ನು ರಕ್ಷಣಾ ಮಾಹಿತಿಗಿಂತ ಗೌಪ್ಯವಾ... ಲಾಗುತ್ತದೆ. ಅದು ಈ ಅಂಬಾನಿಯೊಂದಿಗೆ ಕೇ... ಸರ್ಕಾರ ಮಾಡಿಕೊಂಡ ಒಪ್ಪಂದದಲ್ಲೂ ಕಾಣಿಸು... ಅದರ ಬಗೆಗಿನ ಮಾಹಿತಿಯು 'ಮಾಹಿತಿ ಹ... ಕಾಯಿದೆ'ಯನ್ವಯವೂ ಲಭ್ಯವಿಲ್ಲ ಎಂದರೆ ಎಂಥ ಘೋ... ಒಪ್ಪಂದವನ್ನು ಮಾಡಿಕೊಂಡಿರಬೇಡ? ಆದ್ದರಿ... ಒಟ್ಟಾರೆಯಾಗಿ ಕೃಷ್ಣಾ-ಗೋದಾವರಿಯ ವಿಸ್ತೃತ ಜಲಾನ... ಪ್ರದೇಶದಲ್ಲಿ ಮುಕೇಶ್ ಅಂಬಾನಿ ಹೊಡೆಯುತ್ತಿರು... ಅಗಾಧ ಪ್ರಮಾಣದ ಲೂಟಿಯಲ್ಲಿ ಸರ್ಕಾರಕ್ಕೆಷ್ಟು ಸಿಗು... ಎಂಬ ಮಾಹಿತಿಯೇ ಎಲ್ಲೂ ಲಭ್ಯವಿಲ್ಲ. ಮುಕೇ... ಮತ್ತು ಅನಿಲ್ ಅಂಬಾನಿಗಳ ನಡುವೆ ಉತ್ತಮ ಬಾಂಧ... ಮುಂದುವರೆದಿದ್ದರೆ ಎಷ್ಟೊಂದು ಪ್ರಕೃತಿ ಸಂಪ... ಅಂಬಾನಿಯ ಜೇಬು ಸೇರುತ್ತಿದೆ ಎಂಬುದರ ಬ... ಯಾರಿಗೂ ಗೊತ್ತೂ ಆಗುತ್ತಿರಲಿಲ್ಲ. ನಮ್ಮ ಕೋರ್ಟುಗ... ರಾಷ್ಟ್ರೀಯ ಹಿತಾಸಕ್ತಿಯನ್ನು ಎಷ್ಟರಮಟ್ಟಿಗೆ ಕಾಯು... ಎಂದರೆ ಅಂಬಾನಿಗಳ ಜಗಳ ಬಾಂಬೆ ಹೈಕೋರ್ಟ... ಮುಂದೆ ಬಂದಾಗ ರಾಷ್ಟ್ರೀಯ ಹಿತಾಸಕ್ತಿಯ... ಪರಿಗಣಿಸದೇ ಇದು ಕೇವಲ ಅನಿಲ್ ಮತ್ತು ಮುಕೇ... ಅಂಬಾನಿಗಳ ನಡುವಿನ ವ್ಯಾಜ್ಯವಷ್ಟೇ ಎಂದು ಪರಿಗ... ಅನಿಲ್ ಪರವಾಗಿ ತೀರ್ಪಿತ್ತಿತು. ಈಗ ಇದೇ ವಾ... ಸುಪ್ರೀಮ್‌ಕೋರ್ಟನ್ನೆ ಮೆಟ್ಟಿಲೇರಿದೆ. ಅಲ್ಲೂ ಕ... ಸರ್ಕಾರವನ್ನು ವ್ಯಾಜ್ಯದಲ್ಲಿ ಒಂದು ಪಕ್ಷವನ್ನಾಗಿ ಪರಿಗಣಿಸ... ಇದೇ ರೀತಿಯ ತೀರ್ಪು ಬಂದರೂ ಆಶ್ಚರ್ಯವಿಲ್ಲ.

ಭಾರತದ ಒಟ್ಟಾರೆ ಪೆಟ್ರೋಲಿಯಂ ಮತ್ತು ನೈಸರ್ಗಿ... ಅನಿಲ ಕ್ಷೇತ್ರದಲ್ಲಿ ಕೇವಲ ಮೂರು ಕಂಪೆನಿಗಳು ಏಕಸ್ವಾ... ಸಾಧಿಸಿವೆ. ಹೊಸ ಹೊಸ ನಿಕ್ಷೇಪಗಳ ಪತ್ತೆ ಮ... ಉತ್ಪಾದನೆಯಲ್ಲಿ ಸರ್ಕಾರಿ ಸ್ವಾಮ್ಯದ Oil and Natu... Gas Corporation (ONGC), Gas Author... of India Limited (GAIL) ಹಾಗೂ ಮುಕೇ... ಅಂಬಾನಿ ಒಡೆತನದ ಖಾಸಗೀ ಸ್ವಾಮ್ಯದ Relian... Industries Limited (RIL). ONGC ಕಂಪನಿ ... ಮತ್ತು ಅನಿಲ ನಿಕ್ಷೇಪಗಳ ಪತ್ತೆ ಮತ್ತು ಉತ್ಪಾದನೆ... ತೊಡಗಿದ್ದರೆ ಉಳಿದವು ವಿತರಣೆಯಲ್ಲಿ ನಿರತವಾಗಿದೆ. ... ಮುಕೇಶ್ ಅಂಬಾನಿಯ ರಿಲಯನ್ಸ್ ಎರಡೂ ಕ್ಷೇತ್ರ... ಅತ್ಯಂತ ವೇಗವಾಗಿ ಮುನ್ನುಗ್ಗುತ್ತಿದೆ. ವಾಸ್ತವದಲ್ಲಿ ಖಾ... ಕಂಪೆನಿಯೊಂದು ಇಂಥ ಮಹತ್ವಪೂರ್ಣ ನೈಸರ್ಗಿ... ಸಂಪತ್ತಿನ ಮೇಲೆ ಹಿಡಿತ ಸಾಧಿಸುತ್ತಿರುವುದು ದೇ... ಹಿತದೃಷ್ಟಿಯಿಂದ ಒಳ್ಳೆಯದಲ್ಲ. ನಾಳೆ ಇದೇ ತೈಲ ಮ... ಅನಿಲ ನಿಕ್ಷೇಪಗಳ ಉತ್ಪಾದನೆ ಮತ್ತು ವಿತರಣೆಯ ಕ್ಷೇತ್ರ... ಏಕಸ್ವಾಮ್ಯ ಸಾಧಿಸಿಬಿಟ್ಟರೆ ಇದೀ ದೇಶದ ಜನತೆ ... ವಿಧಿಸುವ ಬೆಲೆಯಲ್ಲಿ ಪೆಟ್ರೋಲ್, ಡೀಸೆಲ್, ಸೀಮೆ... ಎಲ್‌ಪಿಜಿ, ವಿದ್ಯುತ್ ಮುಂತಾದ ಅತ್ಯವಶ್ಯಕ ವಸ್ತುಗಳ... ಖರೀದಿಸಬೇಕಾಗುತ್ತದೆ.

ಈಗಾಗಲೇ ವಿವರಿಸಿದಂತೆ ಈ ರೀತಿ ಸಾರ್ವಜ... ಸಂಪತ್ತಿನ ಲೂಟಿ ಮಾಡಿಯೇ ಅಂಬಾನಿಗಳು ಈ ಹೊ... ದೇಶದ ಅತ್ಯಂತ ದೊಡ್ಡ ಶ್ರೀಮಂತರಾಗಿದ್ದಾರೆ. ಪರಿಸ್ಥಿತಿ ಹೀಗೇ ಮುಂದುವರೆದರೆ ನಾಳೆ ಇದೀ ದೇ... ಅವರೇ ಒಡೆಯರಾಗುತ್ತಾರೆ.

● ಕುಮಾರ್ ಬುರಡಿಕ...

ಮನಮೋಹನ್ ಕೊರಳಿಗೆ ಬಲೂಚಿ ಉರುಳು



ಮೊನ್ನೆ ಜುಲೈ ಮೂರನೇ ವಾರದಲ್ಲಿ ಪಾಕಿ... ಪ್ರಧಾನಿ ಸೈಯದ್ ಯೂಸೂಫ್ ರಾಜಾ ... ಭಾರತಕ್ಕೆ ಭೇಟಿ ನೀಡಿದ್ದರು. ಭಾರತದ ... ಮನಮೋಹನ್ ಸಿಂಗ್ ಅವರೊಂದಿಗೆ ... ದೇಶಗಳ ನಡುವಿನ ಸಂಬಂಧಗಳನ್ನು ಕುರಿತಂತೆ ...ವಾಗಿ ಚರ್ಚೆ ನಡೆಸಿ ಅದರ ವಿವರಗಳನ್ನೊಳಗೊಂಡ ... ಹೇಳಿಕೆಯೊಂದನ್ನು ಜುಲೈ 16ರಂದು ಬಿಡುಗಡೆ ...ದರು. ಇದರಲ್ಲಿ ಎರಡು ದೇಶಗಳಿಗೂ ಸಾಮಾನ್ಯ ...ಗಿರುವ ಭಯೋತ್ಪಾದನೆ ವಿರುದ್ಧ ಹೋರಾಡುವುದಕ್ಕೆ ... ಒತ್ತು ನೀಡಲಾಗಿತ್ತು. ಭಾರತದ ಪ್ರಧಾನಿ ಸಿಂಗ್ ... ಮುಂಬೈ ಭಯೋತ್ಪಾದಕ ದಾಳಿಯ ...ರಿಗಳನ್ನು ನ್ಯಾಯಾಲಯದ ಕಟಕಟೆಯಲ್ಲಿ ...ಬೇಕೆಂದು ಪಾಕಿಸ್ತಾನವನ್ನು ಮತ್ತೊಮ್ಮೆ ಒತ್ತಾಯಿಸಿದ ...ಪ್ರಸ್ತಾಪವಿತ್ತು. ಕೇವಲ ಭಯೋತ್ಪಾದನೆಯಲ್ಲದೇ ... ದೇಶಗಳ ಸರ್ವತೋಮುಖ ಅಭಿವೃದ್ಧಿಗೆ, ಬಡತನ ...ರ್ಮೂಲನೆಗೆ ಪರಸ್ಪರ ಸಹಕರಿಸುವುದಕ್ಕಾಗಿ ಇಬ್ಬರೂ ...ಕರು ಕಟಿಬದ್ಧವಾಗಿರುವುದರ ಬಗ್ಗೆಯೂ ಉಲ್ಲೇಖ ... ಈ ಯಾವ ವಿಚಾರದ ಬಗ್ಗೆಯೂ ಯಾರಿಗೂ ...ರಿರಲಿಲ್ಲ. ಆದರೆ ಇದೇ ಜಂಟಿ ಹೇಳಿಕೆಯಲ್ಲಿ ...ಗೋ ನುಸುಳಿಕೊಂಡು ಬಂದಿದ್ದ ಒಂದು ಸಾಲು ... ಈ ಹೊತ್ತು ರಾಷ್ಟ್ರ ಮಟ್ಟದಲ್ಲಿ ದೊಡ್ಡ ವಿವಾದವಾಗಿ ...ರ್ತನೆಗೊಂಡಿದೆ. ಅದೇಂದರೆ: "ಬಲೂಚಿಸ್ತಾನದಲ್ಲಿ ... ಇನ್ನಿತರ ಕೆಲವು ಪ್ರದೇಶಗಳಲ್ಲಿ ತನಗೆ ಬೆದರಿಕೆಯಿದೆ ... ಬಗ್ಗೆ ಪಾಕಿಸ್ತಾನದ ಹತ್ತಿರ ಮಾಹಿತಿಯಿದೆ ಎಂದು ... ಗಿಲಾನಿಯವರು ಪ್ರಸ್ತಾಪಿಸಿದರು" ಎಂಬ ವಾಕ್ಯ. ...ದು ಅನುಭವವಿಲ್ಲದಿದ್ದರೂ ಅತಿ ಪ್ರಮುಖ ...ಯಾಗಿರುವ ಕೇಂದ್ರ ವಿದೇಶಾಂಗ ವ್ಯವಹಾರಗಳ ... ಹುದ್ದೆಗೇರಿದ ಎಸ್.ಎಂ.ಕೃಷ್ಣ ಮಾಡಿದ ಅವ...ೋ ಅಥವಾ ನಿವೃತ್ತಿಯಾಗಿ ಮನೆ ಸೇರುವ ತರಾತುರಿ ... ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿ ...ಕರ್ ಮೆನನ್ ಮಾಡಿದ ಅಚಾತುರ್ಯವೋ ...ಲ್ಲ, ಅಂತೂ ಜಂಟಿ ಹೇಳಿಕೆಯಲ್ಲಿ ಬಲೂಚಿಸ್ತಾನದ ...ವಾಗಿರುವುದು, ಅದಕ್ಕೆ ಪ್ರಧಾನಿ ಮನಮೋಹನ್ ...ಹಾಕಿರುವುದು ಇಂದು ಮನಮೋಹನ್ ಸಿಂಗ್ ಕೊರಳಿಗೆ ಉರುಳಾಗಿ ಬಿಗಿಯತೊಡಗಿದೆ. ಇದು ಕಾಂಗ್ರೆಸ್ ನೇತೃತ್ವದ ಯುಪಿಎ ಪಕ್ಷದೆಡೆಗೆ ಬೆರಳು ಮಾಡಿ ತೋರಿಸುವುದಕ್ಕೆ ಏನೂ ಇಲ್ಲದೇ ನೊಣ ಹೊಡೆಯುತ್ತಿದ್ದ ಬಿಜೆಪಿಯ ಕೈಗೆ ಒಂದು ಅಸ್ತ್ರವಾಗಿ ಸಿಕ್ಕಂತಾಗಿದೆ. ಅದರಲ್ಲೂ ಹಿಂದೊಮ್ಮೆ ಎನ್‌ಡಿಎ ಅಧಿಕಾರದಲ್ಲಿದ್ದಾಗ ವಿದೇಶಾಂಗ ವ್ಯವಹಾರಗಳ ಸಚಿವರಾಗಿದ್ದ ಯಶವಂತ್ ಸಿನ್ಹ ಕಾಲದಲ್ಲಿ ಅಂತೂ ಭಾರೀ ಪ್ರಮಾದವೊಂದು ಜರುಗಿಬಿಟ್ಟಿದೆ, ಇಡೀ ವಿಶ್ವದೆದುರು ಭಾರತ ತಲೆತಗ್ಗಿಸುವಂತೆ ಆಗಿದೆ, ಪಾಕಿಸ್ತಾನದ ಪಾದದಡಿಯಲ್ಲಿ ಭಾರತವನ್ನು ಇಡಲಾಗಿದೆ ಎಂದೆಲ್ಲಾ ಬೊಬ್ಬೆಯಿಡುತ್ತಿದ್ದಾರೆ. ಈ ದೇಶದ ಒಬ್ಬ ಸಾಮಾನ್ಯ ಪ್ರಜೆಯಾಗಿ ಇಡೀ ಜಂಟಿ ಹೇಳಿಕೆಯನ್ನು ಓದಿದವರಿಗೆ ಅಂಥಾ ಅಪಾಯಕಾರಿ ಪ್ರಮಾದವೇನಾಗಿದೆ ಎಂದು ಅರ್ಥವೇ ಆಗುವುದಿಲ್ಲ, ಆದರೆ ಬಿಜೆಪಿಗಳಿಗೆ ಮಾತ್ರ ಅದು ಹಾಗೆ ಕಂಡಿದ್ದಕ್ಕೆ ಕಾರಣವೂ ಇದೆ.

ಬಲೂಚಿಸ್ತಾನದಿಂದ ಪಾಕಿಸ್ತಾನಕ್ಕೆ ಏನೋ ಅಪಾಯ ಇದೆ ಹಾಗೂ ಅದನ್ನು ಭಾರತ-ಪಾಕಿಸ್ತಾನ ಜಂಟಿ ಹೇಳಿಕೆಯಲ್ಲಿ ಯಾಕೆ ತರಲಾಗಿದೆ ಎಂಬ ವಿಚಾರವನ್ನು ಗಮನಿಸಬೇಕು. ಬಲೂಚಿಸ್ತಾನ ಎಂಬುದು ಒಂದು ಸ್ವತಂತ್ರ ದೇಶವಲ್ಲ, ಅಫಘಾನಿಸ್ತಾನದ ದಕ್ಷಿಣ ಭಾಗ, ಇರಾನ್‌ನ ಪೂರ್ವಭಾಗ ಹಾಗೂ ಪಾಕಿಸ್ತಾನದ ಪಶ್ಚಿಮ ಭಾಗಗಳನ್ನು ಒಳಗೊಂಡ ವಿಶಾಲ ಪ್ರದೇಶವನ್ನು ಬಲೂಚಿಸ್ತಾನ ಎಂದು ಕರೆಯುತ್ತಾರೆ. ಬಲೂಚ್ ಎಂಬ ಹೆಸರಿನ ಬುಡಕಟ್ಟು ಜನಾಂಗವೇ ಈ ಪ್ರದೇಶದ ಗುಡ್ಡಗಾಡುಗಳಲ್ಲಿ ವಾಸಿಸುತ್ತಿರುವುದರಿಂದಲೇ ಅದಕ್ಕೆ ಈ ಹೆಸರು ಬಂದಿದೆ. ಮೂರು ದೇಶಗಳ ನಡುವೆ ಹಂಚಿಹೋಗಿರುವ ಈ ಪ್ರದೇಶವನ್ನು ಅವುಗಳಿಂದ ವಿಮುಕ್ತಿಗೊಳಿಸಿ ಸ್ವತಂತ್ರ ಬಲೂಚಿಸ್ತಾನ ದೇಶವನ್ನು ಕಟ್ಟಿಕೊಳ್ಳಬೇಕೆಂಬುದು ಈ ಬುಡಕಟ್ಟು ಜನರ ಬಹುದಿನದ ಬೇಡಿಕೆ.

1947ರಲ್ಲಿ ಭಾರತ ಉಪಖಂಡವನ್ನು ಬ್ರಿಟಿಷರು ತೊರೆದ ತಕ್ಷಣವೇ, ಭಾರತ-ಪಾಕಿಸ್ತಾನ ದೇಶಗಳು ಸೃಷ್ಟಿಯಾದ ಮರುವರ್ಷವೇ 1948ರಲ್ಲಿ ಪಾಕಿಸ್ತಾನ ಸೇನೆ ಬಲೂಚಿಸ್ತಾನದ ಮೇಲೆ ಆಕ್ರಮಣ ಮಾಡಿ ಅದನ್ನು ವಶಪಡಿಸಿಕೊಂಡಿತು. ಸ್ವತಂತ್ರ ಬಲೂಚಿಸ್ತಾನ ನಿರ್ಮಾಣಕ್ಕಾಗಿ ಹೋರಾಡುತ್ತಿದ್ದ ಮಿರ್ ಅಹ್ಮದ್ ಯಾರ್ ಖಾನ್ ಅವರು ಪಾಕ್ ಸೇನೆಯಿಂದ ಬಂಧನಕ್ಕೊಳಗಾದರು. ನಂತರ ಅವರ ತಮ್ಮ ಅಬ್ದುಲ್ ಕರೀಮ್ ಖಾನ್ ಪಾಕ್ ಸೇನೆಯ ವಿರುದ್ಧ ಗೆರಿಲ್ಲಾ ಮಾದರಿಯ ಹೋರಾಟ ಪ್ರಾರಂಭಿಸಿದರು. ಹೀಗೆ ತಮ್ಮ ತಾಯ್ನೆಲವನ್ನು ಬಲವಂತವಾಗಿ ತನ್ನೊಳಗೆ ಸೇರಿಸಿಕೊಂಡಿರುವ ಪಾಕಿಸ್ತಾನದ ವಿರುದ್ಧ ಅಂದು ಪ್ರಾರಂಭವಾದ ಸಶಸ್ತ್ರ ಹೋರಾಟ ಇಂದಿಗೂ ನಿಂತಿಲ್ಲ, ಈ ನಡುವೆ 1958-59ರ ನಡುವೆ ನವಾಬ್ ನವ್ರೋಜ್ ಖಾನ್ ನೇತೃತ್ವದಲ್ಲಿ, 1963-69ರ ನಡುವೆ ಮೊಹ್ಮದ್ ಬಜರಾನಿ ಮಾರ್ರಿ ನೇತೃತ್ವದಲ್ಲಿ, 1973-77ರ ನಡುವೆ ನವಾಬ್ ಖೈರಿ ಭಕ್ಷ್ ಮಾರ್ರಿ ನೇತೃತ್ವದಲ್ಲಿ ಹಾಗೂ 2004ರ ನಂತರದಲ್ಲಿ ನವಾಬ್ ಅಕ್ಬರ್ ಬಕ್ತಿ ಮತ್ತು ಮಿರ್ ಬಲಾಚ್ ಮಾರ್ರಿ ನೇತೃತ್ವದಲ್ಲಿ ಬಲೂಚ್ ಜನತೆ ಪಾಕಿಸ್ತಾನದ ವಿರುದ್ಧ ಭೀಕರವಾಗಿ ಕಾದಾಡಿದ್ದಾರೆ.

ಇದು ಪಾಕಿಸ್ತಾನ ಸರ್ಕಾರ ಹಾಗೂ ಬಲೂಚಿಸ್ತಾನಿ




ಹೋರಾಟಗಾರರಿಗೆ ಸಂಬಂಧಪಟ್ಟ ವಿಚಾರ, ಅದರಲ್ಲಿ ಭಾರತದ ಪಾತ್ರ ಏನು ಎಂಬುದು ಯಾರಿಗಾದರೂ ಏಳುವ ಪ್ರಶ್ನೆ. ಸ್ವಾರಸ್ಯ ಇರೋದೆ ಅಲ್ಲಿ. ವಿಶ್ವದ ಎಲ್ಲಾ ಪ್ರಮುಖ ದೇಶಗಳೂ ತಮ್ಮ ತಮ್ಮ ಅಕ್ಕಪಕ್ಕದ ದೇಶಗಳಲ್ಲಿ, ತಮ್ಮ ಶತ್ರುಗಳೆಂದು ಪರಿಭಾವಿಸಿರುವ ದೇಶಗಳಲ್ಲಿ ವಿಸ್ತೃತವಾದ ಬೇಹುಗಾರಿಕಾ ಜಾಲವನ್ನು ಬೆಳೆಸಿಕೊಂಡಿರುತ್ತವೆ. ಆಯಾ ದೇಶಗಳಲ್ಲಿ ಸರ್ಕಾರಗಳ ವಿರುದ್ಧ ನಡೆಯುವ ಚಿಕ್ಕಪುಟ್ಟ ಆಂತರಿಕ ಹೋರಾಟಗಳಿಗೂ, ಬೃಹತ್ ಪ್ರಮಾಣದ ಸಶಸ್ತ್ರ ಹೋರಾಟಗಳಿಗೂ ಬೆಂಬಲ ಕೊಡುತ್ತವೆ. ಅವುಗಳಿಗೆ ದುಡ್ಡು, ಶಸ್ತ್ರಾಸ್ತ್ರ ಒದಗಿಸಿ ತಮ್ಮ ಶತ್ರು ದೇಶಗಳನ್ನು ಒಳಗಿನಿಂದಲೇ ದುರ್ಬಲಗೊಳಿಸುವುದಕ್ಕೆ ಪ್ರಯತ್ನಿಸುತ್ತವೆ. ಈ ಕೆಲಸಕ್ಕಾಗಿಯೇ ವಿಶೇಷ ಬೇಹುಗಾರಿಕಾ ಏಜೆನ್ಸಿಗಳನ್ನು ರೂಪಿಸಿವೆ. ಉದಾಹರಣೆಗೆ ಹೇಳುವುದಾದರೆ ಅಮೆರಿಕದ ಸಿಐಎ, ಪಾಕಿಸ್ತಾನದ ಐಎಸ್‌ಐ, ಇಸ್ರೇಲ್‌ನ ಮೊಸಾದ್, ರಶಿಯಾದ ಕೆಜಿಬಿ ಮುಂತಾದವುಗಳು. ಈ ಪರಂಪರೆಗೆ ಭಾರತ ಕೂಡ ಹೊರತಲ್ಲ.

ಅದು **Research and Analysis Wing (RAW)** ಎಂಬ ತನ್ನ ಗೂಢಚರ್ಯೆ ಸಂಸ್ಥೆಯ ಮೂಲಕ ಇನ್ನಿತರ ದೇಶಗಳಲ್ಲಿ ವಿಸ್ತೃತ ಬೇಹುಗಾರಿಕಾ ಜಾಲವನ್ನು ನಿರ್ಮಿಸಿಕೊಂಡಿದೆ. ಈ ಹಿಂದೆ ಶ್ರೀಲಂಕಾ ಸರ್ಕಾರಕ್ಕೆ ಮೂಗುದಾರ ಹಾಕುವುದಕ್ಕಾಗಿ ಎಲ್‌ಟಿಟಿಈಗೆ ಹಣ, ಶಸ್ತ್ರಾಸ್ತ್ರ ಮತ್ತು ಶಸ್ತ್ರಾಸ್ತ್ರ ತರಬೇತಿ ಕೊಟ್ಟಿದ್ದು ಇದೇ **RAW**. ಇತ್ತ ಪಾಕಿಸ್ತಾನವನ್ನು ಹದ್ದುಬಸ್ತಿನಲ್ಲಿಡುವುದಕ್ಕೆ ಕಳೆದ ಐದಾರು ವರ್ಷಗಳಿಂದ ಬಲೂಚ್‌ಗಳ ಬೆಂಬಲಕ್ಕೆ ನಿಂತಿದೆ. ಬಲೂಚಿಸ್ತಾನದಲ್ಲೇ ಅನೇಕ ಶಸ್ತ್ರಾಸ್ತ್ರ ತರಬೇತಿ ಶಿಬಿರಗಳನ್ನು ಸ್ಥಾಪಿಸಿ, ಅದರಲ್ಲಿ ಬಲೂಚಿ ಮಿಲಿಟೆಂಟ್ ಹೋರಾಟ ಗಾರರಿಗೆ ತರಬೇತಿ ಕೊಟ್ಟು ಪಾಕ್ ಸೇನೆಯ ವಿರುದ್ಧ ಕಾದಾಡುವುದಕ್ಕೆ ಕಳಿಸಲಾಗುತ್ತಿದೆ. ಒಂದೊಂದು ಕಾಂಪ್ ನಡೆಸುವುದಕ್ಕೆ ಪ್ರತಿ ತಿಂಗಳಿಗೆ ಕನಿಷ್ಠ ಐದು ಲಕ್ಷ ರೂಪಾಯಿ ಗಳನ್ನು ಖರ್ಚು ಮಾಡುತ್ತಿದೆ. ಒಬ್ಬೊಬ್ಬ ಬಲೂಚಿ ಹೋರಾಟಗಾರನಿಗೆ ಪ್ರತಿ ತಿಂಗಳು 10,000 ರೂ.ಗಳಷ್ಟು ದುಡ್ಡು ಕೊಡುತ್ತಿದೆ.

ಇದು ಪಾಕಿಸ್ತಾನಕ್ಕೆ ಗೊತ್ತಿಲ್ಲವೆಂದೇನಲ್ಲ, ಆದ್ದರಿಂದಲೇ ಈ ಬಾರಿ ಗಿಲಾನಿ ಮತ್ತು ಮನಮೋಹನ್ ಸಿಂಗ್ ಮಾತುಕತೆಗಳಾದ ನಂತರ ಬಿಡುಗಡೆ ಮಾಡಬೇಕಿದ್ದ ಜಂಟಿ ಹೇಳಿಕೆಯಲ್ಲಿ ಪಾಕ್ ಅಧಿಕಾರಿಗಳು "ಬಲೂಚಿಸ್ತಾನದಲ್ಲಿ ಮತ್ತು ಇನ್ನಿತರ ಕೆಲವು ಪ್ರದೇಶಗಳಲ್ಲಿ ತನಗೆ ಬೆದರಿಕೆಯಿದೆ ಎಂಬ ಬಗ್ಗೆ ಪಾಕಿಸ್ತಾನದ ಹತ್ತಿರ ಮಾಹಿತಿಯಿದೆ ಎಂದು ಪ್ರಧಾನಿ ಗಿಲಾನಿಯವರು ಪ್ರಸ್ತಾಪಿಸಿದರು" ಎಂಬ ವಾಕ್ಯವನ್ನು ಸೇರಿಸಿದ್ದರು. ಅಂದರೆ, ಆ ಬೆದರಿಕೆ ಭಾರತದಿಂದ ಇದೆ ಎಂಬುದು ಅದರ ಸಾರಾಂಶವಾಗಿತ್ತು, ಇದಕ್ಕೆ ಮನಮೋಹನ್ ಸಿಂಗ್ ಸಹಿ ಹಾಕಿದರೆ ಪಾಕಿಸ್ತಾನದ ಆರೋಪವನ್ನು ಭಾರತ ಒಪ್ಪಿಕೊಂಡಂತಾಗುತ್ತದೆ ಎಂಬ ಅರಿವು ಇಲ್ಲದೇ ಭಾರತದ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ ಮತ್ತು ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿ ಶಿವಶಂಕರ್ ಮೆನನ್ ಹೇಳಿಕೆಯನ್ನು ಅಂತಿಮಗೊಳಿಸಿದ್ದರು. ಮನಮೋಹನ್ ಸಿಂಗ್ ಕಣ್ಣುಮುಚ್ಚಿಕೊಂಡು ಅದಕ್ಕೆ ಸಹಿ ಹಾಕಿದರು. ಆ ಮೂಲಕ ತಮ್ಮ ಕೈ ಕಟ್ಟಿ ಹಾಕುವುದಕ್ಕೆ ಯಶವಂತ್ ಸಿನ್ಹಾಗೆ ತಾವೇ ಹಗ್ಗ ಕೊಟ್ಟರು.

ಇದಿಷ್ಟು ವಿವಾದ. ಬಿಜೆಪಿಯ ರಾಷ್ಟ್ರೀಯ ನಾಯಕರಿಗೆ ಮಾಡೋದಕ್ಕೆ ಬೇರೆ ಕೆಲಸ ಇಲ್ಲ, ಎಲ್ಲಾ ರಾಜ್ಯಗಳ ಬಿಜೆಪಿ ಘಟಕದೊಳಗೆ ಭುಗಿಲೆದ್ದಿರುವ ಕಚ್ಚಾಟವನ್ನು ನಿಯಂತ್ರಿಸೋದು ಹಾಗೂ ಯುಪಿಎ ಸರ್ಕಾರದೊಂದಿಗೆ ಕಿತ್ತಾಡುವುದುನ್ನು ಬಿಟ್ಟು. ಈ ಹಿನ್ನಲೆಯಲ್ಲೇ ಈ ಜಂಟಿ ಹೇಳಿಕೆಯ ಕಡ್ಡಿಯನ್ನು ಗುಡ್ಡ ಮಾಡುತ್ತಿದ್ದಾರಷ್ಟೆ. ●



ಬ್ರಿಟಿಷ್ ಸೈನಿಕನೊಬ್ಬನ ಅಂತರಾಳದ ಮಾತು

...ಅಮೆರಿಕದ ವಿಶ್ವ ವಾಣಿಜ್ಯ ಕೇಂದ್ರದ ಕಟ್ಟಡ ...ರುಳಿದ ಮೇಲೆ ಅದಕ್ಕೆ ಒಸಾಮಾ ಬಿನ್ ಲಾಡೆನ್‌ನೇ ...ಹೊಣೆಗಾರ ಎಂದು ಆರೋಪಿಸಿ ಆತನ ನೆಲೆಯಾಗಿದ್ದ ...ಾನಿಸ್ತಾನದ ಮೇಲೆ ಅಮೆರಿಕ ಆಕ್ರಮಣ ಮಾಡಿದ್ದು ... ಇತಿಹಾಸ. 'ಭಯೋತ್ಪಾದನೆಯ ವಿರುದ್ಧ ವಿಶ್ವ ...'ದ ಹೆಸರಿನಲ್ಲಿ ತನ್ನ ವಿರೋಧಿಗಳೆಲ್ಲರನ್ನೂ ...ಡಿಯುವುದಕ್ಕೆ ಅಮೆರಿಕಕ್ಕೆ ಒಂದು ದೊಡ್ಡ ಕಾರಣ ...ದಿಂದ ತಾನೇ ವಿಶ್ವ ವಾಣಿಜ್ಯ ಕೇಂದ್ರವನ್ನು ಉರುಳಿಸಿ, ... ಒಸಾಮಾ ಬಿನ್ ಲಾಡೆನ್ ತಲೆಗೆ ಕಟ್ಟಿ ...ಾನಿಸ್ತಾನ, ಇರಾಕ್‌ಗಳ ಮೇಲೆ ಯುದ್ಧ ಸಾರಿತು ... ವಿಶ್ವದ ಅನೇಕ ಸುಪ್ರಸಿದ್ಧ ವಿಶ್ಲೇಷಕರು ...ಧಾರಗಳ ಸಮೇತವಾಗಿ ವಿವರಿಸುತ್ತಾರೆ. ಅಮೆರಿಕದ ... ತಂತ್ರ, ಕುತಂತ್ರ, ಅನ್ಯಾಯ, ಆಕ್ರಮಣಗಳ ...ಯನ್ನು ಅವಲೋಕಿಸಿದರೆ ಈ ವಾದದಲ್ಲಿ ...ರಬಹುದು ಎಂದೆನಿಸಿದರೆ ಆಶ್ಚರ್ಯವಿಲ್ಲ. ... ಇರಲಿ, ಅಫಘಾನಿಸ್ತಾನ ಮತ್ತು ಇರಾಕ್ ... ಅಮೆರಿಕ ಮತ್ತು ಬ್ರಿಟಿಷ್ ಸೈನ್ಯಗಳು ...ಮಾಡುತ್ತಿವೆ, ಯುದ್ಧದ ಭೀಕರತೆಗಳೇನು, ಯಾವ ...ಲ್ಲಿ ಮಾನವ ಹಕ್ಕುಗಳನ್ನು ಉಲ್ಲಂಘನೆ ಮಾಡ...ತ್ತಿದೆ ಎಂಬುದನ್ನು ಇಲ್ಲಿಯವರೆಗೆ ಅನೇಕ ಪತ್ರ...ರು, ಮಾನವ ಹಕ್ಕುಗಳ ಕಾರ್ಯಕರ್ತರು, ಸಾಮಾಜಿಕ ...ಗಳು ಬಿಡಿಬಿಡಿಯಾಗಿ ಬಿಚ್ಚಿಟ್ಟಿವೆ. ಅದನ್ನೆಲ್ಲಾ ...ಕ ಮತ್ತು ಬ್ರಿಟಿಷ್ ಸರ್ಕಾರಗಳು, ಅವುಗಳ ...ಳು ಅಲ್ಲಗಳೆಯುತ್ತಲೇ ಬಂದಿವೆ. ಈಗ ಅಫಘಾನಿ...ಲ್ಲಿದ್ದ ಬ್ರಿಟಿಷ್ ಸೈನಿಕನೊಬ್ಬ ಖುದ್ದಾಗಿ ಅಲ್ಲಿಂದ ...ಂದು ಅಫಘಾನಿಸ್ತಾನದ ವಿರುದ್ಧ ಆಂಗ್ಲೋ-ಅಮೆ... ಸೈನ್ಯಗಳ ಅನ್ಯಾಯಯುತ ಯುದ್ಧವನ್ನು ...ದ್ದಾನೆ. ಅಲ್ಲದೇ, ಅಫಘಾನಿಸ್ತಾನದಿಂದ ಬ್ರಿಟಿಷ್ ...ನ್ನು ವಾಪಸ್ ಕರೆಸಿಕೊಳ್ಳಬೇಕೆಂದು ಇಂಗ್ಲೆಂಡ್ ... ಗಾರ್ಡನ್ ಬ್ರೌನ್ ಅವರನ್ನು ಒತ್ತಾಯಿಸಿದ್ದಾನೆ. ಆತನ ಅಭಿಪ್ರಾಯವನ್ನು ಅವನ ಮಾತುಗಳಲ್ಲೇ ಓದಿ:

"**2006**ರಲ್ಲಿ ನನ್ನನ್ನು ಅಫಘಾನಿಸ್ತಾನಕ್ಕೆ ಕಳಿಸಿ ಕೊಡಲಾಯಿತು. ಇದು ಆರಂಭದಿಂದಲೂ ನನಗೊಂದು ಸವಾಲಾಗಿತ್ತು, ನಾವು ಅಲ್ಲಿಗೆ ಏಕೆ ಬಂದಿದ್ದೇವೆಂಬ ಬಗ್ಗೆ ಬಹಳ ಗೊಂದಲಗಳಿದ್ದವು... ನಿಮ್ರೋಡ್ ವಿಮಾನ ದುರಂತ ನನ್ನ ಮೇಲೆ ಅತೀವವಾಗಿ ಪ್ರಭಾವ ಬೀರಿದ ದುರ್ಘಟನೆ. (2006ರ ಸೆಪ್ಟೆಂಬರ್ 2ರಂದು ಬ್ರಿಟಿಷ್ ವಾಯುಪಡೆಯ ನಿಮ್ರೋಡ್ ಯುದ್ಧ ವಿಮಾನ ಅಫಘಾನಿಸ್ತಾನದ ಆಕಾಶದಲ್ಲಿ ಸ್ಫೋಟಗೊಂಡು ಅದರೊಳಗಿದ್ದ 14 ಸೈನಿಕರು ಕೊಲ್ಲಲ್ಪಟ್ಟಿದ್ದರು). ಅವರ್‍ಯಾರೂ ಯುದ್ಧದಲ್ಲಿ ಕಾದಾಡುತ್ತಾ ಸತ್ತವರಾಗಿರಲಿಲ್ಲ, ಆ ದಿನವಿಡೀ ನಾನು ಯೋಧರ ಶವಗಳನ್ನು, ಶವಪೆಟ್ಟಿಗೆಗಳನ್ನು ಸಾಗಿಸುವುದರಲ್ಲೇ ಕಳೆದೆ.



"ನಾನು ಇಂಗ್ಲೆಂಡ್‌ಗೆ ಮರಳಿದಾಗ ದೇಶಕ್ಕೆ ನಾವೇನು ಕೊಡುಗೆ ಕೊಟ್ಟಿದ್ದೇವೆ ಎಂದು ಯೋಚಿಸಿದರೆ ಏನೂ ಕಾಣಲಿಲ್ಲ, ನನಗೆ ನಿಜಕ್ಕೂ ನಾಚಿಕೆಯಾಯಿತು... ನಾನು ಯೋಧನಾಗಿ ಸೇನೆಗೆ ಸೇರಿದಾಗ ಬಹಳ ಹೆಮ್ಮೆಯಿತ್ತು, ಈಗ ಸೇನೆಯಲ್ಲಿ ಕೆಲಸ ಮಾಡಿದ ಮೇಲೆ ನನ್ನ ಭಾವನೆಗಳು ಜನರಿಗೆ ಗೊತ್ತಾಗಲಿ ಎಂದು ಬಯಸುತ್ತೇನೆ, ನನ್ನಂತೆಯೇ ಅಲ್ಲಿ ಯುದ್ಧದಲ್ಲಿ ನಿರತರಾಗಿರುವ ಯೋಧರ ಹಾಗೂ ಅಫ್ಘನ್ ಜನರ ಯೋಗಕ್ಷೇಮದ ಬಗ್ಗೆ ಸರ್ಕಾರ ಗಮನವಹಿಸಲಿ ಎಂದು ಬಯಸುತ್ತೇನೆ. ಅಲ್ಲಿ ಜನ ಕಷ್ಟನಷ್ಟಗಳನ್ನು ಎದುರಿಸುತ್ತಿದ್ದಾರೆ. ಅದಕ್ಕೆ ಅವಕಾಶ ಕೊಡಬಾರದು. **2007**ರಲ್ಲಿ ನಾನು ಅಫಘಾನಿಸ್ತಾನದಿಂದ ಮರಳಿದಾಗ ನನಗೆ ಪ್ರಮೋಶನ್ ಕೊಟ್ಟು ಇಂಗ್ಲೆಂಡ್‌ನಲ್ಲೇ ಬೇರೆ ಕಡೆ ನಿಯೋಜಿಸಲಾಯಿತು. ಸಾಮರಸ್ಯ ಮಾರ್ಗದರ್ಶನಗಳ ಪ್ರಕಾರ ನನ್ನನ್ನು ಮತ್ತೆ ಅಫಘಾನಿಸ್ತಾನಕ್ಕೆ ಕಳಿಸುವಂತಿರಲಿಲ್ಲ. (ಈ ಮಾರ್ಗದರ್ಶನಗಳ ಪ್ರಕಾರ ಮೂರು ವರ್ಷಗಳ ಒಂದು ಅವಧಿಯಲ್ಲಿ ಸೈನಿಕರನ್ನು 13 ತಿಂಗಳುಗಳಿಗಿಂತ ಹೆಚ್ಚಿನ ಕಾಲ ಹೊರಗಿನ ದೇಶಗಳಲ್ಲಿ ನಿಯೋಜಿಸುವಂತಿಲ್ಲ). ಆದರೆ, ಇದಕ್ಕೆ ವಿರುದ್ಧವಾಗಿ ನಮಗೆ ಮತ್ತೆ ಅಫಘಾನಿಸ್ತಾನಕ್ಕೆ ಹೋಗುವಂತೆ ಆದೇಶ ಬಂತು. ಆದರೆ ಅದು ನನ್ನಿಂದ ಸಾಧ್ಯವಾಗಲಿಲ್ಲ.

"ನಾನು ಆಗ್ನೇಯ ಏಷಿಯಾಕ್ಕೆ ತಪ್ಪಿಸಿಕೊಂಡು ಹೋದೆ. ಮಾನಸಿಕವಾಗಿ ಬಹಳ ಆತಂಕದಲ್ಲಿದ್ದೆ, ಕುಡಿತಕ್ಕೆ ದಾಸನಾಗಿಬಿಟ್ಟಿದ್ದೆ... ನಾನು ನನ್ನ ಯಾವುದೇ ಸ್ನೇಹಿತರೊಂದಿಗೆ ಸಂಪರ್ಕದಲ್ಲಿರಲಿಲ್ಲ, ನನ್ನ ಬೆಂಬಲಿಗರ ಗುಂಪನ್ನೇ ಕಳೆದುಕೊಂಡದ್ದರಿಂದ ಅದು ಬಹಳ ಕಠಿಣವಾಗಿತ್ತು, ಅವರನ್ನು ಕಷ್ಟಕ್ಕೆ ಸಿಲುಕಿಸುವುದು ನನಗೆ ಇಷ್ಟವಿರಲಿಲ್ಲ, ತಲೆಮರೆಸಿಕೊಂಡವರ ಬಗ್ಗೆ ಮಾಹಿತಿ ಗೊತ್ತಿದ್ದರೂ ಸುಮ್ಮನಿದ್ದರೆ ಅದು ಅಪರಾಧವಾಗುತ್ತದೆ. ಹಾಗಾಗಿ, ಅವರೊಂದಿಗೆ ಸಂಪರ್ಕದಲ್ಲಿದ್ದು ಅವರನ್ನು ಕಷ್ಟಕ್ಕೀಡುಮಾಡುವುದು ನನಗೆ ಇಷ್ಟವಿರಲಿಲ್ಲ... ಕೆಲವರು ನನ್ನ ಬೆನ್ನಿಗೆ ನಿಂತಿದ್ದರಿಂದ ಅವರೊಂದಿಗೆ ಮಾತನಾಡಿ ಕೆಲವು ತಿಂಗಳುಗಳ ಕಾಲ ಆಸ್ಟ್ರೇಲಿಯಕ್ಕೆ ಹೋದೆ. ಯಾವ ಕ್ಷಣದಲ್ಲಿ ಸೈನ್ಯ ನನ್ನನ್ನು ಹಿಡಿದುಬಿಡುತ್ತೋ ಎಂದು ಯಾವಾಗಲೂ ಭಯಪಡುತ್ತಿದ್ದ ನನ್ನ ಹೆಂಡತಿಯನ್ನು ಭೇಟಿ ಮಾಡಿದೆ. ಆಕೆ ನನ್ನ ಬೆಂಬಲಕ್ಕೆ ನಿಂತಳು... ಮೇ ತಿಂಗಳಿನಲ್ಲಿ ಇಂಗ್ಲೆಂಡ್‌ಗೆ ಮರಳಿ ಶರಣಾದೆ. ಮೇಲಧಿಕಾರಿಗಳ ಆದೇಶವನ್ನು ಪಾಲಿಸದೇ ಸೇನೆಯಿಂದ ತಪ್ಪಿಸಿಕೊಂಡು ಓಡಿಹೋಗಿದ್ದಕ್ಕಾಗಿ ನನಗೆ ನ್ಯಾಯಾಲಯದಿಂದ ಎರಡು ವರ್ಷಗಳ ಜೈಲುಶಿಕ್ಷೆ ಕಾದಿದೆ."

ಈಗ ಈ ಸೈನಿಕ ಬ್ರಿಟಿಷ್ ಸೇನೆ ಅಫಘಾನಿಸ್ತಾನದಲ್ಲಿ ಹೇಗೆ ಅನವಶ್ಯಕವಾಗಿ ಯುದ್ಧದಲ್ಲಿ ತೊಡಗಿದೆ ಎಂಬುದನ್ನು, ಯಾವುದೇ ಲಾಭವಿಲ್ಲದಿದ್ದರೂ ಸುಖಾಸುಮ್ಮನೇ ಸಾವುನೋವುಗಳನ್ನು ಎದುರಿಸುತ್ತಿದೆ ಎಂಬುದನ್ನು ಇಡೀ ವಿಶ್ವದ ಜನರೆದುರು ಬಿಚ್ಚಿಡುತ್ತಿದ್ದಾನೆ. ಅನೇಕ ಸಭೆಸಮಾರಂಭಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದಾನೆ. ಅನೇಕ ಪತ್ರಿಕೆಗಳಿಗೆ ಸಂದರ್ಶನಗಳನ್ನು ಕೊಡುತ್ತಿದ್ದಾನೆ. ಅಂತೆಯೇ ಬ್ರಿಟಿಷ್ ಪ್ರಧಾನಿ ಗಾರ್ಡನ್ ಬ್ರೌನ್‌ಗೆ ಪತ್ರ ಬರೆದು ಅಮೆರಿಕದ ವಿದೇಶಾಂಗ ನೀತಿಯ ಕಾರಣದಿಂದ ಬ್ರಿಟಿಷ್ ಸೈನಿಕರು ಸಾವುನೋವು ಎದುರಿಸಬೇಕಾಗಿಬಂದಿದೆ ಎಂದು ವಿವರಿಸಿದ್ದಾನೆ.


ಆದರೆ, ಇಡೀ ವಿಶ್ವದ ಮೇಲೆ ಆಧಿಪತ್ಯ ಸಾಧಿಸುವುದಕ್ಕೆ ಹೊರಟಿರುವ ಅಮೆರಿಕದ ಚೇಲಾ ಆಗಿ ಪರಿವರ್ತನೆಗೊಂಡಿರುವ ಇಂಗ್ಲೆಂಡ್ ಪ್ರಭುತ್ವದ ಜಡ ಕಿವಿಗಳಿಗೆ ಇಂಥ ಅಮಾಯಕರ ಮೊರೆ ಎಲ್ಲಿ ಕೇಳಬೇಕು? ●

ಸೋಮಣ್ಣನ ಸೋಲಿಗೆ ಬಿಜೆಪಿಯಲ್ಲೇ ಘಾತುಕರು

'ಲೇ ಅಪ್ಪಾ ಯಾವ ತಾಯಿ ಹೆತ್ತ ಮಗನೋ ನೀನು? ದೈವ ಕಳೆ ಕಣಯ್ಯಾ ನಿನ್ನ ಮುಖದಲ್ಲಿ!' ಎಂದು ಕಂಡಕಂಡ ಹುಡುಗರ ಕೆನ್ನೆ ಜಿಗುಟುವ ಸೋಮಣ್ಣನ ಎಲೆಕ್ಷನ್ ಸ್ಟಂಟುಗಳೀಗ ಜೋಕಿನ ಮುಸ್ತು!


ಸೋಮಣ್ಣ

ಎಷ್ಟೇ ಹಲ್ಲುಕಿರಿದು ಏನೇ ಡೈಲಾಗ್ ಹೊಡೆದರೂ ಗೋವಿಂದರಾಜನಗರದ ಜನ ನಂಬುತ್ತಿಲ್ಲ. ಸೋಮಣ್ಣನ ಮುಖ ಕಂಡಿದ್ದೇ ಪಡ್ಡೆ ಹುಡುಗರ ಬಾಯಲ್ಲಿ 'ಲೇ ಅಪ್ಪಾ' ಎಂಬ ಮೂದಲಿಕೆ ಎದುರಾಗುತ್ತದೆ. ಗಲ್ಲೀ ಹುಡುಗರೇ ಈ ರೀತಿ ಕಿಚಾಯಿಸುತ್ತಿದ್ದರೆ ಇನ್ನು ಸೋಮಣ್ಣನ ಗತಿ ಏನಾಗಬೇಡ? ಹಿಂದಿನಂತೆ ಎಷ್ಟೇ ಕಪಟ ನಗು, ಬುರುಡೆ ಡೈಲಾಗು ಹೊಡೆದು ಮತದಾರರನ್ನು ಮರಳುಮಾಡಲು ಹೋದರೂ ಅದು ಸೋಮಣ್ಣ ತನ್ನನ್ನೇ ಗೇಲಿ ಮಾಡಿಕೊಂಡಂತಾಗುತ್ತದೆ. ಮುಖದಲ್ಲಿ ನಗುವಿಲ್ಲ. ಬಾಯಿ ಕಟ್ಟುತ್ತದೆ. ಬಿಜೆಪಿ ಸರ್ಕಾರದ ಸಾಧನೆಯಾಗಲಿ, ಮುಖ್ಯಮಂತ್ರಿ ಯಡ್ಡಿಯ ವರ್ಚಸ್ಸಾಗಲಿ ಮೊದಲೇ ಇಲ್ಲವೆಂದ ಮೇಲೆ ಮತದಾರನ ಪ್ರಶ್ನೆಗೆ ಉತ್ತರವಾದರೂ ಎಲ್ಲಿದೆ?


ಪ್ರಿಯಕೃಷ್ಣ

ಪಾಪ, ಸೋಮಣ್ಣನ ಪರಿಸ್ಥಿತಿ ಎಂಥವರಿಗೂ ಅಯ್ಯೋ ಎನ್ನಿಸಲೇಬೇಕು. ಲೇಔಟ್ ಕೃಷ್ಣಪ್ಪನವರ ಮಗ ಪ್ರಿಯಕೃಷ್ಣನನ್ನು ಕಂಡಿದ್ದೇ ಆರತಿ ಎತ್ತಿ ಜೈಕಾರ ಕೂಗುವ ಹುಡುಗರ ಹುಮ್ಮಸ್ಸಿನ ಮುಂದೆ ಸೋಮಣ್ಣನ ಬಾಡಿಗೆ ಬಂಟರ ಗ್ಯಾಂಗ್ ಅಸಹ್ಯವೆನ್ನಿಸುತ್ತದೆ. ಅದು ಸೋಮಣ್ಣನೇ ತೋಡಿಕೊಂಡ ಹಳ್ಳ. ಆದರಿಂದ ಹೊರಬರಲಾಗುತ್ತಿಲ್ಲ. ಕಳೆದ ಚುನಾವಣೆಯಲ್ಲಿ ಸೋಮಣ್ಣನಿಗೆ ಬಿಜೆಪಿ ಅಭ್ಯರ್ಥಿ ರವೀಂದ್ರನಿಗಿಂತಲೂ 23 ಸಾವಿರದಷ್ಟಿದ್ದ ಲೀಡು ಮೊನ್ನೆ ನಡೆದ ಲೋಕಸಭಾ ಚುನಾವಣೆಯಲ್ಲಿ 9 ಸಾವಿರಕ್ಕಿಳಿಯಿತು. ಕಾಂಗ್ರೆಸ್ಸಿಗಿಂತಲೂ ಒಂಬತ್ತು ಸಾವಿರದಷ್ಟು ಹೆಚ್ಚಿಗೆ ಓಟು ಬಂದದ್ದು ಸಂಸದ ಅನಂತಕುಮಾರ್‌ಗಾ? ಅಥವಾ ಅದು ಸೋಮಣ್ಣನ ತಾಕತ್ತಾ? ಎಂಬ ಬಗ್ಗೆ ಯಾರಲ್ಲೂ ಕುತೂಹಲವುಳಿದಿಲ್ಲ.

ಅನಂತಕುಮಾರ್ ಪರ ಲೀಡು ತರಲು ಸೋಮಣ್ಣ ಮೂರು ಕೋಟಿಯಷ್ಟು ಸುರಿದಿದ್ದ!

ಈಗ ಅದಕ್ಕಿಂತಲೂ ಅಪಾಯಕಾರಿ ಸ್ಥಿತಿಯಿದೆ. ಅದು ಬಿಜೆಪಿಯಲ್ಲೇ ಹಿತಶತ್ರುಗಳ ಹಾವಳಿ. ಹಿಂದೆ ಕಾಂಗ್ರೆಸ್ಸಿನಲ್ಲಿದ್ದಾಗ ಮುಸ್ಲಿಮರು, ದಲಿತರು, ಕ್ರಿಶ್ಚಿಯನ್ನರೆಲ್ಲ ಕಣ್ಣುಮುಚ್ಚಿ ಸೋಮಣ್ಣನಿಗೆ ಓಟು ಕೊಟ್ಟರು. ಸೋಮಣ್ಣನ ವಿರುದ್ಧ ಜೆಡಿಎಸ್ ಅಭ್ಯರ್ಥಿಯಾಗಿದ್ದ ರಂಗೇಗೌಡ ಒಬ್ಬನೇ 20 ಸಾವಿರದಷ್ಟು ಮತಕಿತ್ತಿದ್ದ. ಬಿಜೆಪಿ ರವೀಂದ್ರ ಜಾತಿಯಲ್ಲಿ ಕುರುಬನಾದ್ದರಿಂದ ತಿಮ್ಮೇನಹಳ್ಳಿ, ಮಾರೇನಹಳ್ಳಿ, ಮೂಡಲಪಾಳ್ಯ, ನಾಗರಬಾವಿ ಸುತ್ತಮುತ್ತಲ ಕುರುಬರೆಲ್ಲ ಬಿಜೆಪಿಗಲ್ಲದಿದ್ದರೂ ರವೀಂದ್ರನ ಮುಖ ನೋಡಿ ಮೂವತ್ತು ಸಾವಿರದಷ್ಟು ಓಟು ಕೊಟ್ಟರು. ಆವತ್ತು ಬಿಜೆಪಿ ಅಭ್ಯರ್ಥಿಯಾಗಿದ್ದ ತಿಮ್ಮೇನಹಳ್ಳಿ ರವೀಂದ್ರ ಇವತ್ತಿಗೂ ಬಿಜೆಪಿಯಲ್ಲೇ ಇದ್ದಾನೆ ನಿಜ. ಕಾಟಾಚಾರಕ್ಕೆಂಬಂತೆ ಸೋಮಣ್ಣನ ಜೊತೆ ಪ್ರಚಾರಕ್ಕೂ ಬರುತ್ತಾನೆ. ಆದರೆ ವಾಸ್ತವವಾಗಿ ರವೀಂದ್ರ ಕಾಂಗ್ರೆಸ್ ನಾಯಕ ಲೇಔಟ್ ಕೃಷ್ಣಪ್ಪನವರ ಪಕ್ಕಾ ಬೆಂಬಲಿಗ. ಒಳಗೊಳಗೇ ಸೋಮಣ್ಣನ ವಿರುದ್ಧ ಕುದಿಯುತ್ತಿದ್ದ ತಿಮ್ಮೇನಹಳ್ಳಿ ರವೀಂದ್ರನಿಗೆ ಕಾಂಗ್ರೆಸ್ಸಿನಿಂದ ವಲಸೆ ಬಂದು ತನ್ನ ಸ್ಥಾನವನ್ನು ಕಿತ್ತುಕೊಂಡ ಸೋಮಣ್ಣನ ಬಗ್ಗೆ ಮೊದಲೇ ಸಿಟ್ಟಿತ್ತು. ಸೋಮಣ್ಣ ಬಿಜೆಪಿಯಲ್ಲಿರುವಷ್ಟೂ ಕಾಲ ತನಗೆ ಉಳಿಗಾಲವಿಲ್ಲ ಎಂಬುದೂ ಆತನಿಗೆ ಚೆನ್ನಾಗಿ ಗೊತ್ತು.

ಯಾವುದಕ್ಕೂ ಇರಲಿ ಎಂದು ತನ್ನ ತಮ್ಮ ಪೂಜಪ್ಪನನ್ನು ಮೊದಲೇ ಲೇಔಟ್ ಕೃಷ್ಣಪ್ಪನವರ ಪಾಳಯದಲ್ಲಿ ಬೆಳೆಯಲು ಬಿಟ್ಟಿದ್ದ ರವೀಂದ್ರನನ್ನು ಸೀದಾ ಲೇಔಟ್ ಕೃಷ್ಣಪ್ಪನವರ ಮನೆಗೇ ಕರೆತಂದದ್ದು ಸರ್ವಮಂಗಳ ಡೆವಲಪರ್ಸ್‌ನ ಮಲ್ಲಯ್ಯ. ವಿಜಯನಗರದ ಶಾಸಕ ಲೇಔಟ್ ಕೃಷ್ಣಪ್ಪನವರ ಪರಮಾಪ್ತರಾದ ಮಲ್ಲಯ್ಯನವರಿಗೂ ಲೋಕಲ್ ಬಿಜೆಪಿ ನಾಯಕ ತಿಮ್ಮೇನಹಳ್ಳಿ ರವೀಂದ್ರನಿಗೂ ಆಕಾಲದಿಂದಲೂ ಇದ್ದ ದೋಸ್ತಿ ಈಗ ಸೋಮಣ್ಣನಿಗೆ ಮುಳುವಾಗುತ್ತಿದೆ.


ಒಂದೆಡೆ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಗೋವಿಂದರಾಜನಗರದ ಕುರುಬರ ಮನೆಮನೆಗೆ ಹೋಗಿ ಪ್ರಿಯಕೃಷ್ಣ ಪರ ಓಟು ಕೇಳುತ್ತಿದ್ದರೆ, ತಿಮ್ಮೇನಹಳ್ಳಿ ರವೀಂದ್ರ ಮುಗುಮ್ಮಾಗಿದ್ದು ಲೇಔಟ್ ಕೃಷ್ಣಪ್ಪನವರ ಋಣ ತೀರಿಸುತ್ತಿದ್ದಾನೆ. ಇನ್ನು ಕುರುಬರು ತಾನೇ ಯಾವ ಸುಖಕ್ಕೆ ಸೋಮಣ್ಣನನ್ನು ನಂಬುತ್ತಾರೆ?


ಇದು ಸೋಮಣ್ಣನಿಗಾದ ಮೊದಲ ಪೆಟ್ಟಾದರೆ ಇದಕ್ಕಿಂತಲೂ ದೊಡ್ಡ ಏಟು ಕೊಟ್ಟವನು ಮತ್ತೊಬ್ಬ ಲೋಕಲ್ ಬಿಜೆಪಿ ನಾಯಕ ಅಶ್ವತ್ಥನಾರಾಯಣ. ವಿಜಯನಗರಕ್ಕೆ ಸೋಮಣ್ಣ ಅಭ್ಯರ್ಥಿಯಾಗಿದ್ದಷ್ಟೂ ಕಾಲ ಆತನ ವಿರುದ್ಧ ಬಿಜೆಪಿಯಿಂದ ನಿಲ್ಲುತ್ತಿದ್ದದ್ದು ಒಕ್ಕಲಿಗರ ಅಶ್ವತ್ಥನಾರಾಯಣ. 2004 ರ ಚುನಾವಣೆಯಲ್ಲಿ ಸೋಮಣ್ಣನ ವಿರುದ್ಧ ಸೋತು ವಿಪರೀತ ದುಡ್ಡು ಕಳಕೊಂಡಿದ್ದ ಲಕ್ಷ್ಮಿನಾರಾಯಣನನ್ನು ಕೈಹಿಡಿದು ನೆರವಾಗಿದ್ದೇ ಲೇಔಟ್ ಕೃಷ್ಣಪ್ಪ. ಋಣಕ್ಕೆ ಬಿದ್ದ ಅಶ್ವತ್ಥನಾರಾಯಣ ಮೊನ್ನೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ವಿಜಯನಗರದಿಂದ ಸ್ಪರ್ಧಿಸದೇ ಲೇಔಟ್ ಕೃಷ್ಣಪ್ಪನವರ ಗೆಲುವಿಗೆ ಕಾರಣನಾದ. ತನ್ನ ಖಾಸಾ ತಮ್ಮ ಕಿಟ್ಟಿಯನ್ನು ಕೃಷ್ಣಪ್ಪನವರ ಬೆಂಬಲಕ್ಕೆಂದೇ ಕಾಂಗ್ರೆಸ್ ನಾಯಕನನ್ನಾಗಿ ರೂಪಿಸಿದ.


ಈಗ ಅಶ್ವತ್ಥನಾರಾಯಣ ಹಗಲು ಹೊತ್ತು ಸೋಮಣ್ಣನ ಜೊತೆ ಪ್ರಚಾರಕ್ಕಿಳಿದರೆ ರಾತ್ರಿ ಹೊತ್ತು ಕೃಷ್ಣಪ್ಪನವರ ಮನೆಯಲ್ಲಿರುತ್ತಾನೆ. ಏನೇ ಪಕ್ಷ ನಿಷ್ಠೆಯೆಂದರೂ ಜಾತಿ ಬಾಂಧವ್ಯವಿದೆಯಲ್ಲ; ಅದು ಅಶ್ವತ್ಥನಾರಾಯಣನಂಥ ಲೋಕಲ್ ಬಿಜೆಪಿ ನಾಯಕನನ್ನು ಸೋಮಣ್ಣನ ವಿರುದ್ಧ ಬೀಳುವಂತೆ ಮಾಡಿದೆ.

ಒಂದೆಡೆ ಕುರುಬರ ನಾಯಕ ರವೀಂದ್ರ ಮತ್ತು ಇನ್ನೊಂದೆಡೆ ಒಕ್ಕಲಿಗರ ಮುಖಂಡ ಅಶ್ವತ್ಥನಾರಾಯಣ ಇಬ್ಬರೂ ಜೊತೆಗಿದ್ದೇ ಸೋಮಣ್ಣನ ಬೆನ್ನಿಗಿರಿದರೆಂದರೆ ಗತಿ ಏನಾಗಬೇಡ? ಸೋಮಣ್ಣನ ಆತಂಕಕ್ಕೆ ಇನ್ನೂ ಒಂದು ಕಾರಣವಿದ್ದರೆ ಆತ ಭಟ್ಟಂಗಿ ವಿಶ್ವನಾಥಗೌಡ!

ಜಾತಿಯಲ್ಲಿ ಒಕ್ಕಲಿಗನಾದರೂ ತನ್ನ ಭಟ್ಟಂಗಿಯಾಗಿದ್ದರಿಂದ ಸೋಮಣ್ಣ ಐದು ಕೋಟಿಯ ಕಾಂಟ್ರಾಕ್ಟ್ ಕೊಡಿಸಿದ್ದ. ಪ್ರಿಯಕೃಷ್ಣನ ಹೊರತಾಗಿ ಬೇರೆ ಯಾರೇ ಅಭ್ಯರ್ಥಿಯಾಗಿದ್ದರೂ ವಿಶ್ವನಾಥಗೌಡನ ನಿಯತ್ತಿಗೆ


ಲೇಔಟ್ ಕೃಷ್ಣಪ್ಪ


ರವೀಂದ್ರ


ಪೂಜಪ್ಪ

ಭಂಗವಾಗುತ್ತಿರಲಿಲ್ಲ. ಗೋವಿಂದರಾಜನರದ ಒಕ್ಕಲಿಗರೆಲ್ಲ ಲೇಔಟ್ ಕೃಷ್ಣಪ್ಪನವರ ಬೆನ್ನಿಗೆ ನಿಂತಿದ್ದನ್ನು ಕಂಡೇ ವಿಶ್ವನಾಥಗೌಡ ಒಳಗೊಳಗೇ ಪ್ರಿಯಕೃಷ್ಣರ ಪರ ಪ್ರಚಾರಕ್ಕಿಳಿದಿದ್ದಾನೆ.

ನಂಬಿಕಸ್ತ ಬಂಟ ವಿಶ್ವನಾಥಗೌಡನೇ ಡಬ್ಬಲ್ ಗೇಮ್ ಮಾಡಿದ ಮೇಲೆ ಸೋಮಣ್ಣ ಯಾರನ್ನು ನಂಬುತ್ತಾನೆ?

ಶುರುವಿನಿಂದಲೂ ಸೋಮಣ್ಣ ಬೆಳೆಸಿದ್ದು ಇಂಥ ದುಷ್ಟ ಶಕ್ತಿಗಳನ್ನೇ. ಚೋಳೂರುಪಾಳ್ಯದ ಮಾಜಿ ಕೌನ್ಸಿಲರ್ ರವೀಂದ್ರ, ಮೂಡಲಪಾಳ್ಯದ ರೌಡಿ ರಾ... ಶಾಂತಕುಮಾರಿ, ವಿಜಯನಗರದ ಟ್ರಾವೆಲ್ಸ್ ಶಾ... ಕುಪ್ಪು ಗಣೇಶ, ಆನಂದ, ಬೇಕರಿ ಕಳ್ಳ ಅಯ್ಯಂಗಾ... ಕೇಶವ, ರಾಗಿ ಮಿಷಿನ್ ಕಿಟ್ಟಿ, ಚಂದ್ರಾಲೇಔಟಿನ ಲ್ಯಾಂ... ರಾಬರ್ ಶಿವಪ್ಪ ಮಾಜಿ ಡೆಪ್ಯೂಟಿ ಮೇಯರ್ ಪುಟ್ಟಾ... ಇಂಥ ಜನಕಂಟಕರ ಮುಖ ಕಂಡರೇನೇ ಜನಕ್ಕೆ ಅಸ... ಶುರುವಾಗಿದೆ. ಇಂಥವರನ್ನು ಜೊತೆ ಹಾಕಿಕೊಂ... ಓಟು ಕೇಳಲು ಹೋದರೆ ಜನ ಉಗಿಯದೇ ಇನ್ನೇನು...

ಗೋವಿಂದರಾಜನಗರಕ್ಕೆ ನಾನು ಇನ್ನೂರು ಕೋಟಿ... ಪ್ಯಾಕೇಜ್ ತಂದಿದ್ದೇನೆಂದ... ಮೋರಿ, ಪಾರ್ಕು, ರಸ್ತೆ ಎ... ಮಾಡುತ್ತೇನೆಂದೂ ಆ... ಪ್ರಮಾಣ ಮಾಡುತ್ತಿದ್ದಾ... ಸೋಮಣ್ಣ. ವಾಸ್ತವವಾ... ಬಂದದ್ದು ಕೇವಲ ಎಪ್ಪ... ಕೋಟಿ ಮಾತ್ರ. ಚುನಾವಣ... ಸಂಹಿತೆಯಿಂದಾಗಿ ಆ ದುಡ್ಡು... ಬಿಡುಗಡೆಯಾಗಿಲ್ಲ... ಬಿಡುಗಡೆಯಾಗುವ ಹೊತ್ತಿ... ಎಲೆಕ್ಷನ್ನೇ ಮುಗಿದಿರುತ್ತದೆ. ಹಾಗೊಮ್ಮೆ ಸೋಮ... ಗೆದ್ದರೂ ಅದು ಆತನ ಚೇಲಾಗಳ ಹೊಟ್ಟೆ ತುಂಬಿಸಲ್ಲ... ಕಳ್ಳಬಿಲ್ಲು ಕಾಮಗಾರಿಯಲ್ಲೇ ಪೋಲಾಗುತ್ತದೆ.

ಹೀಗಾಗಿ ನೂರು ಕೋಟಿ ಇನ್ನೂರು ಕೋಟಿಯ... ಸೋಮಣ್ಣನ ಡೈಲಾಗಿಗೆ ಗೋವಿಂದರಾಜನಗರದಲ್ಲಿ... ನಯಾಪೈಸೆಯ ಕಿಮ್ಮತ್ತಿಲ್ಲ. ಲೇಔಟ್ ಕೃಷ್ಣಪ್ಪನವರ ಮಗ ಪ್ರಿಯಕೃಷ್ಣ ಓರ್ವ ರಿಯಲ್ ಎಸ್ಟೇಟ್

▸▸▸12

ಸಿಸಿಬಿ ನಟರಾಜ್ ಎಂಬ ಲೋಕಲ್ ಶಕ್ತಿ

ಸೋಮಣ್ಣನಿಗೆ ಹೋಲಿಸಿದರೆ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಕೃಷ್ಣ ಚಿಕ್ಕಹುಡುಗ ನಿಜ. ಆದರೆ ಈ ಪಾಟಿ ಜನಬೆಂಬಲ ಆತನಿಗೊದಗುವುದಕ್ಕೂ ಕಾರಣವಿದೆ. ಅದು ಸೋಮಣ್ಣನ ಸುಳ್ಳು ಮತ್ತು ಜೊತೆಗಿದ್ದೇ ಬೆನ್ನಿಗಿರಿಯುವ ದುರ್ಬುದ್ಧಿ.

ಇವತ್ತು ಸೋಮಣ್ಣನ ಸೋಲಿಗೆ ಯಾರೆಲ್ಲ ಕೈಜೋಡಿಸಿದ್ದಾರೋ ಅವರೆಲ್ಲರೂ ಒಂದಾನೊಂದು ಕಾಲಕ್ಕೆ ಆತನ ಜೊತೆಗಿದ್ದು ದುಡಿದು ಪೆಟ್ಟು ತಿಂದವರೆ. ಈ ಪೈಕಿ ದೊಡ್ಡ ಹೆಸರೆಂದರೆ ವಿಜಯನಗರದ ಜನಾನುರಾಗಿ ಕಾಂಗ್ರೆಸ್ ನಾಯಕ ಸಿಸಿಬಿ ನಟರಾಜ್.

ಕಳೆದ ನಾಲ್ಕು ಚುನಾವಣೆಗಳಲ್ಲೂ ಸೋಮಣ್ಣನ ಗೆಲುವಿನಲ್ಲಿ ಸಿಸಿಬಿ ನಟರಾಜ್ ಪಾತ್ರ ದೊಡ್ಡದಿತ್ತು. ಪೊಲೀಸ್ ಇಲಾಖೆಯಲ್ಲಿದ್ದು ರೌಡಿಗಳ ಪಾಲಿಗೆ ಸಿಂಹಸ್ವಪ್ನದಂತಿದ್ದ ನಟರಾಜ್‌ಗೆ ವಿಜಯನಗರ ಸುತ್ತಮುತ್ತಲ ಏರಿಯಾಗಳ ಹುಡುಗರಲ್ಲಿ ವ್ಯಾಪಕ ಬೆಂಬಲವಿದೆ. ಸೋಮಣ್ಣನನ್ನು ಬೆಂಬಲಿಸುತ್ತಾರೆಂಬ ಒಂದೇ ತಪ್ಪಿಗೆ ಪೊಲೀಸ್ ಇಲಾಖೆಯಿಂದಲೂ ಶಿಕ್ಷೆಗೀಡಾದ ನಟರಾಜ್ ಹುಟ್ಟಾ ಕಾಂಗ್ರೆಸ್ಸಿಗ ಮತ್ತು ಜಾತ್ಯತೀತ. ಈ ಕಾರಣಕ್ಕೇ ಸೋಮಣ್ಣ ಬಿಜೆಪಿ ಸೇರಿದ್ದನ್ನು ವಿರೋಧಿಸಿ ಕಾಂಗ್ರೆಸ್ಸಿನಲ್ಲೇ ಉಳಿದರು.

ಎಂತೆಂಥವರೋ ತನ್ನ ಜೊತೆ ಬಿಜೆಪಿ ಹೊಕ್ಕರೂ ನಟರಾಜ್ ಮಾತ್ರ ಕಾಂಗ್ರೆಸ್‌ನಲ್ಲೇ ಉಳಿದದ್ದಕ್ಕೇ ಸೋಮಣ್ಣ ಬಿಡುವುದುಂಟಾ? ಬಿಜೆಪಿಯದ್ದೇ ಸರ್ಕಾರವಿರುವಾಗ ನಟರಾಜ್‌ರನ್ನು ಮಟ್ಟ ಹಾಕಲೇಬೇಕಲ್ಲ? ಸೋಮಣ್ಣ ಬಿಜೆಪಿ ಸೇರಿದ ಕೆಲ ದಿನಕ್ಕೇ ರೌಡಿ ಮುಲಾಮನ ಸಂಬಂಧಿ ನಾಗರಾಜ್ ಎಂಬ ಹಳೇ ರೌಡಿಯ ಮೇಲೆ ಹಲ್ಲೆ ನಡೆಯಿತು. ಅದನ್ನು ಮಾಡಿಸಿದ್ದು ಕೇತಮಾರನಹಳ್ಳಿಯ ಮುನಿರಾಜು ಎಂಬ ಕಂಟ್ರಾಕ್ಟರ್. ಪೆಟ್ಟು ತಿಂದವನಾಗಲಿ ಕತ್ತರಿಸಿ ಸಿಕ್ಕಿಬಿದ್ದವರಾಗಲಿ ಪೊಲೀಸರೆದುರು ನಟರಾಜ್ ಹೆಸರನ್ನು ಹೇಳಿರಲಿಲ್ಲ. ಹಾಗಿದ್ದೂ ಅನ್ಯಾಯವಾಗಿ ಈ ಕೇಸಿಗೆ ನಟರಾಜ್ ಹೆಸರನ್ನು ಸೇರಿಸಲಾಯ್ತು. ಯಾವುದೋ ಕಾಲಕ್ಕೆ ಹೊಡಿಸಿದವನ ಪರಿಚಯವಿತ್ತೆಂಬ ಒಂದೇ ಕಾರಣಕ್ಕೆ ಕೊಲೆಯತ್ನದ ಕೇಸಿಗೆ ಸಿಲುಕಿದ ನಟರಾಜ್‌ಗೆ ಕೊನೆಗೂ ಗೊತ್ತಾಗಿದ್ದು ಇದು ಸೋಮಣ್ಣನ ಕೆಲಸವೆಂದು!

ಸೋಮಣ್ಣನ ಕುತಂತ್ರಕ್ಕಿದು ಸಣ್ಣ ಉದಾಹರಣೆಯಷ್ಟೇ. ಅದೇ ಸಿಸಿಬಿ ನಟರಾಜ್ ಈಗ ಸೋಮಣ್ಣನ ಪಾಲಿಗೆ ಸಿಂಹಸ್ವಪ್ನ. ಪ್ರಿಯಕೃಷ್ಣನನ್ನು ಗೆಲ್ಲಿಸಿಯೇ ತೀರುತ್ತೇನೆಂದು ಶಪಥಗೈದ ನಟರಾಜ್ ಬೆನ್ನಿಗೆ ಯುವಕರ ಹಿಂಡೇ ಇದೆ. ಜನರಿದ್ದಾರೆ. ಎಲ್ಲಕ್ಕೂ ಮಿಗಿಲಾಗಿ ಸೋಮಣ್ಣನ ಕಾಟಕ್ಕೆ ಸಿಲುಕಿ ನೊಂದವರಿದ್ದಾರೆ.

ಸೋಮಣ್ಣನ ಪಾಪ ಆತನ ಕೊರಳನ್ನೇ ಹಾವಾಗಿ ಬಿಗಿಯುತ್ತಿದೆ.

ಚಿತ್ತಾಪುರ: ಖರ್ಗೆ ಬೆವರುತ್ತಿರುವುದೇಕೆ?

ಕೇಂದ್ರ ಕಾರ್ಮಿಕ ಸಚಿವ ಮಲ್ಲಿಕಾರ್ಜುನ ಖರ್ಗೆಗೆ ತನ್ನ ಮಗ ಪ್ರಿಯಾಂಕನನ್ನು ರಾಜಕೀಯ ಅಧಿಕಾರದ ಕುರ್ಚಿಯಲ್ಲಿ ವಿರಾಜಮಾನವಾಗಿರುವುದನ್ನು ಕಾಣಬೇಕಿದೆ. ಹಾಗಂತಲೆ ಚಿತ್ತಾಪುರ ಮತಕ್ಷೇತ್ರದಿಂದ ತನ್ನ ಮಗ ಕಾಂಗ್ರೆಸ್ ಅಭ್ಯರ್ಥಿಯಾಗುವಂತೆ ನೋಡಿಕೊಂಡಿದ್ದಾರೆ. ಈಗ ಹೇಗಾದರೂ ಸೈ ತನ್ನ ಮಗ ಗೆಲ್ಲಲೇಬೇಕು ಎಂದು ನಿರ್ಧರಿಸಿರುವ ಖರ್ಗೆ ತನ್ನ ಪ್ರತಿಷ್ಠೆಯನ್ನು ಪಣವಾಗಿಟ್ಟು ಮಗನ ಗೆಲುವಿಗೆ ಶ್ರಮಿಸುತ್ತಿದ್ದಾರೆ. ಪುತ್ರ ವ್ಯಾಮೋಹದಲ್ಲಿ ಸಿಲುಕಿರುವ ಖರ್ಗೆಗೆ ತಮ್ಮದೇ ಪಕ್ಷದ ಹಳೆಯ ಕಾರ್ಯಕರ್ತರು, ಮುತ್ಸದ್ದಿಗಳು ಕಾಣುತ್ತಿಲ್ಲ, ಪಕ್ಷಕ್ಕಾಗಿ ಅಹರ್ನಿಶಿ ದುಡಿಯುತ್ತ ಬಂದವರೂ ನೆನಪಾಗುತ್ತಿಲ್ಲ.


ಪ್ರಿಯಾಂಕ ಖರ್ಗೆ

ಈ ಕಾರಣಕ್ಕಾಗಿಯೆ 1969ರಿಂದಲೂ ಖರ್ಗೆಯವರ ಬಾಲಂಗೋಚಿಯಂತೆ ಅವರ ಹಿಂದೆ ಮುಂದೆ ಸುತ್ತುತ್ತಿದ್ದ ಆರ್.ಬಿ.ಚವ್ಹಾಣ ಪಕ್ಷವನ್ನೆ ತೊರೆದು ಬಿಜೆಪಿಯನ್ನು ಅಪ್ಪಿಕೊಂಡಿದ್ದಾರೆ. 2004ರಲ್ಲಿ ನಡೆದ ವಿಧಾನಸಭೆಯ ಚುನಾವಣೆಯಲ್ಲಿ ಶಹಾಬಾದ ಮೀಸಲು ಮತಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಚವ್ಹಾಣ ಕಾಂಗ್ರೆಸ್ ಅಭ್ಯರ್ಥಿ ಸುನೀಲ ವಲ್ಯಾಪುರೆ ವಿರುದ್ಧ ಕೇವಲ ಐದು ನೂರು ಮತಗಳ ಅಂತರದಿಂದ ಸೋತಿದ್ದರು. ತನ್ನದೆ ಹಿಂಬಾಲಕರನ್ನುಳ್ಳ ಚವ್ಹಾಣ ಬಿಜೆಪಿ ಸೇರಿರುವುದು ಆ ಪಕ್ಷಕ್ಕೆ ಆನೆ ಬಲ ಬಂದಂತಾಗಿರುವುದು ಸುಳ್ಳಲ್ಲ.

ಜೊತೆಗೆ ಮತ್ತೊಬ್ಬ ಮಾಜಿ ಮಂತ್ರಿ ಸಿ. ಗುರುನಾಥ ಅವರು ಚಿತ್ತಾಪುರ ಮತಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಾಗಿದ್ದರು. ಅವರನ್ನು ಕಡೆಗಣಿಸಿ ಖರ್ಗೆ ತನ್ನ ಪುತ್ರ ವ್ಯಾಮೋಹ ಪ್ರದರ್ಶಿಸಿರುವುದಕ್ಕೆ ಮುನಿಸಿಕೊಂಡಿರುವ ಗುರುನಾಥ ಇವತ್ತಿಗೂ ಚುನಾವಣಾ ಅಖಾಡಕ್ಕೆ ಧುಮುಕಿಯೇ ಇಲ್ಲ. ಅರ್ಧ ಏಟು ತಿಂದ ನಾಗರಹಾವು ಬುಸುಗುಡುತ್ತ ಸಮಯಕ್ಕಾಗಿ ಕಾದು ಕುಳಿತಂತೆ ಅವರು ಎಲ್ಲೋ ಕುಳಿತು ಖರ್ಗೆ ವಿರುದ್ಧ ಹೊಂಚುಹಾಕುತ್ತಿದ್ದಾರೆ.

ನಿಜಕ್ಕೂ ಚಿತ್ತಾಪುರ ಮತಕ್ಷೇತ್ರ ಕಾಂಗ್ರೆಸ್‌ಗಳ ಸ್ವರ್ಗವೆಂದೆ ಹೇಳಬಹುದು. ಕರ್ನಾಟಕ ಏಕೀಕರಣ ನಂತರ, ಅಂದರೆ 1957 ರಿಂದಲೂ ಇಲ್ಲಿ ಹನ್ನೆರಡು ಬಾರಿ ಚುನಾವಣೆಗಳು ನಡೆದಿವೆ. ಆ ಪೈಕಿ ಒಂಭತ್ತು ಸಲ ಕಾಂಗ್ರೆಸ್ ಗೆಲುವು ಸಾಧಿಸಿದ್ದರೆ, ಕೇವಲ ಮೂರೇ ಮೂರು ಸಲ ಜನತಾ ಪರಿವಾರದ ಅಭ್ಯರ್ಥಿ ಆಯ್ಕೆಯಾಗಿದ್ದಾರೆ. ವಿಚಿತ್ರವೆಂದರೆ ಒಮ್ಮೆ ಕಾಂಗ್ರೆಸ್ ಓಟಕ್ಕೆ ಬ್ರೇಕ್ ಹಾಕಿದ್ದ ವಿಶ್ವನಾಥ ಪಾಟೀಲ ಹೆಬ್ಬಾಳ ಎಂಬ ಆಸಾಮಿ ಇದೀಗ ಕಾಂಗ್ರೆಸ್ ಪಾಳೆಯದಲ್ಲಿ ಮಿಂಚುತ್ತಿದ್ದಾನೆ.

ಮೂರು ಬಾರಿ ಇದೇ ಮತಕ್ಷೇತ್ರದಿಂದ ಗೆದ್ದು ಹ್ಯಾಟ್ರಿಕ್ ಸಾಧನೆ ಮಾಡಿದ್ದ ಬಾಬುರಾವ್ ಚಿಂಚನಸೂರ್ ಉರುಫ್ ಮುಕುಂಡಣ್ಣ ಕೂಡ ಖರ್ಗೆಯವರ ಕೃಪಾಕಟಾಕ್ಷದಿಂದ ಗುರುಮಿಠಕಲ್ ಮತಕ್ಷೇತ್ರದಿಂದ ಈಗಾಗಲೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದಾರೆ. ಅವರ ಬಲ ಬೆಂಬಲವೂ ಮಲ್ಲಿಕಾರ್ಜುನ ಖರ್ಗೆ... ಕಡೆಗೇ ಇದೆ. ಕೋಲಿ ಸಮಾಜಕ್ಕೆ ಸೇರಿರುವ ಚಿಂಚನಸೂ... ಬಾಬುರಾವ್ ಯಾವ ಕಡೆ ತನ್ನ ಚುಂಚು ತೂರಿಸುತ್ತಾನೆ... ಅದು ಗೆದ್ದಂತೆಯೆ ಎಂಬ ಪ್ರತೀತಿ ಬೇರೆ ಇದೆ. ಅಂದ... ಇಲ್ಲಿ ಕೋಲಿ ಸಮಾಜದ ಬಾಂಧವರ ಸಂಖ್ಯೆ ನಲವತ್ತೈ... ಸಾವಿರದಷ್ಟಿದೆ. ಕಳೆದ ಬಾರಿ ಬಿಜೆಪಿಯ ವಾಲ್ಮೀ... ಕಮಲುನಾಯಕನಿಗಿಂತಲೂ ಮಲ್ಲಿಕಾರ್ಜುನ ಖ... 17,456 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದ... ಗುಲಬರ್ಗಾ ಸಂಸದೀಯ ಮತಕ್ಷೇತ್ರದ ಅಭ್ಯರ್ಥಿಯಾ... ಸ್ಪರ್ಧಿಸಿದಾಗಲೂ ಚಿತ್ತಾಪುರ ಕ್ಷೇತ್ರದಿಂದ ಇದೇ ... ಸಾವಿರ ಮತಗಳನ್ನು ಪಡೆದಿದ್ದರು. ಇದೆಲ್ಲ ಗಮನಿಸಿ... ಖರ್ಗೆಯ ಪುತ್ರ ರತ್ನ ಪ್ರಿಯಾಂಕ ಖರ್ಗೆಯ ಪಟ್ಟಾಭಿಷೇ... ಅಡ್ಡಿಯೇನೂ ಇಲ್ಲ ಎನ್ನಬಹುದು.

ಆದರೂ ಪರಿಸ್ಥಿತಿ ಹಿಂದಿನಂತಿಲ್ಲ. ಏಕೆಂದರೆ ಕೋ... ಸಮಾಜದ ಮುಖಂಡ ದಿ. ಹಣಮಂತರಾವ್ ಅಲ್ಲೂ... ಅವರ ಪುತ್ರ ನಿಂಗಣ್ಣ ಅಲ್ಲೂರ ಕಾಂಗ್ರೆಸ್ ತೊರೆದು ... ಜೊತೆಗಾರರೊಂದಿಗೆ ಬಿಜೆಪಿಯನ್ನು ಸೇರಿದ್ದಾನೆ. ... ಚುನಾವಣೆ ಘೋಷಣೆಯಾಗುವ ಮುನ್ನ ಸ್ಥಳೀಯ ತಾ... ಮೂರನೇ ಅವಧಿಗೆ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವ... ನಡೆದ ಸಮಯದಲ್ಲಿ ಕಾಂಗ್ರೆಸ್ಸಿಗೆ 17 ಸದಸ್ಯರ ...




ಚನ್ನಪಟ್ಟಣ: ದಗಾ ಯೋಗಿಯ ಮೆಗಾ ಡುಮುಕಿ?


■ ರಾ. ಸೋಮನಾಥ್


...ಏನೇ ತಿಪ್ಪರಲಾಗ ಹೊಡೆದರೂ ಜನಕ್ಕೊಮ್ಮೆ ಅಸಹ್ಯ ...ವಾಯಿತೆಂದರೆ ಮತ್ತೆ ಎದ್ದೇಳುವುದು ಕಷ್ಟ. ಟಿವಿ ಕೊಟ್ಟು, ...ರೆ ಕೊಟ್ಟು, ಎಷ್ಟೇ ಬಾಡೂಟ ಹಾಕಿಸಿದರೂ ಓಟು ಹಾಕುವವನ ...ಚಾರವೇ ಬೇರೆಯಿರುತ್ತದೆ. ಅದೀಗ ಚನ್ನಪಟ್ಟಣದಲ್ಲಿ ಅಕ್ಷರಶಃ ...ವಿಸುತ್ತಿದೆ.

...ಮೆಗಾಸಿಟಿಯ 'ಮುಂಡಾವ್' ಗಿರಾಕಿ ...ಯೋಗೇಶ್ವರ್ ತಲೆ ಕಂಡರೇನೇ ಜನ ತಲೆಕೆರೆದು ...ಕ್ಕೆ ಕೈಚಾಚುತ್ತಾರೆ. ಗರಿಗರಿ ನೋಟು ಕೈಗೆ ...ದ್ದೇ ತಡ ನಾಪತ್ತೆಯಾಗುತ್ತಾರೆ. ಬಾಡೂಟಕ್ಕೆ ...ೇ ಬರುತ್ತಾರಾದರೂ ಅಲ್ಲೇ ಕಂಠಮಟ್ಟ ಕುಡಿದು 'ಏನ್ ಅವರಪ್ಪನ್ ...ಯಿಂದ ತಂದು ಕೊಡ್ತಾನೇನ್ಲಾ? ಮುಂಡಾಯಿಸಿದ ದುಡ್ಡಲ್ವಾ?' ...ಏ ತೇಗುತ್ತ ಜಾಗ ಖಾಲಿ ಮಾಡುತ್ತಾರೆ. ಮೊದಲ ಚುನಾವಣೆಯಲ್ಲಿ ..., ನಂತರ ಚಿನ್ನದ ಉಂಗುರ ಕೊಟ್ಟು ಗೆದ್ದ ಯೋಗೇಶ್ವರ್‌ಗೆ ... ನಾಲ್ಕನೇ ಚುನಾವಣೆ.

...ಸತತ ಮೂರು ಬಾರಿ ಗೆದ್ದು ಆಪರೇಷನ್ ಕಮಲಕ್ಕೆ ...ಕೊಟ್ಟು ಲೋಕಸಭಾ ಚುನಾವಣೆಗೂ ನಿಂತು ಈಗ ...ಪಿ ಅಭ್ಯರ್ಥಿಯಾಗಿ ಮತ್ತೆ ಎಮ್ಮೆಲ್ಲೆಯಾಗ್ತೀನಿ ಅಂತ ...ಪಟ್ಟಣಕ್ಕೆ ವಕ್ಕರಿಸಿರುವ ಯೋಗೇಶ್ವರ್ ಈ ಬಾರಿ 'ಕ್ಯಾಷ್ ... ಕ್ಯಾರಿ' ಸ್ಟೈಲಿನಲ್ಲಿ ಪ್ರಚಾರಕ್ಕಿಳಿದಿದ್ದಾನೆ. ಅದರರ್ಥ ...ದಾರನಿಗೇ ಡೈರೆಕ್ಟಾಗಿ ದುಡ್ಡು ಹಂಚೋದು. ಹಿಂದಾದರೆ ...ಗೊಂದು ಟೀವಿ, ಉಂಗುರ ಕೊಟ್ಟು ಬೇಕಾಬಿಟ್ಟಿ ಸೀರೆ ...ತೆ ಗೆದ್ದಿದ್ದ ಯೋಗೇಶ್ವರ್ ಈಗ ಸಾವಿರಕ್ಕಿಂತ ಕಮ್ಮಿಯ ...ಟೇ ಮುಟ್ಟುತ್ತಿಲ್ಲ. ಒಂದು ಓಟಿಗೆ ಸಾವಿರ ರೂಪಾಯಿ ...ಟು. ಮನೆಯೊಂದರಲ್ಲಿ ಹತ್ತು ಓಟಿದ್ದರೆ ಆ ಮನೆಗೆ ... ಸಾವಿರ ರೂಪಾಯಿ ಗ್ಯಾರಂಟಿ!







ಮೆಗಾಸಿಟಿ ಮೋಸ

...ಅದಕ್ಕೆಂದೇ ಐದು ಕೋಟಿ ಕ್ಯಾಷ್ ಹೊತ್ತು ಚನ್ನಪಟ್ಟಣಕ್ಕೆ ...ಸಿದ ಯೋಗೇಶ್ವರ್ ಮುಖ ಕಂಡರೆ ಸಾಕು ಜನ ...ಗೆ ಕೈಚಾಚುತ್ತಾರೆ. ಒಂದು ಮೂಲದ ಪ್ರಕಾರ ಬಿಜೆಪಿಯ ... ಫಂಡ್ ಎಂದೇ ಎರಡು ಕೋಟಿಯಷ್ಟು ದುಡ್ಡು ...ಯೋಗೇಶ್ವರ್ ಕೈಸೇರಿದೆ. ಯಾವುದೇ ಬಾರು, ವೈನ್ ಸ್ಟೋರ್, ... ಹೋಟ್ಲು ಹೊಕ್ಕರೂ ಬಿಜೆಪಿಯ ಚಿಹ್ನೆ ಹೊತ್ತ ...ಯೋಗೇಶ್ವರ್ ಕೂಪನ್ನಿನ ಮೇಲೆ ಕುಡಿದು ತಟ್ಟಾಡುತ್ತಿರುವವರ ...ಕ್ಕ ಹಿಂಡೇ ಕಣ್ಣುಕುಕ್ಕುತ್ತದೆ.

...ಇದು ಮೆಗಾಸಿಟಿಯ ಮಹಾ ವಂಚಕ ಯೋಗೇಶ್ವರ್ ಸಾಹೇಬರ ...ವಹಾ ವೈಖರಿ. 2008ರ ಮೇ ಚುನಾವಣೆಯಲ್ಲಿ ಕಾಂಗ್ರೆಸ್ಸಿನಿಂದ ... ಎಮ್ಮೆಲ್ಲೆಗಿರಿಯನ್ನು ಬಿಜೆಪಿಗೆ ಬಿಕರಿಗಿಟ್ಟ ಯೋಗೇಶ್ವರ್‌ಗೀಗ ...ನ ವರ್ಚಸಿಲ್ಲ. ಎಲ್ಲೋ ಮೆಗಾಸಿಟಿ ಹೆಸರಲ್ಲಿ ಬೆಂಗಳೂರಿನ ... ಟೋಪಿ ಹಾಕಿ ದೋಚಿದ ರೊಕ್ಕ ತಂದು ಚನ್ನಪಟ್ಟಣದ ... ಪಾಲಿಗೆ ದಾನಶೂರ ಕರ್ಣನಂತಿದ್ದ ಆತನ ನಿಜಬಣ್ಣ ಈಗ ...ಲಾಗಿದೆ. ಯೋಗೇಶ್ವರ್‌ಗೆ ಹೋಲಿಸಿದರೆ ಜೆಡಿಎಸ್ ಅಭ್ಯರ್ಥಿ ...ೆ ಮತ್ತು ಕಾಂಗ್ರೆಸ್ ಹುರಿಯಾಳು ಟೀಕೆ ಯೋಗೇಶ್ ಸಂತರೇನಲ್ಲ, ...ಯೋಗೇಶ್ವರ್‌ನಂತೆ ಟೀವಿ, ಉಂಗುರ, ಸೀರೆ, ರೊಕ್ಕ ಕೊಡುವಷ್ಟು ...ಂತರೂ ಅಲ್ಲ. ಹಾಗಂತ ಮತ್ತೆ ಯೋಗೇಶ್ವರ್‌ನನ್ನೇ ಎಮ್ಮೆಲ್ಲೆ ಮಾಡುವಷ್ಟು ತಾಳ್ಮೆಯಾಗಲಿ, ಕುತೂಹಲವಾಗಲಿ ಚನ್ನಪಟ್ಟಣದ ಜನಕ್ಕುಳಿದಿಲ್ಲ.

ಚನ್ನಪಟ್ಟಣದ ಮಟ್ಟಿಗೆ ಯೋಗಿಯ ಪಾಪದ ಕೊಡ ಯಾವತ್ತೋ ತುಂಬಿಬಿಟ್ಟಿದೆ. ರಾಮನಗರದ ಬಿಡದಿ ಸಮೀಪ ಮೆಗಾಸಿಟಿ ಮಾಡ್ತೀನಿ, ಅಗದೀ ದರಕ್ಕೆ ಸೈಟು ಕೊಡ್ತೀನಿ ಎಂದು ತಲಾ ಐವತ್ತು ಸಾವಿರದಂತೆ ದುಡ್ಡು ಕಿತ್ತು ಯೋಗೇಶ್ವರ್ ಮುಂಡಾಯಿಸಿದ್ದು ಕಮ್ಮಿಯೆಂದರೂ ಹನ್ನೆರಡು ಸಾವಿರ ಜನಕ್ಕೆ. ಈ ಪೈಕಿ ಬಹುತೇಕರೆಲ್ಲ ಚನ್ನಪಟ್ಟಣ ಮೂಲದ ಬೆಂಗಳೂರು ವಾಸಿಗಳೆ. ಇವತ್ತೋ ನಾಳೆಯೋ ಸೈಟು ಸಿಕ್ಕೇ ಸಿಗುತ್ತೆ ಎಂದು ಕಳೆದ ಮೂರು ಬಾರಿಯೂ ಓಟು ಕೊಟ್ಟುಕೊಂಡೇ ಬಂದ ಸೈಟು ವಂಚಿತರು ಮತ್ತವರ ಸಂಬಂಧಿಗಳಿಗೆ ಯೋಗೇಶ್ವರ್ ಬುದ್ಧಿ ಗೊತ್ತಾಗಿಬಿಟ್ಟಿದೆ.

ದಲಿತರಿಗೂ ದೋಖಾ

ಮೆಗಾಸಿಟಿಗೆಂದು ಖರೀದಿಸಿದ್ದ ಬಹುತೇಕ ಜಮೀನನ್ನು ಯೋಗೇಶ್ವರ್ ಈಗಾಗಲೇ ದುಬಾರಿ ರೇಟಿಗೆ ಮಾರಿ ತಿಂದಿದ್ದಾನೆ. ಕಳೆದ ಮೂರು ಚುನಾವಣೆಯಲ್ಲೂ ಟೀವಿ, ಉಂಗುರ, ಬಾಡೂಟಕ್ಕೆಂದು ಆತ ಸುರಿದದ್ದು ಮೆಗಾಸಿಟಿಯ ಬಡ ಸೈಟುದಾರರ ದುಡ್ಡೇ. ಮಿಕ್ಕಂತೆ ಅಳಿದುಳಿದ ಸೊತ್ತೆಲ್ಲ ಯೋಗಿಯ ಸಿನೆಮಾ ಶೋಕಿಯಲ್ಲಿ ಫೋಲಾಗಿದೆ. ಎಮ್ಮೆಲ್ಲೆಗಿರಿ ಎಂಬುದು ಯೋಗಿಯ ಪಾಲಿಗೆ ತನ್ನ ವಂಚನೆಯನ್ನು ಮುಚ್ಚಿಕೊಳ್ಳಲಷ್ಟೇ ಬೇಕಿತ್ತೆಂಬ 'ಪರಮಸತ್ಯ' ಚನ್ನಪಟ್ಟಣದ ಜನಕ್ಕೆ ಅರ್ಥವಾಗಿದ್ದೇ ಮೊನ್ನೆ ಆತ ಬಿಜೆಪಿಗೆ ನೆಗೆದ ಮೇಲೆ.


ಬಹುಶಃ ಯೋಗೇಶ್ವರ್ ಬಿಜೆಪಿಗೆ ತನ್ನ ಎಮ್ಮೆಲ್ಲೆಗಿರಿಯನ್ನು ಮಾರಿಕೊಳ್ಳದೇ ಹೋಗಿದ್ದರೆ ವಿನಿವಿಂಕ್ ಶಾಸ್ತ್ರಿಯಂತೆ ಖಂಡಿತ ಜೈಲುಪಾಲಾಗುತ್ತಿದ್ದ!

ಇದಕ್ಕೂ ಮುನ್ನ ಚನ್ನಪಟ್ಟಣದ ಮರ್ಯಾದಸ್ಥರು, ದಲಿತರು, ದೇವಸ್ಥಾನಗಳು, ಭಕ್ತಾದಿಗಳು, ರೈತರು, ಯಾರನ್ನೂ ಬಿಡದೆ ಯೋಗಿ ಯಾಮಾರಿಸಿದ್ದ. ತನ್ನ ಪ್ರತಿ ಚುನಾವಣಾ ಭಾಷಣದಲ್ಲಿ ಚನ್ನಪಟ್ಟಣಕ್ಕೆ ಹೇಮಾವತಿ ನೀರು ತಂದೇ ತರ್ತೀನಿ ಎಂದು ವೀರಾವೇಶದ ಡೈಲಾಗ್ ಹೊಡೆದ. ಕುನ್ನೇರಘಟ್ಟದ ಕೆರೆಯಲ್ಲಿ ಬೋಟಿಂಗ್ ಪ್ರವಾಸೋದ್ಯಮ ಶುರುಮಾಡ್ತೀನಿ ಅಂದ. ಸಾತನೂರು ಸರ್ಕಲ್ಲಿನ ರೇಷ್ಮೆ ಮಾರುಕಟ್ಟೆ ಎದುರು ಅಂಬೇಡ್ಕರ್ ಭವನ ಕಟ್ಟಿಸ್ತೀನಿ ಎಂದು ಪಾಯವನ್ನೂ ಹಾಕಿದ್ದ.

ಹೀಗೆ ಚುನಾವಣೆ ಸಮೀಪಿಸುತ್ತಿದ್ದಂತೆ ಯೋಗೇಶ್ವರ್ ಆಡಿದ ಕಪಟ ನಾಟಕವನ್ನು ಗೆದ್ದ ನಂತರ ಮರೆತೇ ಬಿಟ್ಟ. ಯಾವುದೋ ಕಾಲಕ್ಕೆ ಹಾಕಿದ ಪಾಯ ಬಿಟ್ಟರೆ ಅಂಬೇಡ್ಕರ್ ಭವನ ತಲೆ ಎತ್ತಲೇ ಇಲ್ಲ.

ಇಂಥಾ ಪೊಳ್ಳು ಭರವಸೆಗಳಷ್ಟೇ ಆಗಿದ್ದರೆ ಚನ್ನಪಟ್ಟಣಕ್ಕದು ಅಕ್ಷಮ್ಯವೇನಾಗಿರಲಿಲ್ಲ. ಆದರೆ ಯೋಗೇಶ್ವರ್ ಯಾವೊಬ್ಬ ಶಾಸಕನೂ ಮಾಡದ ತೀರ ಅಸಹ್ಯದ ಕೆಲಸಕ್ಕೆ ಕೈಯಿಟ್ಟ. ಅದು ದೇವರಿಗೇ ದೋಖಾ. ಧರ್ಮಸಿಂಗ್ ಮತ್ತು ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಕಾಲಕ್ಕೆ ಪ್ರತಿನಿತ್ಯ ಕನಿಷ್ಠವೆಂದರೂ ನೂರೈವತ್ತು ಮರಳು ಹೊತ್ತ ಲಾರಿಗಳು ಚನ್ನಪಟ್ಟಣದ ಮೂಲಕ ಹಾದುಹೋಗುತ್ತಿದ್ದವು. ಕಣ್ವಾ ನದಿಯ ಪಾತಳಿಯನ್ನೇ ಬಗೆದು ನಡೆಯುತ್ತಿದ್ದ ಮರಳು ಕಳ್ಳ ಸಾಗಾಣಿಕೆಯನ್ನು

▶▶▶12




ರಾಮನಗರ: ಮಾನ, ಬಹುಮಾನ ಲೆಕ್ಕದಲ್ಲಿ ಜೆಡಿಎಸ್

ಉಪ ಚುನಾವಣೆಯ ಕಾವು ದಿನದಿಂದ ದಿನಕ್ಕೆ ಏರುತ್ತಿದ್ದಂತೇ ದಿನಕ್ಕೊಂದು ಕಥೆ, ವದಂತಿ, ಗಾಳಿ ಸುದ್ದಿಗಳು ಹರಡುತ್ತಿವೆ. ಅವುಗಳಲ್ಲಿ ಮುಖ್ಯವಾಗಿ ಕುಮಾರಸ್ವಾಮಿ ತೆರವು ಮಾಡಿದ ರಾಮನಗರ ಅಸೆಂಬ್ಲಿ ಕ್ಷೇತ್ರದಿಂದ ಚಿತ್ರವಿಚಿತ್ರ ಕಥೆಗಳು ಹುಟ್ಟುತ್ತಿವೆ. ಕೋಮುವಾದಿ ಬಿಜೆಪಿ ಪಕ್ಷವನ್ನು ಸೋಲಿಸಲು ಕಾಂಗ್ರೆಸ್ ಮತ್ತು ಜೆಡಿಎಸ್ ಬಹಿರಂಗ ಮೈತ್ರಿಯ ಬದಲು ತೆರೆಮರೆಯಲ್ಲಿ ಮ್ಯಾಚ್‌ಫಿಕ್ಸಿಂಗ್ ಮಾಡಿಕೊಂಡಿರುವುದೇ ಗಾಳಿ ಸುದ್ದಿಗಳು ಹರಡಲು ಮುಖ್ಯ ಕಾರಣವಾಗಿದೆ. ಈಗ ರಾಮನಗರದಿಂದ ಬಂದಿರುವ ಒಂದು ಸುದ್ದಿಯ ಪ್ರಕಾರ ಅಲ್ಲಿಂದ ಕಾಂಗ್ರೆಸ್ ಅಭ್ಯರ್ಥಿ ಸಿ.ಎಂ.ಲಿಂಗಪ್ಪ ಗೆಲ್ಲುವುದು ಶತಃಸಿದ್ಧ ಎಂಬುದು.


ಇದರ ಹಿಂದಿನ ತರ್ಕಗಳೂ ಹೀಗಿವೆ: ಒಕ್ಕಲಿಗರೇ ಹೆಚ್ಚು ಸಂಖ್ಯೆಯಲ್ಲಿರುವ ರಾಮನಗರ ಕ್ಷೇತ್ರದಲ್ಲಿ ಕುಮಾರಸ್ವಾಮಿಯವರ ಅಭ್ಯರ್ಥಿ ರಾಜು ಒಕ್ಕಲಿಗರ ಜನಾಂಗದಲ್ಲಿ ಪ್ರಭಾವಿ ವ್ಯಕ್ತಿಯಲ್ಲ. ರಾಜುಗೆ ಹೋಲಿಸಿದರೆ ಒಕ್ಕಲಿಗ ಜನಾಂಗ ಇಷ್ಟಪಡುವುದು ಲಿಂಗಪ್ಪ ಅವರನ್ನೇ. ಮತ್ತೊಂದು ಮುಖ್ಯ ವಿಷಯವೆಂದರೆ, ಮೊನ್ನೆಯ ಲೋಕಸಭಾ ಚುನಾವಣೆಯಲ್ಲಿ ಸಿ.ಎಂ. ಲಿಂಗಪ್ಪನವರು ಕಾಂಗ್ರೆಸ್ ಅಭ್ಯರ್ಥಿಯಾದ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಮಗಳ ಬದಲಿಗೆ ಕುಮಾರಸ್ವಾಮಿಯವರಿಗೆ ತೆರೆಮರೆಯಲ್ಲಿ ಸಂಪೂರ್ಣವಾದ ಬೆಂಬಲವನ್ನು ಘೋಷಿಸಿದ್ದರು. ಹೀಗಾಗಿ ಈಗ ಕುಮಾರಣ್ಣನಿಗೂ ಲಿಂಗಪ್ಪನವರ ಬಗ್ಗೆ ಸಾಫ್ಟ್ ಕಾರ್ನರ್ ಇದೆ.

ಕುಮಾರಸ್ವಾಮಿ ತುಂಬಾ ಜಾಣ್ಮೆಯಿಂದ ರಾಮನಗರ ಕ್ಷೇತ್ರಕ್ಕೆ ರಾಜುವನ್ನು ಅಭ್ಯರ್ಥಿಯನ್ನಾಗಿಸಿದ್ದಾರೆ ಎಂಬ ಮಾತು ಜೆಡಿಎಸ್ ವಲಯದಲ್ಲಿ ಕೇಳಿಬರುತ್ತಿದೆ. ವಾಸ್ತವವಾಗಿ ಇಲ್ಲಿಂದ ದೇವೇಗೌಡರ ಕುಟುಂಬದ ಸದಸ್ಯರೊಬ್ಬರು ಸ್ಪರ್ಧಿಯಾಗಿಸುವ ಸುದ್ದಿ ಆರಂಭದಲ್ಲಿ ಕೇಳಿಬಂದಿತ್ತು. ಆಗ ಜೆಡಿಎಸ್ ಕಾರ್ಯಕರ್ತರಲ್ಲಿ ಸ್ವಲ್ಪ ಅಸಮಾಧಾನ ಮೂಡಿತ್ತು. "ಈ ಪಕ್ಷ ಅಪ್ಪ-ಮಕ್ಕಳ ಪಕ್ಷವಾಗಿಯೇ ಬೆಳೆಯುತ್ತಿದೆ; ಅವರುಗಳನ್ನು ಶಾಸಕರನ್ನಾಗಿ ಮಾಡುವುದೇ ನಮ್ಮ ಕೆಲಸವಾಗಿದೆ'' ಎಂದೆಲ್ಲಾ ಕಾರ್ಯಕರ್ತರು ಗುಸುಗುಸು ಮಾತನಾಡಲಾರಂಭಿಸಿದರು. ಇದನ್ನು ಗಮನಿಸಿದ ಕುಮಾರಸ್ವಾಮಿ ತನ್ನ ಬಲಗೈ ಬಂಟ ರಾಜು ಅವರನ್ನು ಅಭ್ಯರ್ಥಿಯಾಗಿಸಿದರು.



ವಾಸ್ತವವಾಗಿ ರಾಮನಗರದ ಜೆಡಿಎಸ್ ಅಭ್ಯರ್ಥಿಯ ಸೋಲು-ಗೆಲುವು ಯಾವುದೇ ರೀತಿಯಲ್ಲಿ ಸರ್ಕಾರದ ಮೇಲೆ ಪರಿಣಾಮ ಅಥವಾ ದುಷ್ಪರಿಣಾಮ ಬೀರುವುದಿಲ್ಲವಾದ್ದರಿಂದ ತಮ್ಮ ಕುಟುಂಬದ ಸದಸ್ಯರ ಬದಲು ರಾಜುವನ್ನು ಅಭ್ಯರ್ಥಿಯನ್ನಾಗಿಸಿದ್ದಾರೆ ಕುಮಾರಸ್ವಾಮಿ ಎಂದು ಅವರನ್ನು ಹತ್ತಿರದಿಂದ ಬಲ್ಲವರು ಹೇಳುತ್ತಿದ್ದಾರೆ. ಅಷ್ಟೇ ಅಲ್ಲ, ಒಂದು ವೇಳೆ ರಾಜು ಸೋತರೆ ಅದರಿಂದ ಗೌಡರಿಗೆ ಯಾವುದೇ ತೊಂದರೆಯಾಗುವುದಿಲ್ಲ, ಬದಲಿಗೆ ಅವರಿಗೆ ಅಮೃತ ಕುಡಿದಂತಾಗಬಹುದು. "ನೋಡಿ ನಮ್ಮ ಕುಟುಂಬ ಸದಸ್ಯರನ್ನು ಚುನಾವಣೆಗೆ ನಿಲ್ಲಿಸಿದರೆ ಅಪ್ಪ-ಮಗನ ಪಕ್ಷ ಅನ್ನುತ್ತೀರಿ. ಈಗ ಈ ಸೋಲಿಗೆ ನೀವು ಏನನ್ನುತ್ತೀರಾ?'' ಎಂದು ಕಾರ್ಯಕರ್ತರಿಗೆ ರೋಪು ಹೊಡೆಯುವ ಅವಕಾಶ ಗೌಡರಿಗೆ ದೊರೆಯುತ್ತದೆ. ಇದರ ಫಲವಾಗಿ ಮುಂದಿನ ಅಸೆಂಬ್ಲಿ ಚುನಾವಣೆಯಲ್ಲಿ ರಾಮನಗರ ಕ್ಷೇತ್ರದಿಂದ ಮತ್ತೆ ತಮ್ಮ ಕುಟುಂಬದ ಸದಸ್ಯರನ್ನು ಸ್ಪರ್ಧೆಗೆ ಇಳಿಸಲು ಗೌಡರಿಗೆ ಸುಲಭವಾಗುತ್ತದೆ ಎಂಬುದು ಒಂದು ಲೆಕ್ಕಾಚಾರ.

ಈ ಕಾರಣದಿಂದಲೇ ರಾಮನಗರ ಕ್ಷೇತ್ರಕ್ಕೆ ಗೌಡರು ಅಷ್ಟೊಂದು ಹಣವನ್ನು ಸುರಿಯುತ್ತಿಲ್ಲ. ಮಾತ್ರವಲ್ಲ, ಅದರ ಬಗ್ಗೆ ಜಾಸ್ತಿ ತಲೆಕೆಡಿಸಿಕೊಂಡಿಲ್ಲ. ಜೆಡಿಎಸ್ ಅಭ್ಯರ್ಥಿ ರಾಜು ಹಣಕ್ಕಾಗಿ ಸಂಪೂರ್ಣವಾಗಿ ಕುಮಾರಸ್ವಾಮಿಯವರನ್ನೇ ನಂಬಿಕೊಂಡಿರುವುದರಿಂದ ಈಗ ಹಣವಿಲ್ಲದ ಕಾರಣ ಅವರೂ ಕಂಗಾಲಾಗಿದ್ದಾರೆ. ಹೀಗಾಗಿ ಜೆಡಿಎಸ್ ಕಾರ್ಯಕರ್ತರಲ್ಲಿ ಅಂತಹ ಉತ್ಸಾಹ ಕಾಣಿಸುತ್ತಿಲ್ಲ. ಇದೆಲ್ಲ ನಿಜವೇ ಆದಲ್ಲಿ ರಾಮನಗರ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಲಿಂಗಪ್ಪ ಗೆದ್ದು ಬಂದರೂ ಆಶ್ಚರ್ಯವಿಲ್ಲ.



ವಾಸ್ತವವಾಗಿ ಕುಮಾರಸ್ವಾಮಿ ಮತ್ತು ದೇವೇಗೌಡರ ಕಣ್ಣು ರಾಮನಗರದ ಬದಲು ಚನ್ನಪಟ್ಟಣದ ಮೇಲಿದೆ. ಯಾವುದೇ ಕಾರಣಕ್ಕೂ ಚನ್ನಪಟ್ಟಣದಿಂದ ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿ ಆಯ್ಕೆಯಾಗಬಾರದು ಎಂದು ಗೌಡರು ಪಣತೊಟ್ಟಂತಿದೆ. ಈ ಕಾರಣಕ್ಕಾಗಿಯೇ ಅವರು ಚನ್ನಪಟ್ಟಣದಲ್ಲಿ ಹೆಚ್ಚು ಸಮಯವನ್ನು ಪ್ರಚಾರಕ್ಕಾಗಿ ಮೀಸಲಿಟ್ಟಿದ್ದಾರೆ.

ಚನ್ನಪಟ್ಟಣದ ಶಾಸಕ ಸ್ಥಾನವನ್ನು ಕಸಿದುಕೊಳ್ಳಲು ಗೌಡರು ಪ್ರಯತ್ನಿಸುವುದರ ಹಿಂದೆ ದೊಡ್ಡ ರಾಜಕೀಯ ತಂತ್ರಗಾರಿಕೆಯೇ ಇದೆ. ಅದೇನೆಂದರೆ ಚನ್ನಪಟ್ಟಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿನ ಜವಾಬ್ದಾರಿಯನ್ನು ಕಾಂಗ್ರೆಸ್ ಪಕ್ಷದ ಕಾರ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್‌ಗೆ ನೀಡಲಾಗಿದೆ. ಆದ್ದರಿಂದ ಇಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸುವ ಮುಖಾಂತರ ಡಿಕೆಯ ಬೆನ್ನು ಬಲವನ್ನು ಮುರಿದಂತಾಗುತ್ತದೆ. ಆ ಮೂಲಕ ಕಾಂಗ್ರೆಸ್ಸಿನಲ್ಲಿ ಡಿಕೆಯನ್ನು ನಿಷ್ಕ್ರಿಯ ಮಾಡಿ ಅವರ ರಾಜಕೀಯ ಭವಿಷ್ಯಕ್ಕೆ ಅಡ್ಡಗಾಲು ಹಾಕುವುದೇ ಗೌಡರ ಹುನ್ನಾರ. ಮತ್ತೊಂದೆಡೆ 'ಆಪರೇಷನ್ ಕಮಲ'ದ ಮುಖಾಂತರ ಬಿಜೆಪಿ ಸೇರಿದ ಮೆಗಾಸಿಟಿ ಯೋಗೇಶ್ವರ್ ಸೋಲು ವೈಯಕ್ತಿಕವಾಗಿ ಯಡಿಯೂರಪ್ಪನವರಿಗೆ ಮುಖಭಂಗವಾಗುತ್ತದೆ ಎಂಬ ಅಂಶವನ್ನೂ ದೇವೇಗೌಡರು ಗಂಭೀರವಾಗಿ ಪರಿಗಣಿಸಿದ್ದಾರೆ.

ತಮ್ಮ ರಾಜಕೀಯ ವೈರಿಗಳಾದ ಡಿಕೆಶಿ ಮತ್ತು ಯಡ್ಡಿಯನ್ನು ಏಕಕಾಲದಲ್ಲಿ ಅವಮಾನ ಮಾಡುವ ಅವಕಾಶ ಚನ್ನಪಟ್ಟಣದಲ್ಲಿ ಮಾತ್ರ ಸಾಧ್ಯವಾಗಿರುವುದರಿಂದ ರಾಮನಗರದ ಬದಲು ಗೌಡರು ಚನ್ನಪಟ್ಟಣದಲ್ಲಿ ಬಿರುಸಿನ ಪ್ರಚಾರ ನಡೆಸಿದ್ದಾರೆ. ಹೀಗಾಗಿ ರಾಮನಗರದಲ್ಲಿ 'ಮಾನ' ಹೋದರೂ ಚನ್ನಪಟ್ಟಣದಲ್ಲಿ 'ಬಹುಮಾನ' ಗಿಟ್ಟಿಸಲು ಗೌಡರು ರಾಜಕೀಯ ತಂತ್ರಗಾರಿಕೆಯನ್ನು ಹೆಣೆದಿದ್ದಾರೆ.

● ಸದಾಶಿವ ಶೆಣೈ

...ಮತ ಇದ್ದರೂ ಕಾಂಗ್ರೆಸ್ ಸದಸ್ಯ ಮತ್ತು ಕೋಲಿ ಸಮಾಜದ ...ಂಡ ಶರಬಣ್ಣ ಸಂಗಾವಿ ಅಧ್ಯಕ್ಷ ಸ್ಥಾನದಿಂದ ವಂಚಿತನಾಗಿದ್ದಾನೆ. ...ಘಟನೆಯಿಂದ ಇದೀ ಅಂಬಿಗರ ಚೌಡಯ್ಯನ ಸಮಾಜ ...ಮಾನಗೊಂಡಂತಾಗಿದೆ ಎಂದು ಆ ಜನಾಂಗ ಭಾವಿಸಿದೆ. ಈ ...ಯನ್ನು ಅವರು ಬಹಿರಂಗವಾಗಿಯೆ ಹೊರಹಾಕಿದ್ದಾರೆ. ಭೀಮನಹಳ್ಳಿ ... ಪಂಚಾಯತಿಯ ಮಾಜಿ ಅಧ್ಯಕ್ಷ ಬಸವರಾಜ ...ಕೋ ಅವರ ಮೇಲೆ ನಡೆದ ಹಲ್ಲೆ ಕೂಡ ದಿನೆ ದಿನೇ ...ಗೆ ಗ್ರಾಸವಾಗಿ ಕಾಂಗ್ರೆಸ್‌ಗೆ ಕೊಡಲಿ ಪೆಟ್ಟು ನೀಡುತ್ತಿದೆ. ...ಟಕದ ಎಲ್ಲಾ ಕಡೆ ನಡೆಸಿದಂತೆ ಇಲ್ಲೂ ಕೂಡ ...ಷನ್ ಕಮಲ ನಡೆದು ಹಲವಾರು ಜನ ಬಿಜೆಪಿಯನ್ನು ...ೊಂಡಿದ್ದಾರೆ. ಕಳೆದ ಸಲ ಚುನಾವಣೆ ನಡೆದಾಗ ...ಕಾರ್ಜುನ ಖರ್ಗೆ ಕರ್ನಾಟಕದ ಮುಖ್ಯಮಂತ್ರಿಯೂ ...ಗಬಹುದು ಎಂಬ ಕನಸುಗಳಿದ್ದವು. ಈಗ ಆ ಕನಸುಗಳಿಲ್ಲ, ...ಕಾರ್ಜುನ ಖರ್ಗೆಗೆ ಕೊಟ್ಟಷ್ಟು ಸದರನ್ನು ಅವರ ... ಪ್ರಿಯಾಂಕಗೆ ಕೊಡಲು ಸಾಧ್ಯವೂ ಆಗುವುದಿಲ್ಲ.

...ಮುಖ್ಯಮಂತ್ರಿ ಯಡಿಯೂರಪ್ಪ ಕೂಡ ಈ ಬಾರಿ ಚಿತ್ತಾಪುರ ...ಂದ ತಮ್ಮ ಪಕ್ಷದ ಅಭ್ಯರ್ಥಿಯ ಗೆಲುವು ಸಾಧಿಸಬೇಕೆಂದು ...ಮೊದಲೆ ಸ್ಕೆಚ್ ಹಾಕಿಕೊಂಡು ಸ್ಥಳೀಯ ನಾಗಾಯಲ್ಲಾಪ... ...ಸ್ವಾಮಿ ಚಂಗೋಳ ದ್ವಾರಕ್ಕೆ ಈಗಾಗಲೇ ಹಣ ಬಿಡುಗಡೆ ಮಾಡಿದ್ದಾರೆ. ...ಸ್ವಾಮಿ, ಮಹಾಸ್ವಾಮಿಗಳೆಂಬುವರಿಗೂ ಶಾಲು ಹೊದಿಸಿ ಸನ್ಮಾನ ಮಾಡಿ ತಮ್ಮ ಬಿಜೆಪಿಯ ಬುಟ್ಟಿಗೆ ಹಾಕಿಕೊಂಡಾಗಿದೆ. ಚಿತ್ತಾಪುರದ ಜಿ.ಪಂ. ವಿಭಾಗದ ಎ.ಇ.ಇ. ರೇವಣಸಿದ್ದಪ್ಪ ಇದೀಗ ತಾಲ್ಲೂಕು ಪಂಚಾಯತಿಯ ಪ್ರಭಾರಿ ಮುಖ್ಯಾಧಿಕಾರಿ. ಈತ ಖರ್ಗೆಯವರ ದೂರದ ರಕ್ತ ಸಂಬಂಧಿ. ಪಿ.ಎಸ್.ಐ. ಗಿರೀಶ್ ರೋಡಕರ್ ಅವರು ತೀನಬೋ ಹಲ್ಲೆ ಪ್ರಕರಣದ ಸಂದರ್ಭದಲ್ಲಿ ನಿಷ್ಪಕ್ಷಪಾತ ತೋರಿಸಿದ್ದಾರೆಂಬುದು ಸತ್ಯ. ಆಹಾರ ನಿರೀಕ್ಷಕ ಮಾರೆಪ್ಪ ಸಮಾಜ ಕಲ್ಯಾಣ ಇಲಾಖೆಯ ರಾಜಣ್ಣ ಇವರೆಲ್ಲ ಕಾಂಗ್ರೆಸ್ ಪಕ್ಷದ ಖರ್ಗೆಯವರೊಂದಿಗೆ ಅತ್ಯಂತ ನಿಕಟ ಸಂಬಂಧ ಇಟ್ಟುಕೊಂಡವರು ಎಂದು ಬಿಜೆಪಿಯವರು ಒಂದೇ ಸಮ ಗುಲ್ಲೆಬ್ಬಿಸುತ್ತಿದ್ದಾರೆ.



ಇದೆಲ್ಲ ವರ್ಕ ಔಟ್ ಆದರೆ, ಕಳೆದ ವಿಧಾನಸಭೆಯ ಚುನಾವಣೆಯಲ್ಲಿ 17 ಸಾವಿರ ಮತಗಳ ಅಂತರದಿಂದ ಚಿತ್ತಾಪುರ ಮತಕ್ಷೇತ್ರದಿಂದ ಗೆದ್ದಿದ್ದ ಖರ್ಗೆಯ ಓಟ್ ಬ್ಯಾಂಕ್‌ಗೆ ಕತ್ತರಿ ಬಿದ್ದರೆ, ಜೆಡಿಎಸ್‌ನ ಬಸವರಾಜ ಬೆಣ್ಣೂರ್ ಹೆಚ್ಚು ಮತಗಳನ್ನು ಪಡೆದುಕೊಂಡರೆ, ನಾಯಕ ಜನಾಂಗದವರೆಲ್ಲ ಸಾರಾಸಗಟಾಗಿ ಈ ಬಾರಿ ವಾಲ್ಮೀಕಿ ಕಮಲು ನಾಯಕನೆ ತಮ್ಮ ನಾಯಕ ಎಂದು ಆಯ್ಕೆ ಮಾಡಿಕೊಂಡರೆ ಪ್ರಿಯಾಂಕ ಖರ್ಗೆಗಿಂತ ಮಲ್ಲಿಕಾರ್ಜುನ ಖರ್ಗೆಗೆ ಮುಖಭಂಗವಾಗುವುದರಲ್ಲಿ ಅನುಮಾನವಿಲ್ಲ ಎನಿಸುತ್ತದೆ.

● ವಿಶ್ವಾರಾಧ್ಯ ಸತ್ಯಂಪೇಟೆ

KFD - ಬ್ಯಾನ್ ಬೆದರಿಕೆ

ಮುಸ್ಲಿಮರ ಸಂಘಟನೆಯಾದ ಕರ್ನಾಟಕ ಫೋರಂ ಫಾರ್ ಡಿಗ್ನಿಟಿ ವಿರುದ್ಧ ರಾಜ್ಯ ಬಿಜೆಪಿ ಸರ್ಕಾರ ನಿಷೇದಾಸ್ತ್ರ ಬಳಸುವ ಸಾಧ್ಯತೆ ಕಾಣಿಸುತ್ತಿದೆ. ಈ ಹಿಂದೆ ಕರ್ನಾಟಕ ಫೋರಂ ಫಾರ್ ಡಿಗ್ನಿಟಿ ಎಂದಿದ್ದ ಈ ಸಂಘಟನೆ ಈಗ ಪಾಪುಲರ್ ಫ್ರಂಟ್ ಆಫ್ ಇಂಡಿಯಾದ (PFI) ಕರ್ನಾಟಕ ಶಾಖೆಯಾಗಿ ಬದಲಾಗಿದೆ. ಈ PFI ಒಂದು ಅಖಿಲ ಭಾರತ ಮಟ್ಟದ ಸಂಘಟನೆ. ಜಮಾತ್, ಮುಸ್ಲಿಂ ಲೀಗ್ ಇತ್ಯಾದಿಗಳಿಗೆ ಹೋಲಿಸಿದರೆ PFI ಬಲಿಷ್ಠ ಗುಂಪು ಮಾತ್ರವಲ್ಲ ಅದು ತನ್ನ ನಿಲುವು, ಚಟುವಟಿಕೆ ಧೋರಣೆಗಳಲ್ಲೂ ವಿಶಿಷ್ಟವಾಗಿದೆ. ಬಹಳ ಮುಖ್ಯವಾಗಿ ಮುಸ್ಲಿಮರೊಂದಿಗೆ ಇನ್ನಿತರ ದಮನಿತ ಹಿಂದುಳಿದ ವರ್ಗಗಳ ಪರವಾಗಿಯೂ ದನಿ ಎತ್ತುವ ಪಾಪುಲರ್ ಫ್ರಂಟ್ ಇನ್ನಿತರ ಮುಸ್ಲಿಂ ಧರ್ಮನಿಷ್ಠ ಗುಂಪುಗಳಿಗಿಂತ ಭಿನ್ನವಾಗಿದೆ.


ಬಹುಶಃ ಬಿಜೆಪಿ ಧರ್ಮಾಂಧರ ಗುಂಪಿಗೆ ಚಟಪಟಿಕೆಯಾಗುತ್ತಿರುವುದು ಈ ಕಾರಣಕ್ಕೇ ಇರಬಹುದು.

ತಾನು ಕಳ್ಳ ಪರರ ನಂಬ

ಇತ್ತೀಚೆಗೆ ಮೈಸೂರಿನಲ್ಲಿ ಸಂಘ ಪರಿವಾರದವರ ಚಿತಾವಣೆಯಿಂದ ಸ್ಫೋಟಗೊಂಡ ಕೋಮು ಗಲಭೆಯ ನಂತರ ಬಿಜೆಪಿಗಳು KFD ಯನ್ನು ಬ್ಯಾನ್ ಮಾಡುವ ಮಾತಾಡುತ್ತಿದ್ದಾರೆ. ಆದರೆ ಆಶ್ಚರ್ಯದ ವಿಚಾರ ಏನೆಂದರೆ ಇವತ್ತಿನವರೆಗೂ KFD ವಿರುದ್ಧ ಯಾವುದೇ ಸಮಾಜಘಾತುಕ ಚಟುವಟಿಕೆ ನಡೆಸಿರುವ, ಉಗ್ರಗಾಮಿ ಲಿಂಕ್‌ಗಳಿರುವ ಸಾಕ್ಷ್ಯ ದೊರೆತಿಲ್ಲ. ಅದರ ಬದಲಾಗಿ ಸಂಘ ಪರಿವಾರದ ಅಂಗ ಸಂಸ್ಥೆಗಳಾಗಿರುವ ಭಜರಂಗ ದಳ, ಶ್ರೀರಾಮ ಸೇನೆ, ಹಿಂದೂ ಜಾಗರಣ ವೇದಿಕೆಗಳ ಕಾರ್ಯಕರ್ತರು ಬಾಂಬ್ ಸ್ಫೋಟ, ದರೋಡೆ, ಸೆಕ್ಸ್ ಸಿಡಿ ಹಗರಣ, ಕೊಲೆ ಯತ್ನ, ಪಬ್ ದಾಳಿಗಳಂತಹ ಕಾನೂನುಬಾಹಿರ ಕೆಲಸ ಮಾಡಿ ಸಿಕ್ಕಿಬಿದ್ದಿದ್ದಾರೆ.

ಗೃಹಮಂತ್ರಿ ಆಚಾರ್ಯಗೆ ಹಾಗೂ ರಾಜ್ಯ ಬಿಜೆಪಿ ನಾಯಕರಿಗೆ ಇದರ ಬಗ್ಗೆ ಮಾತನಾಡಲು ಪುರುಸೊತ್ತಾಗುತ್ತಿಲ್ಲ. ಇವರಿಗೆ ಭಜರಂಗ ದಳ, ಶ್ರೀರಾಮ ಸೇನೆಯನ್ನು ಬ್ಯಾನ್ ಮಾಡಬೇಕೆಂದು ಅನಿಸುತ್ತಿಲ್ಲ. ಹೌಸಿಂಗ್ ಬೋರ್ಡ್ ಭೂ ಹಗರಣದಲ್ಲಿ ನೂರಾರು ಕೋಟಿ ರೂಪಾಯಿ ನುಂಗಿರುವ ದುಷ್ಟ ಕೃಷ್ಣಯ್ಯ ಶೆಟ್ಟಿ ಸರ್ಕಾರದ ಹತ್ತಿರ ಸುಳಿಯದಂತೆ ನಿಷೇದ ವಿಧಿಸಬೇಕೆಂದು ಅನ್ನಿಸಿಯೇ ಇಲ್ಲ. ದಿನಬೆಳಗಾದರೆ ನೂರಾರು ಪೊಲೀಸು ಹಾಗೂ ಅಧಿಕಾರಿಗಳನ್ನು ವರ್ಗಾ ಮಾಡಿ ಹಣ ದೋಚುತ್ತಿರುವ ಯಡ್ಡಿ ಮಗ ವಿಜಯೇಂದ್ರನಿಗೆ ನಿರ್ಬಂಧ ವಿಧಿಸಬೇಕೆಂದು ಹೊಳೆಯುವುದಿಲ್ಲ. ಇದೆಲ್ಲದರ ಬದಲಾಗಿ ಮುಸ್ಲಿಮರನ್ನು ಸಂಘಟಿಸುತ್ತಿರುವ KFD ಮೇಲೆ ಇವರ ಕಾಗೆದೃಷ್ಟಿ ಬಿದ್ದಿದೆ.

2001 ರಲ್ಲಿ KFD ಶುರುವಾಗುವಷ್ಟರಲ್ಲಿ ಬ್ರಾಹ್ಮಣಶಾಹಿ ಹಿಂದೂ ಗುಂಪುಗಳ ದಾಂಧಲೆ



ಮಿತಿಮೀರಿ ಹಬ್ಬಿತ್ತು, ಎಸ್.ಎಂ. ಕೃಷ್ಣರ ಕಾಂಗ್ರೆಸ್ ಸರ್ಕಾರವೇ ಮೃದು ಹಿಂದೂತ್ವವಾದಿ ಧೋರಣೆ ಹೊಂದಿತ್ತು. ನಿರ್ದಿಷ್ಟವಾಗಿ ಕರಾವಳಿ ಪ್ರದೇಶದಲ್ಲಿ ಮುಸ್ಲಿಮರ ಶಿಕಾರಿ ನಡೆಸುತ್ತಿದ್ದ ಬಿಜೆಪಿಗೆ ಅಂತ ಪ್ರತಿರೋಧ ಎದುರಾಗುತ್ತಿರಲಿಲ್ಲ. ಆದರೆ ಯಾವಾಗ KFD ಹುಟ್ಟಿಕೊಂಡು ಮಿಂಚಿನ ವೇಗದಲ್ಲಿ ರಾಜ್ಯಾದ್ಯಂತ ಹಬ್ಬಿತೊ ಚಡ್ಡಿಗಳಿಗೆ ಕಸಿವಿಸಿ ಶುರುವಾಯಿತು. ಅಲ್ಲಿಯವರೆಗೂ ಕೋಮುವಾದಿಗಳ ವಿರುದ್ಧ ಹೋರಾಟ ನಡೆಸಿಕೊಂಡು ಬರುತ್ತಿದ್ದ ಸೆಕುಲರ್‌ವಾದಿಗಳನ್ನು ನಕ್ಸಲ್ ಬೆಂಬಲಿಗರೆಂದು ಸುಳ್ಳೇ ಆರೋಪಿಸಿ ದಮನಿಸುವ ಪ್ರಯತ್ನ ನಡೆಸುತ್ತಿದ್ದ ಹಿಂದೂತ್ವವಾದಗಳಿಗೆ ಮುಸ್ಲಿಮರ ಕಡೆಯಿಂದಲೂ ಸಂಘಟಿತ ಪ್ರತಿರೋಧ ಆರಂಭವಾಗಿದ್ದು ಗಾಬರಿ ಉಂಟು ಮಾಡಿತು. ಕರಾವಳಿಯ ಕೆಲವೆಡೆ ಮುಸ್ಲಿಂ ಯುವಕರು ಭಜರಂಗಿಗಳಿಗೆ ತಿರುಗಿಸಿ ಒದೆ ಕೊಟ್ಟ ಘಟನೆಗಳೂ ನಡೆದವು.

ಕಳೆದ ಐದು ವರ್ಷಗಳಲ್ಲಿ ಕರ್ನಾಟಕದಲ್ಲಿ ಸಾಮಾಜಿಕ ಶಾಂತಿ ಕದಡುವ ಘಟನೆಗಳು ಏನೆಲ್ಲಾ ನಡೆದಿವೆಯೋ ಅವುಗಳಲ್ಲಿ ಸಂಘ ಪರಿವಾದಿಗಳ ಕೈವಾಡವೇ ಎದ್ದು ಕಾಣುತ್ತಿದೆ. ಹುಬ್ಬಳ್ಳಿ ಕೋರ್ಟ್‌ನಲ್ಲಿ ಬಾಂಬ್ ಸ್ಫೋಟಿಸಿದವರು KFD ಯವರಾ ಇಲ್ಲಾ ಭಜರಂಗಿಗಳಾ? ಬೆಂಗಳೂರಿನ ಜೆಜೆನಗರದ ಮಸೀದಿಯೊಳಗೆ ಹಂದಿ ತಲೆ ಎಸೆದು ಸಿಕ್ಕಿಬಿದ್ದವರ್ಯಾರು? ಮಹಾರಾಷ್ಟ್ರದ ಮಾಲೇಗಾಂವ್ ಬಾಂಬ್ ಸ್ಫೋಟ ಘಟನೆಯ ಆರೋಪಿ ಪುರೋಹಿತ್ ಜೊತೆ ಲಿಂಕ್ ಇರುವ ಆರೋಪ ಭಜರಂಗಿ ಮುತಾಲಿಕನ ಮೇಲಿದೆಯಾ ಅಥವಾ KFD ಮೇಲಿದೆಯಾ?


ತೀರಾ ಇತ್ತೀಚೆಗೆ ಮಂಗಳೂರಿನ ಪಬ್ ಮೇಲೆ ದಾಳಿ ನಡೆಸಿ ಸಿಕ್ಕುಬಿದ್ದವರು ಹಿಂದೂ ಮತಾಂಧರೆ ಅಲ್ಲವೆ?

ಕರ್ನಾಟಕದಲ್ಲಿ ಶಾಂತಿ ಹಾಗೂ ಕಾನೂನು ಸುವ್ಯವಸ್ಥೆಯನ್ನು ನಿತ್ಯ ಕದಡುತ್ತಿರುವ ಸಮಾಜ ಕಂಟಕರು ಹೀಗೆ ಕಣ್ಣೆದಿರೆ ಓಡಾಡಿಕೊಂಡಿದ್ದರೂ ಅವರನ್ನು ಕಂಟ್ರೋಲಿಗೆ ತರದೆ KFD ಮೇಲೆ ಗೂಬೆ ಕೂರಿಸುತ್ತಿರುವ ಯಡ್ಡಿ ಸರ್ಕಾರದ ದುರುದ್ದೇಶ ಸ್ಪಷ್ಟವಾಗಿದೆ. ಅದು, ಮುಸ್ಲಿಮರು ಸಂಘಟಿತರಾಗಕೂಡದು, ಸಂಘ ಪರಿವಾರದ ದಾಳಿ, ದೌಜನ್ಯಗಳ ವಿರುದ್ಧ ಚಕಾರ ಎತ್ತಬಾರದು ಬಹಳ ಮುಖ್ಯವಾಗಿ ಸೆಕ್ಯುಲರ್‌ವಾದಿಗಳೊಂದಿಗೆ ಹಾಗೂ ಹಿಂದೂ ಪುರೋಹಿತ ಶಾಹಿಗಳಿಂದ ದಮನಕ್ಕೊಳಗಾಗುತ್ತಿರುವ ಹಿಂದುಳಿದ ವರ್ಗಗಳೊಂದಿಗೆ ಪ್ರಗತಿಪರ ಮುಸ್ಲಿಮರ ಐಕ್ಯತೆ ಏರ್ಪಡಬಾರದು. ಇವು ಬಿಜೆಪಿಗಳ ಹಿಡನ್ ಅಜೆಂಡಾ.

ಮೈಸೂರು ಗಲಭೆಗೆ ಮೂಲ ಕಾರಣ ಯಾರೆಂಬ ಸತ್ಯ ತಿಳಿದುಕೊಳ್ಳುವ ಬದಲಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಗೃಹಮಂತ್ರಿ ಆಚಾರ್ಯ KFD ಬ್ಯಾನ್ ಬಗ್ಗೆ ಮಾತಾಡುತ್ತಿದ್ದಾರೆ. ಇದಕ್ಕೂ ಮುನ್ನ ಫೆಬ್ರವರಿಯಲ್ಲೇ ರಾಜ್ಯ ಬಿಜೆಪಿ ಅಧ್ಯಕ್ಷ ಸದಾನಂದ ಗೌಡ ಸಹ KFD ನಿಷೇಧಿಸಬೇಕೆಂದು ಹೇಳಿಕೆ ನೀಡಿದ್ದರು.

ಇಲ್ಲಿ ಒಂದು ವಿಚಾರ ಸ್ಪಷ್ಟವಾಗಿ ಹೇಳಬೇಕು. ಒಂದು ವೇಳೆ KFD ಯಾಗಲೀ ಅಥವಾ ಅದರ ಕಾರ್ಯಕರ್ತರಾಗಲಿ ಕಾನೂನು ಉಲ್ಲಂಘಿಸಿದರೆ ಅಂಥವರ ವಿರುದ್ಧ ಕ್ರಮ ತೆಗೆದುಕೊಳ್ಳಬಾರದೆಂದು ಯಾರೂ ಹೇಳಲಾರರು. ಆದರೆ ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬ್ಯಾನ್ ಅಥವಾ ನಿಷೇಧ ಎಂಬುದೇ ಅನಾರೋಗ್ಯಕರ. ಇಷ್ಟಕ್ಕೂ

'ಬ್ಯಾನ್' ಅಸಾಧ್ಯ
PFI ನಾಯಕ ಶರೀಫ್ ಸವಾಲು




KFD ಮೇಲಿನ ನಿಷೇಧದ ಪ್ರಸ್ತಾಪದ ಬಗ್ಗೆ ಪಾಪ್ಯುಲರ್ ಫ್ರಂಟ್‌ನ ಕರ್ನಾಟಕ ನಾಯಕ ಶರೀಫ್ ಹೇಳಿದ್ದಿಷ್ಟು:

"ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯ ಮೇಲೆ ಆರೋಪ ಮಾಡುವುದು ದೊಡ್ಡದಲ್ಲ. ಆದರೆ ಅಂತಹ ಯಾವುದೇ ಪುರಾವೆಗಳಿದ್ದರೂ ಸರ್ಕಾರ ಅದನ್ನು ಬಹಿರಂಗ ಮಾಡಲಿ. ನಾವು ಜನಪರ ಹೋರಾಟ ನಡೆಸುತ್ತಿದ್ದೇವೆ. ನಮ್ಮ ಮೇಲೆ ದೇಶ ವಿರೋಧಿ ಎಂಬ ಕೇಸ್ ದೇಶದ ಯಾವ ಭಾಗದಲ್ಲೂ ಇಲ್ಲ. ಹಾಗೊಂದು ವೇಳೆ ಸಾಕ್ಷಿ ಇದ್ದರೆ ಅದು ಜನರಿಗೂ ಗೊತ್ತಾಗಲಿ ಬಿಡಿ.

ಈ ಸರ್ಕಾರ ಅಧಿಕಾರದಾಹ, ಭ್ರಷ್ಟಾಚಾರ ನಡೆಸುತ್ತಾ ವಿರೋಧ ಪಕ್ಷಗಳ ಬಾಯಿ ಮುಚ್ಚಿಸಲು ಆಪರೇಷನ್ ಕಮಲ, ಶಾಸಕರ ಖರೀದಿ ನಡೆಸಿದೆ. ಈ ಹಿಂದೆ ಶೋಷಿತ ಮುಸ್ಲಿಮರ ಹಕ್ಕುಗಳ ಬಗ್ಗೆ ಮಾತನಾಡಲು ಯಾವ ಸಂಘಟನೆಯೂ ಇರಲಿಲ್ಲ. ಈಗ ಆ ಕೆಲಸ ಮಾಡುತ್ತಿರುವ PFI ಬಗ್ಗೆ RSS ಅಸಹನೆ ಶುರುವಾಗಿದೆ. ಇವರ ಅಪಪ್ರಚಾರದ ಮಾತುಗಳನ್ನು ನಂಬಲು ಜನ ಮೂರ್ಖರಲ್ಲ," ಎನ್ನುತ್ತಾರೆ ಶರೀಫ್.

'ಕನ್ನಡಪ್ರಭ'ಗೆ ರಂಗ ಬೈ! ಹೊಸ ಪತ್ರಿಕೆಗಳಿಗೆ ಸಂಪಾದಕರು ಬೇಕಾಗಿದ್ದಾರೆ!




ರಾಜೀವ್ ಚಂದ್ರಶೇಖರ್

ಕನ್ನಡ ಪತ್ರಿಕೋದ್ಯಮದಲ್ಲಿ ಮತ್ತೆ ಸಂಚಲನ ಉಂಟಾಗಿದೆ. ಜಾಗತಿಕ ಆರ್ಥಿಕ ಹಿಂಜರಿತದ ಹೊಡೆತಕ್ಕೆ ಸಿಲುಕಿ ಎಲ್ಲಿ ಯಾವ ಪತ್ರಿಕೆ ಮುಚ್ಚಲಿದೆಯೋ, ಯಾವ ಚಾನಲ್ ನಿಲ್ಲಲಿದೆಯೋ ಎಂದು ಆತಂಕಪಡುತ್ತಲೇ ಕೆಲಸ ಮಾಡುತ್ತಿದ್ದ ಪತ್ರಕರ್ತರ ಮುಖದಲ್ಲಿ ಮತ್ತೆ ನಗು ಅರಳಲಾರಂಭವಾಗಿದೆ. ಇದಕ್ಕೆ ಕಾರಣ ಸದ್ಯದಲ್ಲೇ ಕನಿಷ್ಠ ಎರಡು ಹೊಸ ಕನ್ನಡ ದಿನಪತ್ರಿಕೆಗಳು ಆರಂಭಗೊಳ್ಳಲಿವೆ ಎಂಬ ಸುದ್ದಿ.

'ವಿಜಯ ಕರ್ನಾಟಕ' ಎಂಬ ಪತ್ರಿಕೆಯನ್ನು ಆರಂಭಿಸಿ, ದರ ಸಮರದ ಮೂಲಕ ಪತ್ರಿಕೆಗಳ ಮಾರುಕಟ್ಟೆಯಲ್ಲಿ ಹೊಸ ಸಂಚಲನ ತಂದು, ತಮ್ಮ ಪತ್ರಿಕೆಯನ್ನು 'ನಂ.1' ಪಟ್ಟಕ್ಕೇರಿಸಿ, ಆನಂತರ ಅದನ್ನು ಟೈಮ್ಸ್‌ನವರಿಗೆ ಮಾರಿದ ವಿಜಯ ಸಂಕೇಶ್ವರ್ ಮತ್ತೆ ಹೊಸ ಪತ್ರಿಕೆಯೊಂದನ್ನು ಆರಂಭಿಸಲು ಸಿದ್ಧತೆ ನಡೆಸಿದ್ದಾರೆ. ಈ ಹಿಂದೆ ಬಸ್ಸು, ಲಾರಿ ಬಿಟ್ಟಂತೆ ವಿಮಾನಗಳನ್ನು ಹಾರಿಸೋಣ ಎಂದುಕೊಂಡಿದ್ದ ಅವರಿಗೆ ವಿಜಯ್ ಮಲ್ಯ ನಂತಹವರ ಪಾಡನ್ನು ನೋಡಿಯೇ ಚಳಿಜ್ವರ ಬಂದಂತಾಗಿತ್ತು. ಆಮೇಲೆ ಒಂದು ಟಿವಿ ಚಾನೆಲ್‌ಅನ್ನು ಪ್ರಾರಂಭಿಸಲು ನೋಡಿದ್ದರು. ಆದರೆ ಕನ್ನಡದ ಮಟ್ಟಿಗೆ ಚಾನಲ್ ಪ್ರಾರಂಭ ಮಾಡಿದರೆ ಗಿಟ್ಟುವುದಿಲ್ಲ ಎಂಬುದು 'ಕಸ್ತೂರಿ'ಯಿಂದ ಮನದಟ್ಟಾಗಿದ್ದರಿಂದ ಆ ಯೋಜನೆಯನ್ನು ಕೈಬಿಟ್ಟಿದ್ದರು.

'ವಿಜಯ ಕರ್ನಾಟಕ'ವನ್ನು ಟೈಮ್ಸ್‌ನ ಮಾರ್ವಾಡಿಗಳಿಗೆ ಮಾರಿದ ಸಂದರ್ಭದಲ್ಲಿ ಮುಂದೆ ಐದು ವರ್ಷಗಳ ಕಾಲ ಹೊಸ ಪತ್ರಿಕೆ ಆರಂಭಿಸುವುದಿಲ್ಲ ಎಂದು ಒಪ್ಪಂದ ಮಾಡಿಕೊಂಡಿದ್ದರಿಂದ ಇಷ್ಟು ದಿನ ಸುಮ್ಮನಿದ್ದರು. ಈಗ ಆ ಒಪ್ಪಂದದ ಅವಧಿ ಮುಗಿಯುತ್ತಾ ಬಂದಿದ್ದರಿಂದ ಕೆಲಸ ಆರಂಭಿಸಿದ್ದಾರೆ. ಬಲ್ಲ ಮೂಲಗಳ ಪ್ರಕಾರ 2010ರ ಅಂತ್ಯದ ವೇಳೆಗೆ ಅಥವಾ 2011 ಆರಂಭದಲ್ಲಿ ವಿಜಯ ಸಂಕೇಶ್ವರ ಅವರು ಮತ್ತೊಂದು ಕನ್ನಡ ಪತ್ರಿಕೆಯನ್ನು ಓದುಗರ ಮುಂದಿಡಲಿದ್ದಾರೆ. ಹೊಸ ಪತ್ರಿಕೆಗೆ 'ಆನಂದ ಕರ್ನಾಟಕ' ಅಥವಾ 'ಆನಂದ ವಿಜಯ' ಎಂಬ ಹೆಸರಿಡುವ ಸಾಧ್ಯತೆಗಳಿವೆ. ಅಂದಹಾಗೆ, ಇದು ನೆಕ್ಸ್ಟ್ ಜನರೇಷನ್ ಪತ್ರಿಕೆಯಾಗಲಿದೆ. ಅರ್ಥಾತ್: ಇದರ ನೇತೃತ್ವ ವಹಿಸುವವರು ವಿಜಯ ಸಂಕೇಶ್ವರ ಅಲ್ಲ, ಅವರ ಪುತ್ರ ಆನಂದ ಸಂಕೇಶ್ವರ್!




ಸಂಕೇಶ್ವರ್

ಇನ್ನು ಬಿಪಿಎಲ್ 'ಕುಖ್ಯಾತಿ'ಯ, ಹಾಗು ಹಣ ಚೆಲ್ಲುವ ಮೂಲಕ ರಾಜ್ಯ ಸಭಾದ ಸಂಸದಗಿರಿಯನ್ನು ಖರೀದಿಸಿದ ರಾಜೀವ್ ಚಂದ್ರಶೇಖರ್ ಕೂಡ ಹೊಸ ಪತ್ರಿಕೆ ಆರಂಭಿಸುವ ಯೋಜನೆಯಲ್ಲಿದ್ದಾರೆ. ಏಷ್ಯ ನೆಟ್‌ವರ್ಕ್ ಮೂಲಕ ಸುವರ್ಣ ಮತ್ತು ಸುವರ್ಣ ನ್ಯೂಸ್ ಚಾನಲ್ ನಡೆಸುತ್ತಿದ್ದ ಚಂದ್ರಶೇಖರ್ ಈಗಾಗಲೇ ಸ್ಟಾರ್‌ಗೆ 'ಸುವರ್ಣ' ಟಿವಿಯನ್ನು ಮಾರಿಕೊಂಡಿದ್ದಾಗಿದೆ. ಸುದ್ದಿವಾಹಿನಿಯೊಂದನ್ನು ಮಾತ್ರ ಅವರು ಉಳಿಸಿಕೊಂಡಿದ್ದು, ಇದರ ಜೊತೆಗೆ ದಿನಪತ್ರಿಕೆಯೊಂದನ್ನು ಆರಂಭಿಸುವ ಉದ್ದೇಶ ಹೊಂದಿದ್ದಾರೆ.

ರಿಸ್ಕ್ ಬೇಡ ಎಂದ ವಿ.ಕ.ಭಟ್ಟ


ವಿಜಯ ಸಂಕೇಶ್ವರ ಮತ್ತು ರಾಜೀವ್ ಚಂದ್ರಶೇಖರ್ ಆರಂಭಿಸಲಿರುವ ಪತ್ರಿಕೆಗಳಿಗೆ ಸಂಪಾದಕರು ಯಾರಾಗಲಿದ್ದಾರೆ ಎಂಬುದೇ ಈಗ ಪತ್ರಿಕಾ ಕ್ಷೇತ್ರದಲ್ಲಿ ಬಿಸಿಬಿಸಿ ಚರ್ಚೆಗೆ ಕಾರಣವಾಗಿದೆ. ನಂ.1 ಚಡ್ಡಿ ಪತ್ರಿಕೆ 'ವಿಜಯ ಕರ್ನಾಟಕ'ದ ಸಂಪಾದಕ ವಿಶ್ವೇಶ್ವರ ಭಟ್ಟರನ್ನು ಸೆಳೆದುಕೊಳ್ಳಲು ವಿಜಯ ಸಂಕೇಶ್ವರ ಮತ್ತು ರಾಜೀವ್ ಚಂದ್ರಶೇಖರ್ ಪ್ರಯತ್ನಿಸಿದರೂ ಫಲ ದೊರೆತಿಲ್ಲ. ಟೈಮ್ಸ್ ಮಾರ್ವಾಡಿಗಳ ಕೃಪಾಶೀರ್ವಾದದಲ್ಲಿ ಹೆಸರು-ದುಡ್ಡು ಮಾಡಿಕೊಂಡು ಮೆರೆಯುತ್ತಿರುವ ವಿ.ಕ.ಭಟ್ಟರಿಗೆ ಹೊಸ ಪತ್ರಿಕೆ ಕಟ್ಟುವ ಧೈರ್ಯವಿಲ್ಲ. ಅಲ್ಲದೆ ಟೈಮ್ಸ್ ತರಹದ ಕಂಪನಿ ಮಾಲಿಕತ್ವದ ಪತ್ರಿಕೆಯಲ್ಲಿ ಕೆಲಸ ಮಾಡುವ ವಾತಾವರಣವೇ ಬೇರೆ, ಏಕ ವ್ಯಕ್ತಿ ಮಾಲಿಕತ್ವವಿದ್ದಾಗ ಇರುವ ವಾತಾವರಣವೇ ಬೇರೆ. ಏಕೆ ಈಗ ರಿಸ್ಕ್ ತೆಗೆದುಕೊಳ್ಳಬೇಕು ಎಂದು ಭಟ್ಟರು ತಮ್ಮ ಆತ್ಮೀಯರ ಬಳಿ ಹೇಳಿಕೊಂಡಿದ್ದಾರಂತೆ.

ತಾವು ಕರೆದರೆ ಭಟ್ಟರು ಬರುತ್ತಾರೆ ಎಂದೇ ಭಾವಿಸಿದ್ದ ಚಂದ್ರಶೇಖರ್ ಮತ್ತು ಸಂಕೇಶ್ವರ್, 'ಈ ಭಟ್ಟ ಮೇಲ್ನೋಟಕ್ಕಷ್ಟೇ ನಮ್ಮೊಂದಿಗೆ ವಿಶ್ವಾಸದಿಂದಿದ್ದಾರೆ. ನಮ್ಮ ಬಗ್ಗೆ ಅತಿಯಾದ ಗೌರವವೇನೂ ಇವರಿಗಿಲ್ಲ' ಎಂದು ಗೊಣಗುತ್ತಿದ್ದಾರಂತೆ.



ರಂಗ

ಇನ್ನೆರಡು ಪತ್ರಿಕೆಗಳು



ವಿಜಯ ಸಂಕೇಶ್ವರ್ ಮತ್ತು ರಾಜೀವ್ ಚಂದ್ರಶೇಖರ್ ಹೊಸ ಪತ್ರಿಕೆಗಳನ್ನು ಆರಂಭಿಸಲು ಸಿದ್ಧತೆ ನಡೆಸುತ್ತಿರುವ ಸುದ್ದಿಯ ಬೆನ್ನಿಗೇ ಇನ್ನೂ ಎರಡು ಪತ್ರಿಕೆಗಳು ಆರಂಭವಾಗುವ ವದಂತಿ ಹರಡಿದೆ.

ಒಂದು, ಗಣಿ ಕಳ್ಳ ರೆಡ್ಡಿ ಬ್ರದರ್ಸ್ ಬಳ್ಳಾರಿಯಲ್ಲಿ ಪ್ರಕಟಿಸಿ ಉಚಿತವಾಗಿ ಹಂಚುತ್ತಿರುವ 'ಈ ನಮ್ಮ ಕನ್ನಡ ನಾಡು' ಎಂಬ ಪತ್ರಿಕೆಯನ್ನು ರಾಜ್ಯಮಟ್ಟದ ಪತ್ರಿಕೆಯಾಗಿ ರೂಪಿಸಲು ಹೊರಟಿದ್ದಾರೆ ಎಂಬುದು. ಈ ಬಗ್ಗೆ ಕಳೆದ ಎರಡು ವರ್ಷಗಳಿಂದ ವದಂತಿ ಹರಡುತ್ತಲೇ ಇದೆ. ಇತ್ತೀಚೆಗೆ ಬಳ್ಳಾರಿಯಲ್ಲಿ ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತ ಸಚಿವ ಜನಾರ್ದನ ರೆಡ್ಡಿ ಈ ಕುರಿತು ಹೇಳಿಕೆ ನೀಡಿದ್ದರಿಂದ ಮತ್ತೆ ಈ ವದಂತಿ ಜೀವ ಪಡೆದಿದೆ. ಆದರೆ ಇದನ್ನು ಯಾವ ಪತ್ರಕರ್ತರೂ ನಂಬುವ ಸ್ಥಿತಿಯಲ್ಲಿಲ್ಲ. ಏಕೆಂದರೆ ರೆಡ್ಡಿ ಈ ಕುರಿತು ನೀಡಿರುವ ಹೇಳಿಕೆಗಳಿಗೆ ಲೆಕ್ಕವೇ ಇಲ್ಲ! ಇನ್ನೊಂದು ಸುದ್ದಿ ಆಂಧ್ರದ ತೆಲುಗು 'ಸಾಕ್ಷಿ' ಪತ್ರಿಕೆ ಕನ್ನಡದಲ್ಲಿಯೂ ಪ್ರಕಟವಾಗಲಿದೆ ಎಂಬುದು. ಆಂಧ್ರದ ಮುಖ್ಯಮಂತ್ರಿ ರಾಜಶೇಖರ ರೆಡ್ಡಿ ಪುತ್ರನ ಒಡೆತನದ 'ಸಾಕ್ಷಿ' ಪತ್ರಿಕೆ ಆಂಧ್ರದಲ್ಲಿ ನಿಧಾನವಾಗಿ ಓದುಗರ ಸಂಖ್ಯೆ ಹೆಚ್ಚಿಸಿಕೊಳ್ಳುತ್ತಿದೆ. ಜೊತೆಗೆ ಟಿವಿ ಚಾನಲ್ ಕೂಡ ಆರಂಭಿಸಲಾಗಿದೆ. ಕನ್ನಡದಲ್ಲಿಯೂ ಪತ್ರಿಕೆ ಮತ್ತು ಚಾನಲ್ ಆರಂಭಿಸಲು ಈ ಸಂಸ್ಥೆ ಉದ್ದೇಶಿಸಿದ್ದು, ಸಮೀಕ್ಷೆ ಆರಂಭವಾಗಿದೆ ಎಂಬ ವದಂತಿ ಇದೆ. ಆದರೆ ಈ ಬಗ್ಗೆ ಅಧಿಕೃತ ಪ್ರಕಟಣೆಯೇನೂ ಹೊರಬಿದ್ದಿಲ್ಲ.

PFI ಮುಂದಿರುವ ಸವಾಲುಗಳು

KFD ಎಂಬ ಸಂಘಟನೆ ಅಧಿಕೃತವಾಗಿ ಈಗಿಲ್ಲವಾದರೂ, ಬಿಜೆಪಿ ಸರ್ಕಾರವು ಅದನ್ನು ನಿಷೇಧಿತ ಸಿಮಿ ಸಂಘಟನೆಯ ಇನ್ನೊಂದು ರೂಪ ಎಂದೇ ಪ್ರಚಾರ ನಡೆಸುತ್ತಿದೆ. ಮುಖ್ಯಮಂತ್ರಿ ಯದ್ದಿ KFD ಬಗ್ಗೆ ಈಗಾಗಲೇ ಕೇಂದ್ರ ಸರ್ಕಾರಕ್ಕೂ ಪತ್ರ ಬರೆದಾಗಿದೆ. ಈ ಬೆಳವಣಿಗೆಗಳ ಹಿಂದೆ RSS ಉನ್ನತ ನಾಯಕರ ಕೃಪಾದೃಷ್ಟಿರುವುದು ನಿಸ್ಸಂಶಯ. ಅದೇನೇ ಇರಲಿ, PFI ಒಂದು ಅಖಿಲ ಭಾರತ ಮಟ್ಟದ್ದಾಗಿದ್ದು, ಲಕ್ಷಾಂತರ ಮುಸ್ಲಿಮರ ಬೆಂಬಲ ಹೊಂದಿರುವ ಕಾರಣ ಹಾಗೂ ನಿಷೇದಕ್ಕೊಳಗಾಗಬೇಕಾದ ಚಟುವಟಿಕೆ ನಡೆಸಿರುವ ಸೂಕ್ತ ಪುರಾವೆಗಳಿರದ ಕಾರಣ ಕೇಂದ್ರ ಸರ್ಕಾರ ಬಿಜೆಪಿಗಳ ಒತ್ತಾಯಕ್ಕೆ ಮಣಿಯಲಾರದೇನೊ.

ಇಲ್ಲಿ ಬ್ಯಾನ್‌ನ ವಿಚಾರ ಬದಿಗಿಟ್ಟು ಹೇಳಬೇಕಾದ ಇನ್ನೂ ಹಲವಾರು ಸಂಗತಿಗಳಿವೆ.

ಕರ್ನಾಟಕದ ಜನತೆಗಿದು ಅತ್ಯಂತ ಕೆಟ್ಟಕಾಲ. ಜೈಲಿನಲ್ಲಿರಬೇಕಾದ ದುಷ್ಟರೆಲ್ಲಾ ಇವತ್ತು ಸರ್ಕಾರ ನಡೆಸುತ್ತಾ ಕೋಮುಗಲಭೆ ಮಾತ್ರವಲ್ಲ ಜೊತೆಗೆ ಭ್ರಷ್ಟಾಚಾರ, ಪುರೋಹಿತಶಾಹಿ ಮೌಲ್ಯಗಳನ್ನು ಜನರ ಮೇಲೆ ಹೇರುತ್ತಿದ್ದಾರೆ. ಇವತ್ತಿನ ಮುಸ್ಲಿಮರ ಸಮಸ್ಯೆಗಳು ಕೇವಲ ಮುಸ್ಲಿಮರ ಸಮಸ್ಯೆಗಳಾಗಿ ಮಾತ್ರ ಉಳಿದಿಲ್ಲ. ಹೊಸದಾಗಿ ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳುತ್ತಿರುವ ಮುಸ್ಲಿಂ ಯುವ ಜನತೆಗೆ ಈ ವಿದ್ಯಮಾನಗಳ ಪೂರ್ಣ ತಿಳುವಳಿಕೆ ಬರಬೇಕಿದೆ. ಹಿಂದೂ ಅಂದರೆ ಮುಸ್ಲಿಂ ಅಲ್ಲದವರೆಲ್ಲಾ ಹಿಂದೂ ಎಂದಾಗುವುದಿಲ್ಲ. ಹಿಂದೂ ಪುರೋಹಿತರು, ಸಂಘ ಪರಿವಾರಿಗಳನ್ನು ಬಿಟ್ಟರೆ ಉಳಿದವರ್‍ಯಾರಿಗೂ ಹಿಂದೂ ಧರ್ಮ ಬೇಕಾಗಿಯೂ ಇಲ್ಲ. ಸಮಾಜದ ಮುಖ್ಯವಾಹಿನಿಯಲ್ಲಿರುವವರ ಇನ್ನಷ್ಟು ವಿಶ್ವಾಸ ಗಳಿಸಿಕೊಳ್ಳುವುದು, ಕಾನೂನುಬದ್ಧ ಚೌಕಟ್ಟಿನೊಳಗೆಯೇ ಕಾರ್ಯಾಚರಿಸುವುದು, ದುಡುಕು ಆವೇಶಗಳಿಗೆ ಹೊರತಾದ, ದೂರಗಾಮಿ ಯೋಜನೆಗಳ ಉದ್ದೇಶದ ಸಂಘಟನೆ ಕಟ್ಟುವುದನ್ನು KFD ತುರ್ತಾಗಿ ಮಾಡಬೇಕಾಗಿದೆ.

ಸದ್ಯದ ಪರಿಸ್ಥಿತಿಯಲ್ಲಿ ಈ ಬ್ಯಾನ್ ಬೆದರಿಕೆ ಬರಿ ಬೆದರು ಬೊಂಬೆಯಂತೆ ಕಾಣಬಹುದು. ಆದರೆ ಹಾವಿನ ಹೆಡೆಯ ನೆರಳಲ್ಲಿ ಬದುಕಬೇಕಾಗಿರುವಾಗ ಎಚ್ಚರವಿರಬೇಕಪ್ಪ.

ಬ್ಯಾನ್‌ಗೊಳಗಾಗುವಂತಹ ದುಷ್ಟ ಕೆಲಸಗಳನ್ನೇನೂ KFD ಮಾಡಿಯೂ ಇಲ್ಲ.

ಇಲ್ಲಿ ಯಡಿಯೂರಪ್ಪಾಗೆ ಕೇಳಬೇಕಾದ ಪ್ರಶ್ನೆ ಒಂದಿದೆ.

ಯಾವ ಮಾನದಂಡಗಳ ಆಧಾರದಲ್ಲಿ ಬಿಜೆಪಿ ಸರ್ಕಾರ ಈಗ KFD ಯನ್ನು ನಿಷೇಧಿಸುವ ಪ್ರಸ್ತಾಪ ಮಾಡುತ್ತಿದೆಯೋ ಅದೇ ಮಾನದಂಡವನ್ನಿಟ್ಟು ಅಳೆದರೆ ಭಜರಂಗ ದಳ, ಶ್ರೀರಾಮ ಸೇನೆಯನ್ನು ನಿಷೇಧಿಸಬೇಕಲ್ಲವೆ?

ವಿಶ್ವಹಿಂದೂ ಪರಿಷತ್, RSS ಕೈಗಳಿಗೂ ಕೋಳ ಹಾಕಬೇಕಲ್ಲವೆ?

ಇಷ್ಟೆಲ್ಲಾ ಯಾಕೆ ಯಾವ ಭಜರಂಗಿಗೂ ಕಡಿಮೆ ಇರದಂತೆ ಹಿಂದೂತ್ವ ಟೆರರಿಸಂ ಅನ್ನು ಬೆಂಬಲಿಸುತ್ತಿರುವ ಹಾಲಿ ಬಿಜೆಪಿ ಸರ್ಕಾರವನ್ನೇ ಬ್ಯಾನ್ ಮಾಡಿಕೊಳ್ಳಬೇಕಲ್ಲವೆ? ಬಿಜೆಪಿಗಳ ತಟ್ಟೆಯಲ್ಲಿ ಹೆತ್ತಯೇ ಸತ್ತು ಬಿದ್ದಿದೆ. ಆದರೆ ಅವರು KFD ತಟ್ಟೆಯಲ್ಲಿ ಬಿದ್ದಿರುವ ನೊಣದ ಬಗ್ಗೆ ಚೀರಿಕೊಳ್ಳುತ್ತಿದ್ದಾರೆ.



ಕೆ.ಎಫ್.ಡಿ.ಯ ಸ್ವಾತಂತ್ರ್ಯೋತ್ಸವದ ಪರೇಡ್.....

ಕೊನೆಯದಾಗಿ,

ಯಾವುದೇ ದಮಾನಿತ ಸಮುದಾಯಕ್ಕೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ತಮ್ಮ ಬೇಕು-ಬೇಡಗಳನ್ನು ಹೇಳಿಕೊಳ್ಳಲು ಅವಕಾಶ ಸಿಗದಿದ್ದರೆ, ಸಿಟ್ಟು ಆಕ್ರೋಶಗಳನ್ನು ವ್ಯಕ್ತಪಡಿಸುವ ಅವಕಾಶ ನಿರಾಕರಿಸಲ್ಪಟ್ಟರೆ ಅಂತಿಮವಾಗಿ ವಿನಾಃಕಾರಣ ಬ್ಯಾನ್ ಎಂಬ ಬ್ರಹ್ಮಾಸ್ತ್ರ ಚಲಾಯಿಸಿದರೆ ಸಮಸ್ಯೆ ತನ್ನಂತೆ ತಾನೇ ಬಗೆಹರಿದುಬಿಡುವುದಿಲ್ಲ.

ಈ ದೇಶದ ಎಲ್ಲಾ ಪ್ರಜೆಗಳಿಗಿರುವಂತೆ ಮುಸ್ಲಿಮರಿಗೂ ಸಂಘಟಿತರಾಗುವ ಹಕ್ಕಿದೆ. ಅನ್ಯಾಯ ದಮಾನಗಳಾದಾಗ ಪ್ರತಿಭಟಿಸುವ, ಪ್ರಶ್ನಿಸುವ ಅವಕಾಶವೂ ಇದ್ದೇ ಇದೆ. ತಮ್ಮ ಆತ್ಮರಕ್ಷಣೆಗಾಗಿ ದಾಳಿಕೋರರ ಮೇಲೆ ಪ್ರತಿದಾಳಿ ನಡೆಸುವ ಅಧಿಕಾರವೂ ಅವರಿಗಿದೆ. ಮತ್ತೊಂದೆಡೆ ಚರ್ಚ್-ಮಸೀದಿಗೆ ಬೆಂಕಿ ಹಾಕುತ್ತಾ, ಕೋಮು ಗಲಭೆ ನಡೆಸುತ್ತಾ ಸಾಮಾಜಿಕ ಶಾಂತಿ ಕೆದಕುತ್ತಾ ಕರ್ನಾಟಕದ ಸಂಘ ಪರಿವಾರಿಗಳು ಸಂವಿಧಾನ ಬಾಹಿರ, ಕಾನೂನುಬಾಹಿರ ದುಷ್ಟತನ ಮುಂದುವರೆಸುತ್ತಲೇ ಹೋಗುತ್ತಿದ್ದಾರೆ. ಇವರಿಗೆ ಯದ್ದಿ ಸರ್ಕಾರದ ಬೆಂಬಲವೂ ಇದೆ. ಈ ಸತ್ಯ ಕಣ್ಣಿಗೆ ಕಾಣುವಂತೆ ಇದೆ. ಇದನ್ನು ನಿರ್ಲಕ್ಷಿಸಿ ಮುಸ್ಲಿಮರ ವಿರುದ್ಧ ಬ್ಯಾನ್ ಅಸ್ತ್ರ ಬಳಸಿದರೆ ಅದಕ್ಕಿಂತ ಮೂರ್ಖತನ ಬೇರೆನಿರಲೇ ಸಾಧ್ಯ

● ಪಾರ್ವತೀಶ್

'ಕ.ಪ್ರ'ಗೆ ರಂಗ ಗುಡ್‌ಬೈ?

ಈ ನಡುವೆ, 'ಕನ್ನಡ ಪ್ರಭ' ಪತ್ರಿಕೆಯ ಸಂಪಾದಕ ರಂಗನಾಥ್ ರಾಜೀವ್ ಚಂದ್ರಶೇಖರ್ ಜೊತೆ ಮಾತುಕತೆ ನಡೆಸಿದ್ದು, ಹೊಸ ಪತ್ರಿಕೆಗೆ ಅವರು ಸಂಪಾದಕರಾಗಲಿರುವುದು ಬಹುತೇಕ ಖಚಿತವಾಗಿದೆ. ಇನ್ನೊಂದು ತಿಂಗಳಿನಲ್ಲಿ ರಂಗ 'ಕ.ಪ್ರ'ಗೆ ರಾಜೀನಾಮೆ ನೀಡಲಿದ್ದಾರಂತೆ.

ರಂಗನಾಥ್ ಸಂಪಾದಕರಾದ ಮೇಲೆ 'ಕನ್ನಡ ಪ್ರಭ'ಕ್ಕೆ ಹೊಸ ಜನ್ಮ ನೀಡಿರುವುದಂತೂ ನಿಜ. ಪತ್ರಿಕೆಯ ಪ್ರಸಾರ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವಾಗಿದ್ದು, ಇದೀಗ ಹತ್ತಿರ ಹತ್ತಿರ 2 ಲಕ್ಷ ತಲುಪಿದೆ. ಇಂಡಿಯನ್ ಎಕ್ಸ್‌ಪ್ರೆಸ್ ಗ್ರೂಪ್‌ನಲ್ಲಿ ರಂಗನಿಗೆ ಒಳ್ಳೆಯ ಗೌರವ, ಹೆಸರು ಇದೆ. ಸಂಪೂರ್ಣ ಸ್ವಾತಂತ್ರ್ಯವಿದೆ. ಆದರೆ ರಾಜೀವ್ ಚಂದ್ರಶೇಖರ್ ತಮ್ಮ ಮಾಲೀಕತ್ವದ ಪತ್ರಿಕೆಯ ಕೆಲಸದಲ್ಲಿ ಹಸ್ತಕ್ಷೇಪ ನಡೆಸುವುದು ಖಚಿತ. ಹೀಗಾಗಿ ಅಲ್ಲಿಗೆ ಹೋಗಬೇಕೋ ಬೇಡವೋ ಎಂಬ ಗೊಂದಲದಲ್ಲಿದ್ದಾರಂತೆ ರಂಗ. ಆದರೆ ಯಾವಾಗ ರಾಜೀವ್ ಚಂದ್ರಶೇಖರ್ ರಂಗನಾಥ್‌ಗೆ ಪ್ರತಿ ತಿಂಗಳು ಎರಡು ಲಕ್ಷ ರೂಪಾಯಿ ಸಂಬಳದ ಆಫರ್ ಕೊಟ್ಟರೋ ಮತ್ತು ಅವರನ್ನು ಕೇವಲ ಸಂಪಾದಕ ಅಲ್ಲ ಬದಲಾಗಿ ಸಿಇಓ ಮಾಡುತ್ತೇನೆಂದರೋ ರಂಗನಾಥ್‌ಗೆ ಟೆಮ್ಟೇಶನ್ ಪ್ರಾರಂಭವಾಗಿದೆ.

ಅಂದಹಾಗೆ ರಂಗ ತಾವು ಮಾತ್ರ ಕ.ಪ್ರ.ಗೆ ಟಾಟಾ ಹೇಳಿ ಹೋಗುತ್ತಿಲ್ಲ, ಅವರೊಂದಿಗೆ ಕ.ಪ್ರ.ದ ಒಂದು ಪ್ರಮುಖ ಹಿಂಡೇ ಹೊರಟಿದೆ. ಜೋಗಿ ಮತ್ತು ಉದಯ ಮರಕಿಣಿ ಎಂಬ ಸಿನೆಮಾ ವರದಿಗಾರರಿಗೆ ಹಾಗೂ ರವಿ ಹೆಗಡೆ ಎಂಬ ಸುದ್ದಿ ಸಂಪಾದಕರಿಗೆ ಪ್ರತಿ ತಿಂಗಳಿಗೆ ಕನಿಷ್ಠ 60 ರಿಂದ 70 ಸಾವಿರ ಸಂಬಳದ ಆಫರ್ ಬಂದಿರುವುದರಿಂದ ಅವರೂ ಕೂಡ ಈಗಾಗಲೇ ತಮ್ಮ ಗಂಟುಮೂಟೆ ಕಟ್ಟಿಕೊಂಡು ಸಿದ್ಧವಾಗಿದ್ದಾರೆ. ಇಂಟರೆಸ್ಟಿಂಗ್ ವಿಷಯ ಯಾವುದೆಂದರೆ ಕ.ಪ್ರ.ದ ಇನ್ನೊಬ್ಬ ಹಿರಿಯ ಪತ್ರಕರ್ತ ಶಿವಸುಬ್ರಮಣ್ಯಂ ಮಾತ್ರ ಇದಾ ಗೊಂದಲದಲ್ಲಿದ್ದಾರೆ. ರಂಗನ ಹಿಂದೆ ಹೋದರೆ ಅವರಿಗೂ ಹತ್ತಿರ ಹತ್ತಿರ ಒಂದು ಲಕ್ಷ ಸಂಬಳ ಸಿಗಬಹುದು. ಹೋಗದಿದ್ದರೆ ರಂಗನ ಅನುಪಸ್ಥಿತಿಯಲ್ಲಿ ಕನ್ನಡ ಪ್ರಭಕ್ಕೆ ಸಂಪಾದಕರಾಗಬಹುದು. ಅವರೀಗ ಈ ಎರಡೂ ಸೆಳೆತಗಳ ನಡುವೆ ಒದ್ದಾಡುತ್ತಿದ್ದಾರೆ.

ಓದುಗರು ಯಾರು?

ಇಷ್ಟೆರಡು ಪತ್ರಿಕೆಗಳು ಆರಂಭವಾದರೆ ಅವುಗಳನ್ನು ಓದುವವರು ಯಾರು ಎಂದು ಈಗ ಚರ್ಚೆಯಾಗುತ್ತಿರುವ ವಿಷಯ. ಈಗಾಗಲೇ ಬಹುಸಂಖ್ಯ ಜನತೆಯ ಪತ್ರಿಕೆಯಾಗಿ 'ಪ್ರಜಾವಾಣಿ' ಇದೆ. ಬೆಡ್ಡಿ ಸಿದ್ಧಾಂತ ಪ್ರತಿಪಾದಿಸುವರಂತೂ 'ವಿಜಯ ಕರ್ನಾಟಕ'ವನ್ನು ಅಪ್ಪಿಕೊಂಡಿದ್ದಾರೆ. ಇನ್ನು ಇತ್ತೀಚೆಗೆ ಆರ್.ಎಸ್.ಎಸ್ ತನ್ನ ಮುಖವಾಣಿಯಾದ 'ಹೊಸದಿಗಂತ'ಕ್ಕೆ

ಪ್ರಜಾವಾಣಿ ಮೇಲೆ ಎಲ್ಲರ ಕಣ್ಣು

ಎಷ್ಟೇ ಹೊಸ ಪತ್ರಿಕೆಗಳು ಬಂದರೂ, ಅವೆಷ್ಟೇ ಕಣ್ಣು ಮುಚ್ಚಿದರೂ ಕನ್ನಡ ನಾಡಿನ ಪ್ರಜ್ಞಾವಂತ ಜನತೆ 'ಪ್ರಜಾವಾಣಿ' ಮೇಲಿನ ವಿಶ್ವಾಸ ಕಳೆದುಕೊಂಡಿಲ್ಲ. ಒಂದು ರೀತಿಯಲ್ಲಿ ಪ್ರಜ್ಞಾವಂತರಿಗೆ, ಜನಸಾಮಾನ್ಯರಿಗೆ 'ಪ್ರಜಾವಾಣಿ' ಅನಿವಾರ್ಯವೆಂಬಂತಾಗಿದೆ. ಶಾಂತಕುಮಾರ್ ಸಂಪಾದಕತ್ವದಲ್ಲಿ ಈ ವಿಶ್ವಾಸವನ್ನು ಉಳಿಸಿಕೊಳ್ಳುವ ಕೆಲಸವನ್ನು 'ಪ್ರಜಾವಾಣಿ' ಮಾಡುತ್ತಿದೆ. ಮುಂದೆಯೂ ಇದೇ ನಿಟ್ಟಿನಲ್ಲಿ ಹೆಜ್ಜೆ ಇರಿಸಬೇಕಾದ ಅವಶ್ಯಕತೆ ಬಹಳವಾಗಿದೆ.

ಕಾಲ ಬದಲಾದಂತೆ, ಮಾಧ್ಯಮಗಳ ಪೈಪೋಟಿ ಹೆಚ್ಚಿದಂತೆ ಒಂದು ವರ್ಗದ ಓದುಗರ ಬೇಡಿಕೆಗಳೂ ಬದಲಾಗುತ್ತವೆ. ಇದನ್ನು ಗ್ರಹಿಸುವ, ಕಾಲಕ್ಕೆ ತಕ್ಕಂತೆ ಕೆಲ ಬದಲಾವಣೆ ಮಾಡಿಕೊಳ್ಳುವ ಅನಿವಾರ್ಯತೆಯನ್ನು 'ಪ್ರಜಾವಾಣಿ' ಸರಿಯಾಗಿ ಅರ್ಥಮಾಡಿಕೊಂಡು ಮುಂದುವರೆದಲ್ಲಿ, 'ಪ್ರಜಾವಾಣಿ'ಯ 'ನಂ.1 ಮೌಲಿಕ ಪತ್ರಿಕೆ'ಯ ಸ್ಥಾನ ಅದರ ಜೊತೆಗೇ ಇರಲಿದೆ. ಮತ್ತೊಮ್ಮೆ ಮಾಧ್ಯಮಗಳ ಸಮರ ನಡೆದರೆ ಪ್ರಜಾವಾಣಿ ಗೆದ್ದು ಬರಲಿದೆ ಎಂಬ ವಿಶ್ವಾಸ ಕನ್ನಡನಾಡಿನ ಪ್ರಜ್ಞಾವಂತರದ್ದು.

ಮರು ಜನ್ಮ ನೀಡಿ, ತಮ್ಮ ಸಿದ್ಧಾಂತವಾದಿಗಳನ್ನು ಕಪಿಮುಷ್ಠಿಯಲ್ಲಿ ಹಿಡಿದುಕೊಳ್ಳಲು ಯತ್ನಿಸುತ್ತಿದೆ.

ಇದೆಲ್ಲವನ್ನು ಲೆಕ್ಕಹಾಕಿದರೆ ಹೊಸ ಪತ್ರಿಕೆಗಳಿಂದ 'ವಿಕ'ಕ್ಕೆ ಹೊಡೆತ ಬೀಳಲಿದೆ ಎಂಬ ಮಾತೂ ಇದೆ. ಯಾಕೆಂದರೆ ವಿಜಯ ಸಂಕೇಶ್ವರ ಮತ್ತು ಚಂದ್ರಶೇಖರ್ ಇಬ್ಬರೂ ಚೆಡ್ಡಿ ಸಿದ್ಧಾಂತಿಗಳಾಗಿರುವುದರಿಂದ ಅವರ ಪತ್ರಿಕೆಗಳು 'ವಿಕ'ದ ಓದುಗರನ್ನೇ ಆಕರ್ಷಿಸುವ ಚಾನ್ಸ್ ಜಾಸ್ತಿ ಹಾಗಂತ 'ಪ್ರಜಾವಾಣಿ' ಸುಮ್ಮನೆ ಕೂರುವಂತಿಲ್ಲ ಎಂಬುದು ಬೇರೆ ಮಾತು.

ವಿಜಯ ಸಂಕೇಶ್ವರ್ ಈಗಾಗಲೇ ನಡೆಸಿರುವ ಏಜೆಂಟರ ಸಭೆಯಲ್ಲಿ ಪತ್ರಿಕೆಯ ದರ ಒಂದು ರೂ.ಗಳಾಗಿರುತ್ತವೆ ಎಂದು ಪ್ರಕಟಿಸಿದ್ದಾರಂತೆ. ಇದು ನಿಜವೇ ಆದಲ್ಲಿ ಮತ್ತೊಮ್ಮೆ ಪತ್ರಿಕೆಗಳ ದರ ಸಮರ ನಡೆಯಲಿದೆ. ಈಗಿರುವ ಪತ್ರಿಕೆಗಳು ಇನ್ನೊಂದಿಷ್ಟು ಲಾಸ್ ಮಾಡಿಕೊಂಡು, ಜೀವ ಉಳಿಸಿಕೊಳ್ಳಬೇಕಾಗಬಹುದು ಅಥವಾ ಈ ಬಾರಿ ಎಲ್ಲರೂ ವ್ಯವಸ್ಥಿತವಾಗಿ ಕೆಲಸ ಮಾಡಿ ವಿಜಯ ಸಂಕೇಶ್ವರರ ಕನಸನ್ನು ನುಚ್ಚುನೂರು ಮಾಡಬಹುದು. ಯಾವುದು ನಿಜವಾಗಲಿದೆಯೋ ಕಾದು ನೋಡಬೇಕು.

● ಎಚ್. ಪ್ರವೀಣ್

ಜಯಲಕ್ಷ್ಮಿ ಹಟ್ಟಿ ಚಿನ್ನ ಇದ್ದಂಗೆ ಕಂಡ್ರೀ!

ಗೋವಿಂದರಾಜನಗರದಲ್ಲಿ ಸ್ಪರ್ಧಿಸಿರುವ ಕಾಂಗ್ರೆಸ್‌ನ ಪ್ರಿಯಕೃಷ್ಣನ ಪರ ಚೆಡ್ಡಿ ಪತ್ರಿಕೆಯೊಂದು ಕರಪತ್ರದ ಕೆಲಸ ಮಾಡುತ್ತಿರುವುದನ್ನು ನೋಡಿದ ಸೋಮಣ್ಣನ ಕಡೆಯ ಶರಣ ತರುಣರು "ವಿನಣ್ಣಾ ಈ ಪತ್ರಿಕೆ ಹಿಂಗೆ ಪ್ರಚಾರ ಕೊಡ್ತಾಯಿದೆ. ನಾವು ಏನಾರ ಮಾಡಬೇಕಲ್ಲಾ?" ಎಂದು ಹಲುಬಿದರಂತಲ್ಲಾ, ಅದಕ್ಕೆ ಮಾಜಿನ ಮಲ್ಲ ಸೋಮಣ್ಣ "ಥೂ ನೀವೇನು ಹೆದರಬೇಡಿ ಹೋಗ್ರಿ. ಆ ಪತ್ರಿಕೆ ಬಿಜೆಪಿ ಹ್ಯಾಂಡ್‌ಬಿಲ್ ಇದ್ದಂಗೆ. ದಕ್ಷಿಣ ಕನ್ನಡದಲ್ಲಿ ಆ ಪತ್ರಿಕೆ ನಮ್ಮ ಕಾರ್ಯಕರ್ತರಿಗಿಂತ್ಲೂ ಹೆಚ್ಚು ಕೆಲಸ ಮಾಡ್ತಾಯಿದೆ. ಇಲ್ಲೇನಪ್ಪಾ ಅಂದ್ರೆ ಪ್ರಿಯಕೃಷ್ಣ ಪೇಜಾವರನ ಪಾದ ಪೂಜೆ ಮಾಡಿದ್ದರಿಂದ ಆ ಪತ್ರಿಕೆ ಹಾಗೆ ಬರೀತಾ ಇದೆ. ಆ ಪತ್ರಿಕೆಯ ಇನ್ನೊಂದು ಸಂಚು ನಿಮಗೇಳಂಗಿಲ್ಲ, ಅದ್ರು ಹೇಳ್ತೀನಿ ಕೇಳಿ. ನಮ್ಮ ಎದುರಾಳಿಗಳ ಸುದ್ದಿನ ಜಾಸ್ತಿ ಪ್ರಕಟಣೆ ಮಾಡ್ತ ನಮ್ಮನ್ನು ಸದಾ ಎಚ್ಚರದಲ್ಲಿಡೋ ಪತ್ರಿಕೆ ಅದು. ನಿಮಗವೆಲ್ಲಾ ಗೊತ್ತಾಗಲ್ಲ, ಹೋಗಿ ಮನೆಮನೆ ತಿರುಗಿ ಓಟು ಕೇಳಿ" ಎಂದರಂತಲ್ಲಾ, ಥೂತ್ತೇರಿ!

* * * * * *

ಬಿಜೆಪಿಗೆ ಹೇಳಿ ಮಾಡಿಸಿದಂತಿರುವ ಶಾಸಕ ರೇಣುಕಾಚಾರ್ಯನಿಗೆ ಇದ್ದಕ್ಕಿದ್ದಂತೆ ಶಿಸ್ತಿನ ಉಲ್ಲಂಘನೆಯ ನೋಟಿಸ್ ಹೋಗಿದೆಯಂತಲ್ಲಾ, ಇದು ನಿಜವೊ ತಮಾಷೆಯೋ ಎಂಬುದನ್ನು ತಿಳಿದುಕೊಳ್ಳಲು ರೇಣುಕಾಚಾರಿಗೇ ಫೋನ್ ಮಾಡಿದರೆ ಸಿಕ್ಕಿದರು.

ರಿಂಗ್ ಟೋನ್: "ಎಲ್ಲಿರುವೇ ಮನವ ಕಾಡುವ ರೂಪಸಿಯೇ, ಬಯಕೆಯಾ, ಬಳ್ಳಿಯ, ನಗುವ ಹೂವಾದ ಪ್ರೇಯಸಿಯೇ ಎಲ್ಲಿ....."

"ಹಲೋ ಯಾರು?"

"ನಾನು ಯಾಹೂ ಅಂತ ಸಾರ್ ಪತ್ರಕರ್ತ."

"ಏನೇಳಿ."

"ನಿಮಗೇನೊ ನೋಟೀಸ್ ಬಂದಿದೆಯಂತಲ್ಲಾ?"

"ಬಂದಿದೆ, ಉತ್ತರ ಕೊಡ್ತಿನಿ."

"ನಿಮ್ಮಂತ ನಿಷ್ಠಾವಂತರಿಗೆ ನೋಟೀಸ್ ಕೊಟ್ಟವ್ರುರಲ್ಲ, ಕಾರಣ ಏನು ಸಾರ್?"

ಥೂತ್ತೇರಿ
▸ ಯಾಹೂ

"ಕಾರಣ ನನಗೂ ಗೊತ್ತಾಗ್ತಾಯಿಲ್ಲ ಕಂಡ್ರಿ. ಇನ್ನ ನಿಮಗೇನೇಳದು?"

"ನೀವು ಮಾಡಿರೊ ತಪ್ಪೇನು ಸಾರ್?"

"ನಾನಿದುವರಿಗೂ ತಪ್ಪನ್ನೇ ಮಾಡಿಲ್ಲ ಕಂಡ್ರೀ."

"ಹೌದಾ ಸಾರ್?"

"ಹೌದು ಕಂಡ್ರೀ. ಜಯಲಕ್ಷ್ಮಿ ವಿಷಯ ಎಲ್ರೂ ಮಾಡೋ ಅಂತದ್ದು, ನೀವು ಮಾಡಲ್ವ? ಯಲ್ಲಾರು ಮಾಡೋ ಅಂತದ್ದು ತಪ್ಪೇಗಾಗುತ್ತೆ?"

"ದೇವರಾಣೆ ತಪ್ಪಲ್ಲಾ ಸಾರ್. ಅದ್ಕೆ ಆಗ ನಿಮ್ಮನ್ನು ಎಂ.ಪಿ. ಪ್ರಕಾಶ್ ಮನೆಗೆ ಕರದು. ಕಾಫಿ ಟಿಫನ್ ಕೊಟ್ಟು ಕಳಿಸಿದ್ರು."

"ಈಗ್ಲೂ ಅಷ್ಟೇ ಕಂಡ್ರೀ. ನಾವೊಂದಿಷ್ಟು ಜನ ಶಾಸಕರು ಜೊತೆಲಿ ಟೀ ಕುಡದೊ, ಆಮೇಲೆ ಊಟ ಮಾಡಿದೊ. ಇದು ತಪ್ಪೇನ್ರಿ?"

"ತಪ್ಪಲ್ಲ, ಆ ಬಿಲ್ಲನ್ನು ಸೋಮಶೇಖರ ರೆಡ್ಡಿ ಕೊಟ್ಟನಂತಲ್ಲಾ ಸಾರ್?"

"ದುಡ್ಡಿದೆ, ಕೊಡ್ತರೆ ಕಂಡ್ರೀ. ಈಗ ನೀವೇ ಎಲ್ಲೊ ಹೋಗಿ ಮಜ ಮಾಡಿ ಬರ್‍ತಿರ. ನಿಮ್ಮ ಜೊತೆಲಿರೊ ಶ್ರೀಮಂತ ಬಿಲ್ಲು ಕೊಡ್ತನೆ. ಹಾಗೆ ನಮ್ಮ ಬಿಲ್ಲನ್ನು ರೆಡ್ಡಿ ಕೊಟ್ರೆ ತಪ್ಪೇನು?"

"ರೆಡ್ಡಿಗೆ ಸನ್ಮಾನ ಮಾಡಿದರಂತಲ್ಲಾ ಸಾರ್?"

"ಸನ್ಮಾನ ಸುಮ್ಮಸುಮ್ಮನೆ ಮಾಡಕ್ಕಾಗುತ್ತೇನ್ರಿ? ಹದಿನೈದು ವರ್ಷದಿಂದ ಕೆಎಂಎಫ್‌ನಲ್ಲಿ ಗೂಟ ಹೊಡಕಂಡಿದ್ದ ರೇವಣ್ಣನ್ನ ಸೋಲಿಸಿದ್ಕೆ ಸನ್ಮಾನ ಮಾಡಿದೊ. ಇದು ತಪ್ಪಾ?"

"ತಪ್ಪಲವೇನ್ರಿ. ಆ ಕೆಎಂಎಫ್ ಛೇರ್‌ಮನ್ ಛೇರ್ ಮೇಲೆ ಸದಾನಂದಗೌಡ ಕೂರಸಾ ಅಂತ ಇದ್ದ, ಅಂತದರಲ್ಲಿ ರೆಡ್ಡಿ ಕೂತಗೊಂಡ. ಅವ್ರನಿಗೆ ನೀವು ಸನ್ಮಾನ ಮಾಡ್ತಿರಿ ಅಂದ್ರೆ ಸದಾನಂದಗೌಡನಿಗೆ ಉರಿಯದಿಲವೆ?"

"ಸದಾನಂದಗೌಡನಿಗೆ ಯಾರು ಚಾಡಿ ಹೇಳ್ತ ಅವ್ರುರೆ ಅಂತ ನನಿಗ್ಗೊತ್ತು."

"ಯಾರು ಅಂತ ಹೇಳಿ ಸಾರ್."

"ಈಗ್ಲೆ ಹೇಳಲ್ಲ, ನೋಟೀಸಿಗೆ ಉತ್ತರ ಕೊಟ್ಟ ನಂತರ ಹೇಳ್ತೀನಿ."

"ಜಯಲಕ್ಷ್ಮಿ ಹೇಳಿರಬೌದಾ ಸಾರ್?"

"ಛೇ, ಅವ್ಳಂತವ್ಳಲ್ಲ, ಅವ್ಳೇನಿದ್ರು ಬಹಿರಂಗವಾಗಿ ಟಿವಿಯವರ ಮುಂದೆ ಹೇಳ್ತಳೆ. ಈಚೆಗೆ ಅಂದ್ರೆ ಹಟ್ಟಿ ಚಿನ್ನದ ಗಣಿ ಅಧ್ಯಕ್ಷನಾದ ಮೇಲೆ ತುಂಬಾ ಹಚ್ಚಗೊಂಡಿದ್ದಾಳೆ. ಅವ್ಳ ಮೇಲೆ ಅನ್ಯಾಯ ಹೇಳಬಾರ್ದು. ಅವಳು ಹಟ್ಟಿ ಚಿನ್ನ ಇದ್ದಂಗೆ!"




ಈ ರಾಘವೇಶ್ವರ ಎಂಥ ಪಾಕಡಾ ಸ್ವಾಮಿ ಎಂದರೆ ತನ್ನ ಕಾನೂನುಬಾಹಿರ ಚಟುವಟಿಕೆಗಳಿಗೆ ನ್ಯಾಯಾಂಗದ ಸಮ್ಮತಿಯನ್ನೇ ದಕ್ಕಿಸಿಕೊಂಡುಬಿಡುವ ಮಾಸ್ಟರ್ ಪ್ಲಾನ್ ಹಾಕಿದ. ಅದರಂತೆ ತನ್ನ ಮಠದ ಕಾರ್ಯಕ್ರಮಕ್ಕೆ ಮಾಜಿ ಮತ್ತು ಹಾಲಿ ನ್ಯಾಯಾಧೀಶರನ್ನು ಆಹ್ವಾನಿಸಿದ. ಈಗಾಗಲೇ ಹಲವಾರು ಮೊಕದ್ದಮೆಗಳನ್ನು ಎದುರಿಸುತ್ತಿರುವ, ಅಮಾನವೀಯ ಜಾತಿಪದ್ಧತಿಯನ್ನು ಅನುಸರಿಸುವ ಈತನ ಕಾರ್ಯಕ್ರಮಕ್ಕೆ ನ್ಯಾಯಾಧೀಶರು ಹೋಗಿದ್ದು ಎಷ್ಟು ಸರಿ? ಅದಾದ ನಂತರವೂ ರಾಘವೇಶ್ವರನಿಗೆ ಸಂಬಂಧಿಸಿದ ಕೇಸಿನಲ್ಲಿ ತೀರ್ಪು ನೀಡಿದ್ದು ನೀತಿಸಂಹಿತೆಯ ಉಲ್ಲಂಘನೆಯಲ್ಲವೇ?



ರಾಘವೇಶ್ವರನ ಕುತಂತ್ರ

ಜಡ್ಜ್ ತಲೆ ಮೇಲೆ ಕೈ!



ಕನ್ನಡಿಗರನ್ನು ಮುಠಾಳರು ಎಂದೇ ಭಾವಿಸಿದಂತಿರುವ ರಾಮಚಂದ್ರಾಪುರ ಮಠದ ರಾಘವೇಶ್ವರ ಸ್ವಾಮಿ ಗಂಜಳ, ಸಗಣಿಗಳನ್ನೇ ಅಮೃತ ಎಂದು ಕೊಟ್ಟು ಸರ್ಕಾರದಿಂದ ಕೋಟಿಗಟ್ಟಲೇ ಫೀಸನ್ನು ವಸೂಲಿ ಮಾಡಲು ಪ್ರಾರಂಭಿಸಿದ್ದು ಹಳೆಯ ಸಂಗತಿ. ಆದರೆ ಯಾವಾಗ ಈ ಸ್ವಾಮಿ ಬಾಲಿವುಡ್ಡಿನ ಪೋರಿಯೊಬ್ಬಳನ್ನು ಗೋಕರ್ಣಕ್ಕೆ ಕರೆತಂದು ಆಕೆಯನ್ನು ಸನ್ಮಾನಿಸಿದರೋ ಆಗ ಇಡೀ ಹವ್ಯಕ ಸಮುದಾಯವೇ ಈತನ ಬಗ್ಗೆ ಅಸಹ್ಯ ಪಟ್ಟುಕೊಳ್ಳಲು ಪ್ರಾರಂಭಿಸಿತು. ತಾವು ಕುರುಡರಂತೆ ಈತನನ್ನು ಹಿಂಬಾಲಿಸಿಕೊಂಡು ಬಂದಿದ್ದಕ್ಕೆ ಪಶ್ಚಾತ್ತಾಪ ಪಟ್ಟಿತು. 'ಲಂಕೇಶ್'ನಲ್ಲಿ ಇದರ ಬಗ್ಗೆ ವರದಿಯೊಂದು ಪ್ರಕಟಗೊಂಡ ನಂತರ ರಾಗ-ದ್ವೇಷಗಳನ್ನೇ ತುಂಬಿಕೊಂಡಿರುವ ಈ ರಾಘವೇಶ್ವರ ರಾಜ್ಯದೆಲ್ಲೆಡೆ ಪತ್ರಿಕೆ ವಿರುದ್ಧ ಕೇಸು ಹಾಕಿಸಿ ಬೆದರಿಸಲು ಪ್ರಯತ್ನಿಸುತ್ತಿದ್ದಾನೆ. ಆದರೆ ಇಂಥಾ ಆಷಾಢಭೂತಿ ಸ್ವಾಮಿಗಳು ಮಾಡುವ ವಂಚನೆಯ ಬಗ್ಗೆ ಜನರನ್ನು ಜಾಗೃತಗೊಳಿಸುವುದರಿಂದ 'ಲಂಕೇಶ್'ನ್ನು ಕೇಸುಗಳು ಹಿಮ್ಮೆಟ್ಟಿಸುವುದಿಲ್ಲವಲ್ಲ!

ಆದ್ದರಿಂದಲೇ ಬಜೆಪಿ ಸರ್ಕಾರ ಬಂದಮೇಲೆ ಈ ಸ್ವಾಮಿ ಸರ್ಕಾರದ ಯಂತ್ರಾಂಗವನ್ನು ಎಷ್ಟರಮಟ್ಟಿಗೆ ದುರುಪಯೋಗ ಪಡಿಸಿಕೊಂಡಿದ್ದಾನೆಂದು ಪತ್ರಿಕೆ ಗಮನಿಸುತ್ತಲೇ ಇತ್ತು. ಈಗ ಈ ಗೋಮುಖ ಸ್ವಾಮಿ ಸರ್ಕಾರವನ್ನಿರಲಿ ನ್ಯಾಯಾಂಗಕ್ಕೇ ಮಣ್ಣೆರಚಿ ತನ್ನ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸಿದ ಒಂದು ವಿದ್ಯಮಾನ ಪತ್ರಿಕೆಯ ಕಣ್ಣಿಗೆ ಬಿದ್ದಿದೆ.

ಯಡಿಯೂರಪ್ಪನ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅತಿದೊಡ್ಡ ಫಲಾನುಭವಿ ಯಾರಾದರೂ ಇದ್ದರೆ ಅದು ಈ ರಾಘವೇಶ್ವರ ಎನ್ನುವುದು ಎಲ್ಲರಿಗೂ ಗೊತ್ತು. ಸರ್ಕಾರದಿಂದ ಗೋವಿನ ಹೆಸರಲ್ಲಿ, ಹವ್ಯಕ ಸಮುದಾಯದ ಹೆಸರಲ್ಲಿ ಕೋಟಿಗಟ್ಟಲೇ ಅನುದಾನವನ್ನು ನುಂಗಿಹಾಕಿರುವ ಈತನಿಂದ ಗೋವುಗಳಿಗಾಗಲೀ, ಹವ್ಯಕ ಸಮುದಾಯಕ್ಕಾಗಲೀ ಕಿಂಚಿತ್ತೂ ಉಪಕಾರವಾಗಿಲ್ಲ ಎನ್ನುವುದು ಬೇರೇ ಮಾತು. ಅವೆಲ್ಲಾ ಸಾಲದೆಂಬಂತೆ ಯಡಿಯೂರಪ್ಪನ ಸರ್ಕಾರ ಶೂದ್ರರನ್ನು ಒಳಗೊಂಡಂತೆ ಸಕಲರೂ ನಡೆದುಕೊಳ್ಳುತ್ತಿದ್ದ ಗೋಕರ್ಣದ ಶೈವ ಮಠವನ್ನು ಈ ಅಪ್ಪಟ ಬ್ರಾಹ್ಮಣವಾದಿ ಸ್ವಾಮಿಗೆ ಕಾನೂನು ಬಾಹಿರವಾಗಿ ವಹಿಸಿಕೊಟ್ಟಿತು.

ಸರ್ಕಾರದ ಈ ನಿರ್ಣಯ ಕೇವಲ ಕಾನೂನುಬಾಹಿರ ಮಾತ್ರವಾಗಿರಲಿಲ್ಲ, ನ್ಯಾಯಾದೇಶದ ಉಲ್ಲಂಘನೆಯೂ ಆಗಿತ್ತು. ಏಕೆಂದರೆ 2006ರಲ್ಲಿ ಗೋಕರ್ಣ ಮಠವನ್ನು ಸರ್ಕಾರ ತನ್ನ ಸುಪರ್ದಿಗೆ ತೆಗೆದುಕೊಂಡು ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಿತ್ತು. ಸರ್ಕಾರದ ಈ ಕ್ರಮ ಕಾನೂನುಬಾಹಿರವೆಂದು ಆರೋಪಿಸಿ ಆ



ಹನುಮಾನೋತ್ಸವದಲ್ಲಿ ರಾಘವೇಶ್ವರರೊಂದಿಗೆ ನ್ಯಾಯಮೂರ್ತಿ ಶಾಂತನಗೌಡರ್...



ಜಸ್ಟಿಸ್ ಶಾಂತನಗೌಡರ್, ಶಿವರಾಜ್ ಪಾಟೀಲ್ ಮತ್ತು ಕೆ.ಎಸ್.ಎಲ್. ಸ್ವಾಮಿಯೊಂದಿಗೆ ರಾಘವೇಶ್ವರ...



ರಾಘವೇಶ್ವರರಿಂದ ರಾಷ್ಟ್ರೀಯ ಮಾನವಹಕ್ಕು ಆಯೋಗದ ಮಾಜಿ ಅಧ್ಯಕ್ಷ ಶಿವರಾಜ್ ಪಾಟೀಲ್‌ಗೆ ಸನ್ಮಾನ...

ಮಠದ ವಂಶಪಾರಂಪರ್ಯ ವಾರಸುದಾರ ಬಿ.ವಿ.ದೀಕ್ಷಿತ್ ಎಂಬುವರು 2006ರ ಡಿಸೆಂಬರ್‌ನಲ್ಲಿ ಹೈಕೋರ್ಟಿನಲ್ಲಿ ರಿಟ್ ಮೊಕದ್ದಮೆ ಹೂಡಿದರು. ಅದನ್ನು 2006ರ ರಿಟ್ ಮೊಕದ್ದಮೆ 17580 ಸಂಖ್ಯೆಯಡಿ ನೊಂದಾಯಿಸಿಕೊಂಡ ಹೈಕೋರ್ಟು ಸರ್ಕಾರದ ಕ್ರಮಕ್ಕೆ ಡಿಸೆಂಬರ್ 12ರಂದು ತಡೆಯಾಜ್ಞೆ ನೀಡಿತು. ಮತ್ತೆ ಡಿಸೆಂಬರ್ 19ರಂದು ಆ ತಡೆಯಾಜ್ಞೆಯನ್ನು 2008ರ ಆಗಸ್ಟ್ 19ರ ತನಕ ವಿಸ್ತರಿಸಿತು.

ಆದರೆ ಆತುರಗೆಟ್ಟ ಯಡಿಯೂರಪ್ಪನವರ ಸರ್ಕಾರ 2008ರ ಆಗಸ್ಟ್ ವೇಳೆಗೆ ಆಪರೇಷನ್ ಕಮಲ ಮಾಡಿ ಸ್ವಂತ ಕಾಲಿನ ಮೇಲೆ ಬಹುಮತ ಪಡೆದೊಡನೆ ಎಲ್ಲಾ ಕಾನೂನು ನಿಯಮಾವಳಿಗಳನ್ನೂ ಗಾಳಿಗೆ ತೂರಿ ಆಗಸ್ಟ್ 14ನೇ ತಾರೀಕಿನಂದೆ ಗೋಕರ್ಣ ಮಠವನ್ನು ರಾಘವೇಶ್ವರನಿಗೆ ಹಸ್ತಾಂತರಿಸಿತು. ಅಂದರೆ ಯಡ್ಡಿಯ ಸರ್ಕಾರವೇ ನ್ಯಾಯಾಲಯ ನೀಡಿದ್ದ ತಡೆಯಾಜ್ಞೆಯನ್ನು ಉಲ್ಲಂಘಿಸಿತ್ತು! ಅಷ್ಟೇ ಅಲ್ಲ, ಸ್ಥಳೀಯ ಜನರ ವ್ಯಾಪಕ ಪ್ರತಿಭಟನೆಯ ನಡುವೆಯೂ ರಾಘವೇಶ್ವರನ ಗೂಂಡಾ ಗ್ಯಾಂಗ್ ಗೋಕರ್ಣ ದೇವಸ್ಥಾನಕ್ಕೆ ನುಗ್ಗಿ ಅಲ್ಲಿನ ಹುಂಡಿಗಳಲ್ಲಿದ್ದ ಲಕ್ಷಾಂತರ ರೂಪಾಯಿಗಳನ್ನು ದೋಚಿತ್ತು. ಜನರ ಪ್ರತಿಭಟನೆ, ರಾಘವೇಶ್ವರನ ಗೂಂಡಾಗಿರಿ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿತ್ತು.

ವಿಪರ್ಯಾಸದ ಸಂಗತಿ ಯಾವುದೆಂದರೆ ಹೈಕೋರ್ಟ್ ನೀಡಿದ್ದ ತಡೆಯಾಜ್ಞೆಯನ್ನು ಸರ್ಕಾರವೇ ಉಲ್ಲಂಘಿಸಿದ್ದರೂ ಅದನ್ನು ತನ್ನ ವಿವೇಚನೆಗೆ ತೆಗೆದುಕೊಳ್ಳದ ಹೈಕೋರ್ಟು ಗೋಕರ್ಣ ಮಠವನ್ನು ಸರ್ಕಾರ ಸ್ವಾಧೀನಕ್ಕೆ ತೆಗೆದುಕೊಂಡ ಕ್ರಮವನ್ನು ವಿರೋಧಿಸಿ ದೀಕ್ಷಿತ್ ಅವರು ಸಲ್ಲಿಸಿದ್ದ ರಿಟ್ ಪಿಟಿಷನ್ ಅನ್ನು ವಜಾ ಮಾಡಿತು. ಅಂದರೆ ಸರ್ಕಾರ ನಾಲ್ಕು ದಿನಗಳಷ್ಟು ಮುಂಚಿತವಾಗಿ ನ್ಯಾಯಾಂಗದ ತಡೆಯಾಜ್ಞೆಯನ್ನು ಉಲ್ಲಂಘಿಸಿ ಮಠವನ್ನು ವಹಿಸಿಕೊಟ್ಟದ್ದನ್ನು ಸರ್ಕಾರದ ವಕೀಲರು ಮರೆಸುವಷ್ಟು ಗಂಜಳ ಸುರಿಸುವಲ್ಲಿ ರಾಘವೇಶ್ವರ ಯಶಸ್ವಿಯಾಗಿದ್ದ!

ನಂತರ ಮಠದ ಹಳೆ ವಾರಸುದಾರರಾದ ಬಿ.ವಿ.ದೀಕ್ಷಿತರು ಹೈಕೋರ್ಟಿನ ಈ ತೀರ್ಪನ್ನು 2009ರ ಮಾರ್ಚ್ 11ರಂದು ಪ್ರಶ್ನಿಸಿ ರಿಟ್ ಅಪೀಲ್ ದಾಖಲಿಸಿದರು. ಅದನ್ನು ಧಾರವಾಡದಲ್ಲಿರುವ ಹೈಕೋರ್ಟ್ ಪೀಠ ವಿಚಾರಣೆಗೆ ಒಪ್ಪಿಕೊಂಡಿತು. ಆ ಮೂಲಕ ಅವರ ಹಳೆಯ ರಿಟ್ ಪಿಟಿಷನ್‌ಗೆ ಮತ್ತೆ ಜೀವಬಂತು. ಅರ್ಜಿದಾರರ ಈ ರಿಟ್ ಅಪೀಲನ್ನು ವಿಚಾರಣೆಗೆ ಒಪ್ಪಿಕೊಳ್ಳುವ ಮುನ್ನ ನ್ಯಾಯಪೀಠವು ಗೋಕರ್ಣ ವಿಷಯದಲ್ಲಿ ಸರ್ಕಾರ ನಡೆದುಕೊಂಡಿರುವ ರೀತಿಯನ್ನು ತೀವ್ರವಾಗಿ ಖಂಡಿಸಿತು. ಆದರೆ ಇದ್ಯಾವುದೂ ಮಾಧ್ಯಮಗಳಲ್ಲಿ ಪ್ರಕಟವಾಗಲೇ ಇಲ್ಲ. ಪ್ರಾಯಶಃ ಮಾಧ್ಯಮ ಕಚೇರಿಗಳ ಮುಂದೆಯೂ ರಾಘವೇಶ್ವರ ಸಗಣಿ ಹಾಕಿದ್ದಿರಬೇಕು!

ಸಗಣಿ ತಿನ್ನುವ ಸರ್ಕಾರವೇ ಆಡಳಿತ ನಡೆಸುತ್ತಿರುವಾಗ ನಾಡೆಲ್ಲಾ ತನ್ನ ಜಾಗೀರೇ ಎಂದು ಭಾವಿಸಿರುವ ರಾಘವೇಶ್ವರ ಸ್ಥಳೀಯ ಪಂಚಾಯತಿಯನ್ನು ಹೇಳದೆಕೇಳದೆ ಗೋಕರ್ಣದಲ್ಲಿ ಹಲವಾರು ಕಟ್ಟಡ ನಿರ್ಮಾಣಗಳನ್ನು ಪ್ರಾರಂಭಿಸಿದ. ಅಂಥ ಒಂದು ನಿರ್ಮಾಣ ಚಟುವಟಿಕೆಗೇ ಮೊನ್ನೆ ಮಲ್ಲಿಕಾ ಶೆರಾವತ್ ಎಂಬ ಐಟಂ ಬೆಡಗಿ ಮುಖ್ಯ ಅತಿಥಿಯಾಗಿದ್ದು.

ಅದು ಬದಿಗಿರಲಿ, ಈ ರಾಘವೇಶ್ವರ ಎಂಥಾ ಪಾಕಡಾ ಸ್ವಾಮಿ ಎಂದರೆ ತನ್ನ ಕಾನೂನುಬಾಹಿರ ಚಟುವಟಿಕೆಗಳಿಗೆ ನ್ಯಾಯಾಂಗದ ಸಮ್ಮತಿಯನ್ನೇ ದಕ್ಕಿಸಿಕೊಂಡುಬಿಡುವ ಮಾಸ್ಟರ್ ಪ್ಲಾನ್ ಹಾಕಿದ. ತಾನು ಕಾನೂನುಬಾಹಿರವಾಗಿ ಕಟ್ಟಡಗಳನ್ನು ನಿರ್ಮಿಸಲು ಪ್ರಾರಂಭಿಸಿದ್ದ ಕಾಲದಲ್ಲೇ ಮಠದ ಆವರಣದಲ್ಲಿ ಒಂದು ವಾರದ ಹನುಮಾನೋತ್ಸವವನ್ನು ಏರ್ಪಡಿಸಿದ. ಅದರ ಅಂತಿಮ ದಿನವಾದ 2009ರ ಏಪ್ರಿಲ್ 4ರಂದು ತನ್ನ ಮಠದ ಆವರಣದಲ್ಲಿ ಸುಪ್ರೀಂಕೋರ್ಟಿನ ಮಾಜಿ ಮುಖ್ಯ ನ್ಯಾಯಾಧೀಶರೂ ಮತ್ತು ಅಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರೂ ಆಗಿದ್ದ ನ್ಯಾಯಮೂರ್ತಿ ಶಿವರಾಜ್ ಪಾಟೀಲರಿಗೆ ಸನ್ಮಾನವನ್ನೂ ಮಾಡಿದ. ತನ್ನ ಮಠದಲ್ಲಿ ಪಂಕ್ತಿ ಭೇದ ಮಾಡುವ ಮೂಲಕ ಅಮಾನವೀಯ ಧೋರಣೆಯನ್ನು ಅನುಸರಿಸುವ ಈತನಿಂದ ಸನ್ಮಾನ ಮಾಡಿಸಿಕೊಳ್ಳುವ ಜರೂರತ್ತು ಮಾನವ ಹಕ್ಕುಗಳ ರಕ್ಷಕರಿಗೆ ಏನಿತ್ತೋ ಗೊತ್ತಿಲ್ಲ.

ಆದರೆ ಮುಖ್ಯ ಅಂಶ ಯಾವುದೆಂದರೆ ಅಂದಿನ ಆ ಸನ್ಮಾನ ಸಭೆಗೆ ಹೈಕೋರ್ಟಿನ ಹಾಲಿ ನ್ಯಾಯಮೂರ್ತಿಯಾಗಿರುವ ಮತ್ತು ಗೋಕರ್ಣವನ್ನೂ ತನ್ನ ವ್ಯಾಪ್ತಿಯಲ್ಲಿ ಇಟ್ಟುಕೊಂಡಿರುವ ಧಾರವಾಡ ನ್ಯಾಯಮೂರ್ತಿ ಮೋಹನ್ ಶಾಂತನಗೌಡರ್ ಅವರನ್ನೂ ಈ ಸಗಣಿ ಸ್ವಾಮಿ ಆಹ್ವಾನಿಸಿದ್ದ.

ಸನ್ಮಾನ್ಯ ನ್ಯಾಯಮೂರ್ತಿಗಳಾದ ಶಾಂತನಗೌಡರ್ ಅವರು ರಾಮಚಂದ್ರಾಪುರ ಮಠದ ಈ ಸಭೆಯಲ್ಲಿ ಭಾಗವಹಿಸಿದ್ದಲ್ಲದೇ ರಾಘವೇಶ್ವರನ ಆತಿಥ್ಯವನ್ನೂ ಸ್ವೀಕರಿಸಿದ್ದರು. ತಾನು ವಿಚಾರಣೆ ನಡೆಸುತ್ತಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರೊಂದಿಗೂ ಕೋರ್ಟಿನ ಹೊರಗಡೆ ಯಾವುದೇ ಸಂಬಂಧವನ್ನು ಇಟ್ಟುಕೊಳ್ಳಬಾರದೆಂಬ ಈ ದೇಶದ ನ್ಯಾಯಾಂಗ ಪರಿಪಾಲಿಸಿಕೊಂಡು ಬಂದಿರುವ ನೀತಿಸಂಹಿತೆಗೇ ಇದು ವಿರುದ್ಧವಾಗಿತ್ತು.

ಇದು ಇಷ್ಟಕ್ಕೇ ನಿಲ್ಲಲಿಲ್ಲ. ರಾಘವೇಶ್ವರ ಅಕ್ರಮವಾಗಿ ನಡೆಸುತ್ತಿರುವ ನಿರ್ಮಾಣ ಚಟುವಟಿಕೆಗಳು ನ್ಯಾಯಾಂಗ ನಿಂದನೆಯೆಂದು ಆರೋಪಿಸಿ ನರಹರಿ ಕೃಷ್ಣ ಹೆಗ್ಡೆ ಎಂಬುವರು ಏಪ್ರಿಲ್ 18ರಂದು ಹೈಕೋರ್ಟು ಪೀಠದ ಮುಂದೆ ದೂರು ದಾಖಲಿಸಿದರು. ಇದನ್ನು ವಿಚಾರಣೆಗೆ ಅಂಗೀಕರಿಸಿದ ನ್ಯಾಯಪೀಠ ಮೇ 20ರಂದು ರಾಘವೇಶ್ವರನಿಗೆ ನೋಟೀಸನ್ನೂ ಜಾರಿ ಮಾಡಿತ್ತು.


ಆದರೆ ಜುಲೈ 10ರಂದು ಈ ಪ್ರಕರಣ ▶▶▶



...ಮೂರ್ತಿ ಮೋಹನ್ ಶಾಂತನಗೌಡರ್ ...ಮುಂದೆ ಬಂದಾಗ ಅವರು ಮಠದಿಂದ ...ಿಂದೆ ಹಾಗೆ ಮಾಡುವುದಿಲ್ಲ ಎಂಬ ...ೆ ಬರೆಸಿಕೊಂಡು ನ್ಯಾಯಾಂಗನಿಂದನೆ ...ಯನ್ನು ವಜಾ ಮಾಡಿಬಿಟ್ಟರು! ಅಷ್ಟು ...ಲ್ಲ ಇದೇ ಆಗಸ್ಟ್ 5ರಂದು ಗೋಕರ್ಣ ...ಿ ಸರ್ಕಾರ ವಶಪಡಿಸಿಕೊಂಡ ಕ್ರಮವನ್ನು ...ಶ್ನಿಸಿದ ದೂರಿನ ವಿಚಾರಣೆಯೂ ...ನ್ಯಾಯಮೂರ್ತಿಗಳ ಮುಂದೆ ವಿಚಾರಣೆಗೆ ...ತ್ತು.

...ೊಮ್ಮೆ ಆಗಸ್ಟ್ 5ರಂದೂ ಸಹ ಇದೇ ...ಮೂರ್ತಿಗಳೇ ಈ ಪ್ರಕರಣದ ವಿಚಾರಣೆ ...! ಈವರೆಗೆ ಭಾರತದ ನ್ಯಾಯಾಂಗ ...ಸಿಕೊಂಡು ಬಂದ ನೀತಿ ಸಂಹಿತೆಗೆ ...ಕ್ಕ ಅಪಚಾರ ಸಂಭವಿಸಿಬಿಡುತ್ತಿತ್ತು!

...ಕೆಂದರೆ ಭಾರತದ ನ್ಯಾಯಾಂಗದ ...ಬ್ಯ ಬುನಾದಿಯೇ ...ತಿಯಾಗಿರಬೇಕೆಂಬುದು. ಎಲ್ಲಾ ...ಧೀಶರೂ ಯಾವುದೇ ಹೊರಗಿನ ...ಗಳಿಗೆ ಒಳಗಾಗದೆ ಕಾನೂನು ಮತ್ತು ...ಕ್ಷಿಗೆ ಅನುಸಾರವಾಗಿ ನ್ಯಾಯಾದೇಶ ...ಕೆಂಬುದು ಸಂವಿಧಾನ ಕರ್ತರ ... ಆದರೆ ಜಸ್ಟೀಸ್ ಕಾರ್ಡೋಜೋ ...ವರು ಹೇಳುವಂತೆ ಈ ಅಂತಸ್ಸಾಕ್ಷಿಯ ...ಆಳದಲ್ಲಿ ಆ ನ್ಯಾಯಮೂರ್ತಿಗಳ ...ಹಾಗೂ ಇನ್ನಿತರ ಹಿನ್ನೆಲೆಗಳೇ ಕೆಲಸ ...ತ್ತಿರುತ್ತವೆ. ಅದು ಇತ್ತೀಚೆಗಂತೂ ... ಸ್ಪಷ್ಟವಾಗಿ ಎದ್ದುಕಾಣುತ್ತಿದೆ. ಅದೇನೇ ... ನ್ಯಾಯಾಧೀಶರೂ ತಮ್ಮ ವ್ಯಕ್ತಿಜೀವನದಲ್ಲಿ ...ವ ಬಗೆಯ ನೀತಿಸಂಹಿತೆಯನ್ನು ...ಸಬೇಕೆಂದೂ ಈ ದೇಶದ ಸರ್ವೋಚ್ಚ ...ಲಯದ ಪೂರ್ಣಪೀಠ ಕೆಲವು ...ಾವಳಿಗಳನ್ನೇ ರೂಪಿಸಿದೆ. ಅದನ್ನು **...tement of Values of Judicial ...dopted by the C?ief Justices' ...rence of India, 1999** ಎಂದು ...ಾಗುತ್ತದೆ. ಇದನ್ನೇ ಎಲ್ಲಾ ...ರ್ಟ್‌ಗಳೂ ಅನುಮೋದಿಸಿವೆ. ಹೀಗಾಗಿ ... ಎಲ್ಲಾ ನ್ಯಾಯಾಧೀಶರೂ ಪಾಲಿಸಲೇಬೇಕು. ...ದರ ಪ್ರಕಾರ "ನ್ಯಾಯಾಧೀಶರು 24 ...ಯೂ ನ್ಯಾಯಾಧೀಶರಂತೆ ವರ್ತಿಸಬೇಕು. ... ಆಫೀಸಿನ ಅವಧಿಯಲ್ಲಿ ಮಾತ್ರವಲ್ಲದೆ ...ಯಾಗಿಯೇ ತಾವು ವಿಚಾರಣೆ ...ರುವ ಪ್ರಕರಣಗಳಲ್ಲಿ ಸಂಬಂಧಿತವಾದ



...ದ 24 ಗಂಟೆಯೂ ಅಂತರವನ್ನು ...ಕೊಂಡಿರಬೇಕು. ಅಲ್ಲದೆ ನ್ಯಾಯಾಧೀಶರು ...ಖಾಸಗೀ ಜೀವನದಲ್ಲೂ ಜನರು ...ಂಗದ ನಿಷ್ಪಕ್ಷಪಾತತನದ ಬಗ್ಗೆ ನಂಬಿಕೆ ...ೊಳ್ಳದಂತೆ ಇರಬೇಕು. ತಾನು ಮಾತ್ರವಲ್ಲದೆ ...ಟುಂಬ ವರ್ಗದವರೂ ಸಹ ನ್ಯಾಯಾಂಗದ ...ತೆಗೆ ಚ್ಯುತಿ ಬರದಂತೆ ನಡೆದುಕೊಳ್ಳಬೇಕು. ... ಬೇಕೆ ತನ್ನ ವಿದಕೆ ಪ್ರಕರಣದಲ್ಲಿ ನ್ಯಾಯ ...ದೆಂಬ ಭಾವನೆಯನ್ನು ...ಉಂಟುಮಾಡಿದ್ದರೆ ನ್ಯಾಯಾಧೀಶರು ಅಂಥ ಪ್ರಕರಣಗಳ ವಿಚಾರಣೆಯನ್ನು ಕೈಬಿಡಬೇಕು..."

ಹೀಗಾಗಿಯೇ ತಾವು ಕೋರ್ಟಿನ ಹೊರಗಡೆ ಖಾಸಗಿ ವಲಯದಲ್ಲಿ ಸಂಬಂಧ ಹೊಂದಿರುವ ಯಾವುದೇ ವ್ಯಕ್ತಿಯ ಪ್ರಕರಣ ತನ್ನ ಮುಂದೆ ಬಂದರೆ ತಾನು ವಿಚಾರಣೆ ನಡೆಸದೆ ಅದಕ್ಕೆ **"Not Before Me-NBM"** ಎಂದು ಷರಾ ಹಾಕಿ ಬೇರೊಬ್ಬ ನ್ಯಾಯಾಧೀಶನ ಮುಂದಕ್ಕೆ ಹಸ್ತಾಂತರಿಸಬೇಕು.

ಸದರಿ ಪ್ರಕರಣದಲ್ಲಿ ಜಸ್ಟೀಸ್ ಶಾಂತನಗೌಡರ್‌ರವರು 2009ರ ಏಪ್ರಿಲ್ 4ರಂದು ಗೋಕರ್ಣ ಮಠದ ವಿವಾದದಲ್ಲಿ ಆರೋಪಿತನಾಗಿರುವ ರಾಘವೇಶ್ವರನ ಖಾಸಗಿ ಕಾರ್ಯಕ್ರಮವಾದ ಶಿವರಾಜ್ ಪಾಟೀಲ್ ಸನ್ಮಾನದಲ್ಲಿ ಭಾಗಿಯಾಗಿ ಅವರ ಆತಿಥ್ಯ ಸ್ವೀಕರಿಸಿದ್ದಾರೆ. ಅಂದರೆ ತಮಗೆ ಅವರ ಪರವಾದ ಒಲವು ಇರುವುದನ್ನು ಬಹಿರಂಗವಾಗಿ ತೋರಿಸಿದ್ದಾರೆ. ಹೀಗಾಗಿ ಜುಲೈನಲ್ಲಿ ಅವರ ಮುಂದೆ ಗೋಕರ್ಣ ಮಠದಲ್ಲಿ ನ್ಯಾಯಾಂಗ ನಿಂದನೆ ಮಾಡಿದ ಪ್ರಕರಣ ಬಂದಾಗ ಅವರು ಅದನ್ನು ಮತ್ತೊಬ್ಬ ನ್ಯಾಯಾಧೀಶರ ಪೀಠಕ್ಕೆ ವರ್ಗಾಯಿಸಬೇಕಿತ್ತು. ಆದರೆ ಅವರು ಆ ಪ್ರಕರಣ



ವಿಚಾರಣೆ ಮಾಡಿದ್ದೂ ಅಲ್ಲದೆ ರಾಘವೇಶ್ವರನನ್ನು ನ್ಯಾಯಾಲಯ ನಿಂದನೆ ಪ್ರಕರಣದಿಂದ ಮುಕ್ತಗೊಳಿಸಿಸುವ ತೀರ್ಪನ್ನೂ ನೀಡಿದ್ದಾರೆ. ಇದು ಕರ್ನಾಟಕದ ನ್ಯಾಯಾಂಗ ಚರಿತ್ರೆಯಲ್ಲಿ ನಡೆದ ಅತ್ಯಂತ ಗಂಭೀರವಾದ ಲೋಪ. ಹಾಗೆ ಲೋಪವೆಸಗಲು ನ್ಯಾಯಾಧೀಶರ ಹಿನ್ನೆಲೆ ಮತ್ತು ಮೈಮರೆವೂ ಕಾರಣವಿರಬಹುದು. ಆದರೆ ಖಂಡಿತವಾಗಿಯೂ ಇದರಲ್ಲಿ ಎದ್ದು ಕಾಣುವುದು ನ್ಯಾಯಾಧೀಶರ ಕಣ್ಣಿಗೇ ಮಣ್ಣೆರಚುವ ರಾಘವೇಶ್ವರನ ಸಂಚು!

ಈ ನ್ಯಾಯಾಧೀಶರು ಹೀಗೆ ರಾಘವೇಶ್ವರನ ಆತಿಥ್ಯ ಸ್ವೀಕರಿಸಿರುವುದರಿಂದ ಈ ಪ್ರಕರಣವನ್ನು ಮತ್ತೊಬ್ಬ ನ್ಯಾಯಾಧೀಶರೇ ವಿಚಾರಣೆ ಮಾಡಬೇಕೆಂದು ದೀಕ್ಷಿತ್ ಎಂಬ ಅಹವಾಲುದಾರರು ಇತ್ತೀಚೆಗೆ ನ್ಯಾಯಾಲಯಕ್ಕೆ ಪತ್ರ ಬರೆದಿದ್ದರಿಂದ ಆಗಸ್ಟ್ 5ರಂದು ಈ ಪ್ರಕರಣದಲ್ಲಿ ತಾವು ನಡೆಸಬೇಕಿದ್ದ ವಿಚಾರಣೆಯಿಂದ ಜಸ್ಟೀಸ್ ಶಾಂತನಗೌಡರ್‌ರವರು ಹಿಂದೆ ಸರಿದು ಪ್ರಕರಣವನ್ನು ಮತ್ತೊಂದು ಪೀಠಕ್ಕೆ ವರ್ಗಾಯಿಸಿದ್ದಾರೆ. ಆದರೆ ಇದಕ್ಕಾಗಿ ಕಾಯದೆ ತನ್ನಿಂದಾಗುತ್ತಿದ್ದ ಅಚಾತುರ್ಯವನ್ನು ಅರ್ಥಮಾಡಿಕೊಂಡು ಶಾಂತನಗೌಡರ್‌ರವರು ಬೇರೊಬ್ಬರ ಪೀಠಕ್ಕೆ ಪ್ರಕರಣವನ್ನು ತಾವೇ ವರ್ಗಾಯಿಸಿದ್ದರೆ ನ್ಯಾಯಾಲಯದ ಘನತೆ ಇನ್ನೂ ಹೆಚ್ಚುತ್ತಿತ್ತು. ಸಂವಿಧಾನಬಾಹಿರ ನಡಾವಳಿಗಳನ್ನು ಆಚರಿಸುವ ಆ ಮಠಕ್ಕೆ ಹೋಗದೆ ಇದ್ದಿದ್ದರೆ ಜನರಿಗೆ ನ್ಯಾಯಾಂಗದ ಬಗ್ಗೆ ಇನ್ನೂ ಹೆಚ್ಚು ನಂಬಿಕೆ ಬರುತ್ತಿತ್ತು. ಆದರೆ ಅಷ್ಟೊಂದು ನಿರೀಕ್ಷಿಸುವುದು ದುರಾಸೆಯಾಗಿಬಿಡುವ ಸಂದರ್ಭದಲ್ಲಿ ನಾವಿದ್ದೇವೆ!

ರಾಘವೇಶ್ವರ ಎಂಬ ಸಗಣಿ ಸ್ವಾಮಿಯ ಸಂಚುಗಳು ಎಷ್ಟು ಹೊಲಸು ನಾರುತ್ತಿವೆ ಮತ್ತು ಎಷ್ಟು ಅಪಾಯಕಾರಿಯಾಗಿವೆ ಎಂಬುದನ್ನು ಈ ಪ್ರಕರಣ ಮತ್ತೊಮ್ಮೆ ಸಾಬೀತುಪಡಿಸಿದೆ.

● ಶಿವಸುಂದರ್

ರಾಮಚಂದ್ರಾಪುರದಲ್ಲಿರುವ ಗುರುಕುಲದ [illegible] ಜಗದೀಶ ಬೇರೆ ಯಾರೂ ಅಲ್ಲ, ಆತ ಈ ಗುರುಕುಲವನ್ನು ಪ್ರಾರಂಭಿಸಿದ ಕಾವಿಧಾರಿಯ ತಂಗಿಯ ಗಂಡ. ಈ ಜಗದೀಶ ಸ್ಥಳೀಯವಾಗಿ ಖ್ಯಾತಿ ಮತ್ತು ಕುಖ್ಯಾತಿಗಳನ್ನು ಗಳಿಸಿರುವವನು.

ಈತ ಇಲ್ಲಿನ ಒಂದು ಪ್ರಮುಖ ಸಮಿತಿಯ ಸದಸ್ಯನೂ ಹೌದು. ಹಾಗೆಯೇ ಪ್ರದಿ [illegible] ಹೌದು. ಇದು ಈತನ 'ಖ್ಯಾತಿ'ಯ ಮುಖ.

ಇವನ 'ಕುಖ್ಯಾತಿ'ಯ ಮುಖ ಹೀಗಿದೆ: ಸುಮಾರು ಐದು ವರ್ಷಗಳ ಹಿಂದೆ ರಾಮಚಂದ್ರಪುರದಲ್ಲಿ ನಡೆದ 'ರಾಮ ಚೈತ್ರ' ಎಂಬ ಕಾರ್ಯಕ್ರಮದ ಸಮಯದಲ್ಲಿ ಶರಾವತಿ ನದಿಯಲ್ಲಿ ಸ್ನಾನ ಮಾಡುತ್ತಿದ್ದ ಹೆಣ್ಣುಮಕ್ಕಳ ದೃಶ್ಯಗಳನ್ನು ಜಗದೀಶನ ಪುಂಡು ಹುಡುಗರ ಗುಂಪು ತಮ್ಮ ಮೊಬೈಲ್‌ನಲ್ಲಿ ಸೆರೆಹಿಡಿದು ಸಿಕ್ಕಿಬಿದ್ದಿದ್ದರು. ಆಗ ಅದೊಂದು ದೊಡ್ಡ ರಂಪವಾಗಿತ್ತು.

ಆದಾದ ನಂತರವೂ ಈತ ಪಾಠ ಕಲಿಯಲಿಲ್ಲ. ಗುರುಕುಲದಲ್ಲಿ ಆಯಾ ಕೆಲಸ ಮಾಡಿಕೊಂಡಿದ್ದಾಕೆಯೊಬ್ಬಳನ್ನು ತನ್ನ ತೆವಲಿಗೆ ಬಳಸಿಕೊಂಡಿದ್ದನ್ನು ಕಂಡಿರುವ ಕೆಲವರು ಇವನ ಹೆಸರು ಕೇಳಿದರೂ ಉರಿದು ಬೀಳುತ್ತಾರೆ.

ಅಪ್ರಾಪ್ತ ವಯಸ್ಸಿನ ಬಾಲಕಿಯರನ್ನು ತನ್ನ ಪಶುವಾಂಛೆಗೆ ಬಳಸಿಕೊಳ್ಳುತ್ತಿರುವ ಇವನನ್ನು ಆದಷ್ಟು ಬೇಗ ಕಂಬಿ ಎಣಿಸುವಂತೆ ಮಾಡಬೇಕಾಗಿರುವುದು ಮಲೆನಾಡಿನ ಹವ್ಯಕರ ಮತ್ತು ಕಾನೂನುಪಾಲಕರ ಕೆಲಸ.

ರಾಮಚಂದ್ರಾಪುರ ಗುರುಕುಲದಲ್ಲಿ ಸೆಕ್ಸ್ ಹಗರಣ

ಬಲಿಪಶುಗಳಾದ ಹವ್ಯಕ ಬಾಲೆಯರು

ಇದು ಮಲೆನಾಡಿನ ರಾಮಚಂದ್ರಾಪುರ ಗುರುಕುಲದಲ್ಲಿ ನಡೆದಿರುವ ಲೇಟೆಸ್ಟ್ ಕರ್ಮಕಾಂಡ, ಅಲ್ಲಲ್ಲ 'ಕಾಮ'ಕಾಂಡ. ಆ ಗುರುಕುಲದಲ್ಲಿ ನಡೆದಿರುವ ಈ ಕಾಮಕಾಂಡಕ್ಕೆ ಬಲಿಯಾಗಿರುವುದು ಬೇರೆ ಯಾರೂ ಅಲ್ಲ, ಮಲೆನಾಡು ಮತ್ತು ಕರಾವಳಿ ಭಾಗದ ಹವ್ಯಕ ಬ್ರಾಹ್ಮಣರ ಹೆಣ್ಣುಮಕ್ಕಳು.

ಈಗ್ಗೆ ನಾಲ್ಕೈದು ವರ್ಷಗಳ ಹಿಂದೆ ಇಲ್ಲಿನ ಓರ್ವ ಕಾವಿಧಾರಿ ತಾನು ರಾಮಚಂದ್ರಾಪುರದಲ್ಲಿ ಗುರುಕುಲ ಮಾದರಿಯ 'ವಿಶ್ವವಿದ್ಯಾಲಯ'ವನ್ನು ಆರಂಭಿಸುತ್ತೇನೆಂದು ಹೇಳಿ ಇಲ್ಲಿನ್ನ ಗಂಡುಮಕ್ಕಳಿಗೆ ಮತ್ತು ಹೆಣ್ಣಮಕ್ಕಳಿಗೆಂದು ಪ್ರತ್ಯೇಕವಾದ ಎರಡು ಗುರುಕುಲ ಮಾದರಿಯ ಶಾಲೆಗಳನ್ನು ಆರಂಭಿಸಿದ.

ಈ 'ವಿಶ್ವವಿದ್ಯಾಲಯ'ದ ಮೂಲಕ ಪ್ರಾಚೀನ ಭಾರತದ ತಕ್ಷಶಿಲೆಯನ್ನೇ ಇಲ್ಲಿ ತಂದಿಳಿಸುತ್ತೇನೆಂದು ಆ ಕಾವಿಧಾರಿ ಹೇಳಿದ್ದನ್ನು ನಂಬಿದ ಸಾಗರ, ಹೊಸನಗರ, ಉತ್ತರ ಕನ್ನಡ ಪ್ರದೇಶದ ಕೆಳ ವರ್ಗದ ಹಾಗೂ ಮಧ್ಯಮ ವರ್ಗದ ಹವ್ಯಕರು (ಇಲ್ಲಿ ವೇದಾಧ್ಯಯನವೂ ಇದ್ದುದರಿಂದ ಬೇರೆ ಜಾತಿಯವರನ್ನು ಸೇರಿಸಿಕೊಂಡಿರಲಿಲ್ಲ!) ತಮ್ಮ ಮಕ್ಕಳನ್ನು ಇಲ್ಲಿ ತಂದುಬಿಟ್ಟಿದ್ದರು. ಕಾವಿಧಾರಿಯು ಈ 'ವಿಶ್ವವಿದ್ಯಾಲಯ'ವನ್ನು ಉಚಿತವಾಗಿ ನಡೆಸುತ್ತೇನೆಂದು ಹೇಳಿದ್ದರೂ ಅದಕ್ಕಾಗಿ ರಾಶಿರಾಶಿ ಹಣವನ್ನು ವಿದೇಶಗಳಲ್ಲಿರುವ ಹವ್ಯಕರಿಂದ ಸಂಗ್ರಹಿಸಲಾಗಿತ್ತೆಂಬುದು ಬೇರೆ ವಿಷಯ.

ಈ ಗುರುಕುಲವನ್ನು ಪ್ರಾರಂಭಿಸುವ ಮೂಲಕ ತಾನು ಸಮಾಜಸೇವೆಯನ್ನು ಮಾಡುತ್ತಿದ್ದೇನೆ ಎಂದು ಕಾವಿಧಾರಿ ಹೇಳಿದ್ದನಾದರೂ ಆತನ ಬಗಲಲ್ಲೇ ಒಬ್ಬ ಕಾಮುಕ ಅಡಗಿ ಕುಳಿತಿದ್ದ. ಈ ಕತೆಯ ಕೇಂದ್ರಬಿಂದುವಾಗಿರುವ ಅವನ ಹೆಸರು ಜಗದೀಶ! ಇವನನ್ನೇ ಹೆಣ್ಣುಮಕ್ಕಳ ಗುರುಕುಲದ ಆಚಾರ್ಯನನ್ನಾಗಿ ನೇಮಿಸಲಾಗಿತ್ತು.

ಯಾವಾಗ ಹೆಣ್ಣುಮಕ್ಕಳಿಗೆಂದೇ ಒಂದು ಪ್ರತ್ಯೇಕ ಗುರುಕುಲವನ್ನು ಸ್ಥಾಪಿಸಲಾಯಿತೋ ಅಂದಿನಿಂದಲೇ ಈ ಜಗದೀಶ ಅಲ್ಲಿಗೆ ಬಂದಿದ್ದ ಅಪ್ರಾಪ್ತ ಬಾಲಕಿಯರ ಮೇಲೆ ತನ್ನಲ್ಲಿದ್ದ ಪಶುವಾಂಛೆಯನ್ನು ಪ್ರದರ್ಶಿಸಲಾರಂಭಿಸಿದ.

ತಮ್ಮ ಊರುಗಳಲ್ಲಿ ಐದರಿಂದ ಒಂಭತ್ತನೇ ತರಗತಿ ತನಕ ಓದಿದ್ದ ಈ ಹೆಣ್ಣು ಮಕ್ಕಳು ಇಲ್ಲಿಗೆ ಬಂದಮೇಲೆ ಏನನ್ನೂ ಓದಲೇ ಇಲ್ಲ ಎನ್ನಬಹುದು. ಯಾಕೆಂದರೆ ಇಲ್ಲಿ ಅವರಿಗೆ ಯಾವ ಪಾಠಗಳಾಗಲಿ, ಪರೀಕ್ಷೆಗಳಾಗಲಿ ನಡೆಯುತ್ತಿರಲಿಲ್ಲ, ಬದಲಿಗೆ ಇಲ್ಲಿ ವೇದ, ಉಪವೇದ, ಸಂಸ್ಕಾರ, ಸಂಗೀತ, ಯೋಗಗಳಂತಹ ವಿಷಯಗಳನ್ನೇ ಕಲಿಸಲಾಗುತ್ತಿದೆ. ಈ ಹೆಣ್ಣು ಮಕ್ಕಳನ್ನು ಭಾರತೀಯ ನಾರಿಯರನ್ನಾಗಿ ಮಾರ್ಪಡಿಸುವ ಗುರಿ ಈ ಗುರುಕುಲದ್ದು. ಹೋಗಲಿ ಅದಾದರೂ ಸರಿಯಾಗಿ ನಡೆಯಿತಾ ಎಂದರೆ ಅದೂ ಇಲ್ಲ, ಯಾಕೆಂದರೆ ಈ ಗುರುಕುಲದ ಜವಾಬ್ದಾರಿಯನ್ನು ಹೊತ್ತಿದ್ದ 'ವಿದ್ವಾನ್' ಜಗದೀಶ ಆ ಹೆಣ್ಣುಮಕ್ಕಳಿಗೆ ಮಾಡಿದ್ದನ್ನು, ಅವರಿಗೆ ಹೇಳಿಕೊಡಲು ಯತ್ನಿಸಿದ್ದನ್ನು ಕಂಡು ಇಲ್ಲಿಂದ ಓಡಿಹೋಗಲು ಪ್ರಯತ್ನಿಸಿದ ವಿದ್ಯಾರ್ಥಿನಿಯರೇ ಹೆಚ್ಚು!

ಗುರುಕುಲದಲ್ಲಿ ಮೈಂಡ್ ರೀಡಿಂಗ್ ಮತ್ತು ಮನಶ್ಶಾಂತಿ ತಂತ್ರಗಳನ್ನು ವಿದ್ಯಾರ್ಥಿನಿಯರ ಮೇಲೆ ಪ್ರಯೋಗಿಸುವ ನೆಪದಲ್ಲಿ ಈ ವಿಕೃತ ಮನುಷ್ಯನ ಜಗದೀಶ ಆ ಹೆಣ್ಣುಮಕ್ಕಳನ್ನು ಒಬ್ಬೊಬ್ಬರನ್ನಾಗಿಯೇ ತನ್ನ ಕೊಠಡಿಯಲ್ಲಿ ಕೂರಿಸಿಕೊಂಡು ತನ್ನ ವಿಕೃತಿಗಳನ್ನು ತೋರಿಸುತ್ತಿದ್ದನೆಂದು ಇವತ್ತು ಹಲವಾರು ಹೆಣ್ಣು ಮಕ್ಕಳು ಹೇಳುತ್ತಿದ್ದಾರೆ. ಅವರನ್ನು ತನ್ನ ಹತ್ತಿರದಲ್ಲಿ ಕೂರಿಸಿಕೊಳ್ಳುವುದು, ಮೈ ಕೈ ಮೇಲೆ ಕೈಯಾಡಿಸುವುದು, ಅವರು ಸಹಕರಿಸಿದರೆ ತನ್ನ ಲೀಲೆಗಳನ್ನು ಮುಂದುವರೆಸುವುದು... ಇದನ್ನೆಲ್ಲ ಮಾಡುತ್ತಿದ್ದ ಜಗದೀಶ. ಒಂದು ವೇಳೆ ಇವನ ಮೃಗೀಯ ನಡವಳಿಕೆಗೆ ಒಪ್ಪದಿದ್ದಲ್ಲಿ ಆ ಹುಡುಗಿಯ ತಲೆಕೂದಲನ್ನು ಹಿಡಿದು ಗೋಡೆಗೆ ಹೊಡೆಯುತ್ತಿದ್ದ...

ಮರ್ಯಾದೆಗೆ ಅಂಜಿಕೊಂಡು ಬಹಳಷ್ಟು ಹೆಣ್ಣುಮಕ್ಕಳು ವಿಕೃತಕಾಮಿ ಜಗದೀಶನ ಇಂತಹ ನಡವಳಿಕೆಗಳನ್ನೆಲ್ಲಾ ಯಾರಿಗೂ ಹೇಳದೇ ಇಷ್ಟೂ ವರ್ಷಕಾಲ ಕಷ್ಟಪಟ್ಟು ನುಂಗಿಕೊಂಡೇ ಬಂದಿದ್ದಾರೆ. ಆದರೆ ಇವನ ಹಿಂಸೆ ಯಾವಾಗ ಮಿತಿಮೀರಿತೋ ಆಗ ಮನೆಗೆ ಹಿಂದಿರುಗಿ ತಾವು ಗುರುಕುಲಕ್ಕೆ ವಾಪಸ್ ಹೋಗುವುದೇ ಇಲ್ಲವೆಂದು ಹಠ ಹಿಡಿದಿದ್ದಾರೆ. ಹೀಗೆ ಕಾವಿಧಾರಿಯ 'ವಿಶ್ವವಿದ್ಯಾಲಯ'ದಲ್ಲಿ ನಡೆಯುತ್ತಿದ್ದ ಈ ಕಾಮಕಾಂಡಕ್ಕೆ ತುತ್ತಾಗಿ ಮನೆಗೆ ಹಿಂದಿರುಗಿರುವ ವಿದ್ಯಾರ್ಥಿನಿಯರ ಸಂಖ್ಯೆ ಈಗ 30ನ್ನೂ ದಾಟಿದೆ.

ಅವರೀಗ ಅತ್ತ ತಮ್ಮ ವಿದ್ಯಾಭ್ಯಾಸವನ್ನೂ ಮುಂದುವರಿಸಲಾಗದೆ, ಇತ್ತ ಗುರುಕುಲದಲ್ಲಿ ತಮಗಾದ ಹಿಂಸೆಯನ್ನೂ ಯಾರಿಗೂ ಹೇಳಿಕೊಳ್ಳಲಾಗದಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿದ್ದಾರೆ. ಕಾವಿಧಾರಿಯನ್ನು ನಂಬಿ ತಮ್ಮ ಹೆಣ್ಣು ಮಕ್ಕಳನ್ನು ಆತನ ಗುರುಕುಲಕ್ಕೆ ಕಳುಹಿಸಿದ್ದ ತಂದೆತಾಯಂದಿರು ಈಗ ತಮ್ಮ ಮನೆತನದ ಮರ್ಯಾದೆಗೆ ಅಂಜಿ ದೂರು ಕೊಡಲೂ ಸಹ ಧೈರ್ಯ ತೋರುತ್ತಿಲ್ಲ. ಆದರೆ ತಮ್ಮ ಮಕ್ಕಳಿಗಾದ ಅನ್ಯಾಯ ಬೇರೆಯವರ ಹೆಣ್ಣುಮಕ್ಕಳಿಗಾಗಬಾರದೆಂಬ ಕಾಳಜಿಯಿಂದ ಮಾಧ್ಯಮದ ವರೆದುರು – ತಮ್ಮ ಹೆಸರನ್ನು ಗೌಪ್ಯವಾಗಿಡುವ ಷರತ್ತಿನ ಮೇಲೆ – ಹೊರ ಜಗತ್ತಿಗೆ ವಿವರಿಸುತ್ತಿದ್ದಾರೆ.

ಅಂತಹ ಹಲವಾರು ತಂದೆತಾಯಂದಿರು ನೀಡಿದ ಮಾಹಿತಿಯನ್ನಾಧರಿಸಿ – ಅವರ ಐಡೆಂಟಿಟಿಯನ್ನು ಬಹಿರಂಗ ಪಡಿಸಬಾರದೆಂಬ ಷರತ್ತಿಗೆ ಒಪ್ಪಿ – ಸಮಾಜದ ಮೇಲಿನ ಕಾಳಜಿಯಿಂದ ಇದನ್ನು ಪ್ರಕಟಿಸುತ್ತಿದ್ದೇವೆ.

ಯಾವುದಕ್ಕೂ, ಹವ್ಯಕರು ತಮ್ಮ ಮಕ್ಕಳನ್ನು ಕಾವಿಧಾರಿಯ 'ವಿಶ್ವವಿದ್ಯಾಲಯ'ದಲ್ಲಿ ಹೇಳಿಕೊಡುತ್ತಿರುವ ಇಂತಹ 'ವಿಶ್ವ' ಕಲೆಗಳನ್ನು ಕಲಿತುಕೊಳ್ಳಲು ಕಳುಹಿಸುವ ಮುನ್ನ ಯೋಚಿಸುವುದೊಳಿತು. ●

ರಾಮಚಂದ್ರಾಪುರದಲ್ಲಿ ನಡೆಯುತ್ತಿರುವ ಕಾಮಕಾಂಡವು ಮಾಧ್ಯಮಗಳಲ್ಲಿ ಸುದ್ದಿಯಾಗುತ್ತಿದ್ದಂತೆ ಪತ್ನ ಬಂಗಾರದ [illegible] ಅದ್ಯಾವುದೋ ಮಾಸ-ಚತುರ್ಮಾಸ ಇತ್ಯಾದಿಯಲ್ಲಿ ತೊಡಗಿರುವ ಕಾವಿಧಾರಿ ಈ [illegible] ಅಲ್ಲಿಗೆ ತುರ್ತಾಗಿ ಕರೆಸಿಕೊಂಡಿದ್ದಾನೆ.

ಜಗದೀಶನ ವಿಕೃತಕಾಮದ ಸುದ್ದಿ ಹೊರಬಿದ್ದಿದ್ದರಿಂದ ಎಲ್ಲಿ ಇನ್ನಷ್ಟು ವಿವರಗಳು ಬಯಲಾಗುವುದೋ ಎಂಬ ಅಂಜಿಕೆಯಿಂದ ಗುರುಕುಲ ಬಿಟ್ಟುಹೋದ ಮಕ್ಕಳ ಪೋಷಕರನ್ನು ಸಂಪರ್ಕಿಸಿ ಸಮಾಧಾನ [illegible] ಕೆಲಸವನ್ನು ಆತ ತನ್ನ ಹಲವು ಬೆಂಬಲಿಗರ ಮೂಲಕ ಬಿರುಸಾಗಿ ಮಾಡಿಸುತ್ತಿದ್ದಾನೆ.

ಸೋಮಣ್ಣನ ಸೋಲಿಗೆ ಬಿಜೆಪಿಯಲ್ಲೇ ಘಾತುಕರು

▶▶▶6

ಉದ್ದಿಮೆದಾರನೆಂದೂ ಆ ಕಾರಣಕ್ಕೇ ಟೀಕಾಬಿಟ್ಟ ದುಡ್ಡು ಸುರಿಯುತ್ತಿದ್ದಾರೆಂದೂ ಸೋಮಣ್ಣ ಫುಲ್‌ಟಮ್ ಅಪಪ್ರಚಾರಕ್ಕಿಳಿದಿದೆ. ಕೃಷ್ಣಪ್ಪನವರ ಹೆಸರಿನ ಜೊತೆಗೇ ಲೇಔಟ್ ಎಂಬ ಶಬ್ದವಿದೆ. ಆ ಬಗ್ಗೆ ಸ್ವತಃ ಕೃಷ್ಣಪ್ಪನವರೇ ಖುಲ್ಲಂಖುಲ್ಲಾ ಹೇಳಿಕೊಳ್ಳುತ್ತಾರಾದ್ದರಿಂದ ಜನಕ್ಕೆ ಸೋಮಣ್ಣ ಶಿಷ್ಯರ ಆರೋಪದಲ್ಲಿ ಹೊಸದೇನೂ ಕಾಣಿಸುತ್ತಿಲ್ಲ.

ವಾಸ್ತವವೆಂದರೆ ಭೂಕಬಳಿಕೆಯಲ್ಲಿ ಸೋಮಣ್ಣ ಕೂಡ ಸಾಚಾ ಏನಲ್ಲ. ಬಿನ್ನಿಮಿಲ್‌ಗೆ ಸೇರಿದ್ದ ಒಂದೆಕರೆ ಜಾಗದಲ್ಲಿ ಬಡಮಕ್ಕಳಿಗೆ ಶಾಲೆ ಕಟ್ಟುತ್ತೇನೆಂದು ಅದನ್ನು ಏಳುಕೋಟಿಗೆ ಬೋರ್‌ವೆಲ್ ಫುಟ್ರಾಜುಗೆ ಮಾರಿಕೊಂಡಿದ್ದು ಇದೇ ಸೋಮಣ್ಣ. ಬಿನ್ನಿಪೇಟೆ ಮುಖ್ಯರಸ್ತೆಯಲ್ಲಿ ಇವತ್ತಿಗೂ ಖಾಲಿ ಬಿದ್ದಿರುವ ಒಂದೆಕರೆ ಸೈಟು ಮಾರಿಕೊಂಡಿದ್ದು ಒಂದೆಡೆಯಾದರೆ ಮತ್ತೊಂದೆಡೆ ಜ್ಞಾನಭಾರತಿ ರಿಂಗ್ ರಸ್ತೆಯಲ್ಲಿರುವ ಸೋಮಣ್ಣನ ಒಡೆತನದ ವಿಎಸ್‌ಎಸ್ ಕಾಲೇಜಿನ ಇಡೀ ಭೂಮಿಯೇ ಬಿಡಿಎಗೆಂದು ಸರ್ಕಾರ ಸ್ವಾಧೀನಪಡಿಸಿಕೊಂಡಿದ್ದ ಸೊತ್ತು.

ಯಾರೋ ಬಡಬಗ್ಗರು ಗುಡಿಸಲು ಹಾಕಿಕೊಂಡರೆ ನಿರ್ದಾಕ್ಷಿಣ್ಯವಾಗಿ ನೆಲಸಮಗೊಳಿಸುವ ಬಿಡಿಎ ಖದೀಮರು ಸೋಮಣ್ಣನ ಕಾಲೇಜಿನ ಒಂದೂವರೆ ಎಕರೆಗೆ ಈತನಕ ಕೈ ಇಟ್ಟಿಲ್ಲ. ತಾನೇ ಸರ್ಕಾರಿ ನೆಲ ಕದ್ದವನು ಇನ್ನೊಬ್ಬರನ್ನು ದೂಷಿಸುವುದರಲ್ಲಿ ಯಾವ ಅರ್ಥವಿದೆ?

ಸೋಮಣ್ಣನ ಇಂಥ ಕಪಟನಾಟಕ ಜನಕ್ಕೆ ಗೊತ್ತಾಗಿ ಹೋಗಿದೆ. ಕಳೆದ ಲೋಕಸಭಾ ಚುನಾವಣೆ ಹೊತ್ತಿಗಿದ್ದ ಪರಿಸ್ಥಿತಿಗೂ ಈ ಬಾರಿಯ ಚುನಾವಣೆಗೂ ವ್ಯತ್ಯಾಸವಿದೆ. ಸೋಮಣ್ಣನ ಚಮತ್ಕಾರದ ಆಯಸ್ಸು ಕೂಡ ಮುಗಿದಿದೆ. ಬಿಜೆಪಿಯೊಳಗಿದ್ದೇ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಕೃಷ್ಣನ ಪರ ಕೆಲಸ ಮಾಡುವ ಲೋಕಲ್ ನಾಯಕರಾದ ತಿಮ್ಮೇನಹಳ್ಳಿ ರವೀಂದ್ರ ಮತ್ತು ಅಶ್ವತ್ಥನಾರಾಯಣ ಕತೆ ಒತ್ತಟ್ಟಿಗಿರಲಿ. ಸದ್ಯ ಬಿಜೆಪಿಯಿಂದ ಕಾಂಗ್ರೆಸ್ಸಿಗೆ ಶುರುವಾಗಿರುವ ವಲಸೆಯ ಟ್ರೆಂಡ್ ಹೇಗಿದೆಯೆಂದರೆ; ಮೊನ್ನೆಯಷ್ಟೇ ಬಿಜೆಪಿಯ ಸ್ಲಂ ಮೋರ್ಚಾದ ಅಧ್ಯಕ್ಷ ತಿಮ್ಮೇನಹಳ್ಳಿ ಮಂಜು ಸೋಮಣ್ಣನಿಗೆ ಗುಡ್‌ಬೈ ಹೇಳಿ ಪ್ರಿಯಕೃಷ್ಣನ ಪರ ಪ್ರಚಾರಕ್ಕಿಳಿದಿದ್ದಾನೆ.

ಇದು ಸೋಮಣ್ಣನಿಗಾದ ದೊಡ್ಡ ಆಘಾತ. ತಿಮ್ಮೇನಹಳ್ಳಿ ಮಂಜು ಬೆನ್ನಲ್ಲೇ ಲೇಔಟ್ ಕೃಷ್ಣಪ್ಪನವರ ಪಾಳಯಕ್ಕೆ ಪಕ್ಷಾಂತರ ಗೈದ ಮತ್ತೊಬ್ಬಾಕೆ ಮಂಡಲ ಬಿಜೆಪಿ ಮಹಿಳಾ ಮೋರ್ಚಾದ ಅಧ್ಯಕ್ಷೆ ಗೀತಾ. ತನ್ನ ಐವತ್ತಕ್ಕೂ ಹೆಚ್ಚು ಮಂದಿ ಮಹಿಳಾ ಕಾರ್ಯಕರ್ತೆಯರ ಜೊತೆ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ಗೀತಾ ಈಗ ಸೋಮಣ್ಣನ ವಿರುದ್ಧ ಪ್ರಚಾರಕ್ಕಿಳಿದಿದ್ದಾಳೆ.

ಸೋಮಣ್ಣ ಸೋಲುವುದು ಗ್ಯಾರಂಟಿ ಎಂದು, ಬಿಜೆಪಿ ನಾಯಕ ರವೀಂದ್ರನ ಖಾಸಾ ತಮ್ಮ ಪೂಜಪ್ಪನೇ 25 ಲಕ್ಷದ ಬೆಟ್ಟಿಂಗ್ ಕಟ್ಟುತ್ತಾನೆಂದರೆ ಏನರ್ಥ?

ಮೂಲ ಬಿಜೆಪಿ ಕಾರ್ಯಕರ್ತರಿಗೇ ಸೋಮಣ್ಣನ ವಿರುದ್ಧ ಸಿಟ್ಟಿದೆ. ಚುನಾವಣೆ ಸಮೀಪಿಸುತ್ತಿದ್ದಂತೆ ಇನ್ನೆಷ್ಟು ಬಿಜೆಪಿ ನಾಯಕರು ಲೇಔಟ್ ಕೃಷ್ಣಪ್ಪನವರ ಜೊತೆ ಕೈಜೋಡಿಸುತ್ತಾರೋ? ಅದು ಒಕ್ಕಲಿಗರ ಸಿಟ್ಟಾ? ಕುರುಬರೂ ಸೋಮಣ್ಣನ ವಿರುದ್ಧ ತಿರುಗಿ ಬೀಳುತ್ತಾರಾ? ಬಿಜೆಪಿ ಸೇರಿದ ಪಾಪಕ್ಕೆ ಸೋಮಣ್ಣನಿಗೆ ಮತದಾರನೇ ಶಿಕ್ಷೆ ವಿಧಿಸುತ್ತಾನಾ?

ಪ್ರಿಯಕೃಷ್ಣರ ಪರ ಏಳುತ್ತಿರುವ ಅಲೆ, ಬರುತ್ತಿರುವ ಜನಬೆಂಬಲ, ಬಿಜೆಪಿ ತೊರೆದು ಹೋದ ಕಾರ್ಯಕರ್ತರ ಸಂಖ್ಯೆ ಮತ್ತು ಸೋಮಣ್ಣನ ಹತಾಶೆಯನ್ನು ನೋಡುತ್ತಿದ್ದರೆ ಇಂಥ ಗುಮಾನಿಗಳೆಲ್ಲ ನಿಜವಾಗುವ ಕಾಲ ದೂರವಿಲ್ಲ.

ಪಿ.ಕೆ. ಮಲ್ಲನಗೌಡರ್



▶▶▶7

ಹೆಚ್.ಡಿ.ಡಿ. ಬ್ಯಾರೇಜ್.....



ಉದ್ಘಾಟನೆಗೆಂದು ದುರಸ್ತಿ ಮಾಡಿದ ಪೈಪ್...



ಚನ್ನಪಟ್ಟಣ: ದಗಾ ಯೋಗಿಯ ಮೆಗಾಡುಮಕಿ?

ಓರ್ವ ಜವಾಬ್ದಾರಿಯುತ ಶಾಸಕನಾಗಿ ತಡೆಗಟ್ಟಬೇಕಿದ್ದ ಯೋಗೇಶ್ವರ್ ತಾನೇ ಬೇನಾಮಿಯಾಗಿ ಮರಳು ಸ್ಮಗ್ಲಿಂಗ್‌ಗೆ ಕೈಯಿಟ್ಟ.

ದೇವರ ದುಡ್ಡು

ಜನ ಎಲ್ಲಿ ರೊಚ್ಚಿಗೆದ್ದಾರೋ ಎಂದು ಪ್ರತಿ ಮರಳು ಲಾರಿಯಿಂದ ನೂರು ರೂಪಾಯಿ ಸಂಗ್ರಹಿಸಿ ಅದನ್ನು ಸಾತನೂರು ರಸ್ತೆಯಲ್ಲಿ ಮಾದೇಶ್ವರ ಸ್ವಾಮಿ ದೇವಸ್ಥಾನ ಕಟ್ಟೋದಕ್ಕೆ ಬಳಸ್ತೀನಿ ಎಂದ. ಯೋಗೇಶ್ವರ್ ಛೇಲಾಗಳಾದ ತಗಚಗೆರೆ ತಾಲ್ಲೂಕು ಪಂಚಾಯ್ತಿ ಮೆಂಬರ್ ಕುಳ್ಳಪ್ಪ ಅಕ್ಕೂರು ಶೇಖು, ಮೊಗಳ್ಳಿ ಆನಂದ, ಮಾಳಗಾಳು ರಾಜಪ್ಪ ಮತ್ತು ತಿಮ್ಮೇಶ್‌ಪ್ರಭು ಇತ್ಯಾದಿಗಳೆಲ್ಲ ವರ್ಷಾನುಗಟ್ಟಲೇ ನಡುರಸ್ತೆಯಲ್ಲಿ ನಿಂತು ಲಾರಿಗಳಿಂದ ದುಡ್ಡು ಕಿತ್ತಿದ್ದೇ ಕಿತ್ತಿದ್ದು!

ಲಾರಿಯೊಂದಕ್ಕೆ ನೂರು ರೂಪಾಯಿಯಂತೆ ಪ್ರತಿನಿತ್ಯ ಕನಿಷ್ಠ ನೂರೈವತ್ತು ಲಾರಿಗಳಿಗೆ ತಲಾ ನೂರು ರೂಪಾಯಿಯಂತೆ ಲೆಕ್ಕ ಹಾಕಿದರೆ ಅದೇ ಹದಿನೈದು ಸಾವಿರವಾಗುತ್ತದೆ. ತಿಂಗಳಿಗದು ನಾಲ್ಕೂವರೆ ಲಕ್ಷ. ಕಮ್ಮಿಯೆಂದರೂ ವರ್ಷಕ್ಕೆ ಐವತ್ತು ಲಕ್ಷದಂತೆ ಮೂರು ವರ್ಷಗಳ ಕಾಲ ಒಂದೂವರೆ ಕೋಟಿಯಷ್ಟು ದುಡ್ಡೆತ್ತಿದ ಯೋಗೇಶ್ವರ್ ಮನಸ್ಸು ಮಾಡಿದ್ದರೆ ಅದ್ಭುತವಾದ ದೇವಸ್ಥಾನ ಕಟ್ಟಿಸಬಹುದಿತ್ತು.

ಏಳೆಂಟು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಾಟಾಚಾರದ ಪಾಯಹಾಕಿ ಅರ್ಧಂಬರ್ಧ ಗರ್ಭಗುಡಿ ಎಬ್ಬಿಸಿದ್ದು ಬಿಟ್ಟರೆ ಮಾದೇಶ್ವರ ಸ್ವಾಮಿ ದೇವಸ್ಥಾನ ತಲೆ ಎತ್ತಲಿಲ್ಲ. ಮೂರು ವರ್ಷ ಕಳೆದರೂ ಎಮ್ಮೆಲ್ಲೆ ಯೋಗಿ ಈ ಬಗ್ಗೆ ಚಕಾರವೆತ್ತಿಲ್ಲ. ಲಾರಿಗಳಿಂದ ಎತ್ತಿದ ಒಂದೂವರೆ ಕೋಟಿಗೆ ಈತನಕ ಲೆಕ್ಕ ಕೊಟ್ಟಿಲ್ಲ. ಬಹುಶಃ ಮಾದೇಶ್ವರ ಸ್ವಾಮಿಯೇ ಅವತಾರವೆತ್ತಿ ಬಂದರೂ ದೇವರ ದುಡ್ಡಿನ ವಸೂಲಿ ಕಷ್ಟ.

ಬಿಸಿಲಲ್ಲೇ ಉಳಿದ ಬಿಸಿಲಮ್ಮ

ದೇವರ ಹೆಸರಲ್ಲಿ ಮರಳುಗಳ್ಳರಿಂದ ದುಡ್ಡೆತ್ತುವ ಯೋಗೇಶ್ವರನ ಕಂತ್ರಿಬುದ್ಧಿಗೆ ಬಲಿಯಾದ ಮತ್ತೊಂದು ದೇವರು ಹುಣಸನಹಳ್ಳಿ ಬಿಸಿಲಮ್ಮ. ತಿಗಳರೇ ಅಧಿಕ ಸಂಖ್ಯೆಯಲ್ಲಿರುವ ವಿರೂಪಾಕ್ಷಿಪುರ ಹೋಬಳಿಯ ಹುಣಸನಹಳ್ಳಿಯ ಆಸುಪಾಸು ಕಣ್ವಾನದಿಯಿಂದ ಮರಳು ದೋಚುವ ಮಾಫಿಯಾ ಇವತ್ತಿಗೂ ಸಕ್ರಿಯವಾಗಿದೆ. ಇಂಥ ಪ್ರತಿ ಲಾರಿಯಿಂದ ದಿನಕ್ಕೆ ನೂರು ರೂಪಾಯಿಯಂತೆ ವಸೂಲಿ ಮಾಡಿ ಅದನ್ನು ಬಿಸಿಲಮ್ಮನ ದೇವಸ್ಥಾನ ಕಟ್ಟಲು ಬಳಸುತ್ತೇನೆಂದು ಕಂಡಕಂಡಲ್ಲಿ ಬುರುಡೆ ಬಿಟ್ಟ. ಮರಳು ಲೂಟಿಯಾದರೂ ಬಿಸಿಲಮ್ಮನ ದೇವಸ್ಥಾನಕ್ಕೆ ದುಡ್ಡು ಬರುತ್ತದೆಯಲ್ಲ ಎಂದು ಮರಳುಗಳ್ಳರ ವಿರುದ್ಧ ತೆಪ್ಪಗಿದ್ದ ತಿಗಳರಿಗೀಗ ಸತ್ಯ ಅರ್ಥವಾಗಿದೆ. ಸರ್ಕಾರಿ ಅಧಿಕಾರಿಗಳು ಮತ್ತು ಪೊಲೀಸರನ್ನು ಜೊತೆಗಿಟ್ಟುಕೊಂಡು ಮರಳುಗಳ್ಳರಿಂದ ರೊಕ್ಕ ಎತ್ತಿದ ಯೋಗಿ ಕಾಟ... ಕೈಂಬಂತೆ ಐದು ಲಕ್ಷ ಸುರಿದು ಬಿಸಿಲಮ್ಮನ ದೇವ... ಪಾಯ ಹಾಕಿದ್ದೇ ಕೊನೆ. ಅನಂತರ ಹುಣಸನಹಳ್ಳಿ... ತಲೆ ಹಾಕಿಲ್ಲ. ಹೆಚ್ಚೂಕಮ್ಮಿ ಒಂದೂವರೆ ಕೋಟಿ... ಬಿಸಿಲಮ್ಮನ ದುಡ್ಡು ಯೋಗಿಯ ಜೇಬು ಸೇ... ದೇವಸ್ಥಾನದ ಪಾಯಕ್ಕೆ ಪಾಚಿ ಬೆಳೆದು ಶಿಥಿಲಾ... ಬಂದಿದೆ.

ಎಲ್ಲಯ್ಯಾ ಬಿಸಿಲಮ್ಮನ ದೇವಸ್ಥಾನ ಕಟ್ಟ... ಅಂದ್ಯಲ್ಲ...? ಎಂದು ಹುಣಸನಹಳ್ಳಿಯ ತಿಗಳರು ... ಕೈಗೆತ್ತಿಕೊಂಡು ಯೋಗೇಶ್ವರ್ ಬರುವುದನ್ನೇ ಕಾಯುತ್ತಿ... ಯೋಗೇಶ್ವರ್ ಕಂತ್ರಿಬುದ್ಧಿ ಚನ್ನಪಟ್ಟಣದ ಜನಕ್ಕೆ ... ಅರ್ಥವಾಗದೇ ಹೋಗಿದ್ದರೆ ಕಳೆದ ಲೋಕ... ಚುನಾವಣೆಯಲ್ಲಿ ಆತನ ಕ್ಷೇತ್ರದಲ್ಲೇ ಜೆಡಿಎಸ್‌ಗೆಲ್ಲಿ ... ಬರುತ್ತಿತ್ತು?

ಅಶ್ವಥ್‌ಗೆ ಅನುಕೂಲ

ಎಮ್ಮೆಲ್ಲೆಗಿರಿಗೆ ರಾಜೀನಾಮೆ ಕೊಟ್ಟು ಲೋಕ... ಬಿಜೆಪಿ ಅಭ್ಯರ್ಥಿಯಾದ ಯೋಗೇಶ್ವರ್ ವಿ... ಚನ್ನಪಟ್ಟಣದ ಜನಕ್ಕೆ ಎಂಥಾ ಸಿಟ್ಟಿದೆಯೆಂಬುದಕ್ಕೆ ... ಸಂಸತ್ ಚುನಾವಣೆಯೊಂದೇ ಸಾಕು. ಜೆಡಿಎಸ್ ಅ... ಕುಮಾರಸ್ವಾಮಿಗೆ ಅರವತ್ತೇಳು ಸಾವಿರದಷ್ಟು ... ಬಂದರೆ ಯೋಗೇಶ್ವರ್ ಕೋಟಿಗಟ್ಟಲೇ ಸುರಿದೂ ಗ... ಕೇವಲ ನಲವತ್ತೇಳು ಸಾವಿರ ಮಾತ್ರ. ಅ... ಯೋಗೇಶ್ವರ್‌ಗಿಂತ ಜೆಡಿಎಸ್‌ಗೆ ಇಪ್ಪತ್ತು ಸಾವಿರಕ್ಕೂ ... ಲೀಡು ಸರಿಸುಮಾರು ಎಂಟು ಕೋಟಿ ಸುರಿದೂ ... ಸಾವಿರ ಮತಗಳ ಹಿನ್ನಡೆ ಕಂಡ ಯೋಗೇಶ್ವರ್ ವಿ... ಚನ್ನಪಟ್ಟಣಕ್ಕೇ ಅಸಹ್ಯ ಶುರುವಾಗಿದೆ.


ಕಳೆದ ಎಮ್ಮೆಲ್ಲೆ ಚುನಾವಣೆಯಲ್ಲಿ ಜೆಡಿಎಸ್ ಅ... ಅಶ್ವಥ್‌ಗೂ ಯೋಗೇಶ್ವರ್‌ಗೂ ಇದ್ದ ಅಂತರ ಕೆ... ನಾಲ್ಕು ಸಾವಿರ ಮಾತ್ರ. ಮೆಗಾಸಿಟಿ ವಂಚಿತರು ಮ... ಸಂಬಂಧಿಗಳ ಸಿಟ್ಟೇನಾದರೂ ರಟ್ಟೆಗೆ ಬಂತೆಂದರೆ ... ಬಾರಿ ಯೋಗೇಶ್ವರ್ ಮೆಗಾ ಡುಮಕಿ ಹಾಕು... ಗ್ಯಾರಂಟಿ. ಕಾಂಗ್ರೆಸ್ ಅಭ್ಯರ್ಥಿ ಟೀಕೆ ಯೋಗ... ಹೊಸಮುಖ. ಮಾಜಿ ಶಾಸಕ ಕೃಷ್ಣಪ್ಪನವರ ... ಎಂಬುದನ್ನು ಬಿಟ್ಟರೆ ಜನಕ್ಕೆ ಹೆಚ್ಚು ಗೊತ್ತಿಲ್ಲ. ಅಪ್ಪಾ... ಡೀಕೆಯೇ ನಿಂತು ಒಂದಷ್ಟು ಓಟು ಸೆಳೆದರೂ ... ಯೋಗೇಶ್ವರ್ ಪಾಲಿಗೆ ಮುಳುವಾಗುತ್ತದೆಯೇ ಹೊ... ಜೆಡಿಎಸ್‌ನ ಅಶ್ವಥ್‌ಗೇನೂ ಅಪಾಯವಿಲ್ಲ. ಲೋಕಸ... ಫಲಿತಾಂಶವೇ ಈ ಬಾರಿಯೂ ಪುನರಾವರ್ತನೆಯ... ತೆಂದರೆ ಯೋಗೇಶ್ವರ್ ಗಂಟುಮೂಟೆ ಕಟ್ಟಲೇಬೇ...

ಸದ್ಯಕ್ಕಂತೂ ಯೋಗೇಶ್ವರ್ ಹಾವಳಿಯಿಂದ ... ಸಿಕ್ಕರೆ ಸಾಕೆಂಬ ಮನಸ್ಥಿತಿ ಚನ್ನಪಟ್ಟಣದುದ್ದ... ಗೋಚರಿಸುತ್ತಿದೆ.









ಕೊಳ್ಳೇಗಾಲ: ಕಣದಲ್ಲಿಲ್ಲದ ಎನ್. ಮಹೇಶರೇ ನಿರ್ಣಾಯಕ!

ಎಲೆಕ್ಷನ್ ಬಂದಾಗಲಷ್ಟೆ ಈ ಕೊಳ್ಳೇಗಾಲದ ಹೆಸರು ಮಾಧ್ಯಮಗಳಲ್ಲಿ ಬರುತ್ತದೆ. ಹೇಳಿಕೇಳಿ ಸದ್ಯಕ್ಕಿದು ಮೀಸಲು ಕ್ಷೇತ್ರ. ಪಕ್ಕಾ ಪುರೋಹಿತಶಾಹಿ ಬಿಜೆಪಿ ಕೂಡಾ ಇಲ್ಲಿ ಮೀಸಲು ನಿಯಮ ಪಾಲಿಸಲೇಬೇಕು. ಎಂದಿನಂತೆ ಎಲ್ಲ ಪಾರ್ಟಿಗಳೂ ಕಾಸು ಹಂಚುವವರನ್ನು ಸೆಲೆಕ್ಟ್ ಮಾಡಿವೆ. ಆದರೆ ಬಿಜೆಪಿ ಕೊಟ್ಟ ಕ್ಯಾಬಿನೆಟ್ ಲೆವೆಲ್ಲಿನ ಗಿಫ್ಟು ತೊರೆದು ಬಂದಿರುವ ಸುಭಾಷ್ ಭರಣಿ ಎಂಬ ಮಾಜಿ ಐಪಿಎಸ್ ಅಧಿಕಾರಿಯ ಸ್ಪರ್ಧೆ ಕುತೂಹಲ ಕೆರಳಿಸಿದೆ. ಅಂದರೆ ಇಲ್ಲಿ ಭರಣಿ ಗೆಲ್ಲೋ ಕ್ಯಾಂಡಿಡೇಟ್ ಅಲ್ಲ. ಆದರೆ ಅವರು ಯಾರನ್ನೋ ಗೆಲ್ಲಿಸೋ ಕ್ಯಾಂಡಿಡೇಟ್ ಆಗಬಹುದು. ಏಕೆಂದರೆ ಅವರ ಈಗಿನ ಪಕ್ಷ ಬಿಎಸ್‌ಪಿಗೆ ಇಲ್ಲಿ ಒಂದಿಷ್ಟು ಬೇಸ್ ಇದ್ದೇ ಇದೆ. ಕಳೆದ ಮೂರು ಚುನಾವಣೆಗಳಲ್ಲಿ ಇಲ್ಲಿ ಬಿಎಸ್‌ಪಿ ಎರಡನೇ ಸ್ಥಾನದಲ್ಲಿ ಅಥವಾ ಮೂರನೇ ಸ್ಥಾನದಲ್ಲಿದ್ದು ಚುನಾವಣಾ ಫಲಿತಾಂಶದ ಮೇಲೆ ಪ್ರಭಾವ ಬೀರಿದೆ. ಅದಕ್ಕೆ ಕಾರಣ ಬಿಎಸ್‌ಪಿಯ ನಾಯಕ ಎನ್. ಮಹೇಶ್‌ರವರ ಸಂಘಟನಾ ಚಾತುರ್ಯ. ಹಿಂದೆ ಮಹೇಶ್‌ಗೆ ಬೀಳುತ್ತಿದ್ದ ಮತಗಳು ಈ ಸಲ ಭರಣಿಗೆ ಬೀಳುತ್ತವೆಯೇ? ಬಿದ್ದರೆ ಅದರಿಂದ ಯಾವ ಪಕ್ಷಕ್ಕೆ ಲಾಭವಾಗಬಹುದು? ಎಂಬೆಲ್ಲ ಪ್ರಶ್ನೆಗಳು ಈಗ ಉದ್ಭವವಾಗಿವೆ.

ಕೊಳ್ಳೇಗಾಲದಲ್ಲಿ ಕಾಂಗ್ರೆಸ್ಸಿಗೆ ಅನುಕೂಲಕರ ಅಂಶವೆಂದರೆ ಇಲ್ಲಿ ಮೊದಲಿಂದಲೂ ಇರುವ ಸಿದ್ದರಾಮಯ್ಯ, ಶ್ರೀನಿವಾಸ್ ಪ್ರಸಾದ್‌ಗಳ ಪ್ರಭಾವ. ಮಹೇಶ್ ಕಾರಣಕ್ಕಾಗಿ ಭರಣಿಗೆ ಬೀಳುವ ಓಟುಗಳಲ್ಲಿ ಬಹುತೇಕ ಕಾಂಗ್ರೆಸ್ಸಿನ ಓಟುಗಳೇ ಆಗಿರುತ್ತವೆ ಎಂಬ ಓಟುಗಳು ಲೆಕ್ಕದಲ್ಲಿ ಬಿಜೆಪಿ ತೇಲಾಡುತ್ತಿದೆ.

ಯಳಂದೂರು, ಸಂತೇಮರಳ್ಳಿಯಲ್ಲಿ ಜೆಡಿಎಸ್ ಅಭ್ಯರ್ಥಿ ಬಿಜೆಪಿಗೆ ಸವಾಲ್ ಎಸೆದಿದ್ದಾರೆ. ಆದರೆ ಸಂಸದ ಧ್ರುವನಾರಾಯಣ್ ಕೈಚಳಕ ಕೆಲಸ ಮಾಡಿದರೆ, ಇಲ್ಲಿ ಕಾಂಗ್ರೆಸ್ಸಿಗೆ ಮುನ್ನಡೆ ಸಿಗಬಹುದು. ಬರೀ ದುಡ್ಡಿನ ಮುಖ ನೋಡಿ ರಾಜಕೀಯ ಮಾಡುತ್ತಿರುವ ರಾಜ್ಯ ಬಿಜೆಪಿ ಇಲ್ಲೂ ಅಂತದೇ ಎಡವಟ್ಟು ಮಾಡಿಕೊಂಡಿದೆ. ಕೂದಲೆಳೆಯ ಅಂತರದಲ್ಲಿ ಸೋತ ಎ.ಆರ್. ಕೃಷ್ಣಮೂರ್ತಿಗೆ ಬಿ ಫಾರ್ಮ್ ನೀಡದೇ ಭಿನ್ನಮತವನ್ನು ಆಹ್ವಾನಿಸಿಕೊಂಡಿದೆ. ಬಿಜೆಪಿಯ ಭಿನ್ನಮತದ ಗುಂಪುಗಳನ್ನು ಬಿಎಸ್‌ಪಿ ಕಡೆಗೆ ಎಳೆದೊಯ್ಯಲು ಬಿಎಸ್‌ಪಿಯ ಎನ್.ಮಹೇಶ್ ಕಾರ್ಯತಂತ್ರ ರೂಪಿಸಿ, ಅದರಲ್ಲಿ ಯಶಸ್ವಿಯೂ ಆಗುತ್ತಿದ್ದಾರೆ. ಇದು ಭರಣಿಗೆ ಪ್ಲಸ್ ಪಾಯಿಂಟ್, ಬಿಜೆಪಿಗೆ ಮೈನಸ್ ಪಾಯಿಂಟ್. ಎನ್.ಮಹೇಶ್ ಬಗ್ಗೆ ಇರುವ ಅನುಕಂಪದ ಕಾರಣಕ್ಕೆ, ಅವರ ಒಂದಿಷ್ಟು ಆದರ್ಶಮಯ ಹೋರಾಟಗಳ ಕಾರಣಕ್ಕೆ ಮತ್ತು ಸಂತೆಮರಳ್ಳಿಯಲ್ಲಿ ಭ... ಒಳ್ಳೆ ಲೀಡ್ ಸಿಗುವ ಸಾಧ್ಯತೆಗಳೂ ಇವೆ.

ಜೆಡಿಎಸ್‌ನ ಬಾಲರಾಜ್‌ಗೆ ಇದು ಬಹ... ಜೀವನ್ಮರಣದ ಪ್ರಶ್ನೆ. ಗೆಲ್ಲಲೇಬೇಕು ಎಂದು ... ತೊಟ್ಟಂತಿರುವ ಬಾಲರಾಜ್ ಸಖತ್ತಾಗಿ ದುಡ್ಡು ಖ... ಮಾಡುತ್ತಿದ್ದಾರೆ. ಕಾಂಗ್ರೆಸ್ಸಿನ ಎಸ್. ಜಯಣ್ಣ ಈಗಾ... ತಾನು ಗೆದ್ದಾಗಿದೆ ಎಂದು ಮೈಮರೆತಿದ್ದಾರೆ.

ಎ.ಆರ್. ಕೃಷ್ಣಮೂರ್ತಿಗೆ ಕೈಕೊಟ್ಟ ಬಿ... ನಂಜುಂಡಸ್ವಾಮಿ ಎಂಬಾತನಿಗೆ ಟಿಕೆಟ್ ನೀಡಿ ವ... ಪರಚಿಕೊಳ್ಳುತ್ತಿದೆ. ಈ ಅವಘಡಗಳ ಮಧ್ಯೆ ಪಕ್ಷ... ಅಭ್ಯರ್ಥಿ ಸುಬ್ಬಯ್ಯ ಎನ್ನುವಾತ ಕಾಂಗ್ರೆಸ್ಸಿನ ಜಯ... ವಿರುದ್ಧ ಮಸಲತ್ತು ಮಾಡುತ್ತಿದ್ದಾನೆ. ಈ ಸುಬ್ಬಯ್ಯ... ಅಲಕ್ಷ್ಯ ಮಾಡುವಂತೆಯೂ ಇಲ್ಲ. ಯಾಕೆಂದರೆ ಕ... ಬಾರಿ ಎ.ಆರ್. ಕೃಷ್ಣಮೂರ್ತಿ ಸೋಲಲು ... ಪರೋಕ್ಷವಾಗಿ ಕಾರಣನಾಗಿದ್ದ!

ಬಿಜೆಪಿ ಸರ್ಕಾರಕ್ಕೆ ಇದು ಪ್ರತಿಷ್ಠೆಯ ... ಆಗಿರುವುದರಿಂದ ಇಲ್ಲಿನ ಲಾಡ್ಜ್ ಬಾರ್‌ಗಳಿಗೆಲ್ಲ ... ಕಲೆಕ್ಷನ್ ಆಗುತ್ತಿದೆ. ಆದರೆ ಒಂದು ಲಕ್ಷ ಎಂಬತ್ತ... ಸಾವಿರದಷ್ಟಿರುವ ಕೊಳ್ಳೇಗಾಲದ ಮತದಾರರು ತ... ತೀರ್ಮಾನವನ್ನು ಬಹಿರಂಗಗೊಳಿಸುತ್ತಿಲ್ಲ. ಆ... ಒಂದಂತೂ ಸತ್ಯ: ಇಲ್ಲಿ ಬಿಜೆಪಿ ಗೆಲ್ಲೋದಿಲ್ಲ...

● ಚಿಕ್ಕಮಾ...

ಚಿತ್ರದುರ್ಗ: ಎಸ್.ಜೆ.ಎಂ. ಕಾಲೇಜು ಪ್ರಿನ್ಸಿ ವಿಶ್ವನಾಥನ ತರಲೆಗಳು



ಚಿತ್ರದುರ್ಗದ ಎಸ್.ಜೆ.ಎಂ. ಲಾ ಕಾಲೇಜಿನ ಪ್ರಿನ್ಸಿ ಪಾಲ್ ತನ್ನ ತರಲೆ ಧೋರಣೆಗಳಿಂದಾಗಿಯೇ ಕುಖ್ಯಾತಿ ಗಳಿಸುತ್ತಿದ್ದಾನೆ. ಈತ ಪ್ರಿನ್ಸಿಪಾಲ್‌ಗಿರಿಗೆ ವಕ್ಕರಿಸಿಕೊಂಡಂದಿ ನಿಂದ ಕಾಲೇಜಿನಲ್ಲಿ ಶೈಕ್ಷಣಿಕ ವಾತಾವರಣವನ್ನೇನೂ ...ರಿಸಿಲ್ಲ. ಬದಲಿಗೆ ತನ್ನ ಧಿಮಾಕು, ವಕ್ರ ನಡವಳಿಕೆ, ...ದ ಮಾತುಗಾರಿಕೆಯಿಂದಲೇ ಕಾಲ ತಳ್ಳುತ್ತಿದ್ದಾನೆ. ಕುವೆಂಪು ವಿ.ವಿ.ಯ ಕಾನೂನು ವಿಭಾಗದ ಪರೀಕ್ಷಾ ಮಂಡಳಿಯ ಅಧ್ಯಕ್ಷನಾಗಿರುವ ಈತ ಸರಸ್ವತಿ ಕಾನೂನು ಕಾಲೇಜಿನ ಅಂತಿಮ ವರ್ಷದ ಪ್ರಾಯೋಗಿಕ ಮೌಖಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ ಮುಜುಗರವುಂಟುಮಾಡು ...ಕ ಪ್ರಶ್ನೆಗಳನ್ನು ಕೇಳಿ ಕಿರುಕುಳ ನೀಡಿದ್ದಾನೆ. ವಿದ್ಯಾರ್ಥಿ ಸಾಮರ್ಥ್ಯ ಪರೀಕ್ಷೆಗಿಂತ ಅವಹೇಳನ ಮಾಡುವ ...ಶದಿಂದಲೇ ತಲೆ - ಬುಡವಿಲ್ಲದ ಪ್ರಶ್ನೆಗಳನ್ನು ...ತನ್ನ ಬುದ್ಧಿಮಟ್ಟವನ್ನೂ ವಿದ್ಯಾರ್ಥಿಗಳ ಮುಂದೆ ...ಪ್ರಹೀರುಗೊಳಿಸಿಕೊಂಡಿದ್ದಾನೆ.

...ಂದು ಪರೀಕ್ಷೆಯಲ್ಲಿ ಭಾಗವಹಿಸಿದ್ದ ಪ್ರಜ್ಞಾವಂತ ...ರ್ಥಿಗಳಿಗೆ ವಿಶ್ವನಾಥನ ನಡವಳಿಕೆ ಆಶ್ಚರ್ಯ ...ಸಿದೆ. ಪ್ರಶ್ನಿಸುವ ಮನೋಭಾವದ ಈ ಹುಡುಗರು ... ಕಾಲೇಜು ಪ್ರಿನ್ಸಿಪಾಲ್ ಶ್ರೀಮತಿ ಎಂ. ಎಸ್. ...ದೇವಿಯವರಿಗೆ ಮಾಹಿತಿ ಹಕ್ಕು ಕಾಯ್ದೆಯನ್ವಯ ... ಸಲ್ಲಿಸಿ ಪ್ರಾಯೋಗಿಕ ಮೌಖಿಕ ಪರೀಕ್ಷೆ ನಡೆಸುವ ...ಧಾನಗಳಿಗೆ ಸಂಬಂಧಿಸಿದ ಸಮಗ್ರ ಮಾಹಿತಿ ನೀಡು ... ಕೋರಿದ್ದಾರೆ. ಜೊತೆಗೆ ವಿಶ್ವನಾಥನ ಧೋರಣೆ ಬಗ್ಗೆ ತೀವ್ರತರನಾದ ಅಸಮ್ಮತಿ ವ್ಯಕ್ತಪಡಿಸಿ ಮರುಪ್ರಾಯೋಗಿಕ ಮೌಖಿಕ ಪರೀಕ್ಷೆ ನಡೆಸಬೇಕೆಂದು ಒತ್ತಾಯಿಸಿ ಕುವೆಂಪು ವಿಶ್ವವಿದ್ಯಾಲಯ ಮೌಲ್ಯಮಾಪನ ವಿಭಾಗದ ರಿಜಿಸ್ಟ್ರಾರಿಗೆ ಪತ್ರ ಬರೆದಿದ್ದಾರೆ.

ಪ್ರಾಯೋಗಿಕ ಮೌಖಿಕ ಪರೀಕ್ಷೆ ನಡೆಸುವುದರ ಕುರಿತು ಇರುವ ಮಾರ್ಗದರ್ಶಿ ಸೂತ್ರಗಳ ಪ್ರಕಾರ ಪರೀಕ್ಷೆಯ ಸಂದರ್ಭದಲ್ಲಿ ಸಂಬಂಧಪಟ್ಟ ಕಾಲೇಜಿನ ಮಾರ್ಗದರ್ಶಕ ಉಪನ್ಯಾಸಕರು ಹಾಗೂ ಬಾಹ್ಯ ಪರೀಕ್ಷಕರು ಮಾತ್ರ ಹಾಜರಿರಬೇಕು. ಪರೀಕ್ಷಾ ಮಂಡಳಿಯ ಅಧ್ಯಕ್ಷನೂ ಆಗಿರುವ ವಿಶ್ವನಾಥ ತನ್ನನ್ನು ಪ್ರಶ್ನಿಸುವವ ರಾರಿದ್ದಾರೆ ಎಂಬ ದಾರ್ಷ್ಟ್ಯದಲ್ಲಿ ಈ ಪ್ರಾಯೋ ಗಿಕ ಮೌಖಿಕ ಪರೀಕ್ಷೆಯಲ್ಲಿ ಭಾಗವಹಿಸಿ ಇಲ್ಲದ ರಾದ್ಧಾಂತ ಮಾಡಿದ್ದಾನೆ.



ವಿದ್ಯಾರ್ಥಿಗಳ ಆಕ್ಷೇಪಣೆಯನ್ನು ಗಂಭೀರ ವಾಗಿ ಪರಿಗಣಿಸಿದ ವಿಶ್ವವಿದ್ಯಾಲಯದ ಪರೀಕ್ಷಾಂಗ ವಿಭಾಗ ಜುಲೈ 30 ರೊಳಗಾಗಿ ಮರುಪ್ರಾಯೋಗಿಕ ಮೌಖಿಕ ಪರೀಕ್ಷೆ ನಡೆಸು ವಂತೆ ಸೂಚಿಸಿತು. ಸರಸ್ವತಿ ಕಾನೂನು ಕಾಲೇ ಜಿನ ವಿದ್ಯಾರ್ಥಿಗಳು ಹೇಗೋ ಪರೀಕ್ಷೆ ಮತ್ತೆ ನಡೆಯುತ್ತವೆ, ತಮಗೆ ನ್ಯಾಯ ಸಿಗುತ್ತದೆ ಎಂಬ ಭರವಸೆ ಯೊಂದಿಗೆ ಸಮಾಧಾನದಿಂದಿದ್ದರು. ಕಾಲೇಜಿನಲ್ಲಿ ನಿಗದಿಪಡಿ ಸಿದಂತೆ ಜುಲೈ 28 ರಂದು ಮರುಪ್ರಾಯೋಗಿಕ ಮೌಖಿಕ ಪರೀಕ್ಷೆಗೆ ವಿದ್ಯಾರ್ಥಿಗಳು ಉತ್ಸಾಹದಿಂದಲೇ ಹಾಜ ರಾದರು. ಅಂದು ಪರೀಕ್ಷೆ ಮಾತ್ರ ನಡೆಯಲಿಲ್ಲ, ಕಾಲೇಜಿನ ಪ್ರಾಂಶುಪಾಲರಾದ ಸುಧಾದೇವಿಯವರು ಮತ್ತೊಮ್ಮೆ ಪರೀಕ್ಷೆ ನಡೆಸುವ ಅಗತ್ಯವಿಲ್ಲ ಎಂದು ವಿ.ವಿ. ಪರೀಕ್ಷಾಂಗ ವಿಭಾಗದವರು ಪರೀಕ್ಷೆ ರದ್ದುಪಡಿಸಿದ್ದಾರೆಂದು ವಿದ್ಯಾರ್ಥಿ ಗಳಿಗೆ ಹೇಳಿದ್ದಾರೆ.

ಮರುಪರೀಕ್ಷೆಗೆ ದಿನಾಂಕ ನಿಗದಿ ಮಾಡಿ ದಿಢೀರನೆ ರದ್ದು ಮಾಡಿದ ವಿ.ವಿ.ಯ ಕ್ರಮದ ಬಗ್ಗೆ ಸಹಜವಾಗಿ ವಿದ್ಯಾರ್ಥಿಗಳು ಅಸಮಾಧಾನಗೊಂಡಿದ್ದಾರೆ. ನಂತರ ಬಹಿ ರಂಗಗೊಂಡ ವಿಷಯ ಏನೆಂದರೆ ಶಂಕರಘಟ್ಟದಲ್ಲಿರುವ ವಿ.ವಿ. ಕೇಂದ್ರದಲ್ಲಿ ಹಾಲಿ ಕಾನೂನು ಪದವಿ ಪರೀಕ್ಷೆಗಳ ಮೌಲ್ಯಮಾಪನ ನಡೆಯುತ್ತಿದ್ದು ಅಲ್ಲಿಯೇ ಇರುವ ವಿಶ್ವನಾಥ ರಿಜಿಸ್ಟ್ರಾರ್ ಬಳಿ ಹೋಗಿ ಸರಸ್ವತಿ ಕಾನೂನು ಕಾಲೇಜಿನಲ್ಲಿ ಯಾವುದೇ ಕಾರಣಕ್ಕೂ ಮರು ಪ್ರಾಯೋಗಿಕ ಮೌಖಿಕ ಪರೀಕ್ಷೆ ಮಾಡಬಾರದು, ಇದು ತನ್ನ ಪ್ರೆಸ್ಟೀಜ್ ಪ್ರಶ್ನೆ ಹಾಗೆ ಮಾಡುವುದಾದರೆ ತಾನು ಪರೀಕ್ಷಾ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ ಎಂದು ಬೆದರಿಸಿ ದ್ದಾನೆ. ಅಷ್ಟು ಮಾತ್ರವಲ್ಲ, ಮರು ಪ್ರಾಯೋಗಿಕ ಪರೀಕ್ಷೆಗೆ ಬಾಹ್ಯ ಪರೀಕ್ಷಕರಾಗಿ ನಿಯುಕ್ತಿಗೊಂಡಿದ್ದ ಶಿವಮೊಗ್ಗ ನ್ಯಾಷನಲ್ ಕಾನೂನು ಕಾಲೇಜಿನ ಪ್ರಾಧ್ಯಾಪಕ ಬಸಪ್ಪ ಇಂತಹ ಬೆದರಿಕೆಯ ಕಾರಣಕ್ಕೇ ಪರೀಕ್ಷೆಯಲ್ಲಿ ಪಾಲ್ಗೊಳ್ಳ ಲಾಗದೇ ಸುಳ್ಳು ನೆಪ ಹೇಳಿ ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಂಡಿದ್ದಾರೆ. ವಿ.ವಿ.ಯಲ್ಲಿ ವಿಶ್ವನಾಥ ಮೌಲ್ಯಮಾಪನ ದಲ್ಲಿ ಭಾಗವಹಿಸಿರುವ ಉಪನ್ಯಾಸಕರನ್ನು ಸೇರಿಸಿ ಮೌಲ್ಯ ಮಾಪನ ಸ್ಥಗಿತಗೊಳಿಸಬೇಕೆಂದು ಆಗ್ರಹವನ್ನೂ ಮುಂದಿಟ್ಟಿದ್ದಾನೆ. ಪ್ರತಿ ವರ್ಷದ ಮೌಲ್ಯಮಾಪನದ ಸಂದರ್ಭದಲ್ಲಿ ಯಾವುದಾದರೊಂದು ನೆಪ ಮಾಡಿಕೊಂಡು ಕ್ಯಾತೆ ತೆಗೆಯುವುದು ವಿಶ್ವನಾಥನ ಸ್ವಭಾವವೇ ಆಗಿರುವುದರಿಂದ ಮೌಲ್ಯಮಾಪಕರಾರೂ ಆದಕ್ಕೆ ಸೊಪ್ಪು ಹಾಕಿಲ್ಲ.

ಒಂದೆಡೆ ಮರು ಪ್ರಾಯೋಗಿಕ ಪರೀಕ್ಷೆ ಯನ್ನು ನಡೆಸಲೇಬೇಕೆಂದು ವಿದ್ಯಾರ್ಥಿಗಳು ಒತ್ತಾಯಿಸುತ್ತಿದ್ದರೆ, ಮತ್ತೊಂದು ಕಡೆ ಈ ವಿಶ್ವನಾಥ "ವ್ಯಾಲ್ಯೂಯೇಶನ್ನಲ್ಲಿ ನಾನೇನೂಂತ ತೋರುಸ್ತೀನಿ. ಕಂಪ್ಲೆಂಟ್ ಮಾಡಿರೋ ಸ್ಟೂಡೆಂಟ್ಸ್ ಯಾರು ಅಂತಾ ಚನ್ನಾಗಿ ಗೊತ್ತು" ಎಂದು ಹೇಳಿಕೊಂಡು ತಿರುಗುತ್ತಿದ್ದಾನೆ. ಮೌಲ್ಯಮಾಪನದಲ್ಲಿ ನಡೆಸುವ ಅಪರಾ ತಪರಾಗಳಿಗೆ ಕುಖ್ಯಾತಿ ಪಡೆದಿರುವ ವಿಶ್ವನಾಥನ ಮಾತನ್ನು ವಿದ್ಯಾರ್ಥಿಗಳು ಕೂಡಾ ಗಂಭೀರವಾಗಿ ಪರಿಗಣಿಸಿದ್ದಾರೆ. ಅವರಿಗೆ ಮೌಲ್ಯ ಮಾಪನ ವಿಶ್ವಾಸಾರ್ಹ ವಾಗಿ ನಡೆಯುತ್ತದೆ ಎಂಬುದರ ಬಗ್ಗೆಯೇ ಅನುಮಾನಗಳಿವೆ. ಕುವೆಂಪು ವಿ.ವಿ.ಯ ಪರೀಕ್ಷಾಂಗ ವಿಭಾಗದವರು ಮರು ಪ್ರಾಯೋಗಿಕ ಪರೀಕ್ಷೆ ನಡೆಸುವ ಮೂಲಕ ಇಂತಹ ಅನುಮಾನಗಳಿಗೆ ತೆರೆ ಎಳೆಯಬೇಕಿದೆ.

● ವರದಿಗಾರ


ವಿಶ್ವನಾಥ ಎಂಥವನು ಗೊತ್ತಾ?

[illegible] ಎಸ್.ಜೆ.ಎಂ. ಕಾನೂನು [illegible] ನಂತರ ಅದೇ ಕಾಲೇಜಿನ [illegible] ವಹಿಸಿಕೊಂಡದ್ದು ಒಂದು [illegible] ಪ್ರಾಂಶುಪಾಲರಾಗಿದ್ದ [illegible] ಆಡಳಿತಾಧಿಕಾರಿಯಾಗಿ ಜವಾಬ್ದಾರಿ ವಹಿಸಿಕೊಂಡಾಕ್ಷಣ ತಮ್ಮ ಪ್ರಿಯಾತಿಪ್ರಿಯ ಶಿಷ್ಯನಾದ ವಿಶ್ವನಾಥನಿಗೆ ಪ್ರಿನ್ಸಿಗಿರಿಯ ಇನ್ ಚಾರ್ಜ್ ವಹಿಸಿಕೊಟ್ಟರು.

ವಿಶ್ವನಾಥನಿಗಿಂತ ಸೇವಾ ಹಿರಿತನವಿದ್ದ ಶ್ರೀಮತಿ [illegible] ಜವಾಬ್ದಾರಿ ನೀಡಲಾಯಿತು. ಆದರೆ ವಿಶ್ವನಾಥ [illegible] ಕುಮನಾ [illegible] ಅಂಗಡಿಯವರಿಗೆ [illegible] ಬೆಳಗಿನ [illegible] ತೆಗೆದುಕೊಳ್ಳಲಾಗುತ್ತಿದ್ದ [illegible] ಬೋರ್ಡಿನಲ್ಲಿ ಅಂಟಿಸಿದ್ದ [illegible] ಗಮನಕ್ಕೆ [illegible]

[illegible] 10 ವರ್ಷಗಳ [illegible] ಈತ ಜೂನ್ ಗಳಿಗೆಯಲ್ಲಿ ಭಾಗವಹಿಸಿದ.

ಭದ್ರಾವತಿ: ಶಾಸಕ ಸಂಗಮೇಶನ ಅಧಿಕ ಪ್ರಸಂಗ



ಸಂಗಮೇಶ್

...ಜನಪ್ರತಿನಿಧಿಯಾದವನಿಗೆ ಕನಿಷ್ಠ ಸೌಜನ್ಯ, ...ಚಾರಗಳು ಇಲ್ಲವಾದರೆ ಏನಾಗಬಹುದೆಂಬುದಕ್ಕೆ ...ವತಿಯ ಶಾಸಕ ಸಂಗಮೇಶನೇ ಸಾಕ್ಷಿಯಾಗಿದ್ದಾನೆ. ...ಪೂಪ ಭದ್ರಾವತಿಯಲ್ಲಿ ನಡೆಸುತ್ತಿರುವ ಮಂಗಾಟ ... - ಅದರಲ್ಲೂ ಇತ್ತೀಚೆಗೆ ಭದ್ರಾವತಿಯ ಪ್ರತಿಷ್ಠಿತ ...ಎಂ.ವಿ. ಪದವಿ ಕಾಲೇಜಿನಲ್ಲಿ ನಡೆಸಿರುವ ಹುಚ್ಚಾಟ ... - ನೋಡಿದ ಜನ ಸಂಗಮೇಶನಿಗೆ ಹಿಡಿಶಾಪ ...ತ್ತಿದ್ದಾರೆ.

... ಮೊನ್ನೆ ಜುಲೈ 25 ರಂದು ಕಾಲೇಜಿನಲ್ಲಿ ಅತಿಥಿ ...ನ್ಯಾಸಕರ ಆಯ್ಕೆ ಪ್ರಕ್ರಿಯೆ ನಡೆಯುತ್ತಿದ್ದ ಸಂದರ್ಭದಲ್ಲಿ ...ಕ ತನ್ನ ಪಟಾಲಂನೊಂದಿಗೆ ಒಳನುಗ್ಗಿದ ಈ ಶಾಸಕ ... ಹೇಳಿದವರನ್ನೇ ಆಯ್ಕೆ ಮಾಡಿಕೊಳ್ಳಬೇಕು ಎಂದು ...ಡು ಮಾಡಿದ್ದಾನೆ. ಆದರೆ ಪ್ರಾಂಶುಪಾಲರಾದ ...ಮತಿ ತಾರಾರವರು ಕಾನೂನುಬದ್ಧವಾಗಿಯೇ ...ಕಾತಿ ಮಾಡಿಕೊಳ್ಳಬೇಕು ಎಂದಿದ್ದಕ್ಕೆ ಅವರ ಮೇಲೆ ...ದ್ದ ಸಂಗಮೇಶ ತನ್ನ ಕೊಳಕು ಬಾಯಿಂದ ...ನಾದರೂ ಗಂಡಸಾಗಿದ್ರೆ ಬಟ್ಟೆ ಬಿಚ್ಚಿಸಿಬಿಡ್ತಿದ್ದೆ. ಸುಮ್ನೆ ...ಹೇಳಿದವರನ್ನ ನೇಮಿಸಿಕೊ" ಎಂದು ಕಿರುಚಾಡಿದ್ದಾನೆ.

...ತನ ಅನಾಗರಿಕ ನಡವಳಿಕೆಗೆ ಪ್ರಾಂಶುಪಾಲರು ...ದ್ದಾಗ ಕಾಲೇಜಿನಿಂದಲೇ ಶಿಕ್ಷಣ ಇಲಾಖೆಯ ...ಕ್ತರಿಗೆ ಮತ್ತು ಜಂಟಿ ನಿರ್ದೇಶಕರಿಗೆ "ಪ್ರಾಂಶು ...ಂ ಬಿಕಾಂ ಪ್ರವೇಶಕ್ಕೆ ಲಂಚ ಕೇಳುತ್ತಿದ್ದಾರೆ" ಎಂದು ...ಆರೋಪಿಸಿ ಫ್ಯಾಕ್ಸ್ ಮಾಡಿದ್ದಾನೆ. ಇದಾದ ಎರಡು ... ನಂತರ ಮತ್ತೆ ಬಂದು ಕಾಲೇಜಿಗೆ ಬಂದು, ... ಬೆದಿಯುವರನ್ನೂ ಕರೆಸಿಕೊಂಡು "ಈ ಕೂಡಲೇ ...ನ್ನ ತೆಗೆದು ಹಾಕ್ರೀ" ಎಂದು ಒತ್ತಡ ಹೇರಿದ್ದಾನೆ. ...ವಾಗಲೇ ಈ ಶಾಸಕನ ವರ್ತನೆಯಿಂದ ಬಹಳ ...ಕೊಂಡ ಪ್ರಿನ್ಸಿಪಾಲ್ ತಾರಾರವರು ಹತ್ತು ದಿನಗಳ ...ಕ ರಜೆ ತೆಗೆದುಕೊಂಡಿದ್ದರು. ಅವರ ಸ್ಥಾನ ...ಕೊಂಡಿದ್ದ ಶ್ರೀನಿವಾಸ್‌ರವರ ಮೇಲೂ ಅದೇ ... ದರ್ಪವನ್ನು ಸಂಗಮೇಶ ತೋರಿಸಿದ್ದಾನೆ.

...ಗೆಲ್ಲಾ ಹಲಿಟ್ಟುವಂತೆ ಪ್ರಶ್ನೆಗಳು ಸಂಗಮೇಶನಿಗೆ ...ಗಳೂ ಇಲ್ಲದಿಲ್ಲ, ಭದ್ರಾವತಿಯೇ ಇಂದಿಯಾ ...ವಿ, ಹಾಗೇ ಅದರ ಪ್ರಧಾನಮಂತ್ರಿಯಂತಲೂ ... ಸಂಗಮೇಶನಿಗೆ ಜನರು ದೂರುವುದು ... ಜನಗಳ ಕೈಯಲ್ಲಿ ದೂರಕ್ಕುಳ್ಳಾಗಿದೆ. ... ಶಾಸಕನೆಂದು ತನ್ನ ಹೊಗಳುಭಟರಿಂದ ಕರೆಸಿಕೊಳ್ಳುವ ಸಂಗಮೇಶ ಈಗ ತನ್ನ ಕ್ಷೇತ್ರದಲ್ಲಿ ಸೃಷ್ಟಿಸುತ್ತಿರುವ ಅಶಾಂತಿ ಅಷ್ಟಿಷ್ಟಲ್ಲ. ಭದ್ರಾವತಿ ಹಿಂದೊಮ್ಮೆ ಅಪ್ಪಾಜಿಗೌಡನ ದಬ್ಬಾಳಿಕೆಗೆ ನಲುಗಿದ್ದರೆ ಇಂದು ಸಂಗಮೇಶನ ಕೈಯಲ್ಲಿ ನರಳುತ್ತಿದೆ.

ಈ ಹಿಂದೆ ಸರ್ ಎಂ.ವಿ. ಕಾಲೇಜಿನ ಅಭಿವೃದ್ಧಿಗೆಂದು ಸರ್ಕಾರದಿಂದ 25 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿಸಿಕೊಂಡ ಸಂಗಮೇಶ, ತನ್ನ ಹಿಂಬಾಲಕ ಗುತ್ತಿಗೆ ದಾರನಿಗೇ ಅಲ್ಲಿಯ ಕೆಲಸ ವಹಿಸಿದ್ದಾನೆ. ಈ ಕಾಲೇಜಿನ ಅಭಿವೃದ್ಧಿಯ ಒಂದು ನೀಲಿನಕ್ಷೆ ಕೂಡಾ ಕಾಲೇಜಿನ ಪ್ರಾಂಶುಪಾಲರಿಗೆ ಸಿಕ್ಕಿಲ್ಲ ಎಂದರೆ ಇವನ ಹಕೀಕತ್ತು ಊಹಿಸಬಹುದು. ಆ ಗುತ್ತಿಗೆದಾರ ಹಳೆಯ ಪೀಠೋಪಕರಣ, ಕಿಟಕಿ, ಬಾಗಿಲುಗಳನ್ನು ಕದ್ದು ಸಾಗಿಸಿ ಅವುಗಳ ಜಾಗದಲ್ಲಿ ಯಾತಕ್ಕೂ ಬಾರದ ಹೊಸ ಕಿಟಕಿ, ಬಾಗಿಲುಗಳನ್ನು ಜೋಡಿಸಿದ್ದಾನೆ. ಹಳೆಯ ವಸ್ತುಗಳನ್ನು ಕಾಲೇಜಿನ ಸ್ಟಾಕ್‌ನೊಳಕ್ಕೆ ತಂದಿಡಲು ಪ್ರಿನ್ಸಿಪಾಲರು ತಿಳಿಸಿದರೆ, ಈ ಖದೀಮ ಏನು ಮಾಡಿದ್ದಾನೆ ಗೊತ್ತೇ. ಈಗ ಹಾಕಿರುವ ಬಾಗಿಲುಗಳನ್ನೂ ಕಿತ್ತುಕೊಂಡು ಹೋಗಿ, ಶಾಸಕನಿಗೆ ತಿಳಿಸಿ ಪ್ರಿನ್ಸಿಪಾಲರಿಗೆ ಫೋನಿನಲ್ಲಿ ಅವಾಜ್ ಹಾಕಿಸಿದ್ದಾನೆ. ಸರ್ಕಾರಿ ಕಾಲೇಜನ್ನು ತನ್ನಪ್ಪನ ಮನೆಯ ಸೊತ್ತು ಎಂದು ಸಂಗಮೇಶ ತಿಳಿದಿದ್ದರ ಪರಿಣಾಮ ಇದು.

ಇಲ್ಲಿ ಇನ್ನೊಂದು ಪ್ರಹಸನವೂ ಇದೆ. ನ್ಯೂಟೌನ್ ಪಿಯು ಕಾಲೇಜಿನಲ್ಲಿ ನಿಯತ್ತಾಗಿ ಪರೀಕ್ಷೆ ಬರೆಯದೇ ಅದ್ಹೇಗೋ ಪಾಸಾದ ಅಂಕಪಟ್ಟಿಯನ್ನು ಗಿಟ್ಟಿಸಿಕೊಂಡ ಸಂಗಮೇಶನ ಪುತ್ರ ಬಸವರಾಜ ಕೂಡಾ ಥೇಟ್ ತನ್ನಪ್ಪನ ಅಪರಾವತಾರ. ಕೆಲದಿನದ ಹಿಂದೆ ತಾನು ಎಮ್ಮೆಲ್ಲೆ ಮಗ ಎಂಬ ಅಹಂಕಾರದಲ್ಲಿ ಪ್ರಿನ್ಸಿಪಾಲರೆದುರು ಮನಬಂದಂತೆ ವರ್ತಿಸಿದ್ದಕ್ಕೆ ಅವನನ್ನು ಪ್ರಿನ್ಸಿಪಾಲ್ ಗದರಿಸಿದ್ದೇ ತಪ್ಪಾಗಿ ಸಂಗಮೇಶನ ಪ್ರಿನ್ಸಿಪಾಲರ ಮೇಲೆ ಉರಿದುಕೊಂಡಿದ್ದಾನೆ. ಈ ಶಾಸಕ ಪುತ್ರ ಪ್ರಥಮ ಬಿಕಾಂ ಸೇರಿಕೊಂಡಿದ್ದೇ ಕಾಲೇಜಿನಲ್ಲಿ ಇನ್ನಿಲ್ಲದ ಗೂಂಡಾಗಿರಿ ಮರೆಯತೊಡಗಿದ್ದಾನೆ. ಎಮ್ಮೆಲ್ಲೆ ಕಡೆಯವನೆಂದು ಹೇಳಿಕೊಂಡ ವಿದ್ಯಾರ್ಥಿಯೊಬ್ಬ ಕಾಲೇಜಿಗೆ ಪ್ರವೇಶ ಕೇಳಿದಾಗ ಆತನ ವರ್ಗಾವಣೆ ಪತ್ರ ನೋಡಿದ ಪ್ರಿನ್ಸಿಪಾಲರು ಪಿಯು ಮುಗಿಸಿ ನಾಲ್ಕೈದು ವರ್ಷ ಅಂತರದಲ್ಲಿ ಕಾಲೇಜಿಗೆ ಸೇರುತ್ತಿರುವುದೇಕೆಂದು ಕಾರಣ ನೀಡಿ ಪ್ರಮಾಣಪತ್ರ ತರಲು ತಿಳಿಸಿದ್ದೂ ದೊಡ್ಡ ಅಪರಾಧವಾಗಿದೆ ಸಂಗಮೇಶನಿಗೆ. "ಅದೆಲ್ಲಾ ಯಾಕೆ ಕೇಳ್ತೀರಿ? ನಾನು ಹೇಳಿದ್ಮೇಲೆ ಸುಮ್ನೆ ಸೇರಿಸ್ಕೋಬೇಕು" ಎಂದು ಧಮಕಿ ಹಾಕಿದ್ದ. ಅದೇ ರೀತಿ, ಕಾಲೇಜಿನ ಇಬ್ಬರು ಸಹಾಯಕ ದರ್ಜೆ ನೌಕರರನ್ನು ಬೇರೊಂದು ಕಾಲೇಜಿಗೆ ಡೆಪ್ಯೂಟೇಷನ್ ಮೇಲೆ ಕಳಿಸಿದ್ದೂ ಸಂಗಮೇಶನಿಗೆ ಸರಿ ಕಾಣದೇ ಪ್ರಿನ್ಸಿಪಾಲರ ಮೇಲೇ ಹರಿಹಾಯ್ದಿದ್ದಾನೆ. ಆದರೆ ಆ ವರ್ಗಾವಣೆ ಮಾಡಿದ್ದು ಶಿಕ್ಷಣ ಇಲಾಖೆಯ ಜಂಟಿ ಆಯುಕ್ತರೆಂಬುದೂ ಈ ಶಾಸಕರಿಗೆ ತಲೆಗೆ ಹೋಗಿಲ್ಲ, ಹಾಗಂತ ತಿಳಿಹೇಳಿದ ಮೇಲೂ ತನ್ನ ಆಟಾಟೋಪ ಗಳನ್ನೂ ನಿಲ್ಲಿಸಲಿಲ್ಲ.

ಮೊನ್ನೆಯ ನೇಮಕಾತಿಯ ವಿಷಯದಲ್ಲಿ ಈತನ ಹುಚ್ಚಾಟವನ್ನು ಪ್ರತಿಭಟಿಸಿ, ಕಾಲೇಜಿನ ಅಧ್ಯಾಪಕವೃಂದ ಮತ್ತು ವಿದ್ಯಾರ್ಥಿವೃಂದ ಪ್ರತ್ಯೇಕವಾಗಿ ಪ್ರತಿಭಟನೆಗಳನ್ನು ನಡೆಸಿವೆ. ಅದಕ್ಕೆ ಪ್ರತಿಯಾಗಿ ಆ ಕಾಲೇಜಿನ "ವಿದ್ಯಾರ್ಥಿ" ಯಾಗಿರುವ ತನ್ನ ಪುತ್ರ ಬಸವರಾಜನೊಂದಿಗೆ ಹೊರಗಿನ ಎಂಟ್ಹತ್ತು ಹುಡುಗರನ್ನು ಕಳುಹಿಸಿ ಪ್ರಿನ್ಸಿಪಾಲರ ವಿರುದ್ಧ ತಾನೂ ಪ್ರತಿಭಟನೆ ಮಾಡಿಸಿದ್ದಾನೆ.

ಭದ್ರಾವತಿಯಲ್ಲಿ ಇನ್ನೊಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿದೆ. ಅಲ್ಲಿನ ವ್ಯವಸ್ಥೆಗಳನ್ನು ನೋಡಿದರೆ ದೇವರೇ ಗತಿ. ಆ ಕಾಲೇಜಿನ ಸ್ವಂತ ಕಟ್ಟಡಕ್ಕಾಗಿ ಹಣ ಬಿಡುಗಡೆಯಾಗಿ ಐದಾರು ವರ್ಷಗಳೇ ಕಳೆದಿದ್ದರೂ ಇನ್ನೂ ಕನಿಷ್ಠ ಮೂಲಭೂತ ಸೌಕರ್ಯಗಳೂ ಅಲ್ಲಿಲ್ಲ. ಆದರೂ ಅದರ ಉದ್ಘಾಟನೆಯನ್ನು ನೆರವೇರಿಸಲಾಗಿದೆ. ಆ ಕಾಲೇಜಿನ ಪ್ರಿನ್ಸಿಪಾಲ್ ಮಾರ್ತಾಂಡಪ್ಪನಿಗೂ ಶಾಸಕ ಸಂಗಮೇಶನಿಗೂ ತುಂಬಾ ಚೆನ್ನಾಗಿ ಹೊಂದಾಣಿಕೆ ಯಾಗುತ್ತದೆ. ಹಾಗಾಗಿ ಪ್ರಿನ್ಸಿಪಾಲರು ಅದ್ಯಾವಾಗ ಕಾಲೇಜಿಗೆ ಬರುತ್ತಾರೆ ಯಾವಾಗ ಹೊರಹೋಗುತ್ತಾರೆ ಎಂದು ನೋಡಿದವರು ಅಪರೂಪ.

ಯಾರಾದರೂ ಸಣ್ಣಪುಟ್ಟದ್ದನ್ನು ಕೇಳಿದರೂ ಜೋರುಬಾಯಿ ಮಾಡಿ ಕತ್ತಿಗೆ ಕೈಹಾಕಿ ಹೊರಗಿ ದಬ್ಬಬಿಡುವಷ್ಟು ಶಾಂತಸ್ವರೂಪ ಈ ಮಾರ್ತಾಂಡಪ್ಪ. ಶಾಸಕ ಸಂಗಮೇಶ ಏನೇ ಹೇಳಿದರೂ ಮರುಮಾತಿಲ್ಲದೆ 'ಎಸ್' ಎನ್ನುವ ವ್ಯಕ್ತಿ ಈ ಮಾರ್ತಾಂಡಪ್ಪ. ಆ ಕಾಲೇಜಿಗೆ ಬಿಡುಗಡೆಯಾದ ಹಣದಲ್ಲಿ ಮುಕ್ಕಾಲು ಭಾಗ ಸಂಗಮೇಶನ ಹಿಂಬಾಲಕರ ಹೊಟ್ಟೆ ಸೇರಿಕೊಂಡಿರುವುದು ಎಲ್ಲರಿಗೂ ಗೊತ್ತಿರುವ ಗುಟ್ಟು. ಇಲ್ಲಿ ತನ್ನ ಆಟಾಟೋಪಗಳು ನಡೆಯುವಂತೆ ಸರ್ ಎಂ.ವಿ. ಕಾಲೇಜಿನಲ್ಲೂ ನಡೆಯ ದಿದ್ದಕ್ಕೇ ಶಾಸಕ ಸಂಗಮೇಶನಿಗೆ ಇನ್ನಿಲ್ಲದ ಕೋಪ.


ಇಂತಹ ಶಾಸಕನನ್ನು ಪಡೆದ ಭದ್ರಾವತಿಯ ವಿದ್ಯಾರ್ಥಿಗಳು ಉದ್ಧಾರವಾಗುವುದೆಂದು?

● ಹರ್ಷ ಉಗ್ರೆ

ಸೆಕ್ಯುಲರಿಸ್ಟ್ ಪಕ್ಷಗಳ ಕತೆಯೂ ಹೀಗೆಯೇ. ಇವುಗಳು ಒಕ್ಕಲಿಗರ ಜನಸಂಖ್ಯೆ ಹೆಚ್ಚಿದ್ದರೆ ಒಕ್ಕಲಿಗರಿಗೆ, ಲಿಂಗಾಯ ಅಥವಾ ಕುರುಬರ ಸಂಖ್ಯೆ ಹೆಚ್ಚಿದ್ದರೆ ಲಿಂಗಾಯತ ಅಥವಾ ಕುರುಬರಿಗೆ, ಕೊಡವರ ಸಂಖ್ಯೆ ಹೆಚ್ಚಿದ್ದರೆ ಕೊಡವ ತಮ್ಮ ಪಕ್ಷದ ಟಿಕೆಟುಗಳನ್ನು ನೀಡುತ್ತವೆ ವಿನಃ "ಭಾರತೀಯರಿಗಲ್ಲ." ಎ. ಕೆ. ಸುಬ್ಬಯ್ಯನವರು ತಮ್ಮ ದೊಡ್ಡತ ಮರೆದದ್ದೇ ಈ ಬಗೆಯ ಕಪಟ ಸೆಕ್ಯುಲರಿಸಂ ಅನ್ನು ಮೀರುವುದರ ಮೂಲಕ ಎಂದರೆ ಉತ್ಪ್ರೇಕ್ಷೆಯಲ್ಲ. ನ್ಯಾಯ ಪರ ಇರಲೇಬೇಕೆಂಬ ಅವರ ವಕೀಲ ವೃತ್ತಿಯ ಆದರ್ಶವನ್ನು ಅವರು ತಮ್ಮ ರಾಜಕೀಯ/ಸಾಮಾಜ ಜೀವನದಲ್ಲಿಯೂ ಅಳವಡಿಸಿಕೊಳ್ಳಲು ಪ್ರಯತ್ನಿಸಿರುವುದು ಶ್ಲಾಘನೀಯ.


ಸುಬ್ಬಯ್ಯ 75

ಕೆಲವು ನೆನಪುಗಳು



ಇದೇ ಆಗಸ್ಟ್ 18ಕ್ಕೆ ಅಜ್ಜಿಕುಟ್ಟೀರ ಕೆ ಸುಬ್ಬಯ್ಯನವರಿಗೆ 75 ತುಂಬುತ್ತಿವೆ. ಅವರ ಹುಟ್ಟೂರು ಕೊಡಗಿನ ಮಡಿಕೇರಿಯಲ್ಲಿ ಅವರಿಗೆ ಅಭಿನಂದನಾ ಕಾರ್ಯಕ್ರಮವು ನಡೆಯಲಿದೆ. ಹುಟ್ಟು ಬಂಡಾಯಗಾರರಾದ ಸುಬ್ಬಯ್ಯನವರು ಅತ್ಯಂತ ನಿಷ್ಠುರವಾದಿಯಾಗಿ ಮತ್ತು ಆ ಕಾರಣಕ್ಕಾಗಿಯೇ ಅವರು ಏಕಾಂಗಿಯಾಗಿ ಸೆಣಸಿದ ಕ್ಷೇತ್ರಗಳು ಹಲವಾರು. ಒಬ್ಬ ಯಶಸ್ವೀ ವಕೀಲರಾಗಿ, ಸಾಮಾಜಿಕ ಕಾರ್ಯಕರ್ತರಾಗಿ, ಚಿಂತಕರಾಗಿ, ಭೂ ಹೋರಾಟಗಾರರಾಗಿ ತನ್ನ ಬಹುಮುಖಿ ವ್ಯಕ್ತಿತ್ವದ ಛಾಪನ್ನು ಜನಮಾನಸದಲ್ಲಿ ಮೂಡಿಸಿದ ಸುಬ್ಬಯ್ಯನವರು ತಮ್ಮ ತತ್ವಕ್ಕಾಗಿ ಮತ್ತು ನಂಬಿಕೆಗಳಿಗಾಗಿ ವ್ಯವಸ್ಥೆಯನ್ನೇ ಎದುರು ಹಾಕಿಕೊಂಡವರು. ಅವರ ವ್ಯಕ್ತಿ ಪರಿಚಯವನ್ನು ಮಾಡಿಕೊಡುವ ಉದ್ದೇಶ ಈ ಲೇಖನಕ್ಕಿಲ್ಲದಿದ್ದರೂ ಕರ್ನಾಟಕವು ಬಹಳ ಅಪರೂಪಕ್ಕೆ ಕಂಡ ಈ ವಿಶಿಷ್ಟ ರಾಜಕಾರಣಿಯ ಬದುಕಿನ ಕೆಲವು ಮಹತ್ವದ ಹೆಜ್ಜೆಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದು ಬಹಳ ಮುಖ್ಯ ಎಂದು ಈ ಸಂದರ್ಭದಲ್ಲಿ ನಾನು ಭಾವಿಸಿದ್ದೇನೆ.

ಕರ್ನಾಟಕ ವಿಧಾನ ಪರಿಷತ್‌ನ ಸದಸ್ಯರಾಗಿ 24 ವರ್ಷಗಳ ಕಾಲ ಕಾರ್ಯನಿರ್ವಹಿಸಿದ ಮತ್ತು 1978–80ರ ಅವಧಿಯಲ್ಲಿ ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕನಾಗಿ ಅನ್ಯಾಯಗಳ ವಿರುದ್ಧ ಗುಡುಗಿದ ಸುಬ್ಬಯ್ಯನವರ ವ್ಯಂಗ್ಯ ಮಿಶ್ರಿತವಾದ, ನಿಷ್ಠುರವಾದ ಭಾಷಣಗಳನ್ನು ಆಲಿಸಲು ಗ್ಯಾಲರಿಯಲ್ಲಿ ಜನಜಂಗುಳಿಯ ನೂಕುನುಗ್ಗಲಿದ್ದದ್ದು ಈಗ ಇತಿಹಾಸ ಮಾತ್ರ. ಸಾರ್ವಜನಿಕ ಭಾಷಣಗಳಲ್ಲಿಯೂ ಅವರ ಹರಿತವಾದ ಮಾತು ನೊಂದವರಿಗೆ ಸಾಂತ್ವನ ನೀಡುವಂತಿದ್ದರೆ ಶೋಷಕರಿಗೆ ಎದೆ ಭಗಿಯುವಂತಿರುತಿತ್ತು. 30 ವರ್ಷಗಳ ಕಾಂಗ್ರೆಸ್ ಸರಕಾರಕ್ಕೆ ಪರ್ಯಾಯ ಹುಡುಕಲು ಯತ್ನಿಸುತ್ತಿದ್ದ ಸುಬ್ಬಯ್ಯನವರು ಆ ಕಾಲಕ್ಕೆ ಜನತಾಪಕ್ಷದ ಕಣ್ಮಣಿಯಾಗಿದ್ದವರು. ಕರ್ನಾಟಕದ ಜನತಾಪಾರ್ಟಿಯ ಮಂಚೂಣಿಯ ನಾಯಕರಾಗಿದ್ದ ಸುಬ್ಬಯ್ಯನವರಿಗೆ ಆ ಕಾಲದ ಸರ್ವಶ್ರೇಷ್ಠ ರಾಷ್ಟ್ರೀಯ ನಾಯಕರ ಒಡನಾಟವಿತ್ತು. ಬಿಜೆಪಿಯ ಕರ್ನಾಟಕ ಘಟಕದ ನಾಯಕರಾಗಿದ್ದ ಸುಬ್ಬಯ್ಯನವರು ಬಿಜೆಪಿಯ ರಾಷ್ಟ್ರೀಯ ನಾಯಕರನ್ನು ಕರ್ನಾಟಕದ ಮೂಲೆಮೂಲೆಗೆ ಕರೆದೊಯ್ದರು. ಕಾಂಗ್ರೆಸ್‌ಗೆ ಪರ್ಯಾಯ ಹುಡುಕಲೇಬೇಕೆಂಬ ಹಠದಲ್ಲಿ ಎಲ್ಲಾ ನಾಯಕರನ್ನು ಕಾರ್ಯಕರ್ತರಿಗೆ ಮತ್ತು ಜನರಿಗೆ ಪರಿಚಯ ಮಾಡಿಸಬೇಕೆಂಬ ಹುಮ್ಮಸ್ಸು ಸುಬ್ಬಯ್ಯನವರದು. ತುರ್ತು ಪರಿಸ್ಥಿತಿ ಕಾಲದ ಹೀರೋಗಳಾದ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಚಂದ್ರಶೇಖರ್, ಜಾರ್ಜ್ ಫರ್ನಾಂಡಿಸ್, ಜಗನ್ನಾಥರಾವ್ ಜೋಶಿ ಮತ್ತಿತರರನ್ನು 1978ರ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ರಾಜಾಸೀಟು ಮೈದಾನದಲ್ಲಿ ಮಡಿಕೇರಿ ನಾಗರಿಕರಿಗೆ ಸುಬ್ಬಯ್ಯನವರು ಪರಿಚಯಿಸಿಕೊಟ್ಟರು. ನಂತರ ದಿನಗಳಲ್ಲಿ ಸುಬ್ಬಯ್ಯನವರು ವಾಜಪೇಯಿ ಅವರನ್ನು ಕೊಡಗಿಗೆ ಬರಮಾಡಿಕೊಂಡರು. ರಾಷ್ಟ್ರೀಯ ನಾಯಕರನ್ನು ಮಡಿಕೇರಿಗೆ ಕರೆದುಕೊಂಡು ಹೋದಂತೆ ಕರ್ನಾಟಕದ ಮೂಲೆಮೂಲೆಯ ಹಳ್ಳಿ ಪಟ್ಟಣಗಳಿಗೂ ಕರೆದೊಯ್ದರು.



ಮೂಲೆಗುಂಪಾಗಿದ್ದ ಜನಸಂಘದ ದೀಪವನ್ನು ಕರ್ನಾಟಕದಾದ್ಯಂತ ಬಿಜೆಪಿಯ ಮೂಲಕ ಬೆಳಗಿಸಲು ಅವರು ಪಟ್ಟ ಶ್ರಮ ಅಷ್ಟಿಷ್ಟಲ್ಲ.

1962ರಲ್ಲಿ ಪ್ರಜಾಸೋಷಿಯಲಿಸ್ಟ್ ಪಾರ್ಟಿಯಲ್ಲಿ ಸಕ್ರಿಯವಾಗಿದ್ದ ಸುಬ್ಬಯ್ಯನವರು ಆ ಪಾರ್ಟಿಯ ಅಂತ್ಯದೊಂದಿಗೆ ಆ ಕಾಲದಲ್ಲಿ ಕಾಂಗ್ರೆಸ್‌ಗೆ ಸವಾಲೊಡ್ಡುತ್ತಿದ್ದ ಜನಸಂಘಕ್ಕೆ ಆಕರ್ಷಿತರಾದರು. 1963ರಲ್ಲಿ ಆ ಕಾರಣಕ್ಕಾಗಿ ಶಿವಮೊಗ್ಗದ ಆರೆಸ್ಸೆಸ್ ಶಿಬಿರದಲ್ಲಿ ಪಾಲ್ಗೊಂಡರು. 1967ರಲ್ಲಿ ವಿರಾಜಪೇಟೆಯಿಂದ ಜನಸಂಘದ ಅಭ್ಯರ್ಥಿ ವಿಧಾನಸಭೆಗೆ ಆಯ್ಕೆಯಾಗಲು ಸುಬ್ಬಯ್ಯ ಹಾಗೂ ಅವರ ಸಂಗಡಿಗರ ಪಾತ್ರ ಮಹತ್ವದ್ದು. 1968ರಲ್ಲಿ ವಿಧಾನ ಪರಿಷತ್‌ನ ಸದಸ್ಯರಾಗಲು ಆರೆಸ್ಸೆಸ್ ಸುಬ್ಬಯ್ಯನವರಿಗೆ ಸಹಾಯ ಮಾಡಿತು. ನಂತರ ಅವರು ರಾಜಕಾರಣದಲ್ಲಿ ಇಟ್ಟ ಹೆಜ್ಜೆ ಮಹತ್ವಪೂರ್ಣವಾದುದು. ತುರ್ತು ಪರಿಸ್ಥಿತಿಯ ಘೋಷಣೆಯಿಂದಾಗಿ 1973–74ರ ಸಂದರ್ಭದಲ್ಲಿ ಆರೆಸ್ಸೆಸ್‌ನೊಂದಿಗಿದ್ದ ಸುಬ್ಬಯ್ಯನವರ ಭಿನ್ನಮತ ಬಹಿರಂಗವಾಗಿರಲಿಲ್ಲ. ಅಡ್ವಾಣಿಯವರನ್ನೊಳಗೊಂಡಂತೆ ಬಹುತೇಕ ರಾಜಕರಾಣಿಗಳೊಂದಿಗೆ ಸೆರೆಮನೆಯಲ್ಲಿ 18 ತಿಂಗಳು ಕಳೆದ ಸುಬ್ಬಯ್ಯನವರು ನಂತರ ಪಕ್ಷದ ಆಂತರಿಕ ಭಿನ್ನಮತಕ್ಕಿಂತ ಕಾಂಗ್ರೆಸ್‌ಗೆ ಪರ್ಯಾಯವನ್ನು ಹುಡುಕುವಲ್ಲಿ ಶ್ರಮಿಸಿದರು. ಜನತಾಪಕ್ಷವು ಭಾರತದ ರಾಜಕಾರಣದಲ್ಲಿ ವಿಜೃಂಭಿಸಿದರೂ ಅದರ ಆಂತರಿಕ ಭಿನ್ನಮತಗಳಿಂದಾಗಿ ಭಾರತೀಯ ಜನತಾ ಪಾರ್ಟಿಯ ಉದಯವಾದದ್ದು ಸರಿಯಷ್ಟೆ. ಜನಸಂಘದ ಆದರ್ಶ ರಾಜಕಾರಣದ ಗುಂಗಿನಲ್ಲೇ ಇದ್ದ ಸುಬ್ಬಯ್ಯನವರು ಬಿಜೆಪಿಯನ್ನು ಆಯ್ಕೆ ಮಾಡಿದರು.

ಸುಬ್ಬಯ್ಯನವರು ಬಿಜೆಪಿಯು ಜನಸಂಘದ ಮಾದರಿಯನ್ನು ಅನುಸರಿಸಬೇಕೆಂದು ಬಯಸಿದವರು. ಆದರೆ ಬಿಜೆಪಿಗೆ ಆರೆಸ್ಸೆಸ್‌ನ ಮಧ್ಯ ಪ್ರವೇಶದಿಂದಾಗಿ ಅದು ಸಾಧ್ಯವಾಗಲಿಲ್ಲ. ಈ ನಿಟ್ಟಿನ ಸೈದ್ಧಾಂತಿಕತೆಗೆ ಸುಬ್ಬಯ್ಯನವರಿಗೆ ವಾಜಪೇಯಿ ಅವರು ಮಾದರಿಯಾಗಿದ್ದರು. ಆದರೆ ಆರೆಸ್ಸೆಸ್‌ನ ಪ್ರಭಾವವನ್ನು ತಡೆಯಲು ವಾಜಪೇಯಿ ಅವರಿಗೂ ಸಾಧ್ಯವಾಗಲಿಲ್ಲ ಎಂದು ಸುಬ್ಬಯ್ಯ ಬರೆಯುತ್ತಾರೆ. ಆರೆಸ್ಸೆಸ್ಸಿನ ಪುರೋಹಿತಶಾಹಿಯ ಪಾತ್ರ ಅವರಿಗೆ ನುಂಗಲಾರದ ತುತ್ತಾಗಿತ್ತು. ಭಾರತದಲ್ಲಿನ ಬಹುಸಂಖ್ಯಾತ ಕೆಳಜಾತಿಗಳಿಗೆ ಪುರೋಹಿತಶಾಹಿ ಜೀವನಕ್ರಮವನ್ನೇ ಆದರ್ಶವಾಗಿ ಮಾಡುವ ಆರೆಸ್ಸೆಸ್ ಸಿದ್ಧಾಂತದ ಬಗ್ಗೆ ಸುಬ್ಬಯ್ಯನವರಿಗೆ ತೀವ್ರವಾದ ಭಿನ್ನಾಭಿಪ್ರಾಯವಿತ್ತು. ತಾವೇ ಬೆಳೆಸಿದ ಕೊಡಗಿನ ನಾಯಕರೊಬ್ಬರು ತಮ್ಮ ಮೂಲವನ್ನೇ ಕೆದಕುತ್ತಿದ್ದದ್ದು ಆರೆಸ್ಸೆಸ್ಸಿಗೂ ಇಷ್ಟವಾಗದೇ ಇದ್ದ ವಿಚಾರ ಕೂಡ. ವಾಜಪೇಯಿ ಅವರ ಜೊತೆಗೆ ಸುಬ್ಬಯ್ಯನವರು ಈ ಕುರಿತಂತೆ ಚರ್ಚಿಸಿದುಂಟು. ಆದರೆ ವಾಜಪೇಯಿಯವರ ಮೌನದಿಂದಾಗಿ ಸುಬ್ಬಯ್ಯನವರು ಬಿಜೆಪಿಗೆ ವಿದಾಯ ಹೇಳುವುದು ಅನಿವಾರ್ಯವಾಯಿತು.

ಬಿಜೆಪಿಯಿಂದ ಹೊರನಡೆದ ಸುಬ್ಬಯ್ಯನವರು ಕನ್ನಡನಾಡು ಎಂಬ ಪ್ರಾದೇಶಿಕ ಪಕ್ಷವನ್ನು ಕಟ್ಟಿ ಅದರ ಸಾರಥ್ಯವನ್ನು ರಾಜ್‌ಕುಮಾರ್ ಅವರು ವಹಿಸಬೇಕೆಂದು ಬಯಸಿದರು. ಆದರೆ ಅದು ಕೈಗೂಡಲಿಲ್ಲ. ನಂತರ ಅವರು ಕಿಸಾನ್ ಮಜ್ದೂರ್ ಪಾರ್ಟಿ, ಕಾಂಗ್ರೆಸ್, ಬಿಎಸ್‌ಪಿ, ಜನತಾದಳ (ಎಸ್) ಪಕ್ಷಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಯತ್ನಿಸಿದರು. ತಮ್ಮ ಭಿನ್ನಮತ, ಹಠಗಳಿಂದ ಮತ್ತು ಬಹಳ ಮುಖ್ಯವಾಗಿ ಪ್ರಸ್ತುತ ಪ್ರಜಾಪ್ರಭುತ್ವದ ರಾಜಕಾರಣ ವ್ಯವಸ್ಥೆಯಲ್ಲಿ "ಹೊಂದಿಕೊಂಡು ಹೋಗಲು" ನಿರಾಕರಿಸಿದ್ದರಿಂದ/ಅಸಾಧ್ಯವಾಗಿದ್ದರಿಂದ ಹುಟ್ಟಾ ಬಂಡಾಯಗಾರ ಏಕಾಂಗಿಯಾಗಿಯೇ ಹೋರಾಟ ಮಾಡಬೇಕಾಯಿತು. ಸುಬ್ಬಯ್ಯನವರ ಟೀಕೆಗಳಿಂದ ಕಮ್ಯುನಿಸ್ಟ್ ಪಕ್ಷಗಳೂ ಹೊರತಾಗಿಲ್ಲ. ಸೋಮನಾಥ ಚಟರ್ಜಿ ಅವರ ಪ್ರಕರಣದಲ್ಲಿ ಸಿಪಿಎಂ ಪಕ್ಷವನ್ನು ಕಟುವಾಗಿ ಟೀಕಿಸುವಲ್ಲಿಯೂ ಸುಬ್ಬಯ್ಯನವರೂ ಮುಂದು.

1980ರ ದಶಕದಲ್ಲಿ ಫೋನ್ ಕದ್ದಾಲಿಕೆ ಪ್ರಕರಣ,

ವಿಶೇಷ ಲೇಖನ

ವಿಜಯ್ ಪೂಣಚ್ಚ ತಂಬಂಡ

ರೇವಜೀತು ಪ್ರಕರಣ, ಎಂ.ಡಿ.ಸೀಟು ಹಗರಣ, ಬಾಟ್ಲಿಂಗ್ ಹಗರಣ, ರೇಣುಕಾ ರಾಜೇಂದ್ರನ್ ಹಗರಣ, ರೋಲೆಕ್ಸ್‌ವಾಚ್ ಹಗರಣಗಳನ್ನು ಸುಬ್ಬಯ್ಯನವರು ಬಯಲಿಗೆಳೆದರು. ಅವುಗಳಲ್ಲಿ ಕೆಲವೊಂದು ಹಗರಣಗಳನ್ನು ಅವರು ವಿಧಾನಸೌಧದಲ್ಲಿ ಹಾಗೂ ಕೆಲವನ್ನು ನ್ಯಾಯಾಲಯಗಳಲ್ಲಿ ಸೆಣಸಾಡಿ ಕರ್ನಾಟಕದಲ್ಲಿ ಮನೆಮಾತಾಗಿದ್ದ ಸುಬ್ಬಯ್ಯ ಪಕ್ಷರಾಜಕಾರಣದಲ್ಲಿ ಹಿನ್ನಡೆಯನ್ನು ಅನುಭವಿಸಿದರೂ ಉಳಿದ ಸಾರ್ವಜನಿಕ ಕ್ಷೇತ್ರಗಳಲ್ಲಿ ದಾಪುಗಾಲನ್ನು ಹಾಕಿದರು.

* * * * *

1982ರಲ್ಲಿ ಬಿಜೆಪಿ/ಆರೆಸ್ಸೆಸ್ ಜೊತೆಗೆ ಸಂಪರ್ಕ ಕಡಿದುಕೊಂಡ ಮೇಲೆ ಸಂಘಪರಿವಾರದ ವಿರುದ್ಧ ಸುಬ್ಬಯ್ಯನವರು ಸಮರ ಸಾರಿದರು. ಕೆಲವೊಮ್ಮೆ ಅವರಿದ್ದ ರಾಜಕೀಯ ಪಕ್ಷಗಳ ಮೂಲಕ ಮತ್ತು ಬಹಳಷ್ಟು ಬಾರಿ ಏಕಾಂಗಿಯಾಗಿಯೇ ಅವರು ಆ ಸಂದರ್ಭಗಳಲ್ಲಿ ಸೆಣಸಿದರು. ಪಾಕಿಸ್ತಾನ ಧ್ವಜ ಹಗರಣ, ಪಾಲೂರು ಕೋಮುಗಲಭೆ, ಬಾಬಾಬುಡನ್‌ಗಿರಿ ದರ್ಗಾ ಪ್ರಕರಣಗಳಲ್ಲಿ ಸಂಘಪರಿವಾರದ ವಿರುದ್ಧ ಅವರು ಸೆಣಸಾಡಿದರು. 1983ರ ಸುಮಾರಿಗೆ "ಆರ್.ಎಸ್.ಎಸ್. ಅಂತರಂಗ" ಎನ್ನುವ ಕಿರು ಹೊತ್ತಗೆಯ ಮೂಲಕ ಆರೆಸ್ಸೆಸ್‌ನೊಂದಿಗಿದ್ದ ತಮ್ಮ ಸಂಪೂರ್ಣ ಭಿನ್ನಮತವನ್ನು ತೋರಿಸಿದರು. ಆರೆಸ್ಸೆಸ್ ಸಿದ್ಧಾಂತಗಳನ್ನು ಅವರು ಕಟುವಾಗಿ ಟೀಕಿಸಿದರು. ಆರೆಸ್ಸೆಸ್ ಪ್ರಚಾರಕರನ್ನು ತರಾಟೆಗೆ ತೆಗೆದುಕೊಂಡರು. ಬಹುಶಃ ಸುಬ್ಬಯ್ಯನವರ ಸಮಕಾಲೀನ ಯಾವ ರಾಜಕಾರಣಿಗಳು ವ್ಯಕ್ತಪಡಿಸದಷ್ಟು ಭಿನ್ನಾಭಿಪ್ರಾಯಗಳನ್ನು ಸುಬ್ಬಯ್ಯನವರು ಬಹಿರಂಗವಾಗಿ ಹಂಚಿಕೊಂಡರು.

ಸೆಕ್ಯುಲರಿಸ್ಟ್ ತತ್ವಗಳಿಗೆ ಮಾರುಹೋದ ಸುಬ್ಬಯ್ಯನವರು ಯಾವ ಕಾರಣಕ್ಕೂ ಅದನ್ನು ಇಲ್ಲಿಯವರೆಗೂ ಬಿಟ್ಟು ಕೊಡದಿರುವುದರಿಂದಲೇ ಅವರ ವ್ಯಕ್ತಿತ್ವ ವಿಶಿಷ್ಟವಾಗಿರುವುದು. ಕೋಮುವಾದಿ/ ರಾಷ್ಟ್ರೀಯವಾದಿ ಎಂದು ಘೋಷಿಸಿಕೊಳ್ಳುವ ರೀತಿಯಲ್ಲಿಯೇ ಸೆಕ್ಯುಲರಿಸ್ಟ್ ಎಂದು ಘೋಷಿಸಿಕೊಳ್ಳುವ ರೀತಿಯ ರಾಜಕಾರಣ ಸುಲಭವಾದರೂ ಅದರಂತೆ ನಡೆದುಕೊಳ್ಳುವುದು ಕಷ್ಟದ ಕೆಲಸ. ... ಕಾರಣಕ್ಕಾಗಿ ಅನೇಕರು ರಾಷ್ಟ್ರೀಯವಾದಿಗಳೆಂದು ಕರೆ ... ಕೊಂಡರೂ ರಾಷ್ಟ್ರೀಯವಾದಿಗಳಾಗಿರುವುದಿಲ್ಲ. ಹಾಗೆಯೆ ಸೆಕ್ಯುಲರಿಸ್ಟ್ ಎಂದು ಕರೆದುಕೊಂಡರೂ ಅವರ ಸೆಕ್ಯುಲರಿಸ್ಟ್‌ಗಳಾಗಿರುವುದಿಲ್ಲ. ಸೆಕ್ಯುಲರ್ ಎಂದು ರಾ ... ಕಾರಣ ಮಾಡುವ ಬಹುತೇಕ ಹಿಂದೂ ರಾಜಕಾರಣಿಗ ... ಮುಸ್ಲಿಂ ಮತ್ತು ಕ್ರೈಸ್ತ ಧರ್ಮೀಯರ ಮೇಲಿನ ಆಕ್ರಮ ... ಗಳನ್ನು ಟೀಕಿಸುವ ಅಥವಾ ಆ ಮತಗಳ ವೋಟ ... ಬ್ಯಾಂಕನ್ನು ಗಮನದಲ್ಲಿಟ್ಟುಕೊಂಡು ರಾಜಕಾರಣವನ ... ಮಾಡುವುದಕ್ಕಷ್ಟೇ ತಮ್ಮ ಸೆಕ್ಯುಲರಿಸಂ ಅನ್ನು ಮೀಸಲಿಡ ... ತ್ತಾರೆ. ಇದೇ ಸಂದರ್ಭದಲ್ಲಿ ಕೆಳಜಾತಿಗಳ/ದಲಿತರ ಮೇಲಿ ... ದೌರ್ಜನ್ಯಗಳ ಸಂದರ್ಭದಲ್ಲಿ ಅಥವಾ ಅವರ ಹಕ್ಕುಗಳಿಗಾ ... ಹೋರಾಟ ಮಾಡುವ ಸಂದರ್ಭದಲ್ಲಿ ಈ ಬಗೆಯ ಸೆಕ್ಯುಲರಿಸ್ಟ್‌ಗಳು ಮೌನವಹಿಸಿ ಅವಕಾಶವಾದಿ ರಾ ... ಕಾರಣ ಮಾಡುತ್ತಾರೆ. ಸಾಧ್ಯವಾದರೆ ಈ ಬಗೆಯ ಸೆಕ್ಯುಲರಿಸ್ಟ್ ರಾಜಕಾರಣಿಗಳು ಕೆಳಜಾತಿಗಳ/ದಲಿತ ... ಸಂವಿಧಾನಾತ್ಮಕ ಹಕ್ಕುಗಳನ್ನು ಕಸಿದು ಅವರನ್ನು ಸಿವಿ ... ಸೊಸೈಟಿಯಿಂದ ಹೊರಕ್ಕಟ್ಟ ಉದಾಹರಣೆಗಳೇ ಅಧಿ ...

ಸೆಕ್ಯುಲರಿಸ್ಟ್ ಪಕ್ಷಗಳ ಕತೆಯೂ ಹೀಗೆಯೇ. ಇವುಗಳು ಒಕ್ಕಲಿಗರ ಜನಸಂಖ್ಯೆ ಹೆಚ್ಚಿದ್ದರೆ ಒಕ್ಕಲಿಗರಿ ... ಲಿಂಗಾಯತ ಅಥವಾ ಕುರುಬರ ಸಂಖ್ಯೆ ಹೆಚ್ಚಿದ್ದ ... ಲಿಂಗಾಯತ ಅಥವಾ ಕುರುಬರಿಗೆ, ಕೊಡವರ ಸಂಖ್ಯೆ ಹೆಚ್ಚಿದ್ದರೆ ಕೊಡವರಿಗೆ ತಮ್ಮ ಪಕ್ಷದ ಟಿಕೆಟುಗಳನ ... ನೀಡುತ್ತವೆ ವಿನಃ "ಭಾರತೀಯರಿಗಲ್ಲ." ಎ. ಕೆ. ಸುಬ್ಬಯ ... ನವರು ತಮ್ಮ ದೊಡ್ಡತನ ಮೆರೆದದ್ದೇ ಈ ಬಗೆಯ ಕಪಟ ಸೆಕ್ಯುಲರಿಸಂ ಅನ್ನು ಮೀರುವುದರ ಮೂಲ ... ಎಂದರೆ ಉತ್ಪ್ರೇಕ್ಷೆಯಲ್ಲ. ನ್ಯಾಯದ ಪರ ಇರಲೇಬೇಕೆಂಬ ಅವರ ವಕೀಲ ವೃತ್ತಿಯ ಆದರ್ಶವನ್ನು ಅವರು ತಮ ... ರಾಜಕೀಯ/ ಸಾಮಾಜಿಕ ಜೀವನದಲ್ಲಿಯೂ ಅಳವಡಿ ... ಕೊಳ್ಳಲು ಪ್ರಯತ್ನಿಸಿರುವುದು ಶ್ಲಾಘನೀಯ. ತಾವು ಹುಟ ... ಬೆಳೆದ ಕೊಡವ ಸಮುದಾಯದ ಕೆಲವರು ಹಾದಿ ತಪ್ಪಿದಾ ... ಅದನ್ನು ಅವರು ಕಠೋರವಾಗಿ ಖಂಡಿಸಿದ್ದುಂಟು. ಅವ ... ಮಾತುಗಳಲ್ಲೇ ಹೇಳುವುದಾದರೆ, "ಕೊಡವರು ಗುಂಪ ... ಗಳಲ್ಲಿದ್ದಾಗ ಅವರು ನಡೆದುಕೊಳ್ಳುವ ರೀತಿಗೂ ಒಬ್ಬಂಟಿ ... ನಾಗಿದ್ದಾಗ ವ್ಯವಹರಿಸುವುದಕ್ಕೂ ಸಾಮ್ಯವಿರುವುದಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ಕೊಡವ ಜನಾಂಗ ತಮ್ಮಲ್ಲಿರುವ ಲೋಪದೋಷಗಳೇನೆಂಬುದನ್ನು ಹೆಚ್ಚು ತಿಳಿದುಕೊಳ್ಳುವುದು ಅತ್ಯವಶ್ಯಕವಾಗಿದೆ. ತಮ್ಮಲ್ಲಿ ಲೋಪದೋಷಗಳೇ ಇಲ್ಲ ... ಆದ್ದರಿಂದ ತಿದ್ದುಕೊಳ್ಳುವ ಪ್ರಮೇಯವೇ ಉಂಟಾಗುವುದಿ ... ವೆಂದು ಕೊಡವರು ದೃಢವಾಗಿ ನಂಬುತ್ತಾರೆ. ಅವ ... ಲೋಪದೋಷಗಳ ಬಗ್ಗೆ ನನ್ನಂಥವರು ಯಾರಾದರೂ ಬೆಳಕು ಚೆಲ್ಲಲು ಹೊರಟರೆ, ಅಂಥವರಿಗೆ ಕೊಡವ ವಿರೋಧಿಯೆಂಬ ಪಟ್ಟವನ್ನು ಮೂಲಭೂತವಾದಿ ಕೊಡ ... ವರು ಕಟ್ಟುತ್ತಾರೆ. ಕೊಡವ ವಿರೋಧಿ ಎಂದುಬಿಡುತ್ತಾರೆಂಬ ಭಯದಿಂದ ಅವರ ಸಾಮುದಾಯಿಕ ನಡವಳಿಕೆಯಲ್ಲಿನ ಲೋಪದೋಷಗಳನ್ನು ಎತ್ತಿ ತೋರಿಸದಿದ್ದಾಗ, ತಾವು ಪರಿಪೂರ್ಣರು ಎಂಬ ಭ್ರಮೆ ಅವರಲ್ಲಿ ಮೂಡುತ್ತದೆ. ಹೀಗಾದಲ್ಲಿ ಅವರ ಉನ್ನತಿಯಂತೂ ಸಾಧ್ಯವಾಗುವುದೇ ಇಲ್ಲ, ಬದಲು ಅವನತಿ ಕಟ್ಟಿಟ್ಟ ಬುತ್ತಿಯಾಗುತ್ತವೆ... 'ಕೊಡಗಿನ' ರಾಜರುಗಳು ನಡೆಸಿದ ಅನಾಚಾರಗಳಾವುವೂ ಇಂದು ಕೊಡವರ ಮನಸ್ಸಿನಲ್ಲಿಲ್ಲ. ಇಂದಿಗೂ ಈ ದುಷ್ಟ ರಾಜರುಗಳ ಬಗ್ಗೆ ಕೊಡವರು ಅಪಾರ ಗೌರವವನ್ನಿಟ್ಟಿದ್ದಾರೆ. ಮಾತ್ರವಲ್ಲ, ಇಂದಿಗೂ ನಾವು ಲಿಂಗರಾಜನ ಕಾಲದಲ್ಲಿಯೇ

ವೆ ಎಂದು ಕೊಡವರು ಸಾಮಾನ್ಯವಾಗಿ ಭ್ರಮಿಸು ... ತಮಗಿಂತಲೂ ಶ್ರೇಷ್ಠರೆನ್ನುವವರ ಬಗ್ಗೆ ಕೊಡವರು ವಮ್ಮೆ ಹೀಗೆಯೇ ನಡೆದುಕೊಂಡಿದ್ದಾರೆ. ಹಾಗೆಯೇ ಗಿಂತಲೂ ಕೀಳುಮಟ್ಟದವರೆಂದು ತಿಳಿಯಲಾದ ಅವರ ಮಾನಾಗಿ ಬದುಕುತ್ತಿದ್ದವರ ಮೇಲೆ ದಬ್ಬಾಳಿಕೆ 'ಮಾಡಿ' ತವರು ತಲೆಯೆತ್ತದಂತೆ ಮಾಡುವಲ್ಲಿ ಕೊಡವರು ವಹಿಸಿರುವುದು ಕಂಡುಬರುತ್ತದೆ." ಈ ಬಗೆಯಲ್ಲಿ ವುದೇ ಮುಲಾಜಿಲ್ಲದೆ ತಮ್ಮವರನ್ನು ಸುಬ್ಬಯ್ಯನವರು ರಿಸಿದ್ದಾರೆ. ಲೀವಾಕ್, ಕೆ.ಆರ್.ಎಂ.ಎಂ. ಅಥವಾ ನ್.ಸಿ. ಎನ್ನುವ ಸಂಘಟನೆಗಳು ಕೊಡವ ಜಾತಿ ವಾದವನ್ನು ಕೆರಳಿಸುವ ಮೂಲಕ ಕೊಡವರನ್ನು ಟಿಸುತ್ತಿರುವುದನ್ನು ಮತ್ತು ಆ ಮೂಲಕ ಕೊಡಗಿನಲ್ಲಿ ಕಹವನ್ನು ಸೃಷ್ಟಿಸುತ್ತಿರುವುದನ್ನು ಸುಬ್ಬಯ್ಯನವರು ವಾಗಿ ಟೀಕಿಸಿದ್ದನ್ನು ನೋಡಬಹುದು.

ಹುಟ್ಟಿನಿಂದ ತಾವು ಶ್ರೇಷ್ಠರೆಂದು ಭ್ರಮಿಸುವ ಕೀಯಕ್ಕೆ ಸುಬ್ಬಯ್ಯನವರು ತುಪ್ಪ ಸುರಿದಿದ್ದರೆ ರೊಂದು ಐಕನ್ ಆಗುವ ಸಾಧ್ಯತೆಯಿತ್ತು. ವಾಸ್ತವದ ಒಲವಿಟ್ಟ ಸುಬ್ಬಯ್ಯನವರು ಅದರ ಬದಲಿಗೆ ತಮ್ಮ ಲ್ಲಿರುವ ಕೆಳಜಾತಿಗಳ, ದಲಿತರ ಮತ್ತು ಅಲ್ಪಸಂಖ್ಯಾತರ ನನೆಗಳಿಗೆ ಧ್ವನಿಯಾದರು. ಅವರ ಧ್ವನಿಗೆ ತಮ್ಮ ಯನ್ನು ಸೇರಿಸಿ ಅವರೂ ಸ್ವಾಭಿಮಾನಿಗಳಾಗಿ ಕುವಂತೆ ಹೋರಾಟ ಮಾಡುವ ಪ್ರಯತ್ನ ಮಾಡಿದರು. ಜಾದಳ ಸರ್ಕಾರವು ಕೊಡವ ಸಾಹಿತ್ಯ ಆಕಾಡೆಮಿಯನ್ನು ಸಿದ ಸಂದರ್ಭದಲ್ಲಿ "ಸಾಹಿತ್ಯದ" ಅಂಶವನ್ನು ಕೈಬಿಟ್ಟು ಸದಸ್ಯರನ್ನು ಕೊಡವ ಸಮುದಾಯದಿಂದಲೇ ಕರಣ ಮಾಡಿ ಅದನ್ನು "ಕೊಡವ ಆಕಾಡೆಮಿಯಾಗಿ" ವರ್ತಿಸಿತು. ವಾಸ್ತವಿಕವಾಗಿ ಕೊಡಗು ಮಾತೃಭಾಷೆ ನ್ನಾಗಿ ಮಾತನಾಡುವ ಇತರೆ 17 ಹಿಂದುಳಿದ ಮತ್ತು ತ ಸಮುದಾಯಗಳಲ್ಲಿನ ಯೋಗ್ಯರಾದವರಿಗೆ ನಿಧ್ಯವನ್ನು ನೀಡದೇ ಕೇವಲ ಆರ್ಥಿಕವಾಗಿ/ ರಾಜಕೀಯ ಬಲಾಢ್ಯರಾಗಿರುವ ಕೊಡವ ಸಮುದಾಯದಿಂದ ತ್ರ ಸದಸ್ಯರನ್ನು ನಾಮಕರಣ ಮಾಡಿದ್ದನ್ನು ಕೊಡವರೇ ಸುಬ್ಬಯ್ಯನವರು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು ರ ಕಾಳಜಿಗೆ ಸಾಕ್ಷಿಯಾಗಿದೆ. ಉಚ್ಚನ್ಯಾಯಾಲಯದ ರ್ಪು ಬರುವ ಮೊದಲೇ ಸರ್ಕಾರವು ಹಿಂದುಳಿದ/ ತ ಸಮುದಾಯಗಳಿಂದ ಮೂವರನ್ನು ನಾಮಕರಣ ಡಿ ಮುಖ ಉಳಿಸಿಕೊಂಡಿತು. ಕೊಡಗಿನ ಬಹು ಖ್ಯಾತ ಸಮುದಾಯಗಳಿಗೆ ಸೇರಿದ ಕೆಲವರು ಅಲ್ಪ ಖ್ಯಾತರ ಮೇಲೆ ಆಗಾಗ್ಗೆ ಹಲ್ಲೆ ನಡೆಸಿದ ಸಂದರ್ಭದಲ್ಲಿ ಕೀಯ ಲೆಕ್ಕಾಚಾರ ಹಾಕದೆ ಹಲ್ಲೆಗೊಳಗಾದವರಿಗೆ ಕ್ಷನ ನೀಡಿ ಮಾನವೀಯತೆ ಮೆರೆದ ಉದಾಹರಣೆಗಳು ಷ್ಟಿವೆ. ಸೆಕ್ಯುಲರ್ ರಾಜಕೀಯ ಎಂದರೆ ದೂ-ಮುಸ್ಲಿಂ ರಾಜಕಾರಣದ ಅಭಿವ್ಯಕ್ತಿ ಮಾತ್ರ ; ಅದು ಕೆಳಜಾತಿ-ದಲಿತರ ನಡುವಿನ ಪ್ರಶ್ನೆ ಕೂಡ ದು ಎಂದು ನಿರೂಪಿಸಿದವರು ಸುಬ್ಬಯ್ಯನವರು.

* * * * *


ಕೊಡಗೆಂದರೆ ಶ್ರೀಮಂತರ ನಾಡು. ಆ ನಾಡಿನ ರು ಕೊಡವರು ಮಾತ್ರ ಎಂಬ ಕಲ್ಪಿತ ಅಂಶದಿಂದಾಗಿ ಗಿನ ಕೆಳ ಮತ್ತು ಮಧ್ಯಮ ವರ್ಗದ ಕೊಡವರಿಗೆ ವಾ ಕೊಡಗಿನ ಇತರ ಸಮುದಾಯಗಳ ರೈತರಿಗೆ ನ್ಯಾಯವಾಗಿದೆಯೆಂದು ಸುಬ್ಬಯ್ಯನವರು ಬಲವಾಗಿ ದ್ದಾರೆ. ಕೊಡಗಿನಲ್ಲಿ ತಲೆತಲಾಂತರಗಳಿಂದ ಬಂದ ರ್ಜಿತ ಆಸ್ತಿಯನ್ನು 'ಜಮ್ಮ' ಭೂಮಿ ಎನ್ನುತ್ತಾರೆ. ರು ರಾಜರ ಬಳಿ "ಹಿಟ್ಟ ಬಿಟ್ಟ ಚಾಕ್ರಿ" (ಹಿಟ್ಟಿಗಾಗಿ ಡುವ ಬಿಟ್ಟ ಚಾಕ್ರಿ) ಮಾಡುತ್ತಾರೋ ಅಥವಾ ಅರಮನೆ ಮಾಡುತ್ತಾರೋ ಅವರಿಗೆ ತೆರಿಗೆ ಪಾವತಿಯಲ್ಲಿ ಡ 50 ವಿನಾಯಿತಿ ಇತ್ತು, ಹಾಗೆಯೇ ಅವರಿಗೆ ಆ ಮಿಯನ್ನು ಉಳುಮೆಮಾಡಲು ಜಮ್ಮದಾಳುಗಳೆಂಬ ಳಾಮರನ್ನು ನೀಡುತ್ತಿದ್ದರು. ಜಮ್ಮದಾಳುಗಳು ಜಮ್ಮ ಒಡೆಯನಿಗೆ ಗುಲಾಮನಾಗಿದ್ದರೆ, ಜಮ್ಮದ ಒಡೆಯ ವಿಗೆ/ಸರ್ಕಾರಕ್ಕೆ ಗುಲಾಮನಾಗಿರಬೇಕಾಗಿತ್ತು. ವುದಾದರೂ ಸಂದರ್ಭದಲ್ಲಿ ಜಮ್ಮದೊಡೆಯ ಮನೆ ಚಾಕ್ರಿ ಮಾಡುವುದಿಲ್ಲ ಎಂದು ಬರೆದುಕೊಟ್ಟರೆ ಭೂಮಿಗೆ ಸರ್ಕಾರವು ಪೂರ್ಣ ಕಂದಾಯ ಸುತ್ತಿತ್ತು, ಅಂದರೆ ಪೂರ್ಣ ಕಂದಾಯ ಕಟ್ಟದ ರೈತ ಮಿಯ ಪೂರ್ಣ ಪ್ರಮಾಣದ ಒಡೆಯನಾಗಿರುತ್ತಿದ್ದ. ಮುವರಿಗೆ ಜಮ್ಮವೆಂದು ಕರೆಸಿಕೊಂಡ ಭೂಮಿಯು ವೆಂದು (ಸಾಮಾನ್ಯ ಭೂಮಿ) ವರ್ಗಾವಣೆಯಾಗು ಆ ಸಂದರ್ಭದಲ್ಲಿ ಅರಮನೆ ಚಾಕ್ರಿ ಮಾಡಲು ಬಿರುದು ಇತ್ಯಾದಿಗಳನ್ನು ಹೊಂದಲು ಈ ಗೆ ಸಾಧ್ಯವಿರಲಿಲ್ಲ, ಬಿಟ್ಟಿ ಕೆಲಸ ಮಾಡುವುದರಿಂದ ತ್ತ ಕೆಲವು ಜಮ್ಮ ರೈತರು 1860-70ರ ದಶಕದಲ್ಲಿ ಮೋಟಗಳೂ ಬೇಡ, ಜಮ್ಮ ಭೂಮಿಯೂ ಬೇಡ ದು ಬ್ರಿಟಿಷರಿಗೆ ಗೋಗರೆದರೂ ಬ್ರಿಟಿಷರು ಅದಕ್ಕೆ ... ಬದಲಿಗೆ ... ರ್ವಕವಾಗಿ ... ಕೆಲಸಗಳನ್ನು ಜಮ್ಮ

ರೈತರಿಂದ ಪುಕ್ಕಟೆ ಮಾಡಿಸಿತು. ಸಾಂಪ್ರದಾಯಿಕವಾಗಿದ್ದ ಈ ಚಾಕ್ರಿಗೆ ಬ್ರಿಟಿಷರು ನ್ಯಾಯಸಮ್ಮತವನ್ನು ನೀಡಿದರು. 20ನೇ ಶತಮಾನದ ಬದಲಾದ ರಾಜಕಾರಣದಲ್ಲಿ ಜಮ್ಮ ರೈತರ ಈ ಬಗೆಯ ಕೆಲಸಗಳಿಗೆ ಗ್ಲಾಮರ್ ಬಂದಿತು. ಇಂತಹ ಕೆಲಸ ಮಾಡುವವರಿಗೆ ಬ್ರಿಟಿಷರು "ಮಾರ್ಷಲ್ ರೇಸ್" ಎಂಬ ಬಿರುದನ್ನು ನೀಡಿದರು. ಆದರೆ ಭೂಮಿ/ಬಾಣೆಯ (ಕಾಫಿ ಬೆಳೆಯುವ ಪ್ರದೇಶ) ಮೇಲೆ ರೈತರಿಗೆ ಯಾವ ಹಕ್ಕು ಇಲ್ಲದಂತೆ ಮಾಡಿ ರೈತರ ಅತಂತ್ರ ಸ್ಥಿತಿಯನ್ನು ತನ್ನ ಸ್ಥಿರತೆಗಾಗಿ ಬ್ರಿಟಿಷ್ ಸರ್ಕಾರ ಕಾಪಾಡಿಕೊಂಡಿತು.

ಸ್ವಾತಂತ್ರ್ಯ ಬಂದ ಮೇಲೆ ಕೊಡಗು ಪ್ರಾಂತ್ಯದ ಮುಖ್ಯಮಂತ್ರಿಗಳಾಗಿದ್ದ ಸಿ.ಎಂ. ಪೂಣಚ್ಚ ಅವರು ಜಮ್ಮ ಭೂಮಿಗೆ ಪೂರ್ಣ ಕಂದಾಯವನ್ನು ಪಾವತಿ ಮಾಡುವ ಮೂಲಕ ಜಮ್ಮ ರೈತರು ಪೂರ್ಣ ಪ್ರಮಾಣದ ಭೂಒಡೆಯರಾಗಲು ಮಾಡಿದ ಮಸೂದೆಯೊಂದನ್ನು ಜಮ್ಮ ಭೂಮಾಲೀಕ ವರ್ಗದ ಪ್ರತಿಷ್ಠಿತರು ತಡೆದರು. ಪೂರ್ಣ ಕಂದಾಯ ಕಟ್ಟಿದರೆ ತಲೆತಲಾಂತರದಿಂದ ಬಂದ ತಮ್ಮ "ಪ್ರತಿಷ್ಠೆ-ಗೌರವ" ನಾಶವಾಗುತ್ತದೆ ಎಂದು ಅವರು ಭಾವಿಸಿದರು. ಏಕೀಕರಣೋತ್ತರ ದಿನಗಳಲ್ಲಿಯೂ ಯಥಾಸ್ಥಿತಿ ಮುಂದುವರೆಯಿತು. 1980ರ ದಶಕದಲ್ಲಿ ಭೂಮಿ/ಬಾಣೆಯ ಮೇಲೆ ಸಾಲ ತೆಗೆದುಕೊಳ್ಳಲು ಕರ್ನಾಟಕದ ಇತರ ರೈತರಂತೆ ಕೊಡಗಿನ ರೈತರು ಬ್ಯಾಂಕುಗಳಿಗೆ/ಸರ್ಕಾರಕ್ಕೆ ಅರ್ಜಿ ಸಲ್ಲಿಸಿದಾಗ ಅವುಗಳು ತಿರಸ್ಕೃತವಾಯಿತು. ಏಕೆಂದರೆ ಜಮ್ಮ ರೈತರಿಗೆ ಜಮ್ಮ ಭೂಮಿಯ ಮೇಲೆ ಭೂಒಡೆತನವಿರಲಿಲ್ಲ. ಈ ಕಾರಣಕ್ಕಾಗಿ ಅವರು ತಮ್ಮ ಮನೆ ಕಟ್ಟಲಿಕ್ಕೆ ಕೂಡ ಜಮ್ಮ ಭೂಮಿಯ ಮರಗಳನ್ನು ಬಳಸುವಂತಿಲ್ಲ ಎಂದು ಸರ್ಕಾರ ಆದೇಶ ನೀಡಿತು. ಇದರಿಂದ ಬಡ-ಮಧ್ಯಮ ವರ್ಗದ ಎಲ್ಲಾ ಜಾತಿಯ ಜಮ್ಮ ರೈತರು ಹೊಡೆತ ತಿಂದರು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಕೆಲವರು ನ್ಯಾಯಾಲಯ/ಸರ್ಕಾರದ ಮೊರೆ ಹೊಕ್ಕರೂ ನ್ಯಾಯ ಸಿಗಲಿಲ್ಲ.


ಕಷ್ಟ ಬಂದಾಗ ಸುಬ್ಬಯ್ಯ ಅಂದಹಾಗೆ ಕೆಲವು ಜಮ್ಮ ರೈತರು ಸುಬ್ಬಯ್ಯನವರ ನೇತೃತ್ವದಲ್ಲಿ ನ್ಯಾಯಕ್ಕಾಗಿ ಉಚ್ಚನ್ಯಾಯಾಲಯದಲ್ಲಿ ಮನವಿ ಸಲ್ಲಿಸಿದರು. ಈ ಮೊಕದ್ದಮೆಗಾಗಿ ಸುಬ್ಬಯ್ಯನವರು ತಾವು ದುಡಿದ ಸಂಪಾದನೆಯನ್ನು ಖರ್ಚುಮಾಡಿದರು. ಆ ಸಂದರ್ಭದಲ್ಲಿ ಕೊಡವರೊಬ್ಬರು ಕರ್ನಾಟಕ ಸರ್ಕಾರದ ಅಡ್ವೊಕೇಟ್ ಜನರಲ್ ಆಗಿದ್ದರು. ಇದು ಈ ಕೇಸಿಗೆ ವರದಾನವಾಯಿತು ಎಂದು ಸುಬ್ಬಯ್ಯನವರು ಭಾವಿಸಿದ್ದರೆ ಅದು ಅವರಿಗೆ ಶಾಪವಾಗಿ ಪರಿಣಮಿಸಿತು. ಆ ವ್ಯಕ್ತಿ ಹಿಂದೆ ವಕೀಲರಾಗಿದ್ದಾಗ ಜಮ್ಮ ರೈತರ ಪರವಾಗಿ ದಾವೆ ಹಾಕಿ ಸೋತು ಹೋಗಿದ್ದರು. ಅವರಿಗೆ ತಾವು ಸೋತ ಮೊಕದ್ದಮೆಯನ್ನು ಸುಬ್ಬಯ್ಯನವರು ಗೆಲ್ಲಬಾರದು ಎಂಬ ಹಠವಿತ್ತು, ಅದಕ್ಕಾಗಿ ಅವರು ಅನೇಕ ಕುಯುಕ್ತಿಗಳನ್ನು ಮಾಡಿದರೂ, ಅನೇಕ ಬಾರಿ ಮೊಕದ್ದಮೆಯನ್ನು ಮುಂದೂಡಿದರೂ, ಸರ್ಕಾರಿ ವಕೀಲರನ್ನು ಅನೇಕ ಬಾರಿ ಬದಲಾಯಿಸಿದರೂ, ಬೇರೆ ಬೇರೆ ಪೀಠಗಳಲ್ಲಿ ಮೊಕದ್ದಮೆಯನ್ನು ವರ್ಗಾವಣೆ ಮಾಡಿದರೂ ಛಲಬಿಡದ ತ್ರಿವಿಕ್ರಮನಂತೆ ಸುಬ್ಬಯ್ಯನವರು ಈ ಮೊಕದ್ದಮೆಯಲ್ಲಿ ಜಯಶೀಲರಾದರು. ಆದರೆ ದೇವೇಗೌಡರ ಕಾಲದಲ್ಲಿ ಅಧಿಕಾರಕ್ಕೆ ಬಂದ ಕಾನೂನು ಮಂತ್ರಿಯೊಬ್ಬರಿಂದಾಗಿ ನ್ಯಾಯಾಲಯದ ತೀರ್ಪು ಅನುಷ್ಠಾನಕ್ಕೆ ಬರಲಿಲ್ಲ, ಸರ್ಕಾರದ ಅಧಿಕೃತ ಆದೇಶ ಬಂದಿಲ್ಲವಾದ್ದರಿಂದ ಅದನ್ನು ಅನುಷ್ಠಾನಗೊಳಿಸಲು ಸಾಧ್ಯವಿಲ್ಲ ಎಂದು ಅಧಿಕಾರಿಗಳು ರೈತರ ಹಕ್ಕನ್ನು ನಿರಾಕರಿಸಿಬಿಟ್ಟರು. ಆ ಸಂದರ್ಭದಲ್ಲಿ ವಿರಾಜಪೇಟೆಯ ತಹಸೀಲ್ದಾರ ಮತ್ತು ಕೊಡಗಿನ ಜಿಲ್ಲಾಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಮೊಕದ್ದಮೆಯನ್ನು ಸುಬ್ಬಯ್ಯನವರು ಉಚ್ಚನ್ಯಾಯಾಲಯದಲ್ಲಿ ಹೂಡಿದ್ದರ ಪರಿಣಾಮವಾಗಿ ಆ ಅಧಿಕಾರಿಗಳನ್ನು ನ್ಯಾಯಾಲಯವು ದಸ್ತಗಿರಿ ಮಾಡಲು ವಾರೆಂಟನ್ನು ಹೊರಡಿಸಿತು. ಕ್ಷಮೆ ಕೋರಿದ ಅಧಿಕಾರಿಗಳು ಆದೇಶವನ್ನು ಈಗಾಗಲೇ ಪಾಲಿಸಿರುವುದಾಗಿ ಹೇಳಿ ಶಿಕ್ಷೆಯಿಂದ ತಪ್ಪಿಸಿಕೊಂಡರು. ಈ ಜಯದಿಂದ ರೈತರೆಲ್ಲ ಜಾತಿಭೇದ ಮರೆತು ಸಂತೋಷಪಟ್ಟರು. ಪ್ರತಿಷ್ಠಿತರಿಗೆ ಹಾಗೂ ಪಟ್ಟಭದ್ರ ವರ್ತುಲಗಳಿಗೆ ಮಾತ್ರ ಈ ಸಂದರ್ಭದಲ್ಲಿ ಸಂತೋಷವಾಗಲಿಲ್ಲ ಎಂದು ಸುಬ್ಬಯ್ಯನವರು ಅಭಿಪ್ರಾಯ ಪಡುತ್ತಾರೆ. ಸುಬ್ಬಯ್ಯನವರಿಗೆ ಹೆಸರು/ಕೀರ್ತಿ ಬಂದುಬಿಡುತ್ತದಲ್ಲ ಎಂದು ಆತಂಕ ಪಡುತ್ತಿದ್ದ ಈ ಮಂದಿ ಆ ಕಾರಣಕ್ಕಾಗಿ ಪ್ರಸ್ತುತ ಮೊಕದ್ದಮೆಯಲ್ಲಿ ಸುಬ್ಬಯ್ಯನವರ ಪಾತ್ರ ಏನೂ ಇಲ್ಲ ಎಂದು ಬಹುಮುಖ್ಯವಾದ ರೈತ ಪ್ರಶ್ನೆಯನ್ನು ಪಗುರ ಮಾಡಿದ ಪ್ರಯತ್ನಗಳನ್ನು ನಾವು ಗಮನಿಸಬಹುದು. "ಶ್ರೀಸಾಮಾನ್ಯನ ನಿತ್ಯಜೀವನಕ್ಕೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕೆ ನಿತ್ಯ ಬೆವರಿಳಿಸುತ್ತಾ ಜೀವನವಿಡೀ ಹೆಣಗಾಡುತ್ತಾ ಬಂದ ನನ್ನಂತಹವರು ಕೊಡಗಿನ ಈ ವರ್ಗದ ಜನರಿಗೆ ಕೋಡಂಗಿಗಳಂತೆ ಕಾಣಿಸಿಕೊಳ್ಳಬಹುದು" ಎನ್ನುವ ಎ.ಕೆ. ಸುಬ್ಬಯ್ಯನವರ ಮಾತು ನಮ್ಮ ಯುಗದ ಸಾಮಾಜಿಕ ಚಳವಳಿಗಳು ತುಳಿಯುತ್ತಿರುವ ಹಾದಿಯ ಕಟುವಿಮರ್ಶೆ ಅಲ್ಲವೆ ಮತ್ತೇನು? ■

ಮಹಾಂತೇಶ ನವಲಕಲ್ (1970)



ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಮಣ್ಣಿನಲ್ಲಿ ಕತೆಗಳನ್ನು ಬೆಳೆಯುವ ಯಾವುದೊ ಸತ್ವವಿದೆಯೆಂದು ತೋರುತ್ತದೆ. ಅಲ್ಲಿಂದ ರಾಜಶೇಖರ ನೀರಮಾನ್ವಿ, ಅಮರೇಶ ನುಗಡೋಣಿ, ಚಿದಾನಂದಸಾಲಿ ಮುಂತಾದ ಪ್ರತಿಭಾವಂತ ಕತೆಗಾರರು ಹೊಮ್ಮಿದರು. ಈ ಸರಣಿಯಲ್ಲಿ ಈಗ ಮಹಾಂತೇಶ ನವಲಕಲ್ ಬಂದಿದ್ದಾರೆ.

ಕೃಷಿವಿಜ್ಞಾನದಲ್ಲಿ ಪದವೀಧರರಾದ ನವಲಕಲ್ ಸದ್ಯ ಒಂದು ಸ್ವಯಂಸೇವಾ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ, ತಮ್ಮ ಬಿಡಿ ಕತೆಗಳಿಗೆ ಉದ್ದಕ್ಕೂ ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡು ಬಂದಿರುವ ಇವರು, ಈ ವರ್ಷ ತಮ್ಮ 'ನೀರಿನ ನೆರಳು' ಕಥಾಸಂಕಲನಕ್ಕೆ ಬೆಸಗರಹಳ್ಳಿ ಕಥಾಪ್ರಶಸ್ತಿ ಪಡೆದಿದ್ದಾರೆ. ಈ ಪ್ರಶಸ್ತಿ ನವಲಕಲ್ ಅವರಿಗೆ ಬಂದಿರುವುದು ಅರ್ಥಪೂರ್ಣವಾಗಿದೆ. ಯಾಕೆಂದರೆ, ಬೆಸಗರಹಳ್ಳಿಯವರು, ಗ್ರಾಮೀಣ ಬದುಕನ್ನು ಕಕ್ಕುಲಾತಿಯಿಂದ ಹಿಡಿದುಕೊಡುವ ಮೂಲಕ 70ರ ದಶಕದಲ್ಲಿ ಸಂಚಲನೆ ಮೂಡಿಸಿದ್ದರು. ಅವರ ಕೆಲಸವನ್ನು ಅರ್ಧಶತಮಾನದ ಬಳಿಕ ನವಲಕಲ್ ಕೂಡ ಅಷ್ಟೇ ಕಾಳಜಿಯಿಂದ ಮುಂದುವರೆಸಿದ್ದಾರೆ.



ನವಲಕಲ್ ಪ್ರತಿಭಾವಂತ ಕತೆಗಾರ ಎನ್ನುವುದನ್ನು ಅವರ ಮೊದಲನೇ ಸಂಕಲನವೇ ಪ್ರಕಟಿಸಿಬಿಟ್ಟಿದೆ. ಅವರ ಕತೆಗಳಲ್ಲಿರುವ ವಿಶೇಷ ಸಂಗತಿಗಳೆಂದರೆ-

1. ರಾಯಚೂರು ಸೀಮೆಯ ಪ್ರಾದೇಶಿಕ ಜೀವನವನ್ನು ಸಮರ್ಥವಾಗಿ ಹಿಡಿದುಕೊಡುತ್ತಿರುವುದು; ಮಾತ್ರವಲ್ಲದೆ, ಪ್ರಾದೇಶಿಕ ವಿಶಿಷ್ಟವಾದ ಅನುಭವ ಮತ್ತು ಭಾಷೆಯನ್ನು ನಗರದ ಮಧ್ಯಮವರ್ಗದ ಓದುಗರ ಮುಂದೆ, ಹೊಸ ಸರಕನ್ನಾಗಿ ಮಂಡಿಸಿ ಬೆರಗುಗೊಳಿಸುವ ವಾಂಛೆಯನ್ನು ಅವರು ಬಿಟ್ಟುಕೊಟ್ಟಿರುವುದು; ಅನುಭವವನ್ನೂ ಆದರ ಅಭಿವ್ಯಕ್ತಿಗಾಗಿ ಭಾಷೆಯನ್ನೂ ಬಾಳಿನ ಶೋಧಕ್ಕೆ ಬಳಸುತ್ತಿರುವುದು.
2. ಪಾತ್ರಗಳ ಒಳತೋಟಿಯನ್ನು ಚಿತ್ರಿಸುವ ಕುಶಲತೆ ಮತ್ತು ಸೂಕ್ಷ್ಮತೆ ಪ್ರಕಟಿಸಿರುವುದು. ನವ್ಯದ ಕತೆಗಾರರಲ್ಲಿ ದೊಡ್ಡ ಶಕ್ತಿಯಾಗಿದ್ದ ಈ ಮನೋ ವಿಶ್ಲೇಷಣಾತ್ಮಕವಾದ ಕಥನಕ್ರಮವು 70-80ರ ದಶಕದ ದಲಿತ-ಬಂಡಾಯದ ಕತೆಗಾರರಲ್ಲಿ ಕ್ಷೀಣಗೊಂಡಿತ್ತು, ವಸ್ತು ಮತ್ತು ಧೋರಣಾ ಪ್ರಧಾನವಾದ ಕತೆಗಾರಿಕೆಯು ಮನಸ್ಸಿನ ಒಳಗೆ ಹೊಕ್ಕುನೋಡುವ ಕುತೂಹಲಗಳನ್ನು ಕಡಿಮೆಗೊಳಿಸಿಕೊಳ್ಳುತ್ತದೆ. ಆದರೆ ನವಲಕಲ್‌ರಂತಹ ಹೊಸ ತಲೆಮಾರಿನ ಲೇಖಕರು ಈ ಕಥನಕ್ರಮವನ್ನು ಅರ್ಥಪೂರ್ಣವಾಗಿ ಮತ್ತೆ ಬಳಕೆಗೆ ತರುತ್ತಿದ್ದಾರೆ.
3. ತಮ್ಮ ವ್ಯಂಗ್ಯಪ್ರಜ್ಞೆಯಿಂದ ಕತೆಗಳ ಲೋಕವನ್ನು ಲವಲವಿಕೆಯಲ್ಲಿ ಇಟ್ಟಿರುವುದು. ಬಹುಶಃ ತೇಜಸ್ವಿ, ದೇವನೂರು, ಕುಂವೀ ಅವರ ಕತೆಗಾರಿಕೆಯ ಪ್ರಭಾವವು, ಇಂತಹ ಕತೆಗಾರರಿಗೆ ಗಂಭೀರತೆಯ ಹೆಸರಲ್ಲಿ ರೋತೆದನಿ ತಾಳದಂತೆ ತಡೆದಿರಬಹುದು. ಇಲ್ಲಿನ ವಿನೋದ ದೃಷ್ಟಿಯು ಜೀವಂತ ಸಂಭಾಷಣೆಗಳಿಗೂ ಬದುಕಿನ ಘಟನೆಗಳನ್ನು ಚೂಪಾಗಿ ನೋಡುವುದಕ್ಕೂ ಕಾರಣವಾಗಿದೆ.
4. ಹೊಸ ಅನುಭವದ ಪ್ರಕಟಣೆಗೆ ಬೇಕಾಗಿ ಭಾಷೆಯನ್ನು ಪಳಗಿಸುತ್ತಿರುವ ಪ್ರಯೋಗಗಳು. ನವಲಕಲ್ ಭಾಷೆಯ ಜತೆಗೆ ಆಟವನ್ನು ಆಡಬಲ್ಲರು, ಧ್ವನಿಪೂರ್ಣವಾದ ಸಾಲುಗಳನ್ನು ಬರೆಯಬಲ್ಲರು. ಕಾವ್ಯಮಯ ತೀವ್ರತೆಯಿಂದ ಕೂಡಿದ ಭಾಷೆಯಲ್ಲಿ ನವಲಕಲ್ ಕತೆ ಬರೆಯಬಲ್ಲರು. ಇದಕ್ಕೆ 'ಆಕ್ರಾಂತ' ಕತೆ ಸಾಕ್ಷಿ. ಆದರೂ 'ನೀರಿನ ನೆರಳು' 'ಮಹಾಘನ ಕತ್ತಲೆ' ಮುಂತಾದ ಅನುಭಾವ ಜಗತ್ತಿನ ಪರಿಭಾಷೆಯು ಕತೆಗಳಿಗೆ ಬಹಳ ಅರ್ಥಪೂರ್ಣವಾಗಿ ಜೋಡಣೆಯಾಗಿದೆ ಅನಿಸುವುದಿಲ್ಲ.

ಎಲ್ಲ ಕತೆಗಾರರು ತಮ್ಮ ಮೊದಲ ಘಟ್ಟದಲ್ಲಿ ಬಾಲ್ಯದ ಅನುಭವಗಳಿಗೆ ಹೋಗುವಂತೆ, ನವಲಕಲ್ ಕೂಡ ಹೋಗುತ್ತಾರೆ. ಬಾಲ್ಯದ ಅನುಭವ ಬರುವ ಕಡೆ ಕತೆಗಳು ಅಪೂರ್ವವಾದ ಲೋಕವನ್ನು ಕಟ್ಟಿಕೊಳ್ಳುತ್ತವೆ. ಮುಖ್ಯವೆಂದರೆ, ಕತೆಗಾರ ಯಾವುದೇ ಪಾತ್ರದ ಪರ ಇಲ್ಲವೇ ವಿರೋಧವಾಗಿ ನಿಲ್ಲದಿರುವುದು. ಪಾತ್ರಗಳ ಅನಗತ್ಯವಾದ ದುರಳೀಕರಣವಾಗಲಿ ವೈಭವೀಕರಣವಾಗಲಿ ಮಾಡದಿರುವುದು. ಭೈರಪ್ಪನವರ 'ಆವರಣ' ಓದಿದವರಿಗೆ ಇದು ಎಷ್ಟು ಮುಖ್ಯವಾದ ಸಂಗತಿ ಎಂದು ಗೊತ್ತಾಗುತ್ತದೆ. ಲೋಕದ ಘಟನೆಗಳನ್ನು ಭಾವಾವೇಶ ಪೂರ್ವಗ್ರಹಗಳಿಲ್ಲದೆ ನೋಡುವ ಕತೆಗಾರನ ಸಮಚಿತ್ತತೆಯು ಇಲ್ಲಿ ಬದುಕಿನ ಅರ್ಥಶೋಧನೆಗೆ ಅಗತ್ಯವಾದ ದಾರ್ಶನಿಕ ಆಯಾಮವನ್ನು ಒದಗಿಸಿದೆ.

ನವಲಕಲ್ ಗಟ್ಟಿಯಾದ ವಸ್ತುವನ್ನು ಆರಿಸಿಕೊಂಡು ಕತೆ ಬರೆಯುತ್ತಾರೆ. ಅದನ್ನು ಸಮರ್ಥವಾಗಿ ಬೆಳೆಸುತ್ತಾರೆ. ಆದರೆ ಅದಕ್ಕೆ ಫಿನಿಶಿಂಗ್ ಟಚ್ ಕೊಡುವುದಕ್ಕೆ ಬೇಕಾದ ತಾಳ್ಮೆ ಮತ್ತು ರಿಸ್ಕ್ ತೆಗೆದುಕೊಳ್ಳುವುದಿಲ್ಲ, ಕತೆಗಳಲ್ಲಿ ಕೊನೆಯ ಘಟನೆಗಳು ವೇಗವಾಗಿ ನಡೆಯುತ್ತವೆ ಇಲ್ಲವೇ ಸಾಮಾನ್ಯ ಮುಕ್ತಾಯವನ್ನು ಕಾಣುತ್ತವೆ. ಅವರು ಈಚೆಗೆ ಬಿಡಿಯಾಗಿ ಪ್ರಕಟಿಸಿದ 'ಭಾರತ ಭಾಗ್ಯವಿಧಾತ' ಕತೆಯಲ್ಲೂ ಈ ಸಮಸ್ಯೆಯಿದೆ. ಸಂಕಲನದ ಮೊದಲನೇ ಕತೆ 'ನೀರಿನ ನೆರಳು' ದೀರ್ಘವಾಗಿದೆ ಮತ್ತು ಚದುರಿಕೊಂಡು ಹೋಗಿದೆ. ಬಹುಶಃ ಕಾದಂಬರಿಯ ವಸ್ತುವನ್ನು ಕತೆಗೆ ಪಳಗಿಸುವುದರಿಂದ ಹೀಗಾಗಿದೆಯೊ ಪತ್ರಿಕೆಗಳಲ್ಲಿ ಪ್ರಕಟಿಸುವ ಹಂಗಿಲ್ಲದೆ ಬರೆದದ್ದರಿಂದ ಹೀಗಾಗಿದೆಯೊ ತಿಳಿಯದು. ಪತ್ರಿಕೆಗಳು ಸಣ್ಣಕತೆಗಳ ಪಾಲಿಗೆಸಾಕುವ ತಾಯಿಯೂ ಹೌದು. ಅವನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ನಿಯಂತ್ರಿಸುವ ಕತ್ತರಿಗಳೂ ಹೌದು.

ಅಪಾರ ಶಕ್ತಿಯಿರುವ ಕತೆಗಾರರಲ್ಲಿ ಒಬ್ಬರಾಗಿರುವ ನವಲಕಲ್ ಅವರ 'ನೀರಿನ ನೆರಳು', 'ನಾಯಿ ಎಂಬ ಮನುಷ್ಯ', 'ಆಕ್ರಾಂತ', 'ನಾನಾರೆಂದರೆ ನಾನಲ್ಲ' ಅತ್ಯುತ್ತಮ ಕತೆಗಳಾಗಿವೆ. ಎಳೆ ತಲೆಮಾರಿನ ಕಣ್ಣಿನ ಮೂಲಕ ಜಮೀನುದಾರಿ ವ್ಯವಸ್ಥೆಯ ಪಾರಂಪರಿಕ ಕ್ರೌರ್ಯ ಮತ್ತು ಅಸಹಾಯಕತೆಗಳನ್ನು ಬಿಂಬಿಸುವ 'ಆಕ್ರಾಂತ' ಕತೆಯಲ್ಲಿ ಅವರು ಸಾಧಿಸಿರುವ ಯಶಸ್ಸು ಬಹಳ ದೊಡ್ಡದಾಗಿದೆ.


ಇಷ್ಟು ಒಳ್ಳೆಯ ಕತೆಗಳಿಗೆ ಕುಂದು ಬರುವಂತೆ ಕರಡು ದೋಷಗಳಿವೆ. ಅದರಲ್ಲೂ ಅವು ಮುನ್ನುಡಿಯಲ್ಲಿ ಕಿರಿಕಿರಿಯಾಗುವಷ್ಟು ತುಂಬಿಕೊಂಡಿವೆ. ಸಾಹಿತ್ಯವನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡದಿರುವ ಅನೇಕ ಲೇಖಕರು, ಕ್ಲೀಷೆಯಿಲ್ಲದ ಹೊಸತನದ ಭಾಷೆ ಬಳಸುವುದುಂಟು. ಆದರೆ ಈ ಹಿನ್ನೆಲೆಯೇ ಕೆಲವೊಮ್ಮೆ ವಿಚಿತ್ರ ಭಾಷಾದೋಷಗಳಿಗೆ ಕಾರಣವೂ ಆಗಬಹುದು. ಇದೇನೂ ಕತೆಗಾರರ ಪ್ರತಿಭೆಯ ಸಮಸ್ಯೆಯಲ್ಲ, ಕುಶಲತೆ ಮತ್ತು ವೃತ್ತಿಪರತೆಯ ಸಮಸ್ಯೆ. ಉತ್ತರ ಕರ್ನಾಟಕದ ಅನೇಕ ಕತೆಗಾರರಲ್ಲಿ ಅನುಭವ ಸಮೃದ್ಧಿಯಿದೆ. ಬರೆಯುವ ಶಕ್ತಿಯಿದೆ. ಆದರೆ ಕಸುಬುದಾರಿಕೆ ವಿಷಯದಲ್ಲಿ ಸೂಕ್ಷ್ಮತೆ ತೋರುವುದಿಲ್ಲ, ಈ ಸಮಸ್ಯೆ ಶಾಂತರಸರಲ್ಲೂ ಇತ್ತು.

ವಿಶೇಷವೆಂದರೆ, ನವಲಕಲ್ ಅವರ ಅರ್ಥಕ್ಕಿಂತ ಹೆಚ್ಚುಕತೆಗಳು, ಆಧುನಿಕ ಕಾರ್ಪೋರೇಟ್ ಜಗತ್ತಿನ ವಸ್ತುವುಳ್ಳವು. ನಮ್ಮ ಈ ಹೊತ್ತಿನ ಅಭಿವೃದ್ಧಿಯ ಸಂಕಥನದ ಮೇಲಿನ ಕಾಮೆಂಟುಗಳಂತಿವೆ ಈ ಕತೆಗಳು. ಎಲ್ಲೋ ಒಂದೆಡೆ ವಿವೇಕ ಶಾನುಭಾಗರ 'ಹುಲಿ ಸವಾರಿ' ನೆನಪು ಸುಳಿದುಹೋಗುತ್ತದೆ; 'ಆಕ್ರಾಂತ' ಕತೆಯು ಕುವೆಂಪು ಅವರ ಕಲ್ಕಿ ಪದ್ಯದ ವಿನ್ಯಾಸವನ್ನು ಯಾಕೊ ನೆನಪಿಸುತ್ತದೆ. ಆದರೆ ಪ್ರಭಾವದ ಹಂಗಿನಲ್ಲಿ ಬೀಳುವ ಅಗತ್ಯವಿಲ್ಲದ ಕತೆಗಾರ ನವಲಕಲ್. ವ್ಯವಹಾರ ಪ್ರಧಾನವಾದ ಜಗತ್ತಲ್ಲಿದ್ದು ಅಲ್ಲಿನ ಕುಟಿಲತೆ, ಕ್ರೌರ್ಯಗಳಿಗೆ ಬೆನ್ನುಕೊಟ್ಟಂತೆ ಬರೆಯುತ್ತಿರುವ ಎಷ್ಟೊ ಲೇಖಕರು ಕನ್ನಡದಲ್ಲಿದ್ದಾರೆ. ಅವರಿಗೆ ಹೋಲಿಸಿದರೆ, ಮಾರುಕಟ್ಟೆ ಅರ್ಥಶಾಸ್ತ್ರದಿಂದ ಕುಟುಂಬದಲ್ಲೂ ಮಾನವ ಸಂಬಂಧಗಳಲ್ಲೂ ಹುಟ್ಟಿರುವ ತಲ್ಲಣಗಳನ್ನು ನವಲಕಲ್ ಕಕ್ಕುಲಾತಿಯಿಂದ ಹಿಡಿಯಲು ಯತ್ನಿಸುತ್ತಿದ್ದಾರೆ. ಇವತ್ತು ಲಾಭಕೇಂದ್ರಿತ ಉದ್ಯಮಲೋಕ ವಿಧ್ವಂಸನಗಳನ್ನು ನೋಡಲು ಬೇಕಾದ ದುರಂತ ದೃಷ್ಟಿ, ಈ ಗ್ರಾಮೀಣ ಲೋಕದಿಂದ ಬಂದ ಲೇಖಕರಿಗೆ ಚೆನ್ನಾಗಿ ದಕ್ಕಿದೆಯೊ ಏನೊ? ಬಹುಶಃ ಇದು ಸಾಧ್ಯವಾಗಿರುವುದು, ಗ್ರಾಮಗಳಲ್ಲಿ ಆಗುವ ಸ್ಥಿತ್ಯಂತರಗಳ ಮೂಲಕ ಈ ಕಾರ್ಪೋರೇಟ್ ಜಗತ್ತಿನ ವಿಧ್ವಂಸನಗಳನ್ನು ನೋಡುತ್ತಿರುವುದರಿಂದಲೇ ಇರಬೇಕು. ಈ ಕಾರಣಕ್ಕೆ ನವಲಕಲ್ ಅವರು (ಬೆಸಗರಹಳ್ಳಿಯವರ ತರಹ) ಕೇವಲ 'ಗ್ರಾಮೀಣ ಪಕ್ಷಿಯ' ಕತೆಗಾರರೇನಲ್ಲ. ■

ಬಿಜೆಪಿ ರಾಜಕೀಯ: ಮೂರು ಪ್ರಶ್ನೆಗಳು

ಕರ್ನಾಟಕದ ರಾಜಕೀಯ ಪಕ್ಷಗಳು ಹಾಗೂ ಮಾಧ್ಯಮದವರು ಜನರಿಂದ ಮರೆಮಾಚಿರುವ ಮೂರು ಮುಖ್ಯ ಪ್ರಶ್ನೆಗಳನ್ನು ಓದುಗರ ಮುಂದೆ ಇಡಬಯಸುತ್ತೇನೆ.


1. ಪಾಪ್ಯುಲರ್ ಫ್ರಂಟ್ (ಮೊದಲಿನ ಕೆಎಫ್‌ಡಿ) ಎಂಬ ಮುಸ್ಲಿಮ್ ಸಂಘಟನೆಯನ್ನು ನಿಷೇಧಿಸಬೇಕು ಎಂದು ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆ ಸರ್ಕಾರಕ್ಕೆ ಕರೆ ಕೊಟ್ಟಿದೆ. ಕಳೆದ ತಿಂಗಳ ಮೊದಲ ವಾರ ಮೈಸೂರಿನಲ್ಲಿ ನಡೆದ ಗಲಭೆಗೆ ಪಾಪ್ಯುಲರ್ ಫ್ರಂಟ್ ಕಾರಣ ಎಂದು ಬಿಜೆಪಿ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಆ ಗಲಭೆಯಲ್ಲಿ ತನ್ನ ಪಾತ್ರದ ಕುರಿತು ಅದು ಏನೂ ಹೇಳಿಲ್ಲ. ಬಹುಶಃ ಗಲಭೆ ನಡೆಯುತ್ತಿದ್ದಾಗ ಮೈಸೂರಿನ ಬಿಜೆಪಿಗಳು ಬೆಟ್ಟು ಚೀಪುತ್ತ ಕೂತಿದ್ದಿರಬೇಕು. ಅದು ಏನೇ ಇರಲಿ ನೂರಾರು ಮುಸ್ಲಿಮ್ ಯುವಕರ ಬಂಧನದ ವಿರುದ್ಧ ಪಾಪ್ಯುಲರ್ ಫ್ರಂಟ್ ನೇತೃತ್ವದಲ್ಲಿ ಪ್ರತಿಭಟಿಸುತ್ತಿದ್ದವರನ್ನು ಪೊಲೀಸರು ನೆಲಕ್ಕೆ ಕೆಡವಿಕೊಂಡು ಅಮಾನುಷವಾಗಿ ಥಳಿಸಿದರು. ನಂತರ ಆ ಬಗ್ಗೆ ರಾಜ್ಯದ ಮುಖ್ಯಮಂತ್ರಿ, "ಮೈಸೂರಿನ ಪ್ರತಿಭಟನೆಯಲ್ಲಿ ಪಾಲುಗೊಂಡವರೆಲ್ಲ ಹೊರಗಿನಿಂದ ಬಂದವರು" ಎಂದು ಹೇಳಿಕೆ ಕೊಟ್ಟರು.



ಹೊರಗಿನಿಂದ ಎಂದರೆ ಎಲ್ಲಿಂದ? ಮುಖ್ಯಮಂತ್ರಿಯವರು ಹೇಳಿದ ಪ್ರಕಾರವೇ "ಮಂಗಳೂರು, ಕೇರಳ ಇತ್ಯಾದಿ ಕಡೆಗಳಿಂದ" (ಹಾಗೆಂದೇ ವರದಿಯಾಗಿದೆ) ಬಂದವರು "ಹೊರಗಿನವರು." ಮುಖ್ಯಮಂತ್ರಿ ಸ್ವತಃ ತಮ್ಮ ಪಕ್ಷಕ್ಕೇ ಈ ತರ್ಕವನ್ನು ಅನ್ವಯಿಸಲು ಸಿದ್ಧರಿದ್ದಾರೆಯೇ? ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಉರುಳಿಸಲು, ಇವರು ದೇಶದ ಮೂಲೆಮೂಲೆಗಳಿಂದ ಜನರನ್ನು ಕರೆಸಲಿಲ್ಲವಾ? ಬಿಜೆಪಿ ಪ್ರಾಯೋಜಿಸುವ ಬಾಬಾಬುಡನ್‌ಗಿರಿಯ ದತ್ತಮಾಲೆ ಎಂಬ ಶೋದಲ್ಲಿ ಭಾಗವಹಿಸುವವರು "ಹೊರಗಿನವರಲ್ಲವಾ?" ಮೈಸೂರಿನ ಪ್ರತಿಭಟನೆಗೆ ಪಾಪ್ಯುಲರ್ ಫ್ರಂಟ್ "ಹೊರಗಿನಿಂದ" ಜನರನ್ನು ತರಿಸಿತು ಮತ್ತು ಅದು ಬೇರೆ ಯಾರೂ ಮಾಡದೆ ಇರುವ ಅಕೃತ್ಯ ಎಂದೇ ಭಾವಿಸೋಣ. ಆದರೆ ಅದು ಭಯೋತ್ಪಾದಕ ಕೃತ್ಯ ಹೇಗಾಗುತ್ತದೆ?

ಪಾಪ್ಯುಲರ್ ಫ್ರಂಟ್ ಸಂಘಟನೆಯನ್ನು ನಿಷೇಧಿಸುವುದಕ್ಕೆ ಯಾವ ಸೂಕ್ತ ಸಮಜಾಯಿಷಿಯನ್ನೂ ಬಿಜೆಪಿ ಇದುವರೆಗೆ ನೀಡಿಲ್ಲ. ಪಾಪ್ಯುಲರ್ ಫ್ರಂಟ್ ಭಯೋತ್ಪಾದಕ, ವಿಧ್ವಂಸಕ ಅಥವಾ ದೇಶದ್ರೋಹಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದಕ್ಕೆ ಸರ್ಕಾರ ಜನರ ಮುಂದೆ ಯಾವುದೇ ಸಾಕ್ಷ್ಯಾಧಾರವನ್ನೂ ಇರಿಸಿಲ್ಲ. ಸಿಮಿ ಎಂಬ ನಿಷೇಧಿತ ಸಂಘಟನೆಯ ಜೊತೆ ಪಾಪ್ಯುಲರ್ ಫ್ರಂಟ್‌ಗೆ ಸಂಬಂಧವಿದೆ ಎಂಬ ತನ್ನ ಹೇಳಿಕೆಗೆ ಸಹ ಬಿಜೆಪಿ ಸೂಕ್ತ ಸಮರ್ಥನೆ ಕೊಟ್ಟಿಲ್ಲ. ಸಿಮಿ ಒಂದು ಭಯೋತ್ಪಾದಕ ಸಂಘಟನೆ ಎನ್ನುವುದಕ್ಕೆ ಸೂಕ್ತ ಸಾಕ್ಷ್ಯಾಧಾರಗಳನ್ನು ಒದಗಿಸದೆ ಇದ್ದುದಕ್ಕೆ ಕೇಂದ್ರ ಸರ್ಕಾರವೇ ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಂಡಿದೆ. ಆದರೂ ಬಿಜೆಪಿ ಪಾಪ್ಯುಲರ್ ಫ್ರಂಟ್ ಅನ್ನು ನಿಷೇಧಿಸಬೇಕು ಎಂದು ಒತ್ತಾಯಿಸುತ್ತಿದೆ ಯಾಕೆ? ಉತ್ತರ ಸುಲಭ: ರಾಜ್ಯದಲ್ಲಿ ಸಂಘ ಪರಿವಾರದವರು ಮುಸ್ಲಿಮರ ಮೇಲೆ ನಡೆಸುತ್ತಿರುವ ಹಿಂಸಾಚಾರವನ್ನು ಸಂಘಟಿತವಾಗಿ, ಬೀದಿಗೆ ಇಳಿದು, ಪ್ರಜಾಸತ್ತಾತ್ಮಕ ವಿಧಾನಗಳಲ್ಲಿ ಪ್ರತಿಭಟನೆ ನಡೆಸುತ್ತಿರುವ ಏಕೈಕ ಸಂಘಟನೆ ಅದು. ಬಿಜೆಪಿ ಈ ಪ್ರತಿಭಟನೆಯನ್ನು ಸಹಿಸುವುದಿಲ್ಲ.


ಈ ಅಸಹನೆ, ಕೇವಲ ಬಿಜೆಪಿಯದ್ದು ಮಾತ್ರ ಎಂದು ನಾವು ತಿಳಿಯಕೂಡದು. ಯಾವುದೇ ಕಾರಣವಿಲ್ಲದೆ, ಸಮರ್ಪಕ ಪುರಾವೆಗಳನ್ನು ಮುಂದಿಡದೆ, ಆಳುವ ಪಕ್ಷ ಪಾಪ್ಯುಲರ್ ಫ್ರಂಟ್ ಅನ್ನು ನಿಷೇಧಿಸಲು ಕರೆಕೊಟ್ಟರೆ, ಅದರ ವಿರುದ್ಧ ರಾಜ್ಯ ಬಿಜೆಪಿಯೇತರ ರಾಜಕೀಯ ಪಕ್ಷಗಳು ಹಾಗೂ ನಾಗರಿಕ ಸಮಾಜದ ಸಂಘಟನೆಗಳು ದನಿ ಎತ್ತದಿರುವುದು ಕಳವಳ ಹುಟ್ಟಿಸುತ್ತದೆ. ಪಾಪ್ಯುಲರ್ ಫ್ರಂಟ್ ಯಾವುದಾದರೂ ದೇಶ ವಿರೋಧಿ ಚಟುವಟಿಕೆಗಳಲ್ಲಿ ಗುಟ್ಟಾಗಿ ತೊಡಗಿಕೊಂಡಿದ್ದರೆ ಆ ಕುರಿತ ಸಾಕ್ಷ್ಯಾಧಾರವನ್ನು ಸರ್ಕಾರವೇ ಒದಗಿಸಬೇಕು. ಆದರೆ ಈ ಸಂಘಟನೆ ಹಿಂದೂಗಳ ವಿರುದ್ಧ ದ್ವೇಷ, ಅಪಪ್ರಚಾರ ಮತ್ತು ಹಿಂಸೆಗಳಲ್ಲಿ ಯಾವತ್ತೂ ತೊಡಗಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಹಿಂದೂಗಳ ಬಗ್ಗೆ ದ್ವೇಷ ಮತ್ತು ಅಪನಂಬಿಕೆ ಅದರ ಧೋರಣೆ ಕೂಡ ಅಲ್ಲ. ಆದರೆ ಕರ್ನಾಟಕದಲ್ಲಿ ಮುಸ್ಲಿಮರ ವಿರುದ್ಧ ಅನೇಕ ವರ್ಷಗಳಿಂದ ಮತ್ತು ಇತ್ತೀಚೆಗೆ ಕ್ರೈಸ್ತರ ವಿರುದ್ಧ ಕೂಡ ಸಂಘಟಿತ ಹಿಂಸಾಚಾರ ನಡೆಸುತ್ತಿರುವ ಭಜರಂಗದಳ, ಹಿಂದೂ ಜಾಗರಣ ವೇದಿಕೆ, ಶ್ರೀರಾಮಸೇನೆ ಮುಂತಾದ ಸಂಘಟನೆಗಳಿವೆ. ಅನ್ಯಮತದ್ವೇಷ ಅವುಗಳ ಸಿದ್ಧಾಂತ ಕೂಡ ಆಗಿದೆ. ಸಂಘಟನೆಗಳನ್ನು ನಿಷೇಧಿಸುವುದೇ ಸಮಸ್ಯೆಗೆ ಪರಿಹಾರವೆನ್ನುವುದಾದರೆ ರಾಜ್ಯ ಸರ್ಕಾರ ಎಲ್ಲಕ್ಕಿಂತ ಮೊದಲು ಈ ಸಂಘಟನೆಗಳನ್ನು ನಿಷೇಧಿಸಬೇಕಲ್ಲವೇ?



2. ಇತ್ತೀಚೆಗೆ ರಾಜ್ಯ ಗೃಹಮಂತ್ರಿಗಳು ಸಂಪೂರ್ಣ ಗೋಹತ್ಯಾ ನಿಷೇಧದ ಕಾನೂನನ್ನು ಜಾರಿಗೆ ತರುವುದಾಗಿ ಹೇಳಿದ್ದಾರೆ. ಆ ಕಾನೂನು ಜಾರಿಗೆ ಬಂದದ್ದೇ ಆದರೆ ರಾಜ್ಯದ ಪಶುಸಂಗೋಪನೆಯ ಆರ್ಥಿಕತೆಯೇ ಏರುಪೇರಾಗಿ ಲಕ್ಷಾಂತರ ಬಡ ಹಿಂದೂ ಕುಟುಂಬಗಳಿಗೆ ವಿಪರೀತ ತೊಂದರೆಯಾಗುತ್ತದೆ. ಅದೂ ಅಲ್ಲದೆ ರಾಜ್ಯದ ಸಾವಿರಾರು ಜಾನುವಾರು ವ್ಯಾಪಾರಿಗಳು ನಿರುದ್ಯೋಗಿಗಳಾಗುತ್ತಾರೆ. ರಾಜ್ಯದ ಜಾನುವಾರು ವ್ಯಾಪಾರಿಗಳಲ್ಲಿ ಹೆಚ್ಚಿನವರು ಮುಸ್ಲಿಮರು; ಆದರೆ ಅದನ್ನೊಂದು ಉಪವೃತ್ತಿಯನ್ನಾಗಿ ನಡೆಸುತ್ತಿರುವ ಬಡ ಹಿಂದೂಗಳೂ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಈ ಹಿಂದೆ ರಾಜ್ಯ ಸರ್ಕಾರ, ಲಾಟರಿ ಟಿಕೆಟು ಮಾರಾಟವನ್ನು ನಿಷೇಧಿಸಿದಾಗ, ಲಾಟರಿ ಮಾರಾಟಗಾರರ ನಿರುದ್ಯೋಗ ಸಮಸ್ಯೆಯನ್ನು ಮಾಧ್ಯಮಗಳು ಎತ್ತಿ ತೋರಿಸಿದವು. ಇತ್ತೀಚೆಗೆ ರಾಜ್ಯದಲ್ಲಿ ಸಾರಾಯಿ ಮಾರಾಟ ನಿಷೇಧದಿಂದಾಗಿ ಉದ್ಯೋಗ ಕಳೆದುಕೊಂಡ ಐವತ್ತು ಸಾವಿರ ಜನರಿಗೆ ನೂರು ಕೋಟಿ ರೂಪಾಯಿ ವೆಚ್ಚದಲ್ಲಿ ಪುನರ್ವಸತಿ ಯೋಜನೆಯನ್ನು ಜಾರಿಗೊಳಿಸುವುದಾಗಿ ಸಮಾಜ ಕಲ್ಯಾಣ ಸಚಿವರೇ ಘೋಷಿಸಿದ್ದಾರೆ. ಆದರೆ ಪ್ರಸ್ತಾಪಿತ ಗೋಹತ್ಯಾ ನಿಷೇಧ ಕಾಯ್ದೆಯಿಂದ ಕಷ್ಟನಷ್ಟಗಳಿಗೆ ಒಳಗಾಗುವ ಬಡರೈತರು ಮತ್ತು ಜಾನುವಾರು ವ್ಯಾಪಾರಿಗಳ ಬಗ್ಗೆ ಮಾತ್ರ ಯಾಕೆ ಈ ಮೌನ? ರಾಜ್ಯ ಸರ್ಕಾರ ಮತ್ತು ನಮ್ಮ ಸಮಾಜ ಜಾನುವಾರುಗಳ ಬಗ್ಗೆ ತೋರಿಸುವ ಕಾಳಜಿಯ ಕಿಂಚಿತ್ತನ್ನಾದರೂ ಮನುಷ್ಯರ ಬಗ್ಗೆ ತೋರಬಾರದೆ?

3. 2008 ಸೆಪ್ಟೆಂಬರ್ ತಿಂಗಳಲ್ಲಿ ರಾಜ್ಯದ ಹಲವೆಡೆ, ಏಕಕಾಲಕ್ಕೆ ಕ್ರೈಸ್ತ ಮಂದಿರಗಳ ಮೇಲೆ ನಡೆದ ದಾಳಿಯ ಕುರಿತು ವಿಚಾರಣೆ ನಡೆಸಲು ರಾಜ್ಯ ಸರ್ಕಾರ ನ್ಯಾಯಮೂರ್ತಿ ಸೋಮಶೇಖರ್ ಆಯೋಗವನ್ನು ನೇಮಿಸಿದೆ. ಈ ದಾಳಿ ಪೂರ್ವ ಯೋಜಿತವಾಗಿತ್ತು ಎಂಬ ಬಗ್ಗೆ ಯಾರಿಗೂ ಸಂದೇಹವಿರಲಿಲ್ಲ. ಇದು ಅಚಾನಕವಾಗಿ ನಡೆದ ವಿದ್ಯಮಾನವೂ ಅಲ್ಲ. ಇದಕ್ಕೆ ಮೊದಲು ಗುಜರಾತ್, ಡಾಂಗ್ಸ್, ಮಧ್ಯಪ್ರದೇಶದ ಜಬುವಾ ಮತ್ತು ಒರಿಸ್ಸಾದ ಕಂಧಮಾಲ್‌ಗಳಲ್ಲಿ ಕ್ರೈಸ್ತರ ಮೇಲೆ ಮತಾಂತರದ ನೆವದಲ್ಲಿ ದಾಳಿ ನಡೆದಿತ್ತು. ಒರಿಸ್ಸಾದಲ್ಲಿ ಗ್ರಹಾಂ ಸ್ಟೇನ್ಸ್ ಮತ್ತು ಅವರ ಮಕ್ಕಳ ಕೊಲೆಯಾಗಿತ್ತು. ಕರ್ನಾಟಕದಲ್ಲಿಯೂ ಹಲವೆಡೆ ಕ್ರೈಸ್ತ ಮಂದಿರಗಳ ಮೇಲೆ ಹಲ್ಲೆ ನಡೆದಿತ್ತು. ಹಾಗಾಗಿ ಸೋಮಶೇಖರ್ ಆಯೋಗದ ನೇಮಕಾತಿ, ಅಂಗೈ ಹುಣ್ಣಿಗೆ ಕನ್ನಡಿ ಹಿಡಿದ ಹಾಗಿತ್ತು. ಈ ಆಯೋಗದ ವಿಚಾರಣೆಯ ವೈಖರಿ, ಅದರ ಉದ್ದೇಶದ ಬಗೆಗೇನೆ ಸಂಶಯ ಹುಟ್ಟಿಸುತ್ತಿದೆ. ಕರ್ನಾಟಕದಲ್ಲಿ ಚರ್ಚ್ ದಾಳಿ ಅತಿ ಉಗ್ರವಾಗಿ ನಡೆದದ್ದು ಮತ್ತು ಕ್ರೈಸ್ತರು ಅತಿ ಹೆಚ್ಚು ನೋವು, ಅವಮಾನಗಳನ್ನು ಅನುಭವಿಸಿದ್ದು ದಾವಣಗೆರೆಯಲ್ಲಿ. ಅಲ್ಲಿ ಇತ್ತೀಚೆಗೆ ಆಯೋಗದ ಮುಂದೆ ಸಾಕ್ಷಿ ಹೇಳಲು ಬಂದ ಪ್ಯಾಸ್ಟರ್ ಎಮ್ಯೂನೆಯೆಲ್ ಮತ್ತು ಇತರರನ್ನು ಆಯೋಗದ ವಕೀಲರು ಅವರು ಅಪರಾಧಿಗಳೋ ಎಂಬಂತೆ ಹೀನಾಯವಾಗಿ ನಡೆಸಿಕೊಂಡಿದ್ದಾರೆ. ಸೋಮಶೇಖರ್ ಆಯೋಗದ ಕಲಾಪಗಳು ಚರ್ಚ್ ದಾಳಿಯನ್ನು ಮತಾಂತರದ ವಿರುದ್ಧ ಜನತೆಯ ಆಕ್ರೋಶ ಎಂದು ಬಿಂಬಿಸಲು ನಡೆಸಿರುವ ತಾಲೀಮಿನ ಹಾಗೆ ಭಾಸವಾಗುತ್ತದೆ. ಉದಾಹರಣೆಗೆ ಕರ್ನಾಟಕದಲ್ಲಿ ಯಾರೂ ಓದದ, ನೋಡಿಯೂ ಇರದ, ಯಾವ ಪುಸ್ತಕ ಮಳಿಗೆಯಲ್ಲಿ ಹುಡುಕಿದರೂ ದೊರೆಯದ "ಸತ್ಯದರ್ಶಿನಿ" ಎಂಬ ಕ್ರೈಸ್ತ ಮತ ಪ್ರಚಾರದ ಕಿರುಪುಸ್ತಿಕೆಯ ಬಗ್ಗೆ ಆಯೋಗ ಸುದೀರ್ಘ ವಿಚಾರಣೆ ನಡೆಸಿ, ಆ ಪುಸ್ತಕದ ಲೇಖನವನ್ನು ಇನ್ನಷ್ಟು ವಿಚಾರಣೆಗಾಗಿ ಆಂಧ್ರದಿಂದ ಕರೆಸುವುದರ ಬಗ್ಗೆಯೂ ಯೋಚನೆ ನಡೆಸಿದೆ. ಆದರೆ ರಾಜ್ಯದಲ್ಲಿ ಲಕ್ಷಾಂತರ ಜನ ಪ್ರತಿನಿತ್ಯ ಓದುವ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಒಂದು ತಿಂಗಳ ಕಾಲ ಸತತವಾಗಿ ಕ್ರೈಸ್ತ ಧರ್ಮದ ವಿರುದ್ಧ ಬೈಗುಳ, ಆರೋಪ ಮತ್ತು ಅಪಪ್ರಚಾರಗಳು ಧಾರಾವಾಹಿಯಾಗಿ ಬಿತ್ತರಗೊಂಡವು. ಆ ಲೇಖನ ಮಾಲಿಕೆಯ ಮೊತ್ತ ಮೊದಲ ಹಾಗೂ ಕಟ್ಟಕಡೆಯ (ಹಾಗೆಂದು ಆಶಿಸೋಣ) ಲೇಖನ ಬರೆದ ಎಸ್.ಎಲ್. ಭೈರಪ್ಪ ಹಾಗೂ ವಿ.ಕ. ಸಂಪಾದಕರನ್ನು ವಿಚಾರಣೆಗೆ ಒಳಪಡಿಸುವ ಬಗ್ಗೆ ಈವರೆಗೆ ಆಯೋಗ ಯಾವುದೇ ತೀರ್ಮಾನ ತೆಗೆದುಕೊಂಡ ಹಾಗೆ ಕಾಣುವುದಿಲ್ಲ. ಸೋಮಶೇಖರ್ ಆಯೋಗ ಪೆಟ್ಟು ತಿಂದವರ ಮೇಲೆಯೇ ಆರೋಪ ಹೊರಿಸುವ ಮಾಮೂಲಿ ಫ್ಯಾಸಿಸ್ಟ್ ತಂತ್ರವನ್ನು ಅನುಸರಿಸುತ್ತಿದೆ; ಆದಾಗ್ಯೂ ಅದರ ವಿಚಾರಣೆ ಯಾಕೆ ಇಷ್ಟು ಹಾಸ್ಯಾಸ್ಪದವಾಗಿದೆ?

ಜಿ. ರಾಜಶೇಖರ್



ಒಳಹೊರಗು

ಅವಚಿ ಹಿಡಿದ ಕೈ
ನೆಟ್ಟ ನೋಟ ಟಿವಿಯೆಡೆಗೆ

ತಬ್ಬಿ ನಿಂತ ಮೈ
ಸರಾಗ ಮಾತು ಮೊಬೈಲಿನಲ್ಲಿ

ಬೆಸೆದುಕೊಂಡ ತುಟಿಗಳು
ಕಂಪ್ಯೂಟರ್ ಕೀಲಿಮಣೆ
ಮೇಲೆ ಓಡುತ್ತಿರುವ ಕೈ ಬೆರಳು

ಮೆತ್ತೆಯ ಮತ್ತಿನಲ್ಲಿ
ಅಮುಕಿ ಹಿಡಿದ ಮೊಲೆ
ತೆಕ್ಕೆ ಬಿದ್ದ ತೊಡೆಗಳ ನಡುವೆ
ಆ ಪುಲಕದ ಉಲುಹಿನ ಬದಲು
ಪರಮ ಲೌಖಿಕ ಚಿಂತನೆಗಳ
ಭರಪೂರ ವಿನಿಮಯ

ಹಾಗೆ ಮೆಲ್ಲಗೆ ಎಳೆದು
ಏಕಾಗ್ರವಾಗಿ ಬಿಚ್ಚಲನುವಾಗುತ್ತಾ
ನೇವರಿಸುತ್ತಾ ಸಂಕೋಚಗಳ ನಿವಾರಿಸುತ್ತಾ
ವಿವಶವೋ ಪರವಶವೋ
ಆಗಲು ಚೇತನ
ಕಾಯಲಾರದು ಚೈತನ್ಯ

ತೇಲುನೋಟದ ಸೂಚನೆಯಿಲ್ಲ
ಎದೆ ಮಿದ್ದು ಯಾಚಿಸಬೇಕಿಲ್ಲ
ಸೋಂಕದೆ ತಾಕದೆ ತಂತಾನೆ
ಸ್ರವಿಸಲು ಸಿದ್ಧವಾದ ನಂತರವೆ
ಬಿಚ್ಚಿಕೊಳ್ಳುವ ಪರಿಪಾಠ

ಒಳಗ್ಹೋಗಿ ಹೊರಬರುವುದು
ಅರೆನಿಮಿಷದ ತುರ್ತು
ಈಗ ಉಳಿದಿರುವುದು
ಕಟ್ಟಿಕೊಳ್ಳುವ ಪರಿಪಾಟಲು

● ಕೆ.ಅಕ್ಷತಾ

ಬ್ಲಾಗ್ ಲೋಕ

ಹೊಸದಿಗಂತ: 'ನಾನೇನು ರಾಷ್ಟ್ರ ಜಾಗೃತಿಯ ಗರತಿ ದೈನಿಕ' ಅಲ್ಲ!!

ಯೋಗ, ಭೋಗ, ಆಧ್ಯಾತ್ಮ ಎಲ್ಲವನ್ನೂ ಒಂದೇ ಪುಟದಲ್ಲಿ ಕೊಟ್ಟು ಮನಮಂದಿಯನ್ನೆಲ್ಲ [illegible] ಹೊಸ ರೂಪ [illegible]

[illegible] ಪಚ್ಚಾಂಗಿಯ ಗಾಸಿಪ್ [illegible] 'ನಿತ್ಯಯೋಗ'. (ಅದರ ಪಕ್ಕದಲ್ಲೇ ನಿತ್ಯಭೋಗದ ಆಸನಗಳೂ ಇದ್ರೆ ಚೆಲೋದಾಗಿತ್ತು ಅಂತ ವಿಮರ್ಶಕ ಹೇಳಲ್ಲ [illegible]? ದೇಹಾಸಕ್ತಿ? ಯೋಗ? ಭೋಗ? ಎಂಥ ಒಳ್ಳೇ ಕಾಂಬಿನೇಶನ್ [illegible]!

[illegible] ಲೋಡ್‌ಶೆಡ್ಡಿಂಗ್ ಬಗ್ಗೆ ಬಿಜೆಪಿ [illegible] ಆಗಿರೋದಕ್ಕೆ ಅದು ಪಕ್ಷದ ಮುಖವಾಣಿ ಅಲ್ಲ ಅನ್ನೋದೇ ಕಾರಣವಾ? ಆದರೆ ಲೋಡ್‌ಶೆಡ್ಡಿಂಗ್‌ನಂಥ ತೀವ್ರ ಜನಪರ ವಿಷಯವನ್ನು ಹಾಗೆ ನಗಣ್ಯ [illegible] ಜನಸಾಮಾನ್ಯ? ಜನಪರ ವಿಷಯಕ್ಕಿಂತ ರಾಖಿ ಸಾವಂತ್‌ಳೇ ಮುಖ್ಯವಾಗಿ ರಾರಾಜಿಸ್ತಾಳಲ್ಲ [illegible] ಹೊಸದಿಗಂತವೂ ಪಚ್ಚಾಂಗಿಗಳ ರ್‍ಯಾಂಪ್ ಆಗಿದೆಯೋ ಹೇಗೆ? ಜನರನ್ನು ಮುಟ್ಟಿಸೋ ಸುಲಭವಾಗಿ ತಾನೂ [illegible] ಗ್ಲಾಮರಸ್ ಆಗಬೇಕು ಅನ್ನೋದೇ ಹೊಸದಿಗಂತದ ಉದ್ದೇಶ ಇರಬಹುದೇನೋ. ದಿನವೂ [illegible] ಯೋಗ, ಭೋಗ, ಭೋಗದ ಕಾಂಬಿನೇಶನ್ ಪ್ರಕಟಿಸೋ ಮೂಲಕ ಯಾವ ಮಾರುಕಟ್ಟೆಯನ್ನು [illegible]?



ಹೊಸದಿಗಂತದ ಇವತ್ತಿನ ಮುಖಪುಟವಂತೂ ಬರೀ ವಿಸ್ಮಯದ [illegible] [illegible] ಬಿಟ್ಟಿ [illegible] ಮಾರಲು [illegible] 'ಹೊಸದಿಗಂತ' [illegible]

ಏನೇ ಇರಲಿ. ಇವೆಲ್ಲ ಮೊದಲು [illegible] ಕೊಡಬಹುದು ಅನ್ನಿ. ಹಾಗಂತ ಜನಪರ ಸುದ್ದಿಗೇ ಕೊಡಲಿಯೇಟು ಹಾಕಬೇಕೇ? [illegible] ಬಿಪಾಶಾ ಬಗ್ಗೆ ಕನ್ನಡಪ್ರಭದಲ್ಲೇ ಒಳಸುದ್ದಿ ಇರೋವಾಗ ಹೊಸದಿಗಂತವೂ [illegible] ಆಕೆಯ ರಂಗುರಂಗು ಚಿತ್ರಸುದ್ದಿ ಹಾಕಿದ್ದ!

ಅದಿರಲಿ, ಆಗಸ್ಟ್ 5ರ ರಕ್ಷಾಬಂಧನವೆಂಬೋ ಆರೆಸೆಸ್ ಹಬ್ಬಕ್ಕಿಂತ ಮುನ್ನ [illegible] ಫ್ರೆಂಡ್‌ಶಿಪ್ ಡೇ ಚಿತ್ರವನ್ನೂ ಮುಖ್ಯವಾಗಿ ಪ್ರಕಟಿಸಿ ಪ್ರಮೋದ್ ಮುತಾಲಿಕ್‌ಗೆ [illegible] ಅದು ರಾಖಿಯಲ್ಲವಂತೆ, ಬ್ಯಾಂಡ್ ಅಂತೆ. ಮುಂದಿನ ವರ್ಷದ ವ್ಯಾಲೆಂಟೈನ್ ಡೇ [illegible] ಹೊಸದಿಗಂತ ಚಿತ್ರಸಂಪುಟಕ್ಕಾಗಿ ಎಲ್ಲರೂ ಕಾಯುವಂತೆ ಮಾಡಿದೆ. ಮಡಿವಂತಿಕೆಯನ್ನು [illegible] ಭರಾಟೆಯಲ್ಲಿ ಹೊಸದಿಗಂತದ ಸಂಪಾದಕೀಯ ಮಂಡಳಿ ಏನೇನನ್ನೆಲ್ಲ ಕಿತ್ತೊಗೆಯುತ್ತಿದೆ [illegible] ಆರೆಸ್ಸಿಗರು ಪಟ್ಟಿ ಮಾಡುತ್ತಿಲ್ಲವಂತೆ!

ಗೆಳೆಯನ ಹೆಂಡತಿ ಜೊತೆ ಪಿಸಿಪಿಸಿ ಮಾತಾಡ್ತಿದ್ದ [illegible] 'ನಾನೇನು ರಾಷ್ಟ್ರ ಜಾಗೃತಿಯ ಗರತಿ ದೈನಿಕ' ಅಲ್ಲ ಎನ್ನ [illegible]

-[illegible] ಬ್ಲಾಗ್‌ನಿಂದ

...ಡೂರಪ್ಪುಂತ ಹಣ ಈಸಗಂಡು ಹಜ್‌ಗೋದ ಸಾಬರ ತ್ರೋರ್ಲ!

...ಸೆದ್ಧವ ರಾಜಕಾರಣಿಗಳ ಗುಣಗಾನ ಮಾಡುತ್ತಿರ ...ವರೆ ಸೀರ.

"ಅವುನ್ಯಾರ್ಲಾ ಉಗ್ರಿ ವರತೂರು ಪ್ರಕಾಸ?" ಎಂದ.

"ಅವುನೊಬ್ಬ ಎಡೂರಪ್ಪನ ಸರಕಾರಕೆ ಹೇಳಿ ...ದಿಸಿದಂಗಿದ್ದ ಕಣಮಾವ. ಇವುನ್ನಿಟಗಂಡ್ರೆ ಸರಕಾರಕ್ಕೆ ...ಯಾದಿ ಬರದಿಲ್ಲ ಅಂತ ತಗದು ಚರಂಡಿಗ್ಯಸ್ತ ...ೂರಪ್ಪ ಇದು ಅಲ್ಲಿಂದ ಎದ್ದು ಬಂದು ಊರೂರು ...ಕಂಡು ಅವುರಿವರ ಬೈಕಂಡೋಯ್ತಾ ಆದೆ."

"ಯುಮ್ಮೆಲ್ಲೆ ಆಗಿದ್ದಾ ಅನ್ನು?"

"ಊ ಕಣೊ. ಇಂಡಿಪೆಂಡೆಂಟಾಗಿ ಗೆದ್ದೂ ವಳ ...ಡಿ ಅಧ್ಯಕ್ಷನಾಗಿದ್ದ. ಏನು ಮಾಡಿದ್ರು ಚರಂಡಿಯಿಂದ ...ಬರಲೇಯಿಲವಂತೆ. ಅಲ್ಲಿಂದ್ಲೆ ಬಜೆಪಿಗಳ ಮುಸುಡಿಗೆ ...ಯುಸಿತಿದ್ದ. ಯಾವಾಗ ಸದಾನಂದಗೌಡನ ಮುಸುಡಿಗೆ ...ಯಾಗಿ ಕ್ವಚ್ಚೆ ನೀರ ಯಸ್ದನೊ ಅವತ್ತೆ ಅವುನ್ನ ತಗದಾಕಿದ್ರು. ...ನ ತರದೋರು ಇನ್ನು ಮಸಿ ಜನವುರೆ, ಅವುರಿಗೂ ...ಟೀಸ್ ಕೊಟ್ಟಿದ್ದರಂತೆ."

"ಅವುನ ತರದೋರ್‍ಯಾರಿದ್ದರೂ?" ಎಂದಳು ಜುಮ್ಮಿ.

"ರೇಣುಕಾಚಾರಿ ಅಂತ ಅವುನೆ ಕಣೇ."

"ಜಯಲಕ್ಷ್ಮಿ ಫ್ರೆಂಡೆ?"

"ನೋಡವ್ವ, ನಿನಿಗೂ ಗೊತ್ತದೆ ಅಂದ್ರೆ ಅವುನಿನ್ನೆಷ್ಟು ...ಮಸ್ ಇದ್ದನು!"

"ಇವತ್ತಿನ ಕಾಲ ಇರದೆ ಅಂಗಲವೇನ್ಲ, ನಿಜವಾದ ...ನಿಂದ ಯಾರು ಕರಿಸಿಗಂಡರೂ?" ಎಂದ ಕಾಳಮಾವ.

ಕಟ್ಟೆಪುರಾಣ

...ಯ ಲು ಸೀ ಮೆ

▸ ಬಿ. ಚಂದ್ರೇಗೌಡ

"ನಿಜಕಣ ಮಾವ. ಹೆಸರಿನ ಮುಂದೆ ಏನಾರ ...ಬೇಕು. ಆಗ್ಲೆ ಜನ ಗುರುತಿಡಿಯದು. ಈಗ ...ಮಗಳೂರಲ್ಲಿ ವಬ್ಬ ಎಮ್ಮೆಲ್ಲೆ ಅವುನೆ. ಅವುನು ...ಯಣ್ಣೆ ಸುರಕಳಕ್ಕೋಗಿದ್ದ. ಆಗ್ಲಿಂದ ಫೇಮಸ್ ಆದ. ...ಚಿತ್ರದುರ್ಗದಲ್ಲೊಬ್ಬ ಅವುನೆ, ಶೇಖರ ಅಂತ. ಅವುನು ...ಪ್ಲಿಕೇಟ್ ಸರ್ಟಿಫಿಕೇಟ್ ಮಾಡತಿದ್ನಂತೆ. ಅಂಗೇನೇ ...ಮಸ್ ಆಗಿ ಕ್ಯಾಶ್ ಮಾಡಿಕಂಡು ಎಮ್ಮೆಲೆನೆ ಆದ. ...ಗೆ ಈ ಸರಕಾರದ ಅರ್ದಕರ್ದ ಜನ ಹೆಸರಿನ ಮುಂದೆ ...ರ ಮಾಡಿರತರೆ?" ಎಂದ ಉಗ್ರಿ.

"ಅದಿರ್ಲಿ ವರತೂರು ಪ್ರಕಾಸ ಏನು ಮಾಡಿದುಸ್ನ?" ಎಂದಳು ಜುಮ್ಮಿ.

"ಅವುನು ಮಾತಿನಲ್ಲೇ ಹೆಸುರು ಮಾಡ್ಕುವುನೆ ಕಣೆ. ಅವುನು ಸ್ವತಂತ್ರವಾಗಿ ಗೆದ್ದಾಗ ಎಡೂರಪ್ಪನತ್ರ ಏನು ಕೇಳ್ತಿ ಅಂದಿದ್ರೆ, ಮುಖ್ಯಮಂತ್ರಿ ಪಟ್ಟ ಕೇಳ್ತಿನಿ ಅಂದಿದ್ದ. ಕೊಡ್ತಿಲ್ಲ ಅಂದ್ರೆ ರಕ್ತಪಾತ ಆಯ್ತದೆ ಅಂದಿದ್ದ."

"ಅಂಗಂದಿದ್ನೇ?"

"ಊ ಕಣೆ. ನಾನು ಕುರುಬರ ಪೈಕಿ. ಕುರುಬರ್‍ಯಾರು ಇಲ್ಲಿಗಂಟ ಮುಖ್ಯಮಂತ್ರಿ ಆಗಿಲ್ಲ. ಆದ್ರಿಂದ ನನ್ನ ಮುಖ್ಯಮಂತ್ರಿ ಮಾಡಿ ಅಂದಿದ್ದ."

"ಅಂಗರವುನು ಇನ್ನಬ್ಬ ಈಸ್ಪುರಪ್ಪ ಅನ್ನು."

"ಹೋಲಿಕೆಲಿ ಒಂಚೂರು ಅಂಗೆ ಕಾಣ್ತರೆ. ಈಸ್ಪುರಪ್ಪ ಮದ್ಲು ಅಂಗೆ ಇದ್ನಂತೆ. ಆರೆಸೆಸ್ಸಿಗೆ ಸೇರಿ ಇವತ್ತಿರಂಗೆ ಆದನಂತೆ. ಅದ್ಕೆ ಈ ವರತೂರು ಪ್ರಕಾಶ ಮದ್ಲೆ ಆರೆಸೆಸ್ಸಿಗೆ ಸೇರಿದ್ರೆ ಈಸ್ಪುರಪ್ಪನ ಖಾತೆನಾರ ಸಿಗದು."

"ಅದೇನ್ಲ ಆರೆಸೆಸ್ಸು, ಆರೆಸೆಸ್ಸು ಅಂತ ಯಲ್ಲ ಅಂತರಲ್ಲಾ" ಎಂದ ಸೀರ.

"ನನಿಗೂ ಅಷ್ಟು ಗೊತ್ತಿರಲಿಲ್ಲ ಕಣಮಾವ. ಮಮ್ತಾಜ್ ಅಲಿಖಾನ್ ಅನ್ನೊ ಸಾಬಿ ಹೇಳಿದ ಮ್ಯಾಲೆ ಚನ್ನಾಗಿ ತಿಳಕಂಡೆ."

"ಅವುನೇನು ಹೇಳಿದಾ?"

"ಅವುನು ಏನೇಳ್ಕವುನಪ್ಪಾ ಅಂದ್ರೆ, ಆರೆಸೆಸ್ ಅಂದ್ರೆ ಅದೊಂದು ರಾಷ್ಟ್ರಭಕ್ತರ ಸಂಘ. ದಿನ ಬೆಳಿಗ್ಗೆ ಎದ್ದು ಯಾವುದಾರ ಮೈದಾನದಲ್ಲಿ ಕಾಚಾಹಾ ಕಂಡು ರಾಷ್ಟ್ರ ಭಕ್ತಿ ಭಜನೆ ಮಾಡದು ತಪ್ಪೆ, ಹಿಂದೂ ಧರಮದಿಂದ ಯಾರೂ ವರಿಕೋಗದಂಗೆ ಕೋಲಿಡಕಂಡು ಕುರಿ ಕಾದಂಗೆ ಕಾಯದು ತಪ್ಪೆ, ಗುಡಿ ಗುಂಡಾರ ರಕ್ಷಣೆ ಮಾಡ್ತರೆ, ಇದ್ಯಂಗೆ ತಪ್ಪಾಯ್ತದೆ ಅಂದವುನೆ ಆ ಸಾಬಿ" ಎಂದು ಉಗ್ರಿ ಹೇಳುವಾಗ ಹಠಾತ್ತನೆ ಬಂದ ವಾಟಿಸ್ಸೆ,

"ದೇವರಾಣೆ ತಪ್ಪಲ್ಲ ಕಣೊ ಉಗ್ರೀ. ಆದ್ರೆ ಆ ಮಾತ ಆರೆಸೆಸ್ಸಿಗವುನು. ಹೇಳಬೇಕಾಗಿತ್ತು, ಆದ್ರೆ ನನಿಗಿರೊ ಡವುಟ್ ಪ್ರಕಾರ ಇವುನು ಭವುಷ್ಯ ಮುಸ್ಲಿಂ ಆರೆಸೆಸ್ ಇರಬೇಕು." ಎಂದ.

"ಅವುನು ಸಾಬರೋನಾದ್ರು ಸರಿಯಾಗೇಳ್ಕವುನಲ್ಲ?" ಎಂದ ಕಾಳಮಾವ.

"ಗೊತ್ತಾಯ್ತೇನೊ ಉಗ್ರೀ, ಕಾಳದೊಡಪ್ಪನಂಥೊನ್ನೆ ಕನವಿನ್ಸ್ ಮಾಡ್ಕವುನೆ. ಅಲಿಖಾನ್ ಅಂದ್ರೆ ಇನ್ನೇನಾಗ ಬೇಕಪ್ಪ?" ಎಂದ ವಾಟಿಸ್ಸೆ.

"ಯಾರೋ ಆರೆಸ್ಸೆಸ್‌ನೋರೆ ಹೇಳಿಸಿರಬೇಕು ಕಣೊ" ಎಂದ ಉಗ್ರಿ.

"ಹೇಳಸಕ್ಕೇನು ಅವುನು ಈಸ್ಪರಪ್ಪನೇನೊ. ಕನಕಗೋಪುರ ಇಲ್ಲಿ ಇರ್ಲೇ ಇಲ್ಲ ಇದ್ದಿದ್ದು ಸಾಬೀತಾದ್ರೆ ನಾನು ರಾಜಕೀಯದಿಂದ್ಲೇ ನಿವೃತ್ತನಾಗಿ ಸಂಘದ ಸರಸಂಚಾಲಕನಾಯ್ತಿನಿ ಅಂತ ಈಶ್ವರಪ್ಪ ಹೇಳಿದ್ದ. ಆ ಮಾತು ಪೇಜಾವರ ಶ್ರೀ ಕಡೆಯಿಂದ ಬಂದ ಉಪದೇಶದ



ಪರಿಣಾಮ ಅನ್ನದು ಅಮ್ಯಾಲೆ ಗೊತ್ತಾಯ್ತು. ಆದ್ರೆ ಈ ಅಲಿಖಾನ್ ದಡ್ಡಲ್ಲ, ತುಂಬಾ ಓದಿಕಂಡಿದ್ದನಂತೆ. ಅದೂ ರಾಷ್ಟ್ರೋತ್ಥಾನ ಸಾಹಿತ್ಯ ಓದಿಕಂಡಿರಬವುದು, ಅದ್ಕೆ ಅಂಗೆ ಹೇಳಿರತನೆ."

"ಸರಿಯಪ್ಪ ಅವುನ ಮಾತ ತಗಳದಾದ್ರೆ ಮಂಗಳೂರಲ್ಲಿ ಚರ್ಚ್ ಮೇಲೆ ದಾಳಿ ಮಾಡಿದೋರ್‍ಯಾರು? ಬಾಬಾ ಬುಡನ್‌ಗಿರಿಯ ದತ್ತಪೀಠ ಮಾಡಿದೋರ್‍ಯಾರು? ಬಾಬರೀ ಮಸೀದಿ ಕೆಡಿವಿದೋರ್‍ಯಾರು? ಮೈಸೂರಲ್ಲಿ ಮಸೀದಿ ವಳಿಕೆ ಹಂದಿ ತಲೆ ತಂದಾಕಿದೋರ್‍ಯಾರು ಅಂತ."

"ಈ ಪ್ರಶ್ನೆಗಳ ನೀನು ಆಲಿಖಾನ್‌ಗೆ ಹೋಗಿ ಕೇಳಬೇಕು ಕಣೊ. ಆಕಸ್ಮಾತ್ ನೀನು ಹೋಗಿ ಕೇಳಿದ್ರೆ ಅವುನೇಳ್ತನೆ ಅಂದ್ರೆ, ಬಾಬಾಬುಡನ್‌ಗಿರಿಯ ದತ್ತಪೀಠ ಮಾಡಿದ್ರಲ್ಲಿ ಒಕ್ಕಲಿಗರು ಲಿಂಗಾಯತ್ರ ಮಂಚೂನಿಲಿದ್ರು.

ಆ ಪೈಕಿ ಒಬ್ಬಿ ಎಮ್ಮೆಲ್ಲೆ ಆಗ್ಯವ್ರುನೆ. ಇದಕೇನೇಳ್ತಿ ಅಂತಾನೆ. ಮೈಸೂರಲ್ಲಿ ಹಂದಿತಲೆ ಹಾಕಿದೋರು ಮಾರಿಗುಡಿ ಭಕ್ತರು ಅಂತನೆ. ಇನ್ನು ಚರ್ಚ್ ಮೇಲಿನ ದಾಳಿಲಿ ಭಜರಂಗದಳ, ರಾಮಸೇನೆ ಕೈವಾಡ ಇತ್ತು ಆದ್ರಿಂದ ಭಜರಂಗಿ ಜೈಲಿಗೋದ. ರಾಮಸೇನೆ ಗಿರಾಕಿ ಇನ್ನೂ ಜೈಲಿಗೆ ಹೋಯ್ತಾ ಬತ್ತಾ ಅವ್ರುನೆ. ಅವುನಿಗೂ ಆರೆಸೆಸ್ಸಿಗೂ ಯಾವ ರಕ್ತ ಸಮುಂಧನೂ ಇಲ್ಲ ಅಂತಾನೆ. ಇನ್ನ ಕ್ರಿಶ್ಚಿಯನ್ರು ಕೆಳಜಾತಿಗೆ ಕರದ ಮೀನು, ಹುರಿದಮಾಂಸ, ಹರೆಯದುಡುಗಿ ಕೊಟ್ಟು ಮತಾಂತರ ಮಾಡದ ನಾನೇ ತೋರುಸ್ತಿನಿ ಅಂತನೆ. ಅಮ್ಯಾಲೆ ಬಾಬರಿ ಮಸೀದಿ ವಿಷಯಕ್ಕೆ ಬಂದ್ರೆ ಅದ್ವಾನಿಯು ಪಾಕಿಸ್ತಾನದ ಸಾಬರು ವಡದು ಓಡಿಸಿದ್ರು, ಅದ್ಕೆ ಇಲ್ಲಿಗೆ ಬಂದು ಹಿಂದೂಗಳ ಸಂಘಟನೆ ಮಾಡಿ, ಬಾಬರ್-ರಾಮಮಂದಿರ ಕೆಡವಿ ಮಸೀದಿ ಕಟ್ಟಿದ್ದ ಜಾಗನ ಅಕ್ಕೈಯರ್ ಮಾಡಿಕಂಡು ಮಸೀದಿ ಕೆಡವಿ ಈ ಕಡೆ ಮಸೀದಿನೂ ಅಲ್ಲಾ, ಆ ಕಡೆ ಮಂದಿರನೂ ಅಲ್ಲ ಅನ್ನಂಗೆ ಮಾಡಿದ್ರು. ಇದು ಅದ್ವಾನಿ ಲೀಡರ್‌ಸಿಪ್ಪಲ್ಲಿ ಕರಸೇವಕರು ಮಾಡಿದ ಕೆಲಸ ಅಂತನೆ ಸಾಬಿ. ಆಗೇನೀಸಗಂಡಿ ನೀನು?"

"ಅರರರೆ, ಯಂಥಾ ಕಾಲ ಬಂತಯ್ಯಾ? ಸಾಬರಿಗೆ ಬುದ್ಧಿ ಹೇಳಕ್ಕೆ ಮುಮ್ತಾಜ್ ಖಾನ್, ಕುರುಬರಿಗೆ ತಿಳಿವಳಿಕೆ ಹೇಳಕ್ಕೆ ಈಶ್ವರಪ್ಪ ಹರಿಜನ್ರಿಗೆ ಬುದ್ಧಿ ಹೇಳಕ್ಕೆ ಭರಣಿ....."

"ಭರಣಿ ಹೊರಗೆ ಬಂದಾಯ್ತಲ್ಲೊ?"

"ಬಂದ್ರು ಇನ್ನೊಬ್ಬನ ತಯಾರು ಮಾಡ್ತರೆ ಕಣೊ. ಅಂತೂ ಆರೆಸೆಸ್‌ನೋರು ಅಬ್ದುಲ್ ರಶೀದ್ ಹೇಳ್ದಂಗೆ ರೇಷ್ಮೆ ನುಣುಪು, ನರಿಬುದ್ಧಿ ಕಲ್ತಗಂಡು ನಮ್ಮೇಲ ನಮಿಗೇ ತಿನುಸ್ತರೆ ಕಣೊ."

"ಹಿಂದೆ ಇದ್ದಿದ್ದು ಅಂಗೇ ಅಲವೇನೊ. ಅವುನು ಗರ್ಭಗುಡಿ ವಳಗಿದ್ದ. ಹಜಾರದಲ್ಲಿ ಒಕ್ಕಲಿಗರೂ, ಅಲ್ಲಿಂದ ಒಂದಿಷ್ಟು ದೂರದಲ್ಲಿ ಮಡವಾಳ್ರು, ವಾಲಗದೋರು, ಊಳಿಗದೋರು, ತಮಟೆ ಬಡಿಯೋರು ಇದ್ರು. ಅವುರ ಕ್ಯಲಸ ಅವುರು ಮಾಡತಿದ್ರು. ಅಂಥದ್ದೊಂದು ಕಾಲನ ಡೆಮಾಕ್ರಸಿ ರಾಜಕಾರಣದಲ್ಲೂ ಮಾಡ್ತರೆ ಅಂದ್ರೆ ಇಟೀಸ್ ವಂಡ್ರುಫುಲ್ಲು."

"ಅದೇನಾರ ಆಗ್ಲಿ ಮೀರ್‌ಸಾದಕ್ರು ಇನ್ನು ಅವುರಲ್ಲ ಹೇಳು."


"ಮಿಸ್ಟರ್ ಉಗ್ರಿ, ಎಡೂರಪ್ಪನತ್ರ ದುಡ್ಡೀಸಗಂಡು ಹಜ್ ಯಾತ್ರೆ ಮಾಡಿ ಕಂಡುಬಂದು ಬುಲುವಾಗಿ ಗಡ್ಡ ಬುಟಗಂಡು ತಿರಗೊ ಸಾಬರ ತೋರುಸ್ಲೆ? ಬ್ರಾಂಬ್ರು ಆರೆಸ್ಸೆಸ್ ಆದ್ರೆ ಯಾವ ಅಪಾಯವೂ ಇಲ್ಲ. ಆದ್ರೆ ಒಕ್ಕಲಿಗರು, ಕುರುಬರು, ಲಿಂಗಾಯಿತ್ರ, ಸಾಬರು ಆರೆಸೆಸ್ ಆದ್ರೆ ಇಟೀಸ್ ಮೋಸ್ಟ್ ಡೈಂಜರ್ ಟು ಸೆಕ್ಯುಲರಿಸ್ಮ!"

...ರ್ಕಾರಿ ಫೈಲುಗಳಲ್ಲಿ ಹೂತ ಕನಸುಗಳು

ಮೊನ್ನೆ ಒಂದು ಸಿನಿಮಾ ಸಂಕಿರಣ; ಸಿನಿಮಾ ಪತ್ರಕರ್ತರೆಲ್ಲ ನಾನು ಒಂದು ಸಭೆಗೆ ಬರಬೇಕೆಂದು ...ಳಿದರು. ಒಪ್ಪಿಕೊಂಡರೂ ಈಚೆಗೆ ಸಭೆಗಳೆಂದರೆ ಕಿರಿಕಿರಿಗೊಳ್ಳುವ ನಾನು ಸಿನಿಮಾ ಬಗ್ಗೆ ಮಾತಾಡಲೂ ...ಜರಿದೆ. ಯಾಕೆಂದರೆ ಕಳೆದ ಒಂದು ವರ್ಷದಿಂದ ನಾನು ನೋಡಿರುವ ಸಿನಿಮಾಗಳು ಕೆಲವೇ ಕೆಲವು; ...ತ್ರಿಕೆ'ಯ ಸಿನಿಮಾ ಪುಟಗಳನ್ನು ಉತ್ತಮಪಡಿಸುವುದಕ್ಕಾಗಿ ಅನೇಕರ ಜೊತೆಗೆ ಚರ್ಚಿಸಿದ್ದೆ. ...ಸಿನಿಮಾ ಸಂಕಿರಣಕ್ಕೆಂದು ನನ್ನ ಭಾಷಣಕ್ಕಾಗಿ ಕೊಟ್ಟಿದ್ದ 'ಸರ್ಕಾರ ಮತ್ತು ಸಿನಿಮಾ' ಎಂಬ ...ಷಯದ ಬಗ್ಗೆ ಯೋಚಿಸಿದೆ. ಸರ್ಕಾರ ಮತ್ತು ನಿಜವಾದ ಸಿನಿಮಾ ಯೋಜನೆಗಟ್ಟಲೆ ...ರವಿರುವಂತೆ ಕಾಣಿಸಿತು. ಸಿನಿಮಾ ಆರಂಭವಾಗುವುದೇ ನಿರ್ದೇಶಕನ ಆಳದಲ್ಲಿ; ಆತನಲ್ಲಿ ...ಕ್ತಪಡಿಸಬೇಕಾದ ಅನುಭವಗಳಿದ್ದು ಅದನ್ನು ಹೇಳುವುದಕ್ಕಾಗಿ ಒಬ್ಬ ನಿರ್ಮಾಪಕನನ್ನು ...ಡಿಯುತ್ತಾನೆ. ಹಣದ ಜವಾಬ್ದಾರಿ ನಿರ್ದೇಶಕನ ಕಸನನ್ನು ತಟ್ಟತೊಡಗುತ್ತದೆ- ಆತ ಆರಿಸುವ ...-ನಟಿಯರು, ಕ್ಯಾಮರಾಮನ್, ಸೆಟ್ಸ್, ಸಂಕಲನಕಾರ, ಸಂಗೀತಗಾರ ಎಲ್ಲದನ್ನೂ ಹಣ ...ಪಿಸತೊಡಗುತ್ತದೆ. ಇದೆಲ್ಲದರೊಂದಿಗೆ ಸರ್ಕಾರದ ಕಾನೂನುಗಳು, ಸೂತ್ರಗಳು, ಸಬ್ಸಿಡಿ, ...ಗೆ ವಿನಾಯಿತಿ.... ನಟ, ನಟಿಯರೊಂದಿಗೆ, ಛಾಯಾಗ್ರಾಹಕನ ನೆರವಿನಿಂದ ರೂಪುಗೊಳ್ಳಬೇಕಾದ ...ನ ಕನಸು ಕಮರಿಹೋಗತೊಡಗುತ್ತದೆ.



...ಇದನ್ನೇ ಹೇಳಿದ ನಾನು ಇತರರು ಏನು ಹೇಳುವರೆಂದು ಕೇಳಲು ಕಾತರನಾಗಿದ್ದೆ. ...ಎಂ. ವೆಂಕಟೇಶ್, ರಾಜೇಂದ್ರಸಿಂಗ್ ಬಾಬು, ಅಶೋಕ್, ಶಿವರಾಮ್, ಸಾ.ರಾ. ಗೋವಿಂದು, ...ಎಸ್. ಚಂದ್ರು ಮುಂತಾದವರೆಲ್ಲ ಭಾಗವಹಿಸಿದ್ದರು. ಇವರೆಲ್ಲ ಚೆನ್ನಾಗಿ ಮಾತಾಡಿದರು. ಬಿ.ಎಂ. ವೆಂಕಟೇಶ್ ...ಷ್ಟು ಕಾಲದ ಅಭಿರುಚಿ, ಸಂಸ್ಕೃತಿಯ ಬಗ್ಗೆ ಮಾತಾಡಿದರೆ ಕೆ.ಸಿ.ಎನ್. ಚಂದ್ರು ವಿತರಣಕಾರನ ತೊಂದರೆ ...ವರಿಸಿದರು. ಕ್ಯಾಸೆಟ್‌ಗಳು ಸಿನಿಮಾ ಮಂದಿರಗಳಿಗೆ ಕೈಕೊಡುತ್ತಿರುವುದು ಇವರ ಮುಖ್ಯ ವ್ಯಥೆ. ಸಾ.ರಾ. ...ೀವಿಂದು ಮತ್ತು ಅಶೋಕ್ ಕನ್ನಡಪ್ರೇಮ ಕುರಿತು ಮಾತಾಡಿದರೆ ಶಿವರಾಮ್ ಸರ್ಕಾರದ ಫೈಲುಗಳ ...ಡಿ ಸಿನಿಮಾಗಳು ಮುಗ್ಗರಿಸುತ್ತಿರುವುದನ್ನು ವಿವರಿಸಿದರು. ಇವರಲ್ಲಿ ತುಂಬ ಕುತೂಹಲಕರವಾಗಿ ಕಾಣಿಸಿದ ...ಣ ರಾಜೇಂದ್ರಸಿಂಗ್ (ಬಾಬು). ಈತನ ತಂದೆ ಶಂಕರಸಿಂಗ್ ಮತ್ತು ತಾಯಿ ಪ್ರತಿಮಾದೇವಿಯ ಚಿತ್ರಗಳನ್ನು ...ಡುತ್ತ ಹದಿಹರೆಯ ಕಳೆದ ತಲೆಮಾರಿನವನು ನಾನು; ಈಗ ಈ ಉತ್ಸಾಹೀ ತರುಣ ರಾಜೇಂದ್ರ ಸಿಂಗ್‌ನನ್ನು ನೋಡುತ್ತಿದ್ದೇನೆ. ಕಲಿಯುವ ಅಪಾರ ಆಸೆಯ, ಬಹಳ ಓದಿದ ಹೆಮ್ಮೆಯ ಹುಡುಗ ಈತ. ಮೇಲುನೋಟಕ್ಕೆ ತಿಕ್ಕಲನಾಗಿ, ಸ್ವಪ್ರತಿಷ್ಠೆಯವನಾಗಿ ಕಾಣುವ ಈ ಬಾಬು ತುಂಬ ತಳಮಳವುಳ್ಳ ಮನುಷ್ಯ. ಒಮ್ಮೆ ಸರ್ಕಾರದ ನೆರವಿಗಾಗಿ ಹೊಗಳಿದ ಬಾಬು ಅದನ್ನು ಮರೆತು ಸರ್ಕಾರದ ದುಷ್ಟತನ ಕುರಿತು ಹೇಳತೊಡಗಿದ. ಆದರೆ ಈತನ ಇಂಗಿತ ನನಗೆ ಗೊತ್ತಿತ್ತು. ಸರ್ಕಾರ ಕರ್ನಾಟಕದಲ್ಲೇ ಬಹುಪಾಲು ಶೂಟಿಂಗ್ ಮಾಡಬೇಕೆಂದು ಕಡ್ಡಾಯ ಮಾಡಿದೆ; ಆದರೆ ಕೆ.ವಿ. ಅಯ್ಯರ್ ಅವರ 'ರೂಪದರ್ಶಿ' ಕಾದಂಬರಿಯನ್ನು ಕರ್ನಾಟಕದಲ್ಲೇ ಹೇಗೆ ಚಿತ್ರೀಕರಿಸುವುದು ಸಾಧ್ಯ? ಆ ಕತೆ ನಡೆಯುವುದೇ ಇಟಲಿಯಲ್ಲಿ!



ಈ ಬಾಬುವಿನ ಗೊಂದಲ ಮತ್ತು ಜಾಣತನವನ್ನು ನಾನು ಮೆಚ್ಚಿದ್ದಕ್ಕೆ ಇನ್ನೊಂದೆರಡು ಕಾರಣಗಳಿವೆ. ಹಿಂದೊಮ್ಮೆ ಈತ ಅನಗತ್ಯವಾಗಿ ನಮ್ಮ ಸಿನಮಾ ವರದಿಗಾರರೊಂದಿಗೆ ಕಾಲು ಕೆರೆದು ಜಗಳವಾಡಿದ್ದ. ಈತ ನನಗೆ ಈಗ ಅಂಥ ಜಗಳಗಂಟನಂಗೆ ಕಾಣಲಿಲ್ಲ. ಅಲ್ಲದೆ, ಅವತ್ತು ವಿಚಾರಸಂಕಿರಣಕ್ಕೆ ತನ್ನ ಭಾಷಣ ಬರೆದುಕೊಂಡುಬಂದಿದ್ದ ಒಬ್ಬನೇ ಒಬ್ಬ ಮನುಷ್ಯ ಈತ. ಬೇರೆಯವರು ಬರಿಗೈಲಿ ಕೈಬೀಸಿಕೊಂಡು ಬಂದು ಬಾಯಿಗೆ ಬಂದಿದ್ದು ಹೇಳಿದರೆ ಈತ ಕೂತು ಬರೆದಿದ್ದ.

ಈ ಸಂಕಿರಣಗಳು ಅಸಹ್ಯ ಅನ್ನಿಸಿದ್ದು ವಾರ್ತಾ ಇಲಾಖೆಯ ಅಧಿಕಾರಿಯ ನಿಲುವು ಮತ್ತು ಮಾತು. ಸಾವಿರಾರು ಕಾನೂನುಗಳನ್ನು ಮಾಡಿಕೊಂಡು ಚಿತ್ರನಿರ್ದೇಶಕರ, ನಿರ್ಮಾಪಕರ ಪ್ರಾಣ ತಿನ್ನುವ ಈ ಅಧಿಕಾರಿ ನಮ್ಮ ಟೀಕೆಗಳೆಲ್ಲವಕ್ಕೆ ಸಮಜಾಯಿಷಿ ಕೊಡಲು ಯತ್ನಿಸಿದ. ತಾವು ಸಬ್ಸಿಡಿ ಕೊಡಲು ಮಾಡಿಕೊಂಡಿರುವ ಕಾನೂನುಗಳೆಲ್ಲ ಒಳ್ಳೆಯವು ಎಂದು ವಾದಿಸತೊಡಗಿದ. ನನಗೆ ರೇಗಿಹೋಯಿತು. "ಅಲ್ರೀ, ಜನ ಸಿನಿಮಾ ನೋಡಿ ತೆರಿಗೆ ಕೊಟ್ಟ ದುಡ್ಡನ್ನ ಮರ್ಯಾದೆಯಿಂದ ಕೊಡುವುದು ಬಿಟ್ಟು ತಲೆಹರಟೆ ಮಾಡ್ತೀರಲ್ಲ? ಅದು ಕಥಾಚಿತ್ರವೇ, ಎಷ್ಟು ಉದ್ದ, ಸೆನ್ಸಾರ್ ಆಗಿದೆಯೇ-ಇತ್ಯಾದಿ ನೋಡಿ ಹಣ ಕೊಟ್ಟರೆ ನಿಮ್ಮ ತಲೆ ಹೋಗುತ್ತದೆಯೇ? ಇದೆಲ್ಲ ತರಲೆಗೆ ಒಂದೇ ಕಾರಣ-ನಿಮ್ಮಲ್ಲಿ ದುಡ್ಡಿಲ್ಲ; ತೆರಿಗೆಯಿಂದ ಬಂದ ಹಣವನ್ನು ಬೇರೆ ಬಾಬ್ತಿಗೆ ಬಳಸಿಕೊಂಡಿದ್ದೀರಿ. ಇನ್ನೊಂದು ಕಾರಣ, ನಿಮ್ಮಲ್ಲಿ ಸಂಸ್ಕೃತಿಯಾಗಲಿ ಮಾನವೀಯತೆಯಾಗಲಿ ಇಲ್ಲ, ಫೈಲುಗಳೇ ನಿಮ್ಮ ದೇವರುಗಳು" ಅಂತ ರೇಗಿದೆ.

ಅಕ್ಟೋಬರ್ 6, 1991

ಆತ್ಮಸಾಕ್ಷಿಯ ಕಾಲ

ಆತ್ಮಸಾಕ್ಷಿ ಅನ್ನೋದು ಅವರಿಗೆ ವಿಪರೀತ ಕಾಟ ಕೊಡಲು ಪ್ರಾರಂಭಿಸಿತು. ಒಂದು ದಿವಸ ಅಲ್ಲ, ಎರಡು ದಿವಸ ಅಲ್ಲ, ಪೂರಾ ನಾಲ್ಕು ತಿಂಗಳ ಹಿಂಸಾಕಾಂಡ ಅದು. ಮೊದಲೆಲ್ಲ ಹೀಗಾಗಿರಲಿಲ್ಲ. ಅದೆಲ್ಲೋ ವಿಹಾರಕ್ಕೊ, ವಿಶ್ರಾಂತಿಗೋ ಹೋಗಿದ್ದಿರಬೇಕು. ತಾನುಂಟೋ ಮೂರು ಲೋಕ ಉಂಟೋ ಅಂತ ಇತ್ತು. ಯಾವಾಗ ಲೋಕಾಯುಕ್ತರ ದಾಳಿ ಮನೆಯ ಮೇಲೆ ನಡೆಯಿತೋ ಅದರ ಹಿಂಸೆ ಪ್ರಾರಂಭ ಆಯ್ತು. ಇಂತಹ ದಾಳಿಗಳು ನಡೀತಾನೆ ಇರ್ತವೆ. ಎಲ್ಲರಿಗೂ ಆತ್ಮಸಾಕ್ಷಿಯ ಕಾಟ ಇರುವುದಿಲ್ಲ, ಮುಂದೊಂದು ದಿನ ಇದರ ಕಾಟ ಬಂದರೂ ಬರಬಹುದು ಅನ್ನುವವರು ಅದು ತಲೆ ಎತ್ತದಂತೆ ಮುಂಜಾಗರೂಕ ಕ್ರಮಗಳನ್ನು ಅನುಸರಿಸುತ್ತಾರೆಂಬುದು ಬಯಲಾಗಿದೆ.

ಇತ್ತೀಚಿನವರೆವಿಗೆ ಕರ್ನಾಟಕ ರಾಜ್ಯ ಲಾಟರಿ ರಾಜ್ಯ ಆಗಿತ್ತಲ್ಲಾ.... ಅದು ಇಂತಹವರಿಗೆ ಸುವರ್ಣ ಯುಗ ಆಗಿತ್ತು. ಮನೇಲಿರೋ ಚಳ್ಳೆ ಪಿಳ್ಳೆಗಳಿಗೂ ಲಾಟರಿ ಹೊಡೀತು ಅಂತ ದಾಖಲೆ ತೋರಿಸುತ್ತಿದ್ದರು. ಅರೆರೆ ಇದೇನು ಇದು ಸೋಜಿಗ, ಲಕ್ಷ್ಮಿ ಅನ್ನೋಳು ಚಂಚಲೆ ಅಂತೆ. ಅಂತಹದ್ದರಲ್ಲಿ ಒಂದೇ ಮನೆಯ ಗಂಡಹೆಂಡತಿ ಮಕ್ಕಳು ಮರಿಗೆಲ್ಲ ಲಾಟರಿ ಹೊಡೀತಾ ಬದ್ದದಲ್ಲ ಇವರೇನು ಲಕ್ಷ್ಮಿನ ಕಾಂಟ್ರಾಕ್ಟ್ ತಗಂಡಿದಾರ ಅನ್ನಿಸಬಹುದು. ತನಿಖಾಧಿಕಾರಿಗಳಿಗೆ ದಾಖಲೆ ಮುಖ್ಯ. ಅದನ್ನೇ ಅವರು ನಂಬೋದು. ಅದನ್ನ ಅವರು

ಅನೇಕ

▶ ಎಚ್.ಎಲ್. ಕೇಶವಮೂರ್ತಿ

ತೋರಿಸುತ್ತಿದ್ದರು. 'ಇವರು ಒಪ್ಪುತ್ತಿದ್ದರು. ಇಲ್ಲೊಬ್ಬ 'ಲಾಟರಿ ಸ್ಪೆಷ್ಟ' ಆಸಾಮಿ ಇದಾನೆ ಅಂತ ಆರೋಪ ಮುಕ್ತಗೊಳಿಸುತ್ತಿದ್ದರು.

ಈಗ ಅಂತಹ ಸುಭಿಕ್ಷ ಕಾಲ ಇಲ್ಲ, ಹಾಗಂತ ಲಕ್ಷ್ಮಿಯನ್ನು ಒಲಿಸಿಕೊಳ್ಳದೆ ಇರಲು ಅವರು ಅಲಂಕರಿಸಿದ ಸ್ಥಾನದ ಘನತೆಯ ಪ್ರಶ್ನೆ ಕಾಡುತ್ತೆ. ಇಂತಹವರಿಗೆ ಮಾರ್ಗೋಪಾಯ ತೋರಿಸಲೆಂದೇ ನಗರಗಳಲ್ಲಿ ಭಾರಿ ಭಾರಿ ವಕೀಲರು ಇದ್ದಾರಂತೆ. ಅಕ್ರಮ ಆಸ್ತಿ ಸಕ್ರಮಗೊಳಿಸುವ ಯೋಜನೆಗಳೇ ಇವರ ಬಳಿ ಇರುತ್ತದಂತೆ. ಇಂತಹವರ ಸಲಹೆ ಪಡೆದರೆ ಅವರ ಬಳಿಗೆ ಆತ್ಮಸಾಕ್ಷಿ ಯಾವತ್ತೂ ಸುಳಿಯುವುದಿಲ್ಲ ಎಂಬ ನಂಬುಗೆ ಇದೆ.

ಹೀಗೆ ಸಲಹೆ ಗುರಾಣಿ ಹಿಡಿದಿದ್ದವರೊಬ್ಬರ ಮನೆಯ ಮೇಲೆ ಲೋಕಾಯುಕ್ತ ದಾಳಿ ನಡೆಯಿತು. ಆಗ ಅವ 'ಮಾಡೋದು ಮಾಡಿದ್ರಿ ಇನ್ನೆರಡು ತಿಂಗಳು ಬಿಟ್ಟಾದರೂ ಮಾಡಬಾರದಿತ್ತಾ' ಅಂತ ಗೋಳಾಡಿದರಂತೆ. ಅರೆರೆ ಇದೇನು ಎರಡು ತಿಂಗಳ ನಂತರ ಅವರ ಆತ್ಮಸಾಕ್ಷಿ ಮರಣ ಹೊಂದುವುದೆ ಎಂದರೆ ಅದಲ್ಲವಂತೆ. ಎರಡು ತಿಂಗಳಿಗೆ ಅವರಿಗೆ ಉದ್ಯೋಗದಲ್ಲಿ ಬಡ್ತಿ ಲಭಿಸುತ್ತಿತ್ತಂತೆ. ಅಂದರೆ ಏನಾಯಿತು ಅವರಿಗೆ ತಲೆ ಕೆಟ್ಟೋಗಿರೋದು ದಾಳಿ ಆಯ್ತು ಅಂತ ಅಲ್ಲ ಪ್ರಮೋಷನ್ ಹೋಯ್ತಲ್ಲ ಅಂತ!

ನಮ್ಮ ಕಥಾನಾಯಕನಿಗೆ 'ಸಲಹಾ ಗು ರಾಣಿ' ಹಿಡಿಯುವ ಚಾಣಾಕ್ಷತೆ ಇಲ್ಲದಿದ್ದಿರಬಹುದು. ಆತ್ಮಸಾಕ್ಷಿಯ ಕಾಟ ಉತ್ಕಟಾವಸ್ಥೆಯನ್ನು ತಲುಪಿತು. ತಲೆ ಎತ್ತಿ ನಡೆಯುವುದೇ ದುಸ್ತರ ಆಯಿತು. ಮುಖ ತೋರಿಸಲೇ ಅವಮಾನ ಆಯಿತು. ಇದರಲ್ಲೇ ಕೊರಗಿ ಕೊರಗಿ ಅನ್ಯಮಾರ್ಗವೇ ತೋರದೆ ಕಚೇರಿಯಲ್ಲೇ ನೇಣು ಬಿಗಿದುಕೊಂಡರು. ಅಂತಹ ಮನುಷ್ಯನಿಗೆ ಇಂತಹ ಸಾವೆ ಅಂತ ಮರುಗಿತು ಸಿಬ್ಬಂದಿ. ಧರ್ಮರಾಯನಂತಹ ಮನುಷ್ಯ ಅಂತ ಕೊಂಡಾಡಿದರು. ಹಣದ ಮೇಲೆ ವ್ಯಾಮೋಹ ಇರಿಸಿಕೊಂಡಿರಲೇ ಇಲ್ಲ, ಎಲ್ಲರಂತೆ ಊರು ಕೊಳ್ಳೆ ಹೊಡೆದವರಲ್ಲ, ಆಯಕಟ್ಟಿನ ಸ್ಥಾನ ಅಲಂಕರಿಸಿದ್ದರೂ ಸ್ವಂತಕ್ಕೆ ಅಂತ ಏನೂ ಮಾಡಿಕೊಂಡವರೇ ಅಲ್ಲ, ಇರೋದೇನು, ಬೆಂಗಳೂರಿನಲ್ಲಿ ಎರಡೇ ಎರಡು ಮನೆ. ಜಯನಗರದಲ್ಲಿ ಒಂದೇ ಒಂದು ವಾಣಿಜ್ಯ ಸಂಕೀರ್ಣ. ಮನಸ್ಸು ಮಾಡಿದ್ದರೆ ಅಂತಹ ಹತ್ತು ಮಾಡಬಹುದಿತ್ತು. ಆದರೆ ಮಾಡಲಿಲ್ಲ, ಮಕ್ಕಳಿಗೆ ಬೇಕಲ್ಲ ಅಂತ ಒಂದು ಸೈಟು, ಒಂದು ನಿರ್ಮಾಣದ ಹಂತದ ಮನೆ. ಧರ್ಮಾತ್ಮ, ಧರ್ಮಾತ್ಮ ಎಂದು ಕೊಂಡಾಡಿದರು. ಮರಣಾನಂತರ ತನ್ನದೇ ದೇಹದ ಭಾಗಗಳನ್ನು ದಾನ ಮಾಡಬೇಕು ಎಂದು ಬರೆದಿದ್ದಾರೆ ಎಂದು ತಿಳಿದು ಎಲ್ಲರ ಕಣ್ಣೂ ಹನಿಗೂಡಿತು. ಆಸ್ಪತ್ರೆಗೆ ಅನಾಥಾಶ್ರಮಕ್ಕೆ ಹಣ ನೀಡುವಂತೆ ಸೂಚಿಸಿದ್ದಾರೆಂದು ತಿಳಿದಾಗಲಂತೂ ಎಲ್ಲರ ಹೃದಯವೂ ಕರಗಿ ನೀರಾಯಿತು. ಪುಣ್ಯಾತ್ಮ ಪುಣ್ಯಾತ್ಮ ಎಂದು ಕೊಂಡಾಡಿತು ಸಿಬ್ಬಂದಿ.

ಇಂತಹ ಧರ್ಮಾತ್ಮನ ಸಂಗತಿಯನ್ನು ವಿವರಿಸುತ್ತಿದ್ದಾಗ ತುಂಬ ಮನಸ್ಸು ಕೆಣಕಿತು. ಲೋಕಾಯುಕ್ತರ ದಾಳಿಯಿಂದ ಪ್ರಕ್ಷುಬ್ಧಗೊಂಡ ಆತ್ಮಸಾಕ್ಷಿ ಎಂಜಲು ಕಾಸನ್ನು ಜೇಯಾಹನಾದ ಎಂದು ಸ್ವೀಕರಿಸುವಾಗ ಸುಮ್ಮನಿತ್ತೆ? ಹೆಂಡತಿ ಮಕ್ಕಳು ಅಮಾಯಕರು, ಅವರಿಗೆ ಯಾವುದೇ ತೊಂದರೆ ನೀಡಬೇಡಿ ಎಂದು ಬರೆದಿದ್ದರ ಒಳ ಅರ್ಥವೇನು? ಮುಟ್ಟುಗೋಲಿನ ನಂತರವೂ ಲಕ್ಷಾಂತರ ರೂಪಾಯಿ ದಾನ ಮಾಡಲು ಸೂಚಿಸಿದ್ದರು ಎಂದಾದರೆ ಲೋಕಾಯುಕ್ತರಿಂದ ಮುಚ್ಚಿಟ್ಟ ಆಸ್ತಿ ಎಷ್ಟು? ಲೋಕಾಯುಕ್ತರು ಇನ್ನಷ್ಟು ಕೆದಕದಿರಲಿ, ಮುಟ್ಟುಗೋಲು ತೆರವುಗೊಳಿಸಲಿ ಎಂದೇ ಅಲ್ಲವೆ? ಹೀಗೆ ಹಾಳಾದ ತುಂಟತನ ಮುಂದುವರಿಸುತ್ತಾನೆ ಇತ್ತು....

ಅಲ್ಲಾ ಈ ಕಾರ್ಪೋರೇಷನ್ ಅಧಿಕಾರಿಗಳೇ ಯಾಕೆ ಇಂತಹ ಯಡವಟ್ಟು ಕೆಲಸ ಮಾಡಿಕೊಂಡು ಲೋಕಾಯುಕ್ತರ ಬಲೆಗೆ ಸಿಕ್ತಾರೆ ಅಂತ ಅಥವಾ ಎಲ್ಲಿ ಬಲೆ ಹಾಕಿದರೂ ಕಾರ್ಪೋರೇಷನ್ ತಿಮಿಂಗಲಗಳು ಬೀಳ್ತಾವೆ ಅನ್ನೋ ಖಾತರೀನಾ .....

ಬೇಲ್ ಔಟ್!

ಶ್ರೀಮಂತರ ಪಾಡು ನಾಯಿ ಪಾಡು. ಅವರು ಅನುಭವಿಸುತ್ತಿರೋ ತರಲೆ ತಾಪತ್ರಯ ನೋಡಿದರೆ ಶತ್ರುಗಳಿಗೂ ಬೇಡ ಇಂತಹ ಕಷ್ಟ ಅನ್ನಿಸುತ್ತೆ. ಇದು



ಇವತ್ತಿನದಲ್ಲ, ಕಾಲದಿಂದಲೂ ಇದ್ದದ್ದೆ. ಇದನ್ನು ಕಂಡೇ ಲಾಂಗೂಲಾಚಾರ್ಯರು 'ಕೋಟ್ಯಾಧಿಪತಿಯ ಕೋಟಲೆಗಳು' ಎಂಬ ಪ್ರಬಂಧವನ್ನು ಬಹಳ ಹಿಂದೆಯೇ ಬರೆದಿದ್ದರು. ಆಚಾರ್ಯರು ಹಲವು ವೃತ್ತಿಗಳಲ್ಲಿ ಕೈ ಆಡಿಸಿದ್ದರಂತೆ. ಹೀಗಾಗಿ ಕೋಟ್ಯಾಧಿಪತಿ ಆಗುವ ವಿಧಾನ ಅವರಿಗೆ ಮನದಟ್ಟಾಗಿತ್ತಂತೆ. ಆದರೂ ಅವರು ಪಡುವ ಪರಿಪಾಟಲು ನೋಡಿ ಆಗಲಿಲ್ಲವಂತೆ. ಹಲವಾರು ಶ್ರೀಮಂತ ಕಾಯಿಲೆಗಳು ಅವರನ್ನು ತಾವಾಗಿಯೇ ಅರಸಿ ಬರುತ್ತವಂತೆ. ಸಕ್ಕರೆ ಕಾಯಿಲೆ ಬಂದರೆ ಡಾಕ್ಟರು ವಾಕ್ ಮಾಡಿ ಅಂತಾರಂತೆ. ವಾಕ್ ಮಾಡಿಕೊಂಡು ಹೊರಟರೆ ಎದುರುಗಡೆಯಿಂದ ಟಾಕ್ ಮಾಡುವವರು ಬರುತ್ತಾರೆ. 'ಏನು ರಾಯರೆ ಕಾರ್ ತರಲಿಲ್ವೆ' ಅಂತ ಒಬ್ಬ ಕೇಳಿದರೆ, ಉತ್ತರ ಹೇಳುವಷ್ಟರಲ್ಲಿ ಇನ್ನೊಬ್ಬ ಕೇಳುತ್ತಾನಂತೆ– 'ಯಾಕೆ ರಾಯರೆ ಕಾರು ಮಾರಿಬಟ್ರ... ಛೆ, ಛೆ..' ಅಂತ ಸಂತಾಪ ಸೂಚಿಸುತ್ತಾರಂತೆ. ಹೀಗೆ ಶ್ರೀಮಂತರ ತಾಪತ್ರಯಗಳ ಪಟ್ಟೀನೇ ಕೊಡ್ತಾರೆ. ಅದು ಕಾರುಗಳ ಯುಗ. ಕಾರಿದ್ದವನೇ ದೊಡ್ಡ ಮನುಷ್ಯರು ಅನ್ನಿಸಿಕೊಳ್ಳುತ್ತಿದ್ದ ಕಾಲ. ಈಗ ಕಾರು ಅನ್ನೋದು ಕಾಲಕಸ ಆಗಿದೆ. ಜೇಬಿನಲ್ಲಿ ಒಂದು ಹತ್ತು ಸಾವಿರ ರೂ. ಇದ್ದರೆ ಸಾಕು. ಮಿಕ್ಕದ್ದಕ್ಕೆ ಲೋನು ಕೊಡ್ತಾರೆ. ಹೊಸ ಕಾರು ಎತ್ಕಂಡು ಬರಬಹುದು. ಈಗೇನಿದ್ದರೂ ಏರೋಪ್ಲೇನ್ ಕಾಲ. ಅದು ಇದ್ದವನೇ ಶ್ರೀಮಂತ. ಲಾಂಗೂಲಾಚಾರ್ಯರು ಜೀವಂತವಾಗಿದ್ದರೆ ಕೋಟ್ಯಾಧೀಶರ ಕೋಟಲೆಗಳು ಜೊತೆಗೆ ಏರೋಪ್ಲೇನ್ ಶ್ರೀಮಂತರ ಕೋಟಲೆಗಳೂ ಬರುತ್ತಿದ್ದವು ಎಂಬುದರಲ್ಲಿ ಸಂಶಯ ಇಲ್ಲ, ಯಾಕೆಂದರೆ ಅವರೂ ಈಗ ಬಲಿ ಕಷ್ಟಕ್ಕೆ ಸಿಗಾಕಿಕೊಂಡಿದ್ದಾರೆ. ನಮ್ಮನ್ನು ಈ ಸಂಕಷ್ಟದಿಂದ ಪಾರು ಮಾಡೋ ಸಿಂಗ್‌ಜಿ ಅಂತ ಹಲುಬುತ್ತಿದ್ದಾರೆ.

ಇತರರ ವಿಷಯ ಸರಿಯಾಗಿ ತಿಳಿಯದು. ನಮ್ಮ ವಿಜಯ ಮಲ್ಯ ಇದಾರಲ್ಲ, ಅದೇ ಕಿಂಗ್‌ಫಿಷರ್ ಏರ್‌ಲೈನ್ಸ್ ಮಾಲೀಕರು. ಸದಾ ವಿದೇಶಿ ಮದ್ಯ ಹಾಕ್ಕೊಂಡು ಚೆಂದುಳ್ಳಿ ಚೆಲುವೆಯರ ಜೊತೆ ವಿಮಾನದಲ್ಲಿ ಹಾರಾಡೋರು. ಏಕ್ ದಿನ ಕ್ರಿಕೆಟ್ ನೋಡೋಕೆ ಅಂತ ಮದ್ಯಮಾನಿನಿಯರ ಜೊತೆ ಹೋಗೋರು. ಅವರಿಗೆ ಕಷ್ಟ ಬಂದು ಕುಂತಿದೆಯಂತೆ! ಏನು ಅನ್ಯಾಯ ಪಾಪ. ಕ್ರಿಕೆಟ್ ಮ್ಯಾಚ್ ನೋಡದೆ, ಮದ ಮಾನಿನಿಯರು ಇಲ್ಲದೆ ಇರೋ ವಿಜಯಮಲ್ಯ ಸಾಹೇಬರನ್ನು ಊಹಿಸಿಕೊಳ್ಳಲೂ ಸಾಧ್ಯ ಇಲ್ಲ. ಅಂತಹ ಸ್ಥಿತಿಗೆ ಬರದಂತೆ ಕಾಪಾಡಿ ಅಂತ ಅವರ ಮೊರೆ.

ಇಂತಹ ಪರಿಸ್ಥಿತಿಗೆ ಸಾಹೇಬರು ಕಾರಣ ಅಲ್ಲವಂತೆ. ಆರ್ಥಿಕ ಕುಸಿತ ಅಂತೆ. ಇದರಿಂದಾಗಿ ವಿಮಾನದಲ್ಲಿ ಹಾರಾಡೋರು ದಿನೇ ದಿನೇ ಕಡಿಮೆಯಾಗ್ತಿದ್ದಾರಂತೆ. ಇದರ ಜೊತೆ ಇಂಧನ ದರ ಸಿಕ್ಕಾಪಟ್ಟೆ ಏರುತ್ತಿದೆಯಂತೆ. ತೆರಿಗೆಯಂತೂ ವಿಪರೀತ ಆಗಿದೆಯಂತೆ. ಹಿಂಗಾಗಿ ಕಳೆದ ಸಾಲಿನಲ್ಲಿ ಹತ್ತು ಸಾವಿರ ಕೋಟಿ ರೂ. ನಷ್ಟ ಅನುಭವಿಸಿದವಂತೆ ಖಾಸಗಿ ವಿಮಾನ ಸಂಸ್ಥೆಗಳು. ಹಣದ ಹೊಳೆ ಹರೀತಿದ್ದಾಗ ಸಾರ್ವಜನಿಕರಿಗೆ ಅಂತ ಏನಾದರೂ ಸಹಾಯಧನ ನೀಡಿದಿರಾ ಅಂದರೆ ಏರ್ ಇಂಡಿಯಾ ಬೇಲ್ ಔಟ್ ಮಾಡ್ಲಿಲ್ವ ಹಂಗೇ ನಮಗೂ ಮಾಡಿ ಅಂತ ಕುಂತವ್ರೆ. ಅಲ್ಲ ಅದು ಜನರದ್ದು. ಲಾಭ ಆಗಲಿ, ನಷ್ಟ ಆಗಲಿ ಜನರಿಗೇ ಸೇರುತ್ತಲ್ಲಾ ಅಂದ್ರೆ ಅದೆಲ್ಲ ಬೇಡ ನಮ್ಮ ಬೇಲ್‌ಔಟ್ ಮಾಡಿ ಅಂತ ಕೂಗ್ತಾ ಬಿದ್ದವ್ರೆ.

ಸರ್ಕಾರ ಇವರ ಕೂಗಿಗೆ ಕಿವಿಕೊಡಬಹುದು. ಎಷ್ಟೇ ಆಗಲಿ ದೊಡ್ಡವರ ಕೂಗು. ವಿಜಯಮಲ್ಯ ಅಂತಹವರು ಐಶಾರಾಮಿ ಜೀವನ ಬಿಟ್ಟು ಬದುಕುವುದನ್ನು ಅದು ನೋಡಲಾರದು. ಆರ್ಥಿಕ ಕುಸಿತದಿಂದ ಸಾವಿರಾರು ಕಾರ್ಖಾನೆಗಳು ಮುಚ್ಚಿವೆ. ಲಕ್ಷಾಂತರ ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ ನಿಜ. ಸುದ್ದಿ ಅವರನ್ನು ಇವರ ಜೊತೆಗೆ ಹೋಲಿಸಬಾರದು. ಕಷ್ಟವನ್ನೇ ಹಾಸಿ, ಕಷ್ಟವನ್ನೇ ಹೊದ್ದು ಬದುಕುವ ಜನ ಅವರು. ವಿಜಯಮಲ್ಯನಂತಹವರು ಹಾಗಲ್ಲವಲ್ಲ!

ಒಂದು ವೇಳೆ ಸರ್ಕಾರ ಬೇಲ್‌ಔಟ್ ಮಾಡದಿದ್ದರೆ?

ಆಗಸ್ಟ್ 18ರಂದು ಖಾಸಗಿ ವಿಮಾನಗಳ ಹಾರಾಟ ಇಲ್ಲ!

ಇದು ಬೆದರಿಕೆ ಅಲ್ಲವಂತೆ, ಸರ್ಕಾರದ ಗಮನ ಸೆಳೆಯಲಂತೆ!

ನಮ್ಮ ಘನ ಸರ್ಕಾರಕ್ಕೆ ಇವೆರಡೂ ಬಂದೇ ರೀತಿ ಬಿಡಿ. ಅದಲ್ಲ ಪ್ರಶ್ನೆ. ಈಗ ನಾವೇನು ಮಾಡಬೇಕು?

ಸರ್ಕಾರವನ್ನು ಪ್ರಾರ್ಥಿಸಬೇಕು.

ಏನಂತ?

ಇಂತಹ ನಯವಂಚಕರಿಂದ ನಮ್ಮನ್ನು ಬೇಲ್‌ಔಟ್ ಮಾಡಿ! ■

ಹೊಗಳಿಕೆ ತೆಗಳಿಕೆ

ಖಾಕಿಗಳ ಚೆಡ್ಡಿ ಬುದ್ಧಿ

ಬೆಂಗಳೂರಿನ ಬುಲೆಟ್ ರವಿಯ ಹಂತಕರಾಗಿರಲಿ ಅಥವಾ ಕೊಪ್ಪದ ಸೆಕ್ಸ್ ಸಿಡಿಯ ಗ್ಯಾಂಗ್ ಆಗಿರಲಿ, ಕರ್ನಾಟಕದಲ್ಲಿ ಈಗೀಗ ನಡೆಯುವ ಕೊಲೆ, ವಂಚನೆ, ಸ್ಕ್ಯಾಂಡಲ್– ಹೀಗೇ ಯಾವುದೇ ಅಪರಾಧವಿರಲಿ, ಅದನ್ನು ಪೊಲೀಸರು ಮುಚ್ಚಿ ಹಾಕಲು ಪ್ರಯತ್ನಿಸುತ್ತಿದ್ದಾರೆ ಎಂದಾದರೆ, ಆ ಅಪರಾಧದಲ್ಲಿ ಬಿಜೆಪಿ ಪಕ್ಷದವರ ಅಥವಾ ಯಾವುದಾದರೂ ಕೇಸರಿ ಸಂಘಟನೆಯವರ ಪಾತ್ರವಿದೆಯೆಂದೇ ಅರ್ಥ.

ಕೇಸರಿ ಸಂಘಟನೆಯವರು ನಡೆಸಿದ ಒಂದು ವಂಚನೆ ಹಾಗೂ ಕೊಲೆ ಪ್ರಕರಣದಿಂದ ನಮ್ಮೂರಿನ 200ಕ್ಕೂ ಹೆಚ್ಚು ನಿರುದ್ಯೋಗಿಗಳ ಭವಿಷ್ಯವೇ ಅಂಧಕಾರಮಯವಾಯಿತು. ನಮ್ಮ ಬೆಳಗಾವಿ ನಗರದಲ್ಲಿ ಒಂದು ಕೇಸರಿ ಗುಂಪು ಹಿಂದಿನ ಒಂದು ವರ್ಷದಿಂದ ನಿರುದ್ಯೋಗಿಗಳಿಗೆ ದೂರದ ಬೆಂಗಳೂರಿನ ಮಹಾನಗರ ಪಾಲಿಕೆಯಲ್ಲಿ ಮತ್ತು ರಾಜ್ಯ ನೀರಾವರಿ ಇಲಾಖೆಯಲ್ಲಿ ನೌಕರಿ ಕೊಡಿಸುವುದಾಗಿ ಆಮಿಷ ತೋರಿಸಿ, 200 ಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳಿಂದ ಮೂರು ಕೋಟಿ ರೂಪಾಯಿಗೂ ಹೆಚ್ಚು ವಸೂಲಿ ಮಾಡಿತ್ತು, ನಂತರ ನೌಕರಿ ಕೊಡಿಸದೇ ಮೋಸ ಮಾಡಿದ್ದನ್ನು ಅವರ ಏಜೆಂಟನೇ ವಿರೋಧಿಸಿ ಅಭ್ಯರ್ಥಿಗಳ ಹಣ ವಾಪಸು ಮಾಡಬೇಕೆಂದು ಹಠ ಹಿಡಿದ. ಆಗ ಈ ಕೇಸರಿ ವಂಚಕರ ಗುಂಪು ತಮ್ಮ ಆ ಏಜೆಂಟ್‌ನನ್ನೇ ದೂರದ ಹಳ್ಳಿಯೊಂದಕ್ಕೆ ಕರೆದುಕೊಂಡು ಹೋಗಿ ಕೊಲೆ ಮಾಡಿ ನೇತಾಡಿಸಿದ ಪ್ರಕರಣವನ್ನು "ಖಾಕಿಯೊಳಗೆ ಕಾವಿ ತೊಟ್ಟಿರುವ" ನಮ್ಮ ಬೆಳಗಾವಿ ಪೊಲೀಸರು, ಯಾವೊಂದು ತನಿಖೆ ಇಲ್ಲದೇ ಆತ್ಮಹತ್ಯೆ ಎಂದು ವರದಿ ಕೊಟ್ಟು ಫೈಲ್ ಮುಚ್ಚಿ ಬೆಳಗಾವಿಯ 200 ಕ್ಕೂ ಹೆಚ್ಚು ಬಡ ನಿರುದ್ಯೋಗಿಗಳು ಲಕ್ಷಾಂತರ ಕಳೆದುಕೊಂಡು ಬೀದಿಗೆ ಬೀಳುವಂತೆ ಮಾಡಿದರು.

ಸಾಧಾರಣ ಟೈಪಿಂಗ್ ಸಹ ಗೊತ್ತಿಲ್ಲದ ವ್ಯಕ್ತಿ ಜೀವನದಲ್ಲೆಂದೂ ಕಂಪ್ಯೂಟರ್ ಮುಟ್ಟದಿದ್ದ ವ್ಯಕ್ತಿ ಸರಿಯಾಗಿ ಕನ್ನಡ ಬರೆಯಲೂ ಗೊತ್ತಿರದಿದ್ದ ಕನ್ನಡೇತರ ವ್ಯಕ್ತಿ ಶುದ್ಧ ಕನ್ನಡ ಭಾಷೆಯಲ್ಲಿ, ಅದೂ ಕಲಿತಿರದ ಕಂಪ್ಯೂಟರ್‌ನಲ್ಲಿ ತನ್ನ ಆತ್ಮಹತ್ಯೆ ಪತ್ರವನ್ನು ಟೈಪ್ ಮಾಡಿಡಲು ಸಾಧ್ಯವೇ? ಕೊರಳಿಗೆ ಉರುಳು ಹಾಕಿಕೊಳ್ಳದೇ ಸೊಂಟಕ್ಕೆ ಹಗ್ಗ ಕಟ್ಟಿಕೊಂಡು ನೇತಾಡಿ ಯಾರಾದರೂ ಆತ್ಮಹತ್ಯೆ ಮಾಡಿಕೊಳ್ಳಲು ಸಾಧ್ಯವೆ? ಎಂದು ಕೇಸರಿ ಪೊಲೀಸರಿಗೆ ಬೆಳಗಾವಿ ಜನರು ಕೇಳಿದರೆ ಪೊಲೀಸರು ನಿರುತ್ತರ.

ಒಬ್ಬ ವಯಸ್ಸಾದ ವ್ಯಕ್ತಿಯನ್ನು ಮೂರು–ನಾಲ್ಕು ಜನರು ಗಟ್ಟಿಯಾಗಿ ಹಿಡಿದುಕೊಂಡು ಮತ್ತೊಬ್ಬನು ಆ ವ್ಯಕ್ತಿಯ ಕುತ್ತಿಗೆಗೆ ಹಗ್ಗ ಬಿಗಿದು ಕೊಂದರೆ, ಪೋಸ್ಟ್ ಮಾರ್ಟಮ್‌ನಲ್ಲಿ ಶವದೊಳಗಿನ ಕುರುಹುಗಳೆಲ್ಲಾ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಂತೆ ಇರುತ್ತವೆ ಎಂಬ ವಿಷಯ ಈಗ ಹಳ್ಳಿಯ ಅವಿದ್ಯಾವಂತರಿಗೂ ಗೊತ್ತು, ಆದರೆ ನಮ್ಮೂರಿನ ಕೇಸರಿ ಪೊಲೀಸರಿಗೆ ಈ ಸಾಧಾರಣ ವಿಷಯ ಗೊತ್ತಿಲ್ಲ, ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿ ತನ್ನ ಬಾಯಿಯೊಳಗೆ ಉಸಿರು ಕಟ್ಟುವಂತೆ ತಾನೇ ಬಟ್ಟೆ ತುರುಕಿಕೊಳ್ಳಲು ಸಾಧ್ಯವಿಲ್ಲ ಎಂಬ ಸಾಮಾನ್ಯ ಜ್ಞಾನವೂ ಪೊಲೀಸರಿಗಿಲ್ಲ! ನಿರುದ್ಯೋಗಿಗಳಿಗೆ ಕೋಟ್ಯಂತರ ವಂಚಿಸಿದ ಕೇಸರಿ ಕೊಲೆಗಾರರನ್ನು ರಕ್ಷಿಸಲೆಂದೇ ಪೊಲೀಸರು ಇಂತಹ ಅಜ್ಞಾನ, ಅಸಡ್ಡೆ ಪ್ರದರ್ಶಿಸುತ್ತಿದ್ದಾರೆ ಎಂದು ಜನರಿಗೆ ಗೊತ್ತಾಗಿದೆ.


ಈ ಕೊಲೆಗಾರರೇನಾದರೂ ಹಿಂದೂಗಳಾಗಿರದೇ ಅಲ್ಪಸಂಖ್ಯಾತ ಧರ್ಮದವರಾಗಿದ್ದರೆ, ಆಗ ಮಾತ್ರ ಈ ಕ್ರಿಮಿನಲ್ ಮನೋಸ್ಥಿತಿಯ ಕೇಸರಿ ಪಡೆಗಳು ಕೊಲೆಯಾದವನು 'ತಮ್ಮವನು' ಎಂದು ಕೃತ್ರಿಮ ಅಭಿಮಾನ ತೋರಿಸುತ್ತಾ ಕೋಮುಗಲಭೆ ಹುಟ್ಟು ಹಾಕುವ ಅವಕಾಶ ತಪ್ಪಿಸಿಕೊಳ್ಳುತ್ತಿರಲಿಲ್ಲ.

-ವಿರುಪಾಕ್ಷ ಬಿ. ಪಾಟೀಲ್ . ಬೆಳಗಾವಿ

(ನಿಮ್ಮ ಅಭಿಪ್ರಾಯಗಳನ್ನು lankesh70@rediffmail.com ಗೂ ಕಳಿಸಬಹುದು)


ಸೈನೈಡ್ ರಮೇಶ್ ಬಿಟ್ಟ ಎಲ್‌ಟಿಟಿಇ ಗ್ಯಾಸು!

"ಎಲ್‌ಟಿಟಿಇ ಪ್ರಭಾಕರನ್ ನಂಗೆ ತುಂಬಾ ಇಷ್ಟ. ನನ್ನ ಸಿನಿಮಾ ನೋಡಿ ನೇರವಾಗಿ ನನಗೆ ಫೋನ್ ಮಾಡಿದ ಪ್ರಭಾಕರ್ ನಲವತ್ತು ನಿಮಿಷ ನನ್ನೊಂದಿಗೆ ಮಾತನಾಡಿ, ನನ್ನನ್ನು ಕೊಂಡಾಡಿದರು. ಹೆಂಡತಿ ಮಕ್ಕಳ ಸಮೇತ ಶ್ರೀಲಂಕಾಗೆ ಬಂದು ನಮ್ಮ ಮನೆಯಲ್ಲಿ ಊಟ ಮಾಡಿಕೊಂಡು ಹೋಗಬೇಕು ಎಂದಿದ್ದರು. ಛೇ... ಈಗ ನೋಡಿದ್ರೆ ಹೀಗಾಗ್ಬಿಟ್ಟಿದೆ..." ಹೀಗೆ ಬೆಂಗಳೂರಿನಲ್ಲಿ ಕುಳಿತು ಕಂಬಿಯೇ ಇಲ್ಲದೇ ರೈಲು ಬಿಡುತ್ತಿರುವ ವ್ಯಕ್ತಿಯ ಹೆಸರು 'ಸೈನೇಡ್' ರಮೇಶ್ ಅಲಿಯಾಸ್ ಗ್ಯಾಸ್ ರಮೇಶ್.



'ಸಂತೋಷ' ಚಿತ್ರದಿಂದ ಪೂರ್ಣ ಪ್ರಮಾಣದ ನಿರ್ದೇಶಕನಾಗಿ ನಂತರ 'ಸೈನೆಡ್' ಚಿತ್ರದ ಮೂಲಕ ಸಿಕ್ಕಾಪಟ್ಟೆ ಹೆಸರು ಮಾಡಿಕೊಂಡಾತ ಈ ರಮೇಶ್. ತಮಾಷೆಯೆಂದರೆ ತನ್ನ ಮೂರನೇ ಚಿತ್ರ 'ಮಿಂಚಿನ ಓಟ' ಮುಗಿಸುವ ಹೊತ್ತಿಗೆ ರಮೇಶ್‌ಗೆ ಸಿನಿಮಾ ಮೇಲಿನ ಉತ್ಸಾಹಕ್ಕಿಂತ ಪ್ರಚಾರದ ಹಪಹಪಿಯೇ ಹೆಚ್ಚಾಗಿತ್ತು. 'ಹಾಲಿವುಡ್ ಪಿಚ್ಚರುಗಳೂ ನನ್ನ ಸಿನಿಮಾ ಮುಂದೆ ಏನೂ ಇಲ್ಲ...' ಎಂಬಂತೆ ಮಾತನಾಡಿದ್ದ ರಮೇಶರ 'ಮಿಂಚಿನ ಓಟ' ಒಂದೇ ವಾರಕ್ಕೆ ಮುಗುಚಿಬಿದ್ದದ್ದನ್ನು ನೋಡಿ ಜನ ನಕ್ಕಿದ್ದರು. ಆಮೇಲೆ 'ಸೈನೆಡ್' ಸಿನಿಮಾವನ್ನು ಬಾಲಿವುಡ್‌ನಲ್ಲಿ ಮಾಡುತ್ತೀನಿ, ಬಿಗ್ ಬಿ ಅಮಿತಾಬ್ ನಟಿಸಲು ಒಪ್ಪಿದ್ದಾರೆ. ಇನ್ನೇನು ಶೂಟಿಂಗ್ ಶುರು ಆಗಿಯೇ ಬಿಡುತ್ತೆ...' ಎಂದೆಲ್ಲಾ ಥೋಡು ಬಿಟ್ಟು ಪುಟಗಟ್ಟಲೆ ಪ್ರಚಾರ ಪಡೆದಿದ್ದರು ರಮೇಶ್.

ಸದ್ಯ 'ಪೊಲೀಸ್ ಕ್ವಾಟ್ರಸ್' ಎಂಬ ಇನ್ನೊಂದು ಚಿತ್ರವನ್ನು ಮುಗಿಸಿರುವ ರಮೇಶ್ ಈಗ ಪಬ್ಲಿಸಿಟಿ ಪಡೆಯಲು ಮತ್ತೊಂದು ಹೊಸ ವರಸೆಯನ್ನು ಪ್ರಾರಂಭಿಸಿದ್ದಾರೆ. ಅದೇನಪ್ಪಾ ಎಂದ್ರೆ, ಮೊನ್ನೆಮೊನ್ನೆಯಷ್ಟೇ ಜೀವಬಿಟ್ಟ ಈಳಂನ ಕನಸುಗಾರ ಪ್ರಭಾಕರನ್ ಕುರಿತ ಸಿನಿಮಾವನ್ನು ರಮೇಶ್ ನಿರ್ದೇಶಿಸುತ್ತಾರಂತೆ. 'ಕನ್ನಡದಲ್ಲಾ?' ಅಂತ ಪ್ರಶ್ನಿಸಬೇಡಿ. ಯಾಕೆಂದರೆ ಆ ಸಿನಿಮಾ ಇಂಗ್ಲಿಷ್ ಮತ್ತು ತಮಿಳು ಭಾಷೆಗಳಿಗೆ ಮಾತ್ರ ಸೀಮಿತವಂತೆ. ಇಡೀ ತಮಿಳುನಾಡಿನ ಪ್ರತಿಭಾವಂತ ನಿರ್ದೇಶಕರೆಲ್ಲಾ ಮೀಟಿಂಗ್ ಮಾಡಿ "ಪ್ರಭಾಕರನ್ ಬಗೆಗಿನ ಸಿನಿಮಾ ಮಾಡುವುದಿದ್ದರೆ 'ಸೈನೆಡ್' ರಮೇಶರಿಂದ ಮಾತ್ರ ಸಾಧ್ಯ'' ಎಂದು ಠರಾ ಬರೆದುಬಿಟ್ಟಿದ್ದಾರಂತೆ.



"'ಪ್ರಭಾಕರನ್' ಸಿನಿಮಾಗಾಗಿ ನಾನು ಹಗಲೂರಾತ್ರಿ ಶ್ರಮಿಸುತ್ತಿದ್ದೀನಿ. ಶ್ರೀಲಂಕಾದಲ್ಲಿರುವ ನನ್ನ ಪತ್ರಕರ್ತ ಮಿತ್ರರು ನನಗೆ ಬೇಕಿರುವ ಎಲ್ಲಾ ಮೆಟೀರಿಯಲ್ಸ್ ಒದಗಿಸುತ್ತಿದ್ದಾರೆ. ಪ್ರಭಾಕರನ್ ಬಗ್ಗೆ ಮಾಹಿತಿ ತೆಗೆಯುವುದು ಅಂದ್ರೆ ಸುಮ್ನೇ ಮಾತಾ..?'' ಎನ್ನುತ್ತಾ ತನ್ನ ಮುಂದೆ ಕುಳಿತವರ ತಲೆ ಮೇಲೆ ಕಲರ್ ಕಲರ್ ಕಾಗೆ ಹಾರಿಬಿಡುತ್ತಿದ್ದಾರೆ ರಮೇಶ್.

"ಯಾಕೆ? ಕನ್ನಡದಲ್ಲಿ ಪ್ರಭಾಕರನ್ ಮತ್ತು ಎಲ್‌ಟಿಟಿಇ ಕುರಿತ ಯಾವ ಮಾಹಿತಿಯೂ ಇಲ್ಲವಾ?'' ಎಂದು ಪ್ರಶ್ನಿಸಿದರೆ, "ಅಯ್ಯೋ ಚೆನ್ನಾಗ್ ಕೇಳಿದ್ರಿ.. ನಮ್ಮ ಕನ್ನಡದೋರ್‍ಗೆ ಅಷ್ಟೆಲ್ಲಾ ಬರೆಯೋ ತಲೆ ಇದ್ಯಾ? ಅಂಥೋರು ಯಾರಿದ್ದಾರೆ ಹೇಳಿ?'' ಎಂದು ಪ್ರಚಂಡ ಮೇಧಾವಿಯಂತೆ ಮರು ಪ್ರಶ್ನೆ ಹಾಕುತ್ತಾರೆ.... ಹೀಗೆ ರಮೇಶ್ ಖಂಡಾಪಟ್ಟೆ ಮಾತನಾಡುವಾಗಲೇ ಗೊತ್ತಾಗಿಬಿಡುತ್ತೆ, ಈತ ಬಿಡುತ್ತಿರುವುದು ಬರೀ ಗ್ಯಾಸು ಎಂದು!

ಯಾಕೆಂದರೆ ಪ್ರಭಾಕರನ್ ಬಗ್ಗೆ ಕನ್ನಡದಲ್ಲಿ ಮಾಹಿತಿಗೇನೂ ಕೊರತೆ ಇಲ್ಲ. ಈಳಂ, ಎಲ್‌ಟಿಟಿಇ ಮತ್ತು ಪ್ರಭಾಕರನ್ ಬಗ್ಗೆ ಸಮಗ್ರ ಚಿತ್ರಣವನ್ನು ಕೊಡುವ, ಕುಮಾರ್ ಬುರಡಿಕಟ್ಟಿ ಬರೆದಿರುವ 'ಓ ಈಳಂ' ಎಂಬ ಪುಸ್ತಕ ಈಗ ಬಿಡುಗಡೆಗೊಂಡು ಕರ್ನಾಟಕದ ಮೂಲೆಮೂಲೆಗಳಲ್ಲಿ ದಾಖಲೆ ಸಂಖ್ಯೆಯಲ್ಲಿ ಮಾರಾಟವಾಗುತ್ತಿದೆ. ಇಂತಹ ಒಂದು ಸಮಗ್ರ ಪುಸ್ತಕ ಬೇರೆ ಭಾಷೆಗಳಲ್ಲಿರಲಿ, ತಮಿಳಿನಲ್ಲೂ ಬಂದಿಲ್ಲ ಎಂದೇ ತಮಿಳರು ಹೇಳುತ್ತಿದ್ದಾರೆ. ಹೀಗಿರುವಾಗ "ಕನ್ನಡದಲ್ಲಿ ಪ್ರಭಾಕರನ್ ಕುರಿತ ಮಾಹಿತಿಯೇ ಇಲ್ಲ... ಶ್ರೀಲಂಕಾ ಮತ್ತು ತಮಿಳುನಾಡು ಮೂಲದಿಂದ ಮಾಹಿತಿ ಪಡೆದು ಸಿಕ್ಕಾಪಟ್ಟೆ ರಿಸರ್ಚ್ ಮಾಡುತ್ತಿದ್ದೇನೆ...'' ಎಂಬಿತ್ಯಾದಿಯಾಗಿ ಭೋಂಗು ಬಿಡುತ್ತಿರುವ ರಮೇಶ್ ಪ್ರಭಾಕರನ್ ಬಗೆಗಿನ ಸಿನಿಮಾವನ್ನು ನಿರ್ದೇಶಿಸುವುದಿರಲಿ, ಕನಿಷ್ಠ ಸುಳ್ಳು ಹೇಳುವುದನ್ನಾದರೂ ಕೊಂಚ ನಂಬುವಂತೆ ಹೇಳಬೇಕಿದೆ! ಇಲ್ಲದಿದ್ದರೆ ಇವರ ಮಾತು ಕೇಳಿಸಿಕೊಂಡವರು ನಗಬಾರದ ಜಾಗದಿಂದ ನಕ್ಕುಬಿಡುತ್ತಾರೆ. ■



ಸಿನಿಮಾ ಸನ್ಮಾನ!


ಮುಂದಿನವಾರ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಅಭಿನಂದಿಸಲು ಚಲನಚಿತ್ರ ವಾಣಿಜ್ಯ ಮಂಡಳಿ ದೊಡ್ಡ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಚಿತ್ರರಂಗದ ಎಲ್ಲಾ ಸಂಘ ಸಂಸ್ಥೆಗಳು ಒಟ್ಟು ಸೇರಿ ಅರಮನೆ ಮೈದಾನದಲ್ಲಿ ಯಡ್ಡಿಯನ್ನು ಸನ್ಮಾನಿಸುವುದಕ್ಕೆ ಕಾರಣ ಈ ಹಿಂದೆ ಯಾವ ಮುಖ್ಯಮಂತ್ರಿಯೂ ಚಿತ್ರರಂಗದವರ ಬೇಡಿಕೆಗಳನ್ನು ಈಡೇರಿಸದೇ ಇದ್ದದ್ದನ್ನು ಯಡ್ಡಿ ಈಡೇರಿಸಿರುವುದು.

ಯಡ್ಡಿ ಬಂದ ನಂತರ ಸಿನಿಮಾ ಅಕಾಡೆಮಿ ಸ್ಥಾಪನೆಯಾಯಿತು. ಸಬ್ಸಿಡಿ ಪಡೆಯುವ ಚಿತ್ರಗಳ ಸಂಖ್ಯೆ ಇಪ್ಪತ್ತರಿಂದ ಐವತ್ತಕ್ಕೇರಿತು. ದಶಕಗಳಿಂದ ಗೂಂಡಾ ಕಾಯ್ದೆ ಜಾರಿಗೆ ತನ್ನಿ ಎಂಬ ಉದ್ಯಮದವರ ಕೂಗಿಗೆ ಯಡ್ಡಿ 'ಎಸ್' ಎಂದಿದ್ದಾರೆ. ಡಾ. ರಾಜ್ ಸಮಾಧಿ ಕಾಮಗಾರಿಗೆ ಚಾಲನೆ ನೀಡಿದ್ದಾರೆ. ಇದೀಗ ಕಂಠೀರವ ಪುನಶ್ಚೇತನಕ್ಕೆ ಕೈಹಾಕಿದ್ದಾರೆ. ಇದೆಲ್ಲಾ ಮೆಚ್ಚಬೇಕಾದದ್ದೆ.

ಆದರೆ ವಾಸ್ತವವಾಗಿ ಇನ್ನು ಮುಂದೆ ಯಾವುದೇ ಬೇಡಿಕೆಗಳನ್ನೂ ಸರ್ಕಾರದ ಮುಂದೆ ಇಡಲಾಗದಂತಹ ಸ್ಥಿತಿಯಲ್ಲಿದೆ ವಾಣಿಜ್ಯ ಮಂಡಳಿ. ಯಡ್ಡಿಯನ್ನು ಸನ್ಮಾನಿಸುವುದಕ್ಕಿಂತ ಚಿತ್ರರಂಗದವರೇ ಒಟ್ಟು ಸೇರಿ ತಾವು ಮುಂದೇನು ಮಾಡಬೇಕು ಎಂದು ಆತ್ಮಾವಲೋಕನ ಮಾಡಿಕೊಳ್ಳಲು ಇದು ಸರಿಯಾದ ಸಮಯ ಎನ್ನಬಹುದು.


ಉಪ್ಪಿ ಹಣೆಗೆ ರಾಮು ನಾಮ!

ಉಪೇಂದ್ರ ಮತ್ತು ನಿರ್ಮಾಪಕ ರಾಮು ಈಗ ಪರ್ಮನೆಂಟಾಗಿ ಬೇರಾಗಿದ್ದಾರೆ.



ಉಪೇಂದ್ರನ ಸಿನಿಮಾಗಳನ್ನು ನೆಚ್ಚಿಕೊಂಡು ತೆಗೆದೇ ಬರ್ಬಾದ್ ಆದ ರಾಮು ಈಗ ಉಪೇಂದ್ರನಿಗೇ ನಾಮ ಇಟ್ಟಿರುವುದೇ ಇದಕ್ಕೆ ಕಾರಣ.

ರಾಮು ನಿರ್ಮಾಣದ 'ಗೋಕರ್ಣ...ಟೋ ಶಂಕರ್' ಮತ್ತು 'ಮಸ್ತಿ' ಎರಡು ಚಿತ್ರಗಳೂ ಬಾಕ್ಸ್ ಆಫೀಸಿನಲ್ಲಿ ಸೋತಿದ್ದರಿಂದ ಅನುಕಂಪದ ಆಧಾರದ ಮೇಲೆ ಉಪೇಂದ್ರ ರಾಮು ಅವರಿಗೆ 'ರಜನಿ' ಚಿತ್ರಕ್ಕೆ ಕಾಲ್‌ಶೀಟ್ ನೀಡಿದ್ದರು. ಸದ್ಯ ಉಪೇಂದ್ರನ ಸಂಭಾವನೆ ಹತ್ತಿರತ್ತಿರ ಎರಡು ಕೋಟಿಯಿದ್ದರೂ ರಾಮುಗಾಗಿ ಉಪ್ಪಿ ಬರೀ ಎಂಬತ್ತು ಲಕ್ಷಕ್ಕೆ ಸಿನಿಮಾ ಮಾಡಿಕೊಡುವುದಾಗಿ ಒಪ್ಪಿದ್ದರಂತೆ. ಅಷ್ಟೇ ಅಲ್ಲದೆ ತನ್ನದೇ ನಿರ್ದೇಶನದ ಹೊಸ ಚಿತ್ರವನ್ನು ರಾಮು ಬ್ಯಾನರಿಗೇ ಮಾಡಿಕೊಡುವುದಾಗಿಯೂ ಉಪ್ಪಿ ಮಾತು ಕೊಟ್ಟಿದ್ದರಂತೆ. 'ರಜನಿ' ಚಿತ್ರದಲ್ಲಿ ನಟಿಸಿದ್ದಕ್ಕೆ ಉಪ್ಪಿಗೆ ಬರಬೇಕಿದ್ದ 40 ಲಕ್ಷ ಬ್ಯಾಲೆನ್ಸ್ ದುಡ್ಡಿಗೆ ರಾಮು ಈಗ ನಾಮ ಇಕ್ಕಿದ್ದಾರಂತೆ. ಕೇಳಿದರೆ, "ನೀನು ನಟಿಸಿದ 'ದುಬೈ ಬಾಬು' ಚಿತ್ರ ಹಳ್ಳ ಹಿಡಿದಿದೆ. ನಿನಗೆ ಈಗ ಮಾರ್ಕೆಟ್ಟೇ ಇಲ್ಲ, ಏನೇ ಮಾಡಿದರೂ ನಲವತ್ತು ಲಕ್ಷ ಕೊಡಕಾಗಲ್ಲ'' ಎಂದು ಕೈ ಎತ್ತಿಬಿಟ್ಟಿದ್ದಾರೆ ರಾಮು. ಈ ಸಂಬಂಧ ಉಪ್ಪಿ ಮತ್ತು ರಾಮು ನಡುವೆ ಹಲವಾರು ಸುತ್ತಿನ ಮಾತುಕತೆಯೂ




ನಡೆದಿದೆ. ಕಳೆದ ತಿಂಗಳು ಬ್ಯಾಂಕಾಕ್‌ನಲ್ಲಿ 'ರಜನಿ' ಚಿತ್ರದ ಹಾಡುಗಳ ಚಿತ್ರೀಕರಣ ನಡೆದಾಗ, ಅಲ್ಲೂ ಒಂದಷ್ಟು ಸುತ್ತಿನ ರಾಜಿಕಬೂಲಿ ಪ್ರಕ್ರಿಯೆಗಳು ನಡೆದಿದ್ದವು. ಎಷ್ಟೇ ಸಂಧಾನದ ಮಾತುಕತೆ ನಡೆದರೂ ಇವರ ನಡುವಿನ ವ್ಯವಹಾರದ ಜಗಳ ಮಾತ್ರ ಬಗೆಹರಿದಿಲ್ಲ.

ಇನ್ನು ರಾಮು ಮತ್ತು ತನ್ನ ನಡುವಿನ ಕಿತ್ತಾಟ ಹೊರಗಿನವರಿಗೆ ಗೊತ್ತಾದರೆ 'ದುಬೈ ಬಾಬು'ನಿಂದ ಕುಗ್ಗಿರುವ ತನ್ನ ಮಾರ್ಕೆಟ್ ಮತ್ತಷ್ಟು ಪಾತಾಳ ಸೇರಲಿದೆ ಎಂಬ ಕಾರಣಕ್ಕೆ ಉಪ್ಪಿ ಕೂಡಾ ಇದನ್ನು ದೊಡ್ಡದಾಗಿ ಬೆಳೆಯಲು ಬಿಟ್ಟಿಲ್ಲ. ಬದಲಿಗೆ ರಾಮುಗೆ ಮಾಡಿಕೊಡಲು ಒಪ್ಪಿದ್ದ ತನ್ನ ನಿರ್ದೇಶನದ ಹೊಸ ಚಿತ್ರ 'ಸೂಪರ್' (ಸಂಕೇತ) ಅನ್ನು ಈಗ ಮತ್ತೊಬ್ಬ ನಿರ್ಮಾಪಕನಿಗೆ ನೀಡಲು ಮುಂದಾಗಿದ್ದಾರೆ.

ರಾಮು ಜಾಗಕ್ಕೆ ರಾಕ್!

ಮೊನ್ನೆ ವರಮಹಾಲಕ್ಷ್ಮಿ ಹಬ್ಬದ ದಿನ ಎಲ್ಲಾ ಪತ್ರಿಕೆಗಳಲ್ಲಿ ತಮ್ಮ ಹೊಸ ಚಿತ್ರದ ಬಗ್ಗೆ ಉಪೇಂದ್ರ ಜಾಹೀರಾತುಗಳನ್ನು ನೀಡಿದ್ದರು. ಅದರಲ್ಲಿ ಕಥೆ, ಚಿತ್ರಕಥೆ, ನಿರ್ದೇಶನಕ್ಕೆ ತಮ್ಮ ಹೆಸರನ್ನೇ ಹಾಕಿಕೊಂಡಿದ್ದ ಉಪ್ಪಿ ನಿರ್ಮಾಪಕರ ಹೆಸರನ್ನು ಮಾತ್ರ ಸೂಚಿಸಿರಲಿಲ್ಲ. ಈಗ ಗೊತ್ತಾಗಿರುವ ವಿಚಾರವೆಂದರೆ ರಾಮುಗಾಗಿ ನಿರ್ದೇಶಿಸಬೇಕಿದ್ದ 'ಸೂಪರ್' ಚಿತ್ರದ ನಿರ್ಮಾಣವನ್ನು ಉಪ್ಪಿ ರಾಕ್‌ಲೈನ್ ವೆಂಕಟೇಶ್‌ಗೆ ವಹಿಸಿದ್ದಾರಂತೆ. ●



ಮುಂದುವರಿದ ಪ್ರೇಮ ಕದನ!



ಉಪೇಂದ್ರ ಮತ್ತೆ ಸುದ್ದಿಯಲ್ಲಿದ್ದಾರೆ. ಅವರ ನಿರ್ದೇಶನದ ಚಿತ್ರ ಸೆಟ್ಟೇರಲಿದೆ ಎಂಬ ಜಾಹಿರಾತುಗಳು ಪತ್ರಿಕೆಗಳಲ್ಲಿ ಕಾಣಿಸಿಕೊಂಡಿವೆ. ಉಪ್ಪಿ ಅಭಿಮಾನಿಗಳಲ್ಲಿ ಈ ಚಿತ್ರದ ಜಾಹಿರಾತು ಹೊಸ ಪುಳಕವನ್ನುಂಟುಮಾಡಿದೆ. ಇದಕ್ಕೆ ಕಾರಣ ಆ ಚಿತ್ರದ ಟೈಟಲ್.

ಈ ಹಿಂದೆ '?', 'ಸ್ವಸ್ತಿಕ್', 'ಶ್!', 'ಓಂ', 'ಸ್ಟಾರ್' ಮೊದಲಾದ ಚಿತ್ರವಿಚಿತ್ರ ಶೀರ್ಷಿಕೆಗಳನ್ನು ನೀಡಿದ್ದ ಉಪ್ಪಿ ಈ ಬಾರಿ ತಮ್ಮ ಹಳೆಯ ಗಿಮಿಕ್ ಅನ್ನು ಮಾಡಿ ಇನ್ನೂ ವಿಚಿತ್ರವಾದ ಶೀರ್ಷಿಕೆ ನೀಡಿದ್ದಾರೆ. ಕೈ ಬೆರಳುಗಳನ್ನು ಮಡಚಿ 'ಸೂಪರ್' ಎಂದು ಹೇಳುವ ಸಂಕೇತವನ್ನು ಉಪ್ಪಿ ತನ್ನ ಚಿತ್ರಕ್ಕೆ ಶೀರ್ಷಿಕೆಯಾಗಿ ನೀಡಿದ್ದಾರೆ.

'ಇಂತಹ ಗಿಮಿಕ್‌ಗಳನ್ನೆಲ್ಲ ತಲೆನೆಟ್ಟಗಿಲ್ಲದವರು ಮಾತ್ರ ಮಾಡಲು ಸಾಧ್ಯ' ಎಂದು ಹೇಳಬೇಕಾಗುತ್ತದೆ. ಸಂಕೇತಗಳೇ ಶೀರ್ಷಿಕೆಗಳಾದರೆ ಇದನ್ನು ಗಿಮಿಕ್ ಬದಲು ಉಪ್ಪಿಯ ಕಳಪೆ ಅಭಿರುಚಿ ಎನ್ನಬೇಕಾಗುತ್ತದೆ. ಶೀರ್ಷಿಕೆಯಿರುವುದು ಸುಲಭವಾಗಿ ಪ್ರೇಕ್ಷಕರಿಗೆ ಅರ್ಥವಾಗಲು ಎಂಬ ಸಾಮಾನ್ಯ ಅಂಶ ಉಪ್ಪಿ ಅರಿಯದಾದರೆ?

ಇನ್ನೂ ವಿಚಿತ್ರವೆಂದರೆ ಈಗ ಈ ಶೀರ್ಷಿಕೆ ಹೊಸ ವಿವಾದ ಮತ್ತು ಚರ್ಚೆಯನ್ನು ಹುಟ್ಟುಹಾಕಿದೆ. ಅದೇನೆಂದರೆ, ಎರಡು ವರ್ಷದ ಹಿಂದೆ ಉಪ್ಪಿಯ ಹಳೆಯ ಗೆಳತಿ ಪ್ರೇಮಾ 'ಆರೋಗ್ಯ' ಹಾಲಿಗೆ ನೀಡಿದ ಜಾಹಿರಾತಿನಲ್ಲಿ ಇದೇ ರೀತಿ ಕೈಯಲ್ಲಿ 'ಸೂಪರ್' ಎಂಬ ಸಂಕೇತವನ್ನು ನೀಡಿದ್ದರು. ಸಾಧಾರಣವಾಗಿ ಉಪ್ಪಿ ಮತ್ತು ಪ್ರೇಮಾ ನಡುವೆ ಈ ರೀತಿಯ ಪರೋಕ್ಷವಾದ ಯುದ್ಧ ನಡೆಯುತ್ತಲೇ ಇರುವುದು ಅಭಿಮಾನಿಗಳಿಗೆ ಗೊತ್ತೇ ಇದೆ. ಉಪ್ಪಿ 'ಎ' ಚಿತ್ರದಲ್ಲಿ ನಟಿಸಿದಾಗ ಪ್ರೇಮಾ 'Z' ಚಿತ್ರದಲ್ಲಿ ಕಾಣಿಸಿಕೊಂಡಿದ್ದರು. ಉಪ್ಪಿ ಉದಯವಾಣಿ ಪತ್ರಿಕೆಗೆ ಬ್ರಾಂಡ್ ಅಂಬಾಸಿಡರ್ ಆದಾಗ ಪ್ರೇಮಾ ವಿಜಯ ಕರ್ನಾಟಕದ ರೂಪದರ್ಶಿಯಾಗಿದ್ದಳು. ಉಪ್ಪಿ ಕೆಎಂಎಫ್ ಹಾಲಿನ ಮಾಡೆಲ್ ಆದಾಗ ಪ್ರೇಮಾ ತಮಿಳುನಾಡಿನ ಆರೋಗ್ಯ ಹಾಲಿಗೆ ಮಾಡೆಲ್ ಆದಳು. ಹೀಗೆ ಅವರಿಬ್ಬರ ನಡುವೆ ಆರೋಗ್ಯಪೂರ್ಣ ಪೈಪೋಟಿ ಮತ್ತು ಕದನ ನಡೆಯುತ್ತಲೇ ಇದೆ. ಬಹುಶಃ ಉಪ್ಪಿಯ ಈ ಚಿತ್ರದ ಶೀರ್ಷಿಕೆಯನ್ನು ನೋಡಿದರೆ ಇದು ಅವರಿಬ್ಬರ ನಡುವಿನ ಕದನದ ಮುಂದುವರಿದ ಭಾಗವಿರಬಹುದೇ ಎಂದೆನಿಸದೇ ಇರದು! ●

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 19-08-2009 RNI No. KARKAN2005/14



ಮೂಕ ಹಕ್ಕಿಯ ಅಭಿನಯ

ಈ ಫೋಟೋದಲ್ಲಿರುವ ಹುಡುಗಿಯನ್ನೊಮ್ಮೆ ನೋಡಿ!

ಒಮ್ಮೆ ನೋಡಿದರೆ ಮತ್ತೆ ಮತ್ತೆ ನೋಡಬೇಕು ಎಂಬಷ್ಟರ ಮಟ್ಟಿನ ಚೆಲುವು ಹೊಂದಿರುವ ಈಕೆ ಇತ್ತೀಚೆಗಷ್ಟೇ ಬಿಡುಗಡೆಗೊಂಡು ಸಾಕಷ್ಟು ಹೆಸರು ಮಾಡುತ್ತಿರುವ 'ನಾಡೋಡಿಗಳ್' ಎಂಬ ತಮಿಳು ಚಿತ್ರದ ಎರಡನೇ ನಾಯಕಿ ಅಭಿನಯಾ. ಆ ಚಿತ್ರದಲ್ಲಿ ಪಟಪಟನೆ ಹರಳು ಹುರಿದಂತೆ ಮಾತನಾಡುವ ಈಕೆಯ ನಟನೆಯ ಬಗ್ಗೆ ಅತ್ಯುತ್ತಮ ಪ್ರತಿಕ್ರಿಯೆಗಳೂ ಬಂದಿವೆ.

ವಿಪರ್ಯಾಸವೆಂದರೆ, ಈ ಚೆಂದದ ಅಭಿನಯಾ ಕಿವಿ ಕೇಳದ, ಮಾತೂ ಬಾರದ ಮೂಕ ಹುಡುಗಿ!

'ನಾಡೋಡಿಗಳ್' ಚಿತ್ರವನ್ನು ನೋಡಿದ ಯಾರಿಗೇ ಆದರೂ ಈಕೆ ಮೂಕಿ ಎಂಬ ಸಣ್ಣ ಕುರುಹೂ ಗೊತ್ತಾಗುವುದಿಲ್ಲ, ನಿರ್ದೇಶಕರು ಕೊಟ್ಟ ಸಂಭಾಷಣೆಯನ್ನು ಓದಿಕೊಂಡು ಲಿಪ್‌ಮೂವ್‌ಮೆಂಟ್ ಮಾಡಿ, ಅಭಿನಯಿಸಿರುವ ಅಭಿನಯಾಳ ಪಾತ್ರಕ್ಕೆ ಬೇರೊಬ್ಬರಿಂದ ಕಂಠದಾನ ಮಾಡಿಸಿದ್ದಾರೆ ನಿರ್ದೇಶಕ ಸಮುದ್ರಖನಿ.

ಕನ್ನಡದಲ್ಲೂ ಕಳೆದ ವರ್ಷ ಧ್ರುವ ಎಂಬ ಮೂಕ ಹುಡುಗ 'ಸ್ನೇಹಾಂಜಲಿ' ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದ. ಹಾಗೆಯೇ ಹಿರಿಯ ನಟ ದಿ. ಬಾಲಕೃಷ್ಣ ಅವರು ತಮ್ಮ ಕೊನೆ ದಿನಗಳಲ್ಲಿ ಎರಡೂ ಕಿವಿಗಳಲ್ಲಿ ಕೆಪ್ಪರಾಗಿದ್ದರು. ಆದರೂ ಎದುರಿಗಿದ್ದ ಸಹನಟರ ತುಟಿ ಚಲನೆಯನ್ನೇ ಗ್ರಹಿಸಿ ನಟಿಸುತ್ತಿದ್ದರು ಬಾಲಣ್ಣ.

ಒಟ್ಟಾರೆಯಾಗಿ ಪ್ರತಿಭೆಯ ಮುಂದೆ ವೈಕಲ್ಯಗಳು ನಗಣ್ಯ ಎಂಬುದನ್ನು ಇವೆಲ್ಲವುಗಳಿಂದ ತಿಳಿಯಬಹುದು.



ಬ್ಲಾಕ್ ಫಾರೆಸ್ಟ್‌ನಲ್ಲಿ ಖಾರದಪುಡಿ ಸೀನ!

'ಮುಸ್ಸಂಜೆಯ ಗೆಳತಿ' ಖ್ಯಾತಿಯ ಬಿ.ಪಿ. ಶ್ರೀನಿವಾಸ್ ಈಗ ಒಟ್ಟೊಟ್ಟಿಗೆ ಮೂರು ಚಿತ್ರಗಳನ್ನು ಘೋಷಿಸಿದ್ದಾರೆ. ಮೊದಲನೆಯದು 'ಹರಿಶ್ಚಂದ್ರ ಘಾಟ್', ಎರಡನೆಯದು 'ಯಾರು ಹಿತವರು ನಿನಗೆ ಈ ಮೂವರೊಳಗೆ'. ಇದು ಸ್ವತಃ ಶ್ರೀನಿವಾಸರ ಲೈಫ್ ಸ್ಟೋರಿಯಂತೆ. ಮೂವರು ಹೆಂಡಿರನ್ನು ಕಟ್ಟಿಕೊಂಡ ಗಂಡನಿಗೆ ಯಾವ ಹೆಂಡತಿ ಉತ್ತಮಳು ಎಂಬ ಕಥಾಹಂದರವನ್ನು ಹೊಂದಿದೆಯಂತೆ. ಮೂರನೆಯ ಚಿತ್ರ 'ಬ್ಲಾಕ್ ಫಾರೆಸ್ಟ್'!

ವಿಮಾನವೊಂದು ದಟ್ಟ ಅರಣ್ಯವೊಂದರ ಮಧ್ಯೆ ಅಪಘಾತಕ್ಕೀಡಾಗುತ್ತದಂತೆ. ಅದರಲ್ಲಿದ್ದ ಎಲ್ಲರೂ ಸತ್ತು ಒಬ್ಬ ಹುಡುಗ, ಹುಡುಗಿ ಮತ್ತು ಒಂದು ಮಗು ಮಾತ್ರ ಉಳಿಯುತ್ತಾರಂತೆ. ಅಲ್ಲಿಂದ ಆ ಮೂವರೂ ಪಾರಾಗಿ ಬರುವ ಕಥೆಯೇ 'ಬ್ಲಾಕ್ ಫಾರೆಸ್ಟ್'. ಹಾಗೆಂದು ಇದು ಯಾವ ಚಿತ್ರದ ರಿಮೇಕೂ ಅಲ್ಲ, ಇದು ಸ್ವತಃ ಶ್ರೀನಿವಾಸ್ ತಲೆಗೆ ಹೊಳೆದಿರುವ ಅದ್ಭುತ ಕಥೆಯಂತೆ. ಈ ಚಿತ್ರದಲ್ಲೂ ಶ್ರೀನಿವಾಸನ ಮಗಳು ಶಾಲಿನಿಯೇ ನಾಯಕಿಯಂತೆ.

ಇಂತ ಅಂತೆಕಂತೆಗಳನ್ನು ಬಿಡುತ್ತಿರುವ ಶ್ರೀನಿವಾಸನ ಮಾತು ಕೇಳಿಸಿಕೊಂಡವರು ಶತಮೂರ್ಖರೆಂದು ಆತ ಭಾವಿಸಿರುವಂತಿದೆ. ಯಾಕೆಂದರೆ ಹಾಲಿವುಡ್‌ನಲ್ಲಿ ಇಂಥದ್ದೇ ಕಥೆಯನ್ನಾಧರಿಸಿದ 'ಲಾಸ್ಟ್ ಇನ್ ದಿ ಡೆಸರ್ಟ್', 'ಫ್ಲೈಟ್ ಆಫ್ ದಿ ಫಿನಿಕ್ಸ್' ತರಹದ ಸಿನಿಮಾಗಳು ಯಾವತ್ತೋ ಬಂದುಹೋಗಿವೆ. ಆ ಕಥೆಗಳನ್ನೇ ತಿರುಚಿ, ಮಡಚಿ ಹೇಳುತ್ತಿರುವ ಶ್ರೀನಿವಾಸನ ಮಾತು ಕೇಳುಗರ ಕಣ್ಣಿಗೆ ಖಾರದ ಪುಡಿ ಎರಚಿದ ಹಾಗೆ ಭಾಸವಾಗುತ್ತಿದೆ.

ಅಂದಹಾಗೆ ಈ ಶ್ರೀನಿವಾಸ್ ರಿಯಲ್ ಎಸ್ಟೇಟು, ಸಿನಿಮಾ ಅಂತೆಲ್ಲಾ ಶುರುಹಚ್ಚಿಕೊಳ್ಳುವ ಮುನ್ನ ಮಸಾಲೆ ಪುಡಿ ತಯಾರಿಸುವ ಫ್ಯಾಕ್ಟರಿ ನಡೆಸುತ್ತಿದ್ದರಂತೆ. ಹೀಗಾಗಿ ಶ್ರೀನಿವಾಸ್‌ರನ್ನು ಬಹಳಷ್ಟು ಜನ ಖಾರದಪುಡಿ ಸೀನ ಎಂತಲೂ ಸಂಬೋಧಿಸುತ್ತಾರೆ!!

'ಬಂಗಾರ'ದ ಸಮಾರಂಭ

ಇದು ಗಾಂಧಿನಗರದ 'ಅದ್ಭುತ'ಗಳಲ್ಲಿ ಒಂದು. ಮೊನ್ನೆ ಕುಮಾರ್ ಬಂಗಾರಪ್ಪ ಮಾಲೀಕತ್ವದ ರೇಣುಕಾಂಬ ಥಿಯೇಟರಿನ ಉದ್ಘಾಟನೆ ನಡೆಯಿತು. ಅವರ 'ಮುದ್ದಿನ ಅಪ್ಪ' ಬಂಗಾರಪ್ಪನವರೇ ಈ ಥಿಯೇಟರನ್ನು ಉದ್ಘಾಟಿಸಿದರು. ಇನ್ನು ಮುಂದೆ ರೇಣುಕಾಂಬಾ ಥಿಯೇಟರ್ 'ಶ್ರೀಗಂಧ' ಎಂಬ ಹೊಸ ನಾಮಾಂಕಿತದಿಂದ ಕರೆಯಲ್ಪಡುತ್ತದೆ.

ಈ ಸಮಾರಂಭಕ್ಕೆ ಪಾರ್ವತಮ್ಮ ರಾಜ್‌ಕುಮಾರ್ ಮತ್ತು ಅವರ ಕುಟುಂಬದ ಸದಸ್ಯರು ಬರುತ್ತಾರೆ ಎಂದು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಲಾಗಿತ್ತು. ಆದರೆ ಪಾರ್ವತಮ್ಮ ಮತ್ತು ಅವರ ಕುಟುಂಬದ ಯಾವುದೇ ಸದಸ್ಯರೂ ಅತ್ತಕಡೆ ಸುಳಿಯಲಿಲ್ಲ. ಅಷ್ಟೇ ಯಾಕೆ, ಕುಮಾರ್ ಬಂಗಾರಪ್ಪನವರ ಸಹೋದರ ಮಧು ಬಂಗಾರಪ್ಪ ಕೂಡ ಗೈರುಹಾಜರಾಗಿದ್ದರು. ಬಂಗಾರಪ್ಪನವರ ಸಂಬಂಧಿ ತಿಲಕ್ ಕುಮಾರ್ ಮತ್ತು ಅವರ ಕುಟುಂಬದ ಸದಸ್ಯರೂ ಈ ಸಮಾರಂಭಕ್ಕೆ ಬರಲಿಲ್ಲ. ಆದ್ದರಿಂದ ಇದು 'ಕು'-'ಬಂ' ಅವರ ಕೌಟುಂಬಿಕ ಸಮಾರಂಭವಾಗಿತ್ತು.

ತಮಾಷೆಯೆಂದರೆ, ಈ ರೇಣುಕಾಂಬ ಥಿಯೇಟರಿನಲ್ಲಿ ಈಗಾಗಲೇ ಕನಿಷ್ಟವೆಂದರೂ ಒಂದು ಸಾವಿರಕ್ಕೂ ಹೆಚ್ಚು ಚಿತ್ರಗಳ ಪ್ರೀಮಿಯರ್ ಶೋ, ಸೆನ್ಸಾರ್ ಶೋಗಳು ಸೇರಿದಂತೆ ಇತ್ಯಾದಿ ಶೋಗಳು ನಡೆದುಹೋಗಿವೆ. ಕಳೆದ ಹಲವಾರು ವರ್ಷಗಳಿಂದ ಈ ರೇಣುಕಾಂಬ ಥಿಯೇಟರ್ ಉದ್ಯಮದ ಹಲವಾರು ಚಟುವಟಿಕೆಗಳ ಕೇಂದ್ರವಾಗಿದೆ. ಆದರೆ ಕುಮಾರ್ ಬಂಗಾರಪ್ಪನವರಿಗೆ ಇದರ ಉದ್ಘಾಟನೆ ಮಾಡಲು ಪುರುಸೊತ್ತೇ ಸಿಕ್ಕಿರಲಿಲ್ಲವಂತೆ. ಅದಕ್ಕಾಗಿ ಮೊನ್ನೆ ಈ ಉದ್ಘಾಟನಾ ಸಮಾರಂಭ ಎಂಬ ತಮಾಷೆ ನಡೆಯಿತು.



ಇನ್ನೂ ಒಂದು ವಿಶೇಷವೆಂದರೆ ಕುಮಾರ್ ಬಂಗಾರಪ್ಪನವರ ಇಬ್ಬರು ಮಕ್ಕಳು ವೇದಿಕೆಯಲ್ಲಿ ಹಾಡಿ ಎಲ್ಲರನ್ನೂ ರಂಜಿಸಿದರು. ಅವರ ಹಾಡುಗಾರಿಕೆಗೆ ಅಜ್ಜ ಬಂಗಾರಪ್ಪ ಮತ್ತು ತಂದೆ ಕುಮಾರ್ ಬಂಗಾರಪ್ಪ ತಲೆಯಾಡಿಸಿದ್ದೇ ಇಡೀ ಸಮಾರಂಭದ ಮುಖ್ಯ ವಿಷಯವಾಯಿತು. ನಿಮಗೆಲ್ಲಾ ಗೊತ್ತಿರಬೇಕು ಬಂಗಾರಪ್ಪ ಮತ್ತು ಕುಮಾರ್ ಬಂಗಾರಪ್ಪ ನಡುವೆ ರಾಜಕೀಯವಾಗಿ ದೊಡ್ಡ ಕದನವೇ ಏರ್ಪಟ್ಟಿದ್ದರಿಂದ ಅಪ್ಪ-ಮಗ ಪರಸ್ಪರ ಮಾತಾಡುವುದನ್ನೇ ಬಿಟ್ಟುಬಿಟ್ಟಿದ್ದರು. ಆದರೆ ಮೊನ್ನೆ 'ಬಂ' ಮತ್ತೆ ತನ್ನ ಹಳೆಯ ಮನೆ ಕಾಂಗ್ರೆಸ್‌ಗೆ ಬಂದಿದ್ದರಿಂದ ಈಗ ಅಪ್ಪ ಮಗನ ಸಂಬಂಧ ಮತ್ತೆ ಮಧುರಗೊಂಡಿದೆ. ಹೀಗಾಗಿ ತನ್ನ ಮೊಮ್ಮಕ್ಕಳ ಪ್ರತಿಭೆಯನ್ನು ತಾತ ನೋಡಿ ಎಂಜಾಯ್ ಮಾಡಲಿ ಎಂಬ ಉದ್ದೇಶದಿಂದ ಈ ಇಡೀ ಸಮಾರಂಭವನ್ನು ಹಮ್ಮಿಕೊಂಡಂತಿತ್ತು.

ಕನ್ನಡ ಚಿತ್ರರಂಗದ ಮೊದಲ ಕುಟುಂಬ ಎನಿಸಿರುವ ಡಾ. ರಾಜ್ ಫ್ಯಾಮಿಲಿಯಿಂದ ಒಬ್ಬರೂ ಬಾರದಿರುವುದು ಹಲವಾರು ಗುಮಾನಿಗಳಿಗೆ ಎಡೆಮಾಡಿಕೊಟ್ಟಿತು.

ಕೇರಳಕ್ಕೆ ಸೌಂದರ್ಯ



ಕೊನೆಗೂ ಜಯಮಾಲಾ ಪುತ್ರಿ ಸೌಂದರ್ಯಾ ಬಣ್ಣದ ಲೋಕಕ್ಕೆ ಎಂಟ್ರಿಯಾಗುವ ಕಾಲ ಸನ್ನಿಹಿತವಾಗಿದೆ.

18ರ ಹರೆಯದ ಸೌಂದರ್ಯ ಬಗ್ಗೆ ಕಳೆದ ಎರಡು ವರ್ಷಗಳಿಂದ ಏನಾದರೊಂದು ಸುದ್ದಿ ಕೇಳಿಬರುತ್ತಲೇ ಇತ್ತು. ಆಕೆ ಪುನೀತ್‌ಗೆ ನಾಯಕಿಯಾಗಿ ಚಿತ್ರರಂಗಕ್ಕೆ ಬರುತ್ತಾಳೆ ಎಂದು ಮೊದಲು ಸುದ್ದಿ ಹಬ್ಬಿತ್ತು, ಆನಂತರ ಮಿಸ್ ಇಂಡಿಯಾ ಸ್ಪರ್ಧೆಗಾಗಿ ಮುಂಬೈಗೆ ಹೋಗಿದ್ದಾಳೆ ಎಂಬ ಮತ್ತೊಂದು ಸುದ್ದಿ ಹರಡಿತ್ತು, ಮೂರನೆಯದಾಗಿ ಬಂದ ಸುದ್ದಿಯೇನೆಂದರೆ, ದೀಪಿಕಾ ಪಡುಕೋಣೆ ತರಹ ಸೌಂದರ್ಯ ಹಿಂದಿ ಚಿತ್ರದಲ್ಲಿ ವಿಜೃಂಭಿಸಲು ಪ್ರಯತ್ನ ಮಾಡುತ್ತಿದ್ದಾಳೆ ಎಂಬುದು. ಕೊನೆಗೆ ಈಗ ಸೌಂದರ್ಯ ಮಲಯಾಳಂ ಚಿತ್ರದ ಮುಖಾಂತರ ಸೆಪ್ಟೆಂಬರ್‌ನಲ್ಲಿ ತನ್ನ ವೃತ್ತಿಜೀವನದ ಪ್ರಯಾಣವನ್ನು ಆರಂಭಿಸಲಿರುವುದು ಖಾತ್ರಿಯಾಗಿದೆ.

ವಿನ್ಸೆಂಟ್ ನಿರ್ದೇಶನದ, ಮಧು ಅಂಬಟ್ ಛಾಯಾಗ್ರಹಣದ ಈ ಚಿತ್ರದ ನಾಯಕ ಹಿಂದಿಯ 'ಅಶೋಕಾ' ಚಿತ್ರವನ್ನು ನಿರ್ದೇಶಿಸಿದ್ದ ಸಂತೋಷ್ ಶಿವನ್ ಎಂಬ ಸುದ್ದಿ ಕೇಳಿಬಂದಿದೆ. ಪುನೀತ್ ಜೊತೆ ನಾಯಕಿಯಾಗಿ ನಟಿಸಬೇಕೆಂಬ ಕಾರಣದಿಂದ ವರ್ಷಾನುಗಟ್ಟಲೆ ಕಾದ ಪ್ರಮಿಳಾ ಜೋಷಾಯ್ ಮತ್ತು ಸುಂದರ್ ರಾಜ್ ಮಗಳು ಮೇಘನಾ, ದಿ. ರಾಜೇಂದ್ರ ಬಾಬು-ಸುಮಿತ್ರಾ ದಂಪತಿಗಳ ಪುತ್ರಿ ನಕ್ಷತ್ರ - ಇವರಿಬ್ಬರೂ ಕೊನೆಗೆ ಪರಭಾಷೆಯಲ್ಲೇ ತಮ್ಮ ಚಿತ್ರಜೀವನ ಆರಂಭಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಈಗ ಜಯಮಾಲಾ ಪುತ್ರಿ ಸೌಂದರ್ಯ ಪಾಲಿಗೆ ಪುನೀತ್ ಮರೀಚಿಕೆಯಾಗಿದ್ದರಿಂದ ಆಕೆಯೂ ಪರಭಾಷೆಯಿಂದ ಆರಂಗೇಟ್ರಂ ಮಾಡುತ್ತಿದ್ದಾಳೆ.

ಏನೇ ಇರಲಿ, ಕನ್ನಡದ ಈ ಹುಡುಗಿ ಶ್ರೇಷ್ಠ ತಂತ್ರಜ್ಞರ ಸಮಾಗಮದ ಈ ಚಿತ್ರದ ಮುಖಾಂತರ ಎಲ್ಲರ ಗಮನ ಸೆಳೆಯುವಂತಾಗಲಿ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44